
ಪದ್ಮರಾಜ ದಂಡಾವತಿ
ನಾಲ್ಕನೇ ಆಯಾಮ
೫ನೇ ಸಂಪುಟ
ಸಾಂಸ್ಕೃತಿಕ
BANGALORE

**ಪದ್ಮರಾಜ ದಂಡಾವತಿ** ಹುಟ್ಟಿದ್ದು ವಿಜಾಪುರ ಜಿಲ್ಲೆ ಮುದ್ದೇಬಿಹಾಳದಲ್ಲಿ. ೧೯೫೫, ನವೆಂಬರ್ ೮. ಕರ್ನಾಟಕ ವಿಶ್ವವಿದ್ಯಾಲಯದಿಂದ ಕನ್ನಡ ಸ್ನಾತಕೋತ್ತರ ಎಂ.ಎ. ಪದವಿ. ಎಸ್ಸೆಸ್ಸೆಲ್ಸಿಯಿಂದ ಎಂ.ಎ. ವರೆಗೆ ಉದ್ದಕ್ಕೂ ಕಾಯ್ದುಕೊಂಡ ಪ್ರಥಮ ಶ್ರೇಣಿ. ಆರಂಭದಿಂದಲೂ ಸಾಹಿತ್ಯದಲ್ಲಿ ಆಸಕ್ತಿ. ಆಗಬೇಕು ಅಂದುಕೊಂಡುದು ಕನ್ನಡ ಉಪನ್ಯಾಸಕ. ಒಲಿದು ಬಂದುದು ಪತ್ರಿಕೋದ್ಯಮ. ನೌಕರಿ ಸಿಗದೆ ಅಲೆದಾಡುತ್ತಿದ್ದಾಗ ಶೂದ್ರ ಸಾಹಿತ್ಯ ಮಾಸಿಕದಲ್ಲಿ ಗೌರವ ಸಹ-ಸಂಪಾದಕನಾಗಿ ನಾಲ್ಕು ವರ್ಷ ಕೆಲಸ. ಅನೇಕ ಲೇಖನಗಳ ಪ್ರಕಟಣೆ. ಕೃತಿ ವಿಮರ್ಶೆ, ಕಳೆದ ಮೂವತ್ತು ವರ್ಷಗಳಿಂದ ಪ್ರಜಾವಾಣಿಯಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿ ಇದೀಗ ಕಾರ್ಯ ನಿರ್ವಾಹಕ ಸಂಪಾದಕ, ಪ್ರತಿ ಭಾನುವಾರ ಪ್ರಕಟವಾಗುವ ಅವರ ನಾಲ್ಕನೇ ಆಯಾಮ ಅಂಕಣ ತುಂಬ ಜನಪ್ರಿಯ. ರಾಜಕೀಯ, ಸಾಮಾಜಿಕ, ಸಾಹಿತ್ಯಕ, ಶೈಕ್ಷಣಿಕ, ಸಾಂಸ್ಕೃತಿಕ, ಪ್ರವಾಸ - ಹೀಗೆ ವೈವಿಧ್ಯಮಯ ಸಂಗತಿಗಳು ಅವರ ಅಂಕಣದ ವಸ್ತು.

ಪತ್ರಿಕಾ ಭಾಷೆ, ರಿಪೋರ್ಟಿಂಗ್ (ಎರಡೂ ತೃತೀಯ ಮುದ್ರಣ) ಅವಲೋಕನ(ದ್ವಿತೀಯ ಮುದ್ರಣ), ಗೊಮ್ಮಟ ಮತ್ತು ನಾಲ್ಕನೇ ಆಯಾಮದ ನಾಲ್ಕು ಸಂಪುಟಗಳು ಅವರ ಪ್ರಕಟಿತ ಕೃತಿಗಳು. ೨೦೦೯ರಲ್ಲಿ ಅಮೆರಿಕಾ ಸರ್ಕಾರವು ತನ್ನ ವಿದೇಶಾಂಗ ನೀತಿ ಕುರಿತ ಅಂತರರಾಷ್ಟ್ರೀಯ ಸಂದರ್ಶಕರ ನಾಯಕತ್ವ ಶಿಬಿರಕ್ಕೆ ಇವರನ್ನು ಆಯ್ಕೆ ಮಾಡಿ ತನ್ನ ಅತಿಥಿಯಾಗಿ ೧೫ ದಿನಗಳ ಕಾಲ ದೇಶದಲ್ಲಿ ಇಟ್ಟುಕೊಂಡಿತ್ತು. ಆ ವರ್ಷ ದೆಹಲಿ ಬಿಟ್ಟರೆ ಇಡೀ ಭಾರತದಿಂದ ಈ ಶಿಬಿರಕ್ಕೆ ಆಯ್ಕೆಯಾಗಿದ್ದ ಏಕೈಕ ವ್ಯಕ್ತಿ ಇವರು. ರಾಜ್ಯೋತ್ಸವ ಮತ್ತು ಮಾಧ್ಯಮ ಅಕಾಡೆಮಿ ಪ್ರಶಸ್ತಿಗೆ ಭಾಜನರಾಗಿರುವ ದಂಡಾವತಿ ನೇಪಾಳ, ಬ್ಯಾಂಕಾಕ್, ಫ್ರಾನ್ಸ್, ಇಟಲಿ, ಸಿಂಗಪುರ, ದಕ್ಷಿಣ ಆಫ್ರಿಕಾ ಮತ್ತು ಜೋರ್ಡಾನ್ ದೇಶಗಳನ್ನು ಸುತ್ತಿ ಬಂದಿದ್ದಾರೆ. ಪತ್ನಿ, ಒಬ್ಬ ಪುತ್ರ ಮತ್ತು ಒಬ್ಬ ಪುತ್ರಿಯ ಪುಟ್ಟ ಸಂಸಾರ ಅವರದು.

ಪದ್ಮರಾಜ ದಂಡಾವತಿ

# ನಾಲ್ಕನೇ ಆಯಾಮ

೫ನೇ ಸಂಪುಟ

## ಸಾಂಸ್ಕೃತಿಕ

ವಸಂತ ಪ್ರಕಾಶನ

ನಂ. ೩೬೦, ೧೦ನೇ 'ಬಿ' ಮುಖ್ಯರಸ್ತೆ

೩ನೇ ಬ್ಲಾಕ್, ಜಯನಗರ, ಬೆಂಗಳೂರು ೫೬೦ ೦೧೧

Naalkane Aayaama Samputa - 5 (Kannada) - a collection of cultural essays by Padmaraj Dandavati; published by Vasantha Prakashana, No. 360, 10th 'B' Main Road, 3rd Block, Jayanagar, Bangalore-560 011, India. Telephone: 080-22443996 E-mail: vasantha_prakashana@rediffmail.com

First published: 2013

Copyright Prajavani

No part of this publication may be reproduced, stored in a retrieval system, or transmitted, in any form or by any means, electronic, mechanical, photo-copying, recording or otherwise, without the prior permission of the publisher.

ISBN: 978-93-83052-25-7

ಸಾಹಿತ್ಯ ಸಲಹೆಗಾರರು: ಎಸ್. ದಿವಾಕರ್

ಪ್ರಥಮ ಮುದ್ರಣ: ೨೦೧೩

**ಉಪಯೋಗಿಸಿದ ಕಾಗದ: ೭೦ ಜಿಎಸ್‌ಎಂ ಮ್ಯಾಪ್‌ಲಿಥೊ**

ಪುಟಗಳು: ೧೫೦, ಬೆಲೆ: ೯೯೫

ಮುಖಪುಟ ಮತ್ತು ಪುಟ ವಿನ್ಯಾಸ: ಚನ್ನಕೇಶವ

ಮುದ್ರಣ: ಶ್ರೀರಂಗ ಪ್ರಿಂಟರ್ ಪ್ರೈ ಲಿ.

# ಅರ್ಪಣೆ

ಬದುಕು ಕೊಟ್ಟ ಪ್ರಜಾವಾಣಿಗೆ

ಮತ್ತು

ಅಗಾಧ ಪ್ರೀತಿ ಕೊಟ್ಟ ಓದುಗರಿಗೆ

## ನನ್ನ ಮಾತು

ಕಳೆದ ನಾಲ್ಕು ವರ್ಷಗಳಿಂದ ಪ್ರಜಾವಾಣಿಯಲ್ಲಿ ಹೆಚ್ಚ ಕಡಿಮೆ ಪ್ರತಿ ಭಾನುವಾರ ಈ ಅಂಕಣ ಬರೆಯುತ್ತಿದ್ದೇನೆ. ಅಂಕಣ ಬರೆಯುವುದು ಎಂದರೆ ಪ್ರತಿವಾರ ಹೆರಿಗೆ ನೋವು ಅನುಭವಿಸಿದಂತೆ. ಅಂಕಣಕಾರ ತನ್ನ ಬರವಣಿಗೆಯಲ್ಲಿ ಪ್ರಸ್ತುತವಾಗಿರಬೇಕು ಮತ್ತು ಆಸಕ್ತಿದಾಯಕವೂ ಆಗಿರಬೇಕು. ಇಲ್ಲವಾದರೆ ಯಾರೂ ಅದನ್ನು ಓದುವುದಿಲ್ಲ. ಯಾರೂ ಓದದ ಬರವಣಿಗೆ ನಿರುಪಯುಕ್ತವಾದುದು. ಹಾಗಾಗಿ ಈ ಬರವಣಿಗೆ ನಮ್ಮ ಮೇಲೆ ಹೇರುವ ಜವಾಬ್ದಾರಿ ಬಹಳ ದೊಡ್ಡದು ಎಂದು ನನಗೆ ಪ್ರತಿನಿತ್ಯ ಅನಿಸಿದೆ. ಪ್ರತಿವಾರ ನನಗೆ ಬರುವ ಕರೆಗಳು ಮತ್ತು ಸಂದೇಶಗಳ ಮೂಲಕ ನನ್ನ ಬರವಣಿಗೆ ಹುಟ್ಟಿಸಿರುವ ಆಸಕ್ತಿ ನನ್ನ ಜವಾಬ್ದಾರಿಯನ್ನು ಮತ್ತೂ ಹೆಚ್ಚಿಸಿದೆ. ಇದು ಬರಹಗಾರನ ಕಷ್ಟ, ಪ್ರತಿ ವಾರ ಅಂಕಣ ಬರೆದ ಮೇಲೆ ನನ್ನ ಹೃದಯದ ಒಂದಿಷ್ಟು ಭಾಗವನ್ನು ಕುಯ್ದು ಅಲ್ಲಿ ಇಟ್ಟಿದ್ದೇನೆ ಎಂದು ನನಗೆ ಅನಿಸಿದೆ. ಹಾಗೆ ನಾನು ಮಾಡದೇ ಇದ್ದಿದ್ದರೆ ಈ ಅಂಕಣ ಯಾವಾಗಲೋ ನಿಂತು ಹೋಗಬೇಕಿತ್ತು! ಹೀಗೆ ನನ್ನನ್ನೇ ಅರ್ಥಪೂರ್ಣ ಬರವಣಿಗೆಗೆ ಒಡ್ಡುವ ಮೂಲಕ ನನ್ನ 'ಒಳಗನ್ನು' ಹೊರಗೆ ತೆಗೆದ ನನ್ನ ಸಂಪಾದಕರಾದ ಶ್ರೀ ಕೆ.ಎನ್. ಶಾಂತಕುಮಾರ್ ಅವರನ್ನು ಐದನೇ ಸಂಪುಟ ಹೊರಗೆ ಬರುವ ಈ ಸಂದರ್ಭದಲ್ಲಿ ಕೃತಜ್ಞತೆಯಿಂದ

ನೆನಪಿಸಿಕೊಳ್ಳುತ್ತೇನೆ. ಇಲ್ಲಿನ ಬರಹಗಳನ್ನು ಪುಸ್ತಕ ರೂಪದಲ್ಲಿ ತರಲು ಅವರು ಅನುಮತಿ ಕೊಟ್ಟಿದ್ದಾರೆ. ಅದಕ್ಕೂ ಅವರಿಗೆ ಧನ್ಯವಾದಗಳು.

ಈ ಸಂಪುಟದಲ್ಲಿ ಸಾಂಸ್ಕೃತಿಕ ಸ್ವರೂಪದ ಅಂಕಣಗಳನ್ನು ಮಾತ್ರ ಒತ್ತಟ್ಟಿಗೆ ತಂದಿದ್ದೇನೆ. ಇವು ನನಗೆ ಹೆಚ್ಚು ಪ್ರಿಯವಾದ ಲೇಖನಗಳು. ನನ್ನ ರಾಜಕೀಯ ಲೇಖನಗಳಿಗಿಂತ ಹೆಚ್ಚು ಪ್ರತಿಕ್ರಿಯೆ ಹುಟ್ಟು ಹಾಕಿದ ಲೇಖನಗಳು ಕೂಡ ಇವೇ. ಸಾಮಾನ್ಯವಾಗಿ ಒಬ್ಬ ಪತ್ರಕರ್ತ ಮಾತ್ರ ಹೀಗೆ ಹಲವು ವಿಷಯಗಳ ಬಗ್ಗೆ ಅಂಡಲೆಯಲು ಸಾಧ್ಯ. ಅದು ಆತನಿಗೆ ಅವನ ವೃತ್ತಿಯಿಂದ ಒದಗಿ ಬರುವ ವಿಸ್ತಾರ.

ಒಂದು ದಿನ ಇದ್ದಕ್ಕಿದ್ದಂತೆ ದೂರವಾಣಿ ಕರೆ ಮಾಡಿ, ನಿಮ್ಮ ಅಂಕಣಗಳನ್ನು ಮುದ್ರಿಸಲು ಅವಕಾಶ ಕೊಡಿ ಎಂದು ಪ್ರೀತಿಯಿಂದ ಕೇಳಿದ, ನಾನು ತುಂಬ ಗೌರವಿಸುವ ಲೇಖಕರಲ್ಲಿ ಒಬ್ಬರಾದ ಎಸ್. ದಿವಾಕರ್ ಅವರಿಗೆ, ವಸಂತ ಪ್ರಕಾಶನದ ಮಾಲೀಕರಾದ ಗೆಳೆಯ ಮುರಳಿ ಅವರಿಗೆ, ಅರ್ಥಪೂರ್ಣ ಮುಖಪುಟ ರಚಿಸಿಕೊಟ್ಟ ಚನ್ನಕೇಶವ ಅವರಿಗೆ ನನ್ನ ಕೃತಜ್ಞತೆಗಳು. ಇಂಥ ಅನಿರೀಕ್ಷಿತಗಳು ಜೀವನದ ಖುಷಿಯ ಗಳಿಗೆಗಳು. ಇಲ್ಲಿನ ಲೇಖನಗಳನ್ನು ನುಡಿ ತಂತ್ರಾಂಶಕ್ಕೆ ಪರಿವರ್ತಿಸಿ ಕೊಟ್ಟ ಸಹೋದ್ಯೋಗಿ ಸ್ನೇಹಿತ ಸಿದ್ದಲಿಂಗಯ್ಯ ಕಣಕಾಲಮಠ ಅವರಿಗೆ ನನ್ನ ಪ್ರೀತಿಯ ನೆನಕೆಗಳು.

ಈ ಕೃತಿಯನ್ನು ನನಗೆ ಬದುಕು ಕೊಟ್ಟ ಪ್ರಜಾವಾಣಿಗೆ ಮತ್ತು ಪ್ರೀತಿ ಕೊಟ್ಟ ಅಗಾಧ ಸಂಖ್ಯೆಯ ಓದುಗರಿಗೆ ಅರ್ಪಿಸಿದ್ದೇನೆ.

ಪ್ರತಿವಾರದ ಅಂಕಣಕ್ಕೆ ಬರುವ ಪ್ರತಿಕ್ರಿಯೆಗಳಲ್ಲಿ ಕೆಲವನ್ನು ಮಾತ್ರ ಆಯ್ದು ಕೊನೆಯಲ್ಲಿ ಕೊಟ್ಟಿದ್ದೇನೆ. ಅವರೂ ಸೇರಿದಂತೆ ನನ್ನ ಎಲ್ಲ ಓದುಗರಿಗೆ ಹೃತ್ಪೂರ್ವಕ ಕೃತಜ್ಞತೆಗಳು ಸಲ್ಲಬೇಕು. ಅವರ ಪ್ರೀತಿ, ಒತ್ತಾಸೆ ನಿಜಕ್ಕೂ ದೊಡ್ಡದು.

ಈ ಪುಸ್ತಕ ಹೊರಬರುವ ಸಂದರ್ಭದಲ್ಲಿ ನನ್ನ ಬಾಳ ಸಂಗಾತಿ ಲಲಿತಾ, ಮಗ ಅಶ್ವಿನ್ ಕುಮಾರ್ ಮತ್ತು ಮಗಳು ವರ್ಷಾ ಅವರನ್ನು ಮತ್ತು ಎಲ್ಲ ಬಂಧು ಬಾಂಧವರನ್ನು ಪ್ರೀತಿಯಿಂದ ನೆನಪಿಸಿಕೊಳ್ಳುವೆ. ಅವರು ನನಗೆ ಕೊಟ್ಟ ಪ್ರೀತಿಯ ಮುಂದೆ ಈ ನೆನಕೆ ಏನೇನೂ ಅಲ್ಲ.

**ಪದ್ಮರಾಜ ದಂಡಾವತಿ**

**ಪರಿವಿಡಿ**

ದಿಲ್ ಕೋ ಸಂಭಾಲೊ !/೧೧

ಪಕ್ಕಾ ಉಡಾಳನೊಬ್ಬ ಅಪ್ಪಟ ಪತ್ರಕರ್ತನಾದ ಕಥೆ…………/೧೫

ರಾಜಧಾನಿಗೆ ನೂರು ವರ್ಷ; ಆದರೂ ದೂರ!................./೨೦

ಬೆಳಗಾವಿಯ ಮರಾಠಿ ಮುಖಂಡರಿಗೆ ಇನ್ನಾದರೂ ಬುದ್ಧಿ ಬಂದೀತೇ?...........೨೫

ದಕ್ಷಿಣದ ಶಾಂತಿನಿಕೇತನಕ್ಕೆ ಒಮ್ಮೆ ಹೋಗಿ ಬನ್ನಿ...........೩೦

ಸಲಗದಂತೆ ಬಾಳಿ ಸರಿದು ಹೋದರು... / ೨೫

ತಂದೆಯಂಥ ಮಗನಿಗಾಗಿ; ತಾಯಿಯಂಥ ಊರಿಗಾಗಿ... /೩೯

ಮಾಧ್ಯಮಗಳಿಗೆ ಲಕ್ಷ್ಮಣ ರೇಖೆ : ಹಾಕುವವರು ಯಾರು?.......೪೩

ಸಂದರ್ಶನಕ್ಕೆ ಹೋಗುವವರಿಗೆ ಹೇಳಲೇಬೇಕು ಅನಿಸಿದ್ದ............. ೪೮

ಸರ್ಕಾರ ಮಾಡಲಾಗದ್ದು ಸಾರ್ವಜನಿಕ ಮಾಡಬಹುದಾದ............ ೫೩

ಮಲಪ್ರಭೆ ಎಂಬ ಗಂಗೆ ಗಟಾರವಾಗಿ...೫೭

ಇಂಥ ಚುನಾವಣೆ ಸಾಹಿತ್ಯ ಪರಿಷತ್ತಿಗೆ ಬೇಕಿರಲಿಲ್ಲ................ | ೬೧

ಊರು ಲೂಟಿಯಾದ ಮೇಲೆ ಕೋಟೆ ಬಾಗಿಲು ಹಾಕಬಾರದು……….೬೫

ಇಂಥ ಬರಿಗಾಲ ಭಗೀರಥ ಊರಿಗೊಬ್ಬ ಇದ್ದಿದ್ದರೆ............!೬೯

ನಮ್ಮ ವೃತ್ತಿಗೆ ಸೇರಿದ ಹುಡುಗ, ಮಾಡಿದ 'ಘನಂದಾರಿ' ಕೆಲಸ! ………./೭೪

ಕಾಡಿದ ಒಲಿಂಪಿಕ್ಸ್ ಚಿತ್ರಗಳ ಸುತ್ತಮುತ್ತ………../೭೯

ಬೇರು ಒಣಗಿದ ಮರ ಗಟ್ಟಿಯಾಗಿ ನಿಂತೀತೇ?............../೮೨

ಅಮೆರಿಕದಲ್ಲಿ ಕನ್ನಡ ಸಂಘ ಕಟ್ಟಿ ಟೀಕೆಗೆ ಅಂಜಿದರೆಂತಕ್ಕ ………….../೮೬

ಗುರುವಿನ ಋಣ ತೀರಿಸಿದವರು ಯಾರಾದರೂ ಉಂಟೇ?................../೯೧.

ಹೊಸಕಿ ಹೋದ ಪರ್ಯಾಯದ ಕನಸುಗಳು……………………../೯೫

ಕರ್ಜಗಿ ಕಥೆ ಎಂದರೆ ಒಂದು ಹಣತೆ, ಒಂದು ದೀಪ!................೧೦೦

ಕಾಂತಾವರ ಹಚ್ಚಿದ ಕನ್ನಡದ ನಂದಾದೀಪ…………………………../೧೦೪

ಕೃಪಣತೆಯಲ್ಲಿ ಕನ್ನಡಿಗರನ್ನು ಮೀರಿಸುವವರು ಯಾರಿದ್ದಾರೆ?................../೧೦೯

ಹಾಗಾದರೆ ಬೆಂಗಳೂರು ಯಾರಿಗೂ ಬೇಡವೇ?............................/೧೧೩

ಕಲ್ಲು ಮನಸ್ಸು ಕರಗುವ ಸಮಯ......................../೧೧೭

ಮನೆಯನ್ನೇ ಗೆಲ್ಲದವರು ಮಾರು ಗೆಲ್ಲುತ್ತಾರೆಯೇ?..................../೧೨೧

ಆ ಪ್ರೀತಿಯನ್ನು ಇನ್ನೆಲ್ಲಿ ಹುಡುಕಲಿ?................................/೧೨೬

ಬಳ್ಳಾರಿ ಭೇಟಿ ನೆಪದಲ್ಲಿ ಒಂದಿಷ್ಟು ಕನವರಿಕೆ…………………………../೧೩೦

ಗೋಲಗುಮ್ಮಟದ ಊರಿನ ಮಂದಿಯೇ ಕೂಗದಿದ್ದರೆ?...................... ೧೩೪

ಬದುಕುವ ದಾರಿ ಕಲಿಸುವ ಕಾವ್ಯದಿಂದ ದೂರ ಬಂದು.........................೧೩೮

ಕೆಲವು ಪ್ರತಿಕ್ರಿಯೆಗಳು…………| ೧೪೨

**ದಿಲ್ ಕೋ ಸಂಭಾಲೊ!**

ಮಡಿಕೇರಿ ಕಡೆಯ ಆ ಹೆಣ್ಣು ಮಗಳು ಮತ್ತೆ ಫೋನ್ ಮಾಡಿದ್ದರು. ಹಿಂದೆ ನಾನು ಹೊಸ ಹುಡುಗರ ಇದು ಮನೋಭಾವದ ಸಮಸ್ಯೆ ಕುರಿತು ಬರೆದಿದ್ದಾಗ ಅವರು ನನ್ನ ಜತೆ ಮಾತನಾಡಿದ್ದರು. ಈ ಸಾರಿ ಪರಿಸ್ಥಿತಿ

ಗಂಭೀರವಾಗಿತ್ತು. ಅವರಿಗೆ ಆ ವಿಷಯವನ್ನು ನನ್ನ ಜತೆಗೆ ಏಕೆ ಹಂಚಿಕೊಳ್ಳಬೇಕು ಅನಿಸಿತೋ ಗೊತ್ತಿಲ್ಲ. ಅವರ ಮಗ ಚಿಕ್ಕಮಗಳೂರಿನ (ಊರಿನ ಹೆಸರು ಬದಲಿಸಿದ್ದೇನೆ) ಎಂಜಿನಿಯರಿಂಗ್ ಕಾಲೇಜಿನಲ್ಲಿ ನಾಲ್ಕನೆಯದೋ ಐದನೆಯದೋ ಸೆಮಿಸ್ಟರ್‌ನಲ್ಲಿ ಓದುತ್ತಿದ್ದಾನೆ. ಒಂದು ದಿನ ಸಂಜೆ ೭ ಗಂಟೆಗೆ ನಿತ್ಯ ಫೋನ್ ಮಾಡುವ ಹಾಗೆ ಮಗನಿಗೆ ಫೋನ್ ಮಾಡಿದರು. 'ಅಮ್ಮ ನೀನು ಫೋನ್ ಇಡು. ಈಗ ನನ್ನ ಲವರ್ ಫೋನ್ ಬರುತ್ತದೆ' ಎಂದ ಮಗ! 'ಅಲ್ಲ ಮಗನೇ ನಿನಗೆ ಇನ್ನೂ ೧೮ ವರ್ಷ. ಇನ್ನೂ ಮೀಸೆಯೂ ಚೆನ್ನಾಗಿ ಮೂಡಿಲ್ಲ. ಹೇಗೆ ಲವ್ ಮಾಡಿದೆಯೋ? ಯಾರವಳು?' ಎಂದಳು ತಾಯಿ. “ಅವಳು ನೈಜೀರಿಯಾದವಳು (ದೇಶದ ಹೆಸರು ಬದಲಿಸಿದ್ದೇನೆ). ಫೇಸ್ ಬುಕ್‌ನಲ್ಲಿ ಫ್ರೆಂಡ್ ಆದಳು' ಎಂದು ಮಗ ಫೋನ್ ಕಟ್ ಮಾಡಿಯೇ ಬಿಟ್ಟ. ಮತ್ತೆ ಮರುದಿನ ತಾಯಿ ಮಗನಿಗೆ ಫೋನ್ ಮಾಡಿದಳು. ಅವರಿಗೇನು ಆತನ ಅಫೇರ್‌ನಿಂದ ಭಯ ಅಥವಾ ಆತಂಕವಾಗಿರಲಿಲ್ಲ. ಆದರೆ, ಆತನ ಓದಿನ ಗತಿಯೇನು ಎಂದು ಗಾಬರಿಯಾಗಿತ್ತು. ಅದನ್ನೇ ಕೇಳಿದರು, 'ಚೆನ್ನಾಗಿ ಓದುತ್ತಿದ್ದೀಯೇನೋ' ಎಂದು. 'ಅಮ್ಮ, ನೀನು ಕನ್ನಡ ಮೀಡಿಯಂ ಶಾಲೆಗೆ ನನ್ನನ್ನು ಕಳಿಸಿದ್ದಿ. ಈಗ ನಾನು ಆ ಹುಡುಗಿ ಜತೆಗೆ ಇಂಗ್ಲಿಷ್‌ನಲ್ಲಿ ಮಾತನಾಡುತ್ತಿದ್ದೇನೆ. ಓದಿಗೆ ತೊಂದರೆಯೇನೂ ಆಗಿಲ್ಲ' ಎಂದು ಮತ್ತೆ ಫೋನ್ ಕಟ್ ಮಾಡಿದ.

ಮಗನ ಸುದ್ದಿಯನ್ನು ಆಕೆ ಗಂಡನ ಜತೆಗೆ ಹಂಚಿಕೊಂಡರು. ಮಡಿಕೇರಿ ಬಳಿ ೧೦ ಎಕರೆ ತೋಟ ಮಾಡಿಕೊಂಡಿರುವ ತಂದೆ ಒಬ್ಬ ಕೃಷಿಕನ ಕಷ್ಟವನ್ನೆಲ್ಲ ಕಂಡುಂಡವರು. ಎಲ್ಲ ತಂದೆ ತಾಯಿಯರ ಹಾಗೆ ಇವರು ಕೂಡ ಮಗ ಚೆನ್ನಾಗಿ ಓದಿ ಒಳ್ಳೆಯ ನೌಕರಿ ಮಾಡಿ ತಮನ್ನೂ ಒಂದಿಷ್ಟು ನೋಡಿಕೊಳ್ಳಲಿ ಎಂದುಕೊಂಡಿರಬಹುದು. ಮಗ ದಾರಿ ಬಿಟ್ಟ ಎಂದು ತಂದೆ ಖಿನ್ನರಾದರು. ತಾಯಿಗೆ, ಮಗ ಅವಿವೇಕಿ ಅನಿಸಿತು. ಇನ್ನೂ ಮೀಸೆ ಬಲಿತಿಲ್ಲ. ಸುಮ್ಮನೆ ಗಡ್ಡ ಕೆರೆದುಕೊಳ್ಳುತ್ತಾನೆ. ಇನ್ನೂ ಮೂರು ಸೆಮಿಸ್ಟರ್ ಓದಬೇಕು. ಯಾವುದೋ ಸೀಮೆಯ ಏನೂ ಗೊತ್ತಿರದ ಹುಡುಗಿಯನ್ನು ಈತ ಏನು ಪ್ರೀತಿ ಮಾಡುತ್ತಾನೆ? ಪ್ರೀತಿ ಅಂದರೆ ಏನು ಎಂದಾದರೂ ಆತನಿಗೆ ಗೊತ್ತೇ? ಆಕೆಗಾದರೂ ಗೊತ್ತೆ?... ಎಲ್ಲ ತಾಯಂದಿರ ಹಾಗೆಯೇ ಆಕೆಯೂ ಚಿಂತೆಯಲ್ಲಿ ಬೆಂದುಹೋದರು.

ಒಂದು ವಾರ ಬಿಟ್ಟು ಮತ್ತೆ ಮಗನಿಗೆ ಫೋನ್ ಮಾಡಿದರು. ಆತನ ಫೋನ್ ಸ್ವಿಚ್ ಆಫ್ ಆಗಿತ್ತು. ಗಾಬರಿಯಾಗಿ ಆತನ ಗೆಳೆಯನಿಗೆ ಫೋನ್ ಮಾಡಿದರು. ಗೆಳೆಯನ ಪಕ್ಕದಲ್ಲಿಯೇ ಇದ್ದ ಮಗ ಫೋನ್ ತೆಗೆದುಕೊಂಡ. “ಯಾಕೋ ಮಗನೇ ಫೋನ್ ಸ್ವಿಚ್ ಆಫ್ ಮಾಡಿದ್ದೀ, ನಿನ್ನ ಲವ್ ಏನಾಯ್ತು?' ಮಗನನ್ನು ಕೇಳಿದರು. 'ಇಲ್ಲಮ್ಮ ಅವಳನ್ನು ಬಿಟ್ಟು ಬಿಟ್ಟೆ' ಎಂದ ಮಗ, 'ಯಾಕೋ ಬಿಟ್ಟು ಬಿಟ್ಟೆ?' 'ಇಲ್ಲಮ್ಮ ಮೊನ್ನೆ ನಡೆದ ಎಲ್ಲ ಇಂಟರ್ನಲ್ ಟೆಸ್ಟ್‌ನಲ್ಲಿ ಢುಮುಕಿ ಹೊಡೆದಿದ್ದೇನೆ. ನನ್ನ ಅಧ್ಯಾಪಕಿ ಕರೆದು ಏಕೆ ಎಂದು ಕೇಳಿದರು. ಅವರಿಗೆ ಎಲ್ಲ ಹೇಳಿದೆ. ನೈಜೀರಿಯಾ ಹುಡುಗಿ ದಿನಕ್ಕೆ ಇಪ್ಪತ್ತು ಬಾರಿ ಫೋನ್ ಮಾಡುವುದನ್ನೂ ಅವರಿಗೆ ಹೇಳಿದೆ. ಅವರು ನನ್ನ ಕಿವಿ ಹಿಂಡಿ ಮೊದಲು ಓದು. ಆಮೇಲೆ ಲವ್ ಮಾಡುವಿಯಂತೆ ಎಂದು ಬೈದರು. ಅದಕ್ಕೆ ಫೋನ್ ಸಿಮ್ ಕಾರ್ಡ್ ಬದಲಾಯಿಸಬೇಕಿದೆ. ಅಲ್ಲಿಯವರೆಗೆ ಅದು ಸ್ವಿಚ್ ಆಫ್ ಆಗಿರುತ್ತದೆ' ಎಂದ. ತಾಯಿ ಮಾಡಬೇಕಾದ ಕೆಲಸವನ್ನು ಅಧ್ಯಾಪಕಿ ಮಾಡಿದ್ದರು.

ನೈಜೀರಿಯಾ ಹುಡುಗಿ ಜತೆಗೆ ಮಗ ಯಾವಾಗ ಚಾಟ್ ಶುರು ಮಾಡಿದ್ದನೋ ಏನೋ? ಆದರೆ, ಅಫೇರ್ ತುಂಬ ದೂರ ಹೋಗಿತ್ತು. ಇಬ್ಬರೂ ಪರಸ್ಪರರಿಗಾಗಿಯೇ ಹುಟ್ಟಿದ್ದೇವೆ ಎಂದುಕೊಂಡಿದ್ದರು. "ನೀನು ಸಿಗದೇ ಇದ್ದರೆ ನಾನು ಸತ್ತು ಹೋಗುತ್ತೇನೆ' ಎಂದು ಆಕೆ ಹೇಳಿದ್ದಳು. ಅದು ನಿಜ ಎಂದು ಎಲ್ಲ ಪ್ರೇಮಿಗಳ ಹಾಗೆ ಈತ ನಂಬಿದ್ದ. ದಿನಕಳೆದಂತೆ ಆಕೆಯ ಕರೆಗಾಗಿ ಕಾಯತೊಡಗಿದ. ಅವಳು ಜಗತ್ತಿನಲ್ಲಿ ಅತ್ಯಂತ ಚೆಲುವೆ ಎಂದು ಭಾವಿಸಿದ. ತನ್ನ ಓದಿಗೆ, ಮುಂದಿನ ಭವಿಷ್ಯಕ್ಕೆ ಇದೆಲ್ಲ ಅಡ್ಡಿ ಎಂದು ಆತನಿಗೆ ಅನಿಸಿರಲೇ ಇಲ್ಲ. ಓದು ಚೆನ್ನಾಗಿ ನಡೆದಿದೆ ಎಂದು ತಾಯಿಗೆ ಸುಳ್ಳು ಹೊಡೆದಿದ್ದ. ಬಹುತೇಕ ಹದಿಹರಯದ ಹುಡುಗರು ವರ್ತಿಸುವ ಹಾಗೆಯೇ ಆತನೂ ನಡೆದುಕೊಂಡಿದ್ದ. ಹೆತ್ತ ತಾಯಿ, ಹಣ ಕೊಟ್ಟು, ಪ್ರೀತಿ ಕೊಟ್ಟು ಓದಿಸಿದ ತಂದೆ ಆತನ

ನೆನಪಿನ ಪಟಲದಿಂದ ನಿಧಾನವಾಗಿ ಮರೆಯಾಗತೊಡಗಿದ್ದರು. ಅದೃಷ್ಟವಶಾತ್ ಒಳ್ಳೆಯ ಅಧ್ಯಾಪಕಿ ಸಕಾಲದಲ್ಲಿ ಆತನನ್ನು ಎಚ್ಚರಿಸಿದ್ದರು.

ತಾಯಿ ಸುಮ್ಮನೆ ಬಿಡಲಿಲ್ಲ. 'ಮತ್ತೆ ನೀನು ಆಕೆಯ ಫೋನ್ ತೆಗೆದುಕೊಳ್ಳದೇ ಇದ್ದರೆ ಆಕೆ ಸತ್ತು ಹೋಗುತ್ತಾಳೆ ಎಂದಿದ್ದೆ. ಈಗ ಫೋನ್ ಹೇಗೆ ಸ್ವಿಚ್ ಆಫ್ ಮಾಡಿದೆ' ಎಂದು ಕಿಚಾಯಿಸಿದರು. ಮಗ 'ಪೆಪೆಪೆ' ಎಂದ! ಇನ್ನು ಒಂದು ವಾರ ಬಿಟ್ಟು ಯಾವುದೋ ಫೋನ್‌ನಿಂದ ಆಕೆಗೆ ಫೋನ್ ಮಾಡು. ಆಕೆ ಖಂಡಿತ ಬದುಕಿರುತ್ತಾಳೆ. ಚಿಂತೆ ಬೇಡ. ಇದುವರೆಗೆ ಜಗತ್ತಿನಲ್ಲಿ ಯಾರಾದರೂ ಸತ್ತರು ಎಂದು ಅವರ ಜತೆಗೆ ಸತ್ತ ಉದಾಹರಣೆ ಇಲ್ಲ. ಯಾರಿಗಾಗಿ ಯಾರೂ ಸಾಯುವುದಿಲ್ಲ. ಗಂಡ ಸತ್ತರೆ ಮೂರು ದಿನ ಅತ್ತು ಹೆಂಡತಿ ಸುಮ್ಮನಾಗುತ್ತಾಳೆ. ಹೆಂಡತಿ ಸತ್ತರೆ ಗಂಡ ಇನ್ನೂ ಬೇಗ ಮರೆಯುತ್ತಾನೆ. ಆದರೆ, ಮಗ ಸತ್ತರೆ ತಾಯಿ ನಿರಂತರವಾಗಿ ಶೋಕಿಸುತ್ತಾಳೆ. ಯಾವುದೋ ಒಬ್ಬ ಹುಡುಗಿ ನಿನಗೆ ಸಿಕ್ಕಳು ಎಂದು ನೀನು ನನ್ನನ್ನೇ ಮರೆಯಲು ಯತ್ನಿಸಬೇಡ. ನಿನ್ನಿಂದ ನನಗೆ ಏನೂ ಬೇಡ. ಚೆನ್ನಾಗಿ ಓದು ಅಷ್ಟು ಮಾತ್ರ ಸಾಕು' ಎಂದು ಫೋನ್ ಕುಕ್ಕಿದರು.

ಆಕೆ ಧೈರ್ಯಸ್ಥೆ, ಎಂಥ ಸಂದರ್ಭದಲ್ಲೂ ವಿಚಲಿತವಾಗದ ಹೆಣ್ಣು ಮಗಳು. ಮಗನಿಗೆ ಮೀಸೆ ಬಂದರೆ ಸಾಕು. ಆತ ಯಾವಳನ್ನು ಲವ್ ಮಾಡಿ ಮನೆಗೆ ಕರೆದುಕೊಂಡು ಬರುತ್ತಾನೋ ಎಂದು ನಿತ್ಯ ಆತಂಕದಲ್ಲಿ ಬೇಯುವ ತಾಯಂದಿರು ಬೇಕಾದಷ್ಟು ಹಾಗೆಯೇ ದೊಡ್ಡವಳಾದ ಮಗಳ ಬಗೆಗೂ ಚಿಂತಿಸುವ ತಾಯಂದಿರಿಗೆ ಲೆಕ್ಕವಿಲ್ಲ. ತಂದೆ ಬೆಳಿಗ್ಗೆ ಕಚೇರಿಗೆ ಹೋಗಿ ಮನೆಗೆ ಬರುತ್ತಾನೆ. ಮನೆಯಲ್ಲಿ ಏಕಾಂಗಿಯಾಗಿ ಇರುವ ತಾಯಿಗೆ ಗಂಡನಿಗಿಂತ ಬೆಳೆದ ಮಕ್ಕಳ ಬಗೆಗೇ ಹೆಚ್ಚು ಭಯ, ಆತಂಕ. "ಏನಾದರೂ ಮಾಡಿಕೊಂಡಾವು? ಮಾಡಿಕೊಂಡ ನಂತರ ಅದನ್ನು ಬಗೆಹರಿಸುವುದು ಕಷ್ಟ. ಈಗಲೇ ಒಂದು ಮಾತು ಹೇಳಿಬಿಡಿ ಮಗನಿಗೆ' ಎಂದು ನಿತ್ಯ ಗಂಡನಿಗೆ ಕಾಡುವ ಹೆಂಡತಿಯರು ಒಬ್ಬಿಬ್ಬರೇನಲ್ಲ. ಆದರೆ, ಈಕೆ ಅಂಥವಳಲ್ಲ. ಇಲ್ಲವಾದರೆ ಗಂಡನ ಮುಂದೆ ಅತ್ತು ರಂಪ ಮಾಡಿ ನೀವು ಈಗಿಂದೀಗ ಚಿಕ್ಕಮಗಳೂರಿಗೆ ಹೋಗಿ ನನ್ನ ಮಗನನ್ನು ನನಗೆ ತಂದು ಒಪ್ಪಿಸಿ ಎಂದು ಕಾಡಬಹುದಿತ್ತು. ಕಾಲವೇ ಅವರ ಸಮಸ್ಯೆಗೆ

ಉತ್ತರವನ್ನೂ ಕೊಟ್ಟಿತು ಎಂದು ಕಾಣುತ್ತದೆ. ಅವರ ಮಗ ಅವರ ಬಳಿ ಉಳಿದ. ಇಲ್ಲವಾದರೆ ಆತ ಕಾಲೇಜಿನಲ್ಲಿ ನಪಾಸಾಗಿ ನಿರುಪಯುಕ್ತನಾಗಿ ಬಿಡಬಹುದಿತ್ತೋ ಏನೋ?

ಈ ಹೆಣ್ಣು ಮಗಳು ನನಗೆ ಫೋನ್ ಮಾಡುವುದಕ್ಕಿಂತ ಒಂದು ದಿನ ಮುಂಚೆಯಷ್ಟೇ ನಾನು ಆಗಾಗ ಹಾಲು ತೆಗೆದುಕೊಂಡು ಬರುವ ಅಂಗಡಿಯ ಮುಂದಿನ ಕಾಯಿನ್ ಬೂತ್‌ನಿಂದ ಒಬ್ಬ ೧೨-೧೩ ವರ್ಷದ ಬಾಲಕಿ ಮಾತನಾಡುತ್ತಿದ್ದಳು. ಆಗಷ್ಟೇ ಶಾಲೆಗೆ ಹೊರಟಿದ್ದ ಹುಡುಗಿ ಯಾರಿಗೆ ಫೋನ್ ಮಾಡುತ್ತಾಳೆ? ಆಕೆ, ಆಚೆ ಕಡೆಯ ಧ್ವನಿಗೆ 'ದಿಲ್ ಕೋ ಸಂಭಾಲೋ' ಎಂದು ಹೇಳಿದ ಮಾತು ನನ್ನನ್ನು ಬೆಚ್ಚಿ ಬೀಳಿಸಿತು. ಇಷ್ಟು ಚಿಕ್ಕ ಹುಡುಗಿ, ಇನ್ನೂ ಮೈ ನೆರೆದಿದ್ದಾಳೋ ಇಲ್ಲವೋ? ಇಲ್ಲ ಎಂದೇ ಅನಿಸುತ್ತದೆ. ಏನಿದು ಎಂದುಕೊಂಡೆ. ಹಾಗೆಯೇ ಒಂದೊಂದೇ ನಾಣ್ಯ ಹಾಕುತ್ತ ಕಿಸಿ ಕಿಸಿ ನಗುತ್ತ ಆಕೆಯ ಮಾತು ಮುಂದುವರಿದೇ ಇತ್ತು. ಸುತ್ತಲಿನ ಜಗತ್ತಿನ ಬಗ್ಗೆ, ತನ್ನನ್ನು ಯಾರಾದರೂ ಗಮನಿಸಿಯಾರು ಎಂಬ ಬಗ್ಗೆ ಆಕೆಗೆ ಚಿಂತೆಯಿದ್ದಂತೆ ಕಾಣಲಿಲ್ಲ. ಪ್ರೀತಿಯಲ್ಲಿ ಸಿಲುಕಿಕೊಂಡ ಎಲ್ಲರ ಪಾಡು ಹೀಗೆಯೇ ಇರುತ್ತದೆ ಅನಿಸುತ್ತದೆ. 'ಫೋನ್ ಇಡಲಾ' ಎಂದು ಬಾಲಕಿ ಕೇಳಿದಳು. ಆ ಕಡೆಯ ಧ್ವನಿ ಈಕೆಗೆ ಏನೋ ಕೇಳಿತು. 'ಅದು ದಿನಕ್ಕೆ ಒಮ್ಮೆ ಮಾತ್ರ' ಎಂದಳು ಈಕೆ!... ೧೮ ವರ್ಷದ ಎಂಜಿನಿಯರಿಂಗ್ ಹುಡುಗ ಬಚಾವಾದ. ಆದರೆ, ಈ ಹುಡುಗಿ? ಆಗಲಾರಳೇನೋ? ಹುಡುಗ ಕಳೆದುಕೊಳ್ಳುವುದು ಕಡಿಮೆ. ಹುಡುಗಿಗೇ ಹೆಚ್ಚು ಕಷ್ಟ ಆತ ಕೊಡುವ 'ಉಡುಗೊರೆ' ಹೊತ್ತು ಪಾಲಿಸುವ ಹೊಣೆ ಅವಳದೇ, ಅದೇನು ಸುಲಭದ ಕೆಲಸವಲ್ಲ. 'ಹೃದಯವನ್ನು ಸಂಭಾಳಿಸಿಕೊಳ್ಳಿರಿ ಮಕ್ಕಳೇ; ಜೋಪಾನ'.

೨೦-೧೧-೧೧

**ಪಕ್ಕಾ ಉಡಾಳನೊಬ್ಬ ಅಪ್ಪಟ ಪತ್ರಕರ್ತನಾದ ಕಥೆ.**

ಆತ ಕಾಲೇಜಿನಲ್ಲಿ ಅಂಥ ಪ್ರತಿಭಾವಂತ ವಿದ್ಯಾರ್ಥಿಯೇನೂ ಆಗಿರಲಿಲ್ಲ. ಹಾಗೆ ನೋಡಿದರೆ ಬರೀ ಆರ್ಡಿನರಿ ಪಾಸು. ಪದವಿ ಪರೀಕ್ಷೆಯಲ್ಲಿಯೂ ಹಿಂದಿ ಪರೀಕ್ಷೆಗೆ ಕುಳಿತೇ ಇರಲಿಲ್ಲ. ಕಾಲೇಜಿನವರೇ ದೊಡ್ಡ ಮನಸ್ಸು ಮಾಡಿ ಈತ ಪಾಸು ಎಂದು ಪ್ರಕಟ ಮಾಡಿದರು. ಅದೂ ಆತ ಇಂಗ್ಲೆಂಡಿಗೆ ಹೋದ ಎಷ್ಟೋ ದಿನಗಳ ಮೇಲೆ. ಕಾಲೇಜಿನಲ್ಲಿ ಇದ್ದಾಗಲೂ ತರಗತಿಗಳಿಗೆ ನಿಯತವಾಗಿ ಹಾಜರಾಗಿ ಚುರುಕಿನ ಹುಡುಗ ಎಂದು ಹೆಸರು ಗಳಿಸಿದವನಲ್ಲ. ಚಕ್ಕರ್ ಹೊಡೆದುದೇ ಹೆಚ್ಚು. ಒಂದೇ ಮಾತಿನಲ್ಲಿ ಹೇಳಬಹುದಾದರೆ ದೊಡ್ಡ ಉಡಾಳ, ೬೦ರ ದಶಕದಲ್ಲಿ ಇದ್ದುದೇ ಹಾಗೆ, ತಂದೆ ತಾಯಿಗಳಿಗೂ ಅಷ್ಟೇ. ಮಗ ಭಾರಿ ಬುದ್ಧಿವಂತ ಎನಿಸಬೇಕು, ಬ್ಯಾಂಕ್ ಗಳಿಸಬೇಕು ಎಂಬ ಅಪೇಕ್ಷೆಗಳು ಅವರಿಗೆ ಇರಲಿಲ್ಲ. ಪ್ರತಿ ವರ್ಷ ಪಾಸಾದರೆ ಸಾಕು. ಎಂಥದೋ ಒಂದು ನೌಕರಿ ಸಿಗುತ್ತದೆ; ದುಡಿದು ಮನೆಯನ್ನು ನೋಡಿಕೊಂಡಾನು ಎಂಬ ಪುಟ್ಟ ಆಸೆ. ಶಾಲೆ ಕಾಲೇಜುಗಳಲ್ಲಿ ಓದುವಾಗಲೇ ವಿದ್ಯೆ, ಜ್ಞಾನ, ವಿವೇಕ, ಪರಿಣತಿಯನ್ನು ಗಳಿಸಬೇಕು ಎಂಬುದು ಈ ಹುಡುಗನಿಗೆ ಅರಿವಿಗೆ ಬರಲೇ ಇಲ್ಲ.

ಇದಕ್ಕೆಲ್ಲ ಆತನ ಬಡತನ ಅಡ್ಡಿಯಾಯಿತೇ? ನಿಜ, ಪುಸ್ತಕ ಕೊಳ್ಳಲು, ಪಠ್ಯ ಸಾಮಗ್ರಿ ಕೊಳ್ಳಲು ಅವನ ಬಳಿ ಹಣ ಇರಲಿಲ್ಲ.

ಹಾಗೆಂದು ಪುಸ್ತಕ, ಪಠ್ಯ ಸಾಮಗ್ರಿ ದೊರಕಿಸಲು ಕಷ್ಟವಿತ್ತೇ? ಇರಲಿಲ್ಲ. ಆತನಿಗೆ ಮನಸ್ಸೇ ಇರಲಿಲ್ಲ. ಈ ಹುಡುಗನ ಬರವಣಿಗೆಯಾದರೂ ಶುದ್ಧವಿತ್ತೇ? ಕಾಗುಣಿತಗಳನ್ನು ಸರಿಯಾಗಿ ನೆನಪು ಇಟ್ಟುಕೊಂಡು ಬರೆಯುತ್ತಿದ್ದನೇ? ಅದೂ ಇಲ್ಲ. ಬರೀ ತಾನು ಏಕೆ, ಕಾಗುಣಿತಗಳ ಮೇಲೆ ಅಮೆರಿಕ ಮಾಜಿ ಅಧ್ಯಕ್ಷ ಜಾನ್ ಎಫ್. ಕೆನಡಿ, ನಾಟಕಕಾರ ಜಾನ್ ಓಸ್‌ಬೋರ್ನ್, ಪತ್ರಕರ್ತ ವಾಲ್ಟರ್ ಲಿಪ್‌ಮನ್ ಅವರಿಗೂ ಇದೇ ಸಮಸ್ಯೆಯಿತ್ತು ಎಂದು ಸಮಾಧಾನ ಮಾಡಿಕೊಂಡ...! ಇಂಥ ಒಬ್ಬ ವಿದ್ಯಾರ್ಥಿ ಮುಂದೆ ೪೦ ವರ್ಷಗಳ ಕಾಲ ಒಬ್ಬ ಯಶಸ್ವಿ ಸಂಪಾದಕನಾಗಿ, ಯೋಚನೆ ಮಾಡುವ ಸಂಪಾದಕನಾಗಿ ಕೆಲಸ ಮಾಡಿ ದೇಶದಾದ್ಯಂತ ಹೆಸರು ಮಾಡಿದ ಎಂದರೆ ನಂಬುವುದು ಕಷ್ಟ. ಎಲ್ಲ ಮನುಷ್ಯರಲ್ಲಿ ಒಳಗೆ ಏನೋ ಒಂದು ಶಕ್ತಿ ಇದ್ದೇ ಇರುತ್ತದೆ. ಅದು ಹೇಗೆ ಬೆಳಕಿಗೆ ಬರುತ್ತದೆ, ಅವಕಾಶಗಳು ಅವರಿಗೆ ಹೇಗೆ ಒದಗಿ ಬರುತ್ತವೆ. ಎಂಬುದು ಒಂದು ವಿಸ್ಮಯ. ನಾನು ಬರೆಯುತ್ತಿರುವುದು 'ಔಟ್‌ುಕ್' ವಾರ ಪತ್ರಿಕೆಯ ಪ್ರಧಾನ ಸಂಪಾದಕ ವಿನೋದ್ ಮೆಹ್ರಾ ಅವರ ಬಗ್ಗೆ ಎಂದು ನಿಮಗೆ ಈಗಾಗಲೇ ಗೊತ್ತಾಗಿರಬಹುದು.

ಈಚೆಗಷ್ಟೇ ಅವರ 'ಲಖನೌ ಬಾಯ್' ಆತ್ಮಚರಿತ್ರೆ ಪ್ರಕಟವಾಗಿದೆ (ಪೆಂಗ್ವಿನ್ ಪ್ರಕಾಶನ: ಬೆಲೆ ರೂ.೪೯೯). ಈ ಪುಸ್ತಕದ ಕೆಲವು ರೋಚಕ ಅಧ್ಯಾಯಗಳು ಮೂರು ವಾರಗಳ ಹಿಂದೆಯೇ 'ಔಟ್‌ಲುಕ್' ಪತ್ರಿಕೆಯಲ್ಲಿ ಪ್ರಕಟವಾದರೂ ಮೆಹ್ರಾ ಅವರ ಆತ್ಮಚರಿತ್ರೆ ಒಂದು ಕುತೂಹಲಕಾರಿ ಕಾದಂಬರಿಯ ಹಾಗೆ ಓದಿಸಿಕೊಳ್ಳುತ್ತದೆ. ಕಾಗುಣಿತವನ್ನು ಸರಿಯಾಗಿ ಬರೆಯದ ಈ ಹುಡುಗನ ಪುಸ್ತಕದಲ್ಲಿ ಒಂದೇ ಒಂದು ತಪ್ಪು ಇಲ್ಲ! ಪರಿಣತಿಯನ್ನು ಗಳಿಸುವುದು ಸಾಧ್ಯವಿದೆ ಎಂಬುದಕ್ಕೆ ಈ ಒಂದು ಉದಾಹರಣೆ ಸಾಕು. ಮೆಹ್ರಾ ಅವರ ಮೂಲ ಪಾಕಿಸ್ತಾನ. ತಂದೆ ಪಾಕಿಸ್ತಾನದ ಪೆಶಾವರದವರು. ತಾಯಿಯ ಮೂಲ ನಿವಾಸಿಗಳು ಆಫ್ಘಾನಿಸ್ತಾನದವರು. ಮೆಹ್ರಾ ಹುಟ್ಟಿದ್ದು ಕೂಡ ರಾವಲ್ಪಿಂಡಿಯಲ್ಲಿ, ದೇಶ ವಿಭಜನೆಯ ಕಾಲದಲ್ಲಿ ಮೆಹ್ರಾ ಕುಟಂಬ ಲಖನೌಗೆ ವಲಸೆ ಬಂತು. ವಿನೋದ್ ಓದಿದ್ದು ಲಖನೌನ ಲಾ ಮಾರ್ಟಿನೀರ್ ಕಾಲೇಜಿನಲ್ಲಿ. ಅವರು ಬಿ.ಎ. ಪದವಿಯನ್ನು ಥರ್ಡ್ ಕ್ಲಾಸಿನಲ್ಲಿ ಪಾಸಾದರೂ ಎಷ್ಟೋ ವರ್ಷಗಳ ನಂತರ 'ಜೀವಮಾನದ ಸಾಧನೆಗಾಗಿ' ಇದೇ ವಿದ್ಯಾರ್ಥಿಯನ್ನು ಅದೇ ಕಾಲೇಜು ಸನ್ಮಾನಿಸಿತು!

ವಿನೋದ್ ಜೀವನದಲ್ಲಿ ಇಂಥ ವಿಸ್ಮಯದ ಎಷ್ಟೋ ಘಟನೆಗಳು ನಡೆದಿವೆ. ಬಿ.ಎ ಮುಗಿಸಿದ ಮೇಲೆ ಉನ್ನತ ಅಭ್ಯಾಸಕ್ಕಾಗಿಯೇನೂ ಅವರು ಇಂಗ್ಲೆಂಡಿಗೆ ಹೋಗುವುದಿಲ್ಲ. ಕಾಲೇಜಿನ ಸಹಪಾಠಿ ಹೇಳಿದ ಎಂದು ಅಲ್ಲಿಗೆ ಹೋಗುತ್ತಾರೆ! ಸಿಕ್ಕಸಿಕ್ಕ ಕೆಲಸ ಮಾಡುತ್ತಾರೆ. ಸಿಕ್ಕ ಸಿಕ್ಕ ಜಾಗದಲ್ಲಿ ಮಲಗುತ್ತಾರೆ. ಆಯಾ ದಿನ ಏನು ಸಿಗುತ್ತದೋ ಅದನ್ನು ತಿನ್ನುತ್ತಾರೆ. ಆ ದೇಶದಲ್ಲಿ ಇದ್ದ ಎಂಟು ವರ್ಷಗಳಲ್ಲಿ ಅವರು ಮಾಡಿದ ಕೆಲಸ ಒಂದು ಎರಡಲ್ಲ. ಮೋಟಾರು ವಾಹನ ನೋಂದಣಿ ಕಚೇರಿ, ಆದಾಯ ತೆರಿಗೆ ಇಲಾಖೆ, ಅಂಚೆ ಕಚೇರಿ ಇತ್ಯಾದಿ ಇತ್ಯಾದಿ. ಎಂಟು ವರ್ಷಗಳಲ್ಲಿ

ಒಂದಿಷ್ಟು ಆದಾಯ ತಂದುಕೊಟ್ಟ ಕೆಲಸಗಳು ಸಿಕ್ಕದು ಕೇವಲ ಮೂರು ವರ್ಷ ಮಾತ್ರ ಆದರೆ, ಜೀವನ ಯಾವಾಗ ಹೇಗೆ ನಮಗೆ ಪಾಠ ಕಲಿಸುತ್ತದೆ ಎಂದು ಗೊತ್ತಾಗುವುದಿಲ್ಲ; ಅಥವಾ ನಿತ್ಯವೂ ಕಲಿಸುತ್ತ ಇರುತ್ತದೆಯೇನೋ? ಒಂದು ದಿನ ಇದ್ದಕ್ಕಿದ್ದಂತೆ ವಿನೋದ್ ಅನಿಸತೊಡಗಿತು

ತಾನು ಒಬ್ಬ ದೊಡ್ಡ ಅಜ್ಞಾನಿ ಎಂದು. 'ಇದೇನು? ನನಗೆ ಏನೂ ಗೊತ್ತೇ ಇಲ್ಲವಲ್ಲ?' ಎಂದು ದಿಗ್ಭ್ರಮೆಯಾಯಿತು. ಪತ್ರಿಕೆ ಓದುವುದು, ಟಿ.ವಿ. ನೋಡುವುದು ಎಂದರೆ ಅವರಿಗೆ ದೊಡ್ಡ ದುಃಸ್ವಪ್ನದಂತೆ ಭಾಸವಾಗುತ್ತಿತ್ತು. ತನ್ನ ಸುತ್ತಮುತ್ತ, ಒಳ್ಳೆಯದು, ಕೆಟ್ಟದು, ಕುತೂಹಲಕಾರಿಯಾದುದು ಏನೆಲ್ಲ ಆಗುತ್ತಿತ್ತು. ಆದು ಯಾವುದೂ ಅವರಿಗೆ ಆಸಕ್ತಿ ಕೆರಳಿಸುತ್ತಲೇ ಇರಲಿಲ್ಲ. ತನಗೆ ಪಾಸ್‌ಪೋರ್ಟ್ ಕೊಟ್ಟ ಇಂಗ್ಲೆಂಡಿನ ಬಗೆಗೂ ಅವರಿಗೆ ಏನು ಎಂದರೆ ಏನೂ ಗೊತ್ತಿರಲಿಲ್ಲ. ತನ್ನ ಅಜ್ಞಾನದ ಅಂಧಕಾರದಿಂದ ಹೊರಗೆ ಬರುವುದು ಹೇಗೆ ಎಂದು ವಿನೋದ್ ಒದ್ದಾಡಿದರು. ರಾತ್ರಿ ನಿದ್ದೆ ಬರದೆ ಹಾಸಿಗೆಯಲ್ಲಿ ಹೊರಳಾಡಿದರು. ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಎಂಥ ತಪ್ಪು ಮಾಡಿದೆ ಎಂದು ಅನಿಸತೊಡಗಿತು. ಒಂದಿಷ್ಟು ಇತಿಹಾಸ, ರಾಜಕೀಯ, ಸಾಹಿತ್ಯ, ಕಲೆ, ವಿಜ್ಞಾನಗಳನ್ನು ಕನಿಷ್ಠ ಪ್ರಾಥಮಿಕ ಮಟ್ಟದಲ್ಲಿಯಾದರೂ ಓದಬಹುದಿತ್ತಲ್ಲ? 'ನಾನೇ ತರಗತಿಯಲ್ಲಿ ಒಂದಿಷ್ಟು ಪ್ರಶ್ನೆ ಕೇಳಿ, ಪುಸ್ತಕಗಳನ್ನು ಓದಿ, ಚಿಕಿತ್ಸಕ ಮನಸ್ಸಿನಿಂದ ಯೋಚಿಸಿದ್ದರೆ ಆಗುತ್ತಿತ್ತೇನೋ?' ಆತ್ಮನಿಂದನೆಗೆ ಮಿತಿಯೇ ಇರಲಿಲ್ಲ.

ಇಂಗ್ಲೆಂಡಿನಲ್ಲಿ ತನ್ನ ಸುತ್ತ ಹೆಸರು ಮಾಡಿದ ಅನೇಕ ಜನ ಇದ್ದರು. ಜಗತ್ತಿನಲ್ಲಿ ಆಗಾಗಲೇ ಹೆಸರು ಮಾಡಿದವರೂ ಬೇಕಷ್ಟು ಜನ ಇದ್ದರು. ವಿನೋದ್ ಜಾನ್ ಎಫ್. ಕೆನಡಿ ಯಾರು ಎಂದು ಗೊತ್ತಿರಲಿಲ್ಲ. 'ಬರ್ಲಿನ್ ವಾಲ್?... ಹಾಗೆಂದರೇನು' ಎಂದು ಕೇಳುತ್ತಿದ್ದರು. ಮರ್ಲಿನ್ ಮನ್ರಿ ಅವಳಂಥ ಸುಂದರಿಯ ಬಗೆಗೂ ಗೊತ್ತಿರಲಿಲ್ಲ. ಕಾರ್ಲ್ ಮಾರ್ಕ್ಸ್ ದೂರವೇ ಉಳಿಯಿತು. ಅವರೇ ಕೇಳುತ್ತಾರೆ 'ಬಟ್ ಹೂ ದ ಹೆಲ್ ವಾಸ್ ಮಾರ್ಕ್ಸ್?' ಎಂದು. ನೆಹರೂ ಎಂದರೆ ಮೆಹ್ರಾಗೂ ಆರಾಧ್ಯ ದೈವದಂತೆ ಪ್ರೀತಿ, ಗೌರವ, ಒಂದು ದಿನ ಇಂಗ್ಲೆಂಡಿಗೆ ಬಂದ ಆಂಗ್ಲೋ ಇಂಡಿಯನ್ ಲೇಖಕ ಡಾಮ್ ಮೊರೇಸ್, ಪಂಡಿತ್‌ಜೀ ಅವರನ್ನು ಹಿಗ್ಗಾ ಮುಗ್ಗಾ ಟೀಕಿಸಿ ಅಲ್ಲಿನ ಪತ್ರಿಕೆಗಳ ಹೀರೊ ಆಗಿ ಬಿಟ್ಟರು. ಡಾಂ ಮೊರೇಸ್ ಎಂದರೆ ಒಬ್ಬ 'ಲುಚ್ಚಾ ಮತ್ತು ಕುಡುಕ' ಎಂದು ತಿಳಿದುಕೊಂಡಿದ್ದ ವಿನೋದ್ ಅದೇ ಮೊರೇಸ್ ಅಂದು ಒಂದು ಪಾಠವನ್ನೂ ಕಲಿಸಿದರು 'ಯಾರೂ ಪರಿಪೂರ್ಣರಲ್ಲ' ಎಂದು. ಎಲ್ಲರನ್ನೂ ಪ್ರಶ್ನಿಸಲು ಮುಂದೆ ವಿನೋಗ್ ಕಲಿತುದು ಮೊರೇಸ್ ಹೇಳಿಕೊಟ್ಟ ಈ ಪಾಠದಿಂದಲೇ. ಆ ಕಾಲದಲ್ಲಿ ಸುತ್ತಲಿನ ವಾತಾವರಣವೇ ಹಾಗಿತ್ತು. ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಬಹುದೊಡ್ಡ ಕೆಲಸ ಮಾಡುವವರು ಸುತ್ತಲೂ ಇದ್ದರು. ಆ ಸುಳಿಗಾಳಿಯಲ್ಲಿ ವಿನೋದ್ ಕೂಡ ಸೇರಿಕೊಂಡರು. ಸ್ವಯಂ ಶಿಕ್ಷಣದ ಹಾದಿಯನ್ನು ಕಂಡುಕೊಂಡರು. ಈಗಿರುವ ವಿನೋದ್ ಅವರನ್ನು ರೂಪಿಸಿದ್ದು ಇಂಗ್ಲೆಂಡ್‌ನ ಒಂದು ವಾರ ಪತ್ರಿಕೆ, ಒಂದು ದಿನಪತ್ರಿಕೆ, ಎರಡು ಸಾರ್ವಜನಿಕ ವಾಚನಾಲಯಗಳು ಮತ್ತು ಡೆನ್ನಿಸ್ ಹಿಲ್ ಎಂಬ ಒಬ್ಬ ಡುಮ್ಮ ಇಂಗ್ಲಿಷ್ ಮನುಷ್ಯ ಅಮೆರಿಕಾದ ಪ್ರಖ್ಯಾತ ಕಾದಂಬರಿಕಾರ ನಾರ್ಮನ್ ಮೇಲರ್, ಪ್ರಸಿದ್ಧ ಲೇಖಕ ಜಾರ್ಜ್ ಆರ್ವೆಲ್ ಅವರು ವಿನೋದ್ ಮೆಹ್ರಾ ಮೇಲೆ ಮಾಡಿದ ಪ್ರಭಾವವೂ ಅಸಾಧಾರಣವಾದುದು.

'ಇನ್ನು ಇಂಗ್ಲೆಂಡ್ ಸಾಕು' ಎಂದು ಭಾರತಕ್ಕೆ ಬಂದು ಕೆಲವೇ ದಿನಗಳಲ್ಲಿ ಮುಂಬೈಗೆ ಹೋಗಿ ಅಲ್ಲಿನ ಜಾಹೀರಾತು ಕಂಪೆನಿಯೊಂದರಲ್ಲಿ ಕಾಪಿ ರೈಟರ್ ಆಗಿ ಸೇರಿ,



ವೇಶ್ಯಯರ ಬದುಕಿನ ಬಗ್ಗೆ ಸಂಜಯ್ ಗಾಂಧಿ ಬಗ್ಗೆ ಹಿಂದಿ ನಟಿ ಮೀನಾ ಕುಮಾರಿಯ ಬಗ್ಗೆ ಪುಸ್ತಕ ಬರೆದು, 'ಡೆಬನೇ'ನಂಥ ಬಹುಚರ್ಚಿತ ನಿಯತಕಾಲಿಕ ಪತ್ರಿಕೆಯಲ್ಲಿ ಹೆಂಗಸರ ನಗ್ನ ಚಿತ್ರಗಳನ್ನು ಪ್ರಕಟಿಸಿ, ದೇಶದ ಮೊದಲ ಭಾನುವಾರದ ಪತ್ರಿಕೆ 'ಸಂಡೆ ಅಬ್ಸರ್ವ'ನ್ನು ಯಶಸ್ವಿಯಾಗಿ ನಡೆಸಿ, ರೇಮಂಡ್ಸ್ ಕಂಪೆನಿಯ ಮಾಲೀಕರ ಒಡೆತನದ 'ಇಂಡಿಯಾ ಪೋಸ್ಟ್' ಎಂಬ ದೈನಿಕದ ಸಂಪಾದಕನಾಗಿ ಹೆಣಗಿ ವಿನೋದ್ ಮೆಹ್ತಾ ಸವೆಸಿದ ದಾರಿ ದೀರ್ಘವಾದುದು, ಪ್ರಯೋಗಶೀಲವಾದುದು. ಇಡೀ ಪುಸ್ತಕದ ಸಾರವನ್ನು ಇಲ್ಲಿ ಹೇಳಿ ಬಿಡುವುದು ನನ್ನ ಉದ್ದೇಶವಲ್ಲ. ಆದರೆ, ಓದುಗರ ಟೀಕೆಯ ಓಲೆಗಳನ್ನು ಪ್ರಕಟ ಮಾಡಬೇಕು ಎಂದು ಭಾರತೀಯ ಪತ್ರಿಕೋದ್ಯಮದಲ್ಲಿ ಬಹುಶಃ ಮೊದಲು ತೀರ್ಮಾನಿಸಿದವರು ವಿನೋದ್ ಮೆಹ್ತಾ. 'ಯಾರೋ ಪೂರೈಸುವ ಕಾಮಿಕ್ ಕಥನಗಳಿಗೂ ಒಬ್ಬ ಸಂಪಾದಕನಾಗಿ ನಾನೇ ಹೊಣೆ. ಓದುಗರಿಗೆ ಸಂಪಾದಕನ ಮೇಲೆ ವೈಯಕ್ತಿಕ ಟೀಕೆ ಮಾಡುವ ಎಲ್ಲ ಅಧಿಕಾರವೂ ಇದೆ. ನಾಲ್ಕು ಅಕ್ಷರಗಳ ನಿಷೇಧಿತ' ಪದವನ್ನು ಮತ್ತು ನನ್ನ ಹೆಂಡತಿಯ ಬಗ್ಗೆ ಆಡಬಾರದ ಮಾತುಗಳನ್ನು ಅವರು ಆಡದಿದ್ದರೆ ಸಾಕು! ಸಂಪಾದಕನಾಗಿ ನಾನು ಬರೀ ಹೂಗುಚ್ಛ ಮಾತ್ರವಲ್ಲ ಕಲ್ಲೇಟು ಸ್ವೀಕರಿಸಲೂ ಸಿದ್ಧನಿರಬೇಕು. ಆದರೆ, ಹೊಗಳಿಕೆಯ ಬದಲಾಗಿ ಚೆನ್ನಾಗಿ ಬರೆದ, ವಾದಿಸಿದ ಟೀಕೆಯನ್ನೇ ನಾನು ಪ್ರಕಟಪಡಿಸಲು ಬಯಸುತ್ತೇನೆ. ಅದು ಪತ್ರಿಕೆಯನ್ನು ಆಕರ್ಷಕ ಮತ್ತು ಓದಬೇಕು ಎನಿಸುವಂತೆ ಮಾಡುತ್ತದೆ' ಎಂದು ವಿನೋದ್ ಆತ್ಮಕಥೆಯಲ್ಲಿ ಬರೆದಿದ್ದಾರೆ ಮತ್ತು ಇದುವರೆಗೆ ಅದನ್ನು ಅನುಸರಿಸಿಕೊಂಡು ಬಂದಿದ್ದಾರೆ. ಈಗಲೂ ಅವರನ್ನು 'ಸೋನಿಯಾ ಚಮಚಾ' ಎಂದು ಬೈದು ಯಾರಾದರೂ ಪತ್ರ ಬರೆದರೆ ಅದನ್ನು ಧೈರ್ಯವಾಗಿ ಪ್ರಕಟಿಸುತ್ತಾರೆ. ತಮ್ಮನ್ನು ತಾವು ಯಾವಾಗಲಾದರೂ 'ನಾನು ಸೋನಿಯಾ ಚಮಚಾ ಅಲ್ಲವೇ?' ಎಂದು ಕೇಳಿಕೊಳ್ಳುತ್ತಾರೆ. ಪತ್ರಕರ್ತರು ಬೇರೆಯವರನ್ನು ಟೀಕೆ ಮಾಡುವುದು ಮಾತ್ರ ತಮ್ಮ ಹಕ್ಕು ಎಂದು ಅಂದುಕೊಂಡಿರುತ್ತಾರೆ. ತಮ್ಮನ್ನು ಯಾರಾದರೂ ಟೀಕೆ ಮಾಡಿದರೆ ಅದನ್ನು ಸಹಿಸಿಕೊಳ್ಳುವ ಶಕ್ತಿ ಅವರಿಗೆ ಇರುವುದಿಲ್ಲ. ಇದು ವಿಚಿತ್ರ. ಆದರೆ, ಇದಕ್ಕೆ ಹೊರತಾದವರು ಸಿಗುವುದು ಕಷ್ಟ. ಪತ್ರಕರ್ತ ತನ್ನ ಅಹಂಕಾರದಲ್ಲಿ ತಾನೇ ಮುಳುಗಿ ಹೋಗಿ ಬಿಟ್ಟಿರುತ್ತಾನೆ. ವೃತ್ತಿಗೆ ಸೇರಿಕೊಂಡ ಕೂಡಲೇ ಆತನಲ್ಲಿ ಮೊದಲು ಸೇರಿಕೊಳ್ಳುವುದು ಈ ಅಹಂಭಾವ ಮಾತ್ರ ಎಂದು ಕಾಣುತ್ತದೆ!...

ಸಂಪೂರ್ಣ ಮೂವತ್ತು ವರ್ಷ ಕಾಲ ಪತ್ರಿಕೋದ್ಯಮಕ್ಕೆ ಮಣ್ಣು ಹೊತ್ತ ನಾನು ಈ ಪುಸ್ತಕ ಓದುತ್ತ ಕಲಿತ ಪಾಠಗಳು ಅನೇಕ. ನನ್ನ ಸಂಪರ್ಕಕ್ಕೆ ಬಂದ ಪತ್ರಿಕೋದ್ಯಮದ ಅನೇಕ ವಿದ್ಯಾರ್ಥಿಗಳಿಗೆ ಈ ಪುಸ್ತಕವನ್ನು ಓದಿ ಎಂದು ಹೇಳಿದೆ. ಎಷ್ಟು ಜನ ಓದುತ್ತಾರೋ ಗೊತ್ತಿಲ್ಲ. ನಮ್ಮ ವಾರಿಗೆಯ ಪತ್ರಕರ್ತರು ಒಂದಿಷ್ಟು ಇತಿಹಾಸ, ರಾಜಕೀಯ, ಸಾಹಿತ್ಯ, ಕಲೆ, ಸಂಗೀತ, ನಾಟಕ, ಚಳವಳಿ ಎಂದೆಲ್ಲ ಅನೇಕ ಸಂಗತಿಗಳ ಬಗ್ಗೆ ತಲೆಕೆಡಿಸಿಕೊಳ್ಳುತ್ತಿದ್ದರು. ಅವೆಲ್ಲ

ನಮ್ಮನ್ನು ರೂಪಿಸಿದುವು ಕೂಡ. ಈಗಿನ ಹೊಸ ಹುಡುಗರಿಗೆ, ಅದೂ ಬರೀ ಪತ್ರಿಕೋದ್ಯಮದ ಪದವಿ ಪಡೆದು ಬಂದ ಅನೇಕ ಹುಡುಗ- ಹುಡುಗಿಯರಿಗೆ ಓದಿನ ಹಿನ್ನೆಲೆಯಿಲ್ಲ. ಚರ್ವಿತ ಚರ್ವಣ ಅನಿಸಬಹುದು, ಅವರಿಗೆ



ತಾವು ಕೆಲಸ ಮಾಡುವ ಪತ್ರಿಕೆಯನ್ನು ಓದುವ ರೂಢಿಯೂ ಇಲ್ಲ. ಇನ್ನೊಂದು ಇಂಗ್ಲಿಷ್ ಪತ್ರಿಕೆಯನ್ನು, ನಿಯತಕಾಲಿಕವನ್ನು ಓದುವುದು ದೂರವೇ ಉಳಿಯಿತು. ಸಾಹಿತ್ಯ ಗಾವುದ ದೂರ. ಅವರಿಗೆಲ್ಲ ವಿನೋದ್ ಮೆಸ್ತಾ ದೊಡ್ಡ ಮಾದರಿ, ಪದವಿ ಮುಗಿಸುವ ವರೆಗೆ ಏನನ್ನೂ ಓದದ ಮೆಸ್ತಾ ಈಗ ದೇಶದ ಅಗ್ರಪಂಕ್ತಿಯ ಪತ್ರಕರ್ತ, ಮೆಹ್ತಾ ಬರೀ ಹೊಸಬರಿಗೆ ಮಾತ್ರವಲ್ಲ, ನಿವೃತ್ತಿಯ ಅಂಚಿನಲ್ಲಿ ಇರುವ ನನ್ನಂಥವರಿಗೂ ದೊಡ್ಡ ಮಾದರಿ. ಅವರ ಆತ್ಮಕಥನ ಬರೀ ಪತ್ರಕರ್ತರು ಮಾತ್ರವಲ್ಲ ಜೀವನದಲ್ಲಿ ಯಶ ಗಳಿಸುವುದು ಹೇಗೆ ಮತ್ತು ಎಷ್ಟು ಕಷ್ಟ ಎಂದು ತಿಳಿಯುವ ಕುತೂಹಲ ಇರುವ ಎಲ್ಲರೂ ಓದಬೇಕು.

೧೧.೧೨.೧೧

**ರಾಜಧಾನಿಗೆ ನೂರು ವರ್ಷ; ಆದರೂ ದೂರ!**

ನನಗೆ ಅದು ಒಂದು ಆಸೆಯಾಗಿತ್ತು. ಬಹುದಿನಗಳ ಬಯಕೆಯಾಗಿತ್ತು. ಒಂದು ಸಾರಿಯಾದರೂ ಹೋಗಿ ಸಂಸತ್ ಅಧಿವೇಶನ ನೋಡಬೇಕು ಅಂದುಕೊಂಡಿದ್ದೆ. ಅದೃಷ್ಟ ಹೇಗೆ ಕೂಡಿ ಬರುತ್ತದೆ ಗೊತ್ತಿಲ್ಲ. ದೆಹಲಿ ರಾಜಧಾನಿಗೆ ನೂರು ವರ್ಷ ತುಂಬಿದ ದಿನ ನಾನು ಲೋಕಸಭೆಯ ಸಭಾಧ್ಯಕ್ಷರ ಗ್ಯಾಲರಿಯಲ್ಲಿ ಇದ್ದೆ. ಈ ಸಾರಿಯೂ ಅಷ್ಟೇ, ಅಧಿವೇಶನ ನಡೆಯಲು ಇದ್ದುದಕ್ಕಿಂತ ನಡೆಯದೇ ಇರುವುದಕ್ಕೆ ಹೆಚ್ಚು ಕಾರಣಗಳು ಇದ್ದುವು. ನಾನು ಅಧಿವೇಶನ ನೋಡಲು ಹೋದ ಹಿಂದಿನ ಒಂಬತ್ತು ಹತ್ತು ದಿನಗಳ ಕಲಾಪ ಇಂಥದೇ ಕಾರಣದಿಂದ ಗದ್ದಲದಲ್ಲಿ ಮುಳುಗಿ ಹೋಗಿತ್ತು. ಸದಸ್ಯರು ಸದನಕ್ಕೆ ಬಂದು ಕೂಗಿ, ಗಲಾಟೆ ಮಾಡಿ ಹೊರಟು ಹೋಗಿದ್ದರು. ಡಿಸೆಂಬರ್ ೧೨ರಂದು ಬೆಳಿಗ್ಗೆ ೧೦.೫೫ಕ್ಕೆ ನಾನು ಸಭಾಧ್ಯಕ್ಷರ ಗ್ಯಾಲರಿಯಲ್ಲಿ ಹೋಗಿ ಕೂಡುವುದಕ್ಕಿಂತ ಮುಂಚೆ ಅಂದು ಸದನ ಸುಗಮವಾಗಿ ನಡೆದೀತು ಎಂಬ ಭರವಸೆಯೇನೂ ಇರಲಿಲ್ಲ. ಹಿಂದಿನ ಶುಕ್ರವಾರವಷ್ಟೇ ವಿದೇಶಾಂಗ ಸಚಿವ ಎಸ್.ಎಂ.ಕೃಷ್ಣ ಅವರ ರಾಜೀನಾಮೆ ಕೇಳುವುದಕ್ಕಾಗಿಯೇ ಕಲಾಪ ನಷ್ಟವಾಗಿ ಹೋಗಿತ್ತು. ಕೃಷ್ಣ ಅವರ ರಾಜೀನಾಮೆ ಕೇಳಿದ ಬಿಜೆಪಿ ಸಂಸದರಿಗೆ ಕರ್ನಾಟಕದ ತಮ್ಮದೇ ಸರ್ಕಾರದಲ್ಲಿ ಇದೇ ರೀತಿ ಎಫ್.ಐ.ಆರ್. ದಾಖಲಾದ ಮೂವರು ಸಚಿವರು ಇನ್ನೂ ಸಂಪುಟದಲ್ಲಿ ಇದ್ದಾರೆ ಎಂಬುದು ಮರೆತಂತಿತ್ತು.

ಅಂದು ಕಲಾಪ ಆರಂಭವಾಗುವುದಕ್ಕಿಂತ ಮುಂಚೆಯೇ ಎಲ್.ಕೆ. ಅಡ್ವಾಣಿ, ಮುಲಾಯಂ ಸಿಂಗ್ ಯಾದವ್, ಪ್ರಣವ್ ಮುಖರ್ಜಿ, ಮಲ್ಲಿಕಾರ್ಜುನ ಖರ್ಗೆ ಅವರಂಥ ಹಿರಿಯ ಸದಸ್ಯರು ಸದನದ ತಮ್ಮ ತಮ್ಮ ಸೀಟುಗಳಲ್ಲಿ ಬಂದು ಕುಳಿತುಕೊಂಡಿದ್ದರು. ಸಭಾಧ್ಯಕ್ಷೆ ಬರುವುದಕ್ಕಿಂತ ಮುಂಚೆ ವಿರೋಧ ಪಕ್ಷದ ನಾಯಕಿ ಸುಷ್ಮಾ ಸ್ವರಾಜ್ ಅವರೂ ಬಂದರು. ಕರ್ನಾಟಕದಿಂದ ದೆಹಲಿ ವರೆಗೆ ಹಿರಿಯ ಸದಸ್ಯರು ಸದಾ ತಮ್ಮ ಹೊಣೆಯನ್ನು ಅರಿತು ನಡೆದುಕೊಂಡಿದ್ದಾರೆ.

ಸಭಾಧ್ಯಕ್ಷರು ಅಥವಾ ಸಭಾಪತಿ ಬರುವುದಕ್ಕಿಂತ ಮುಂಚೆ ಸದನದಲ್ಲಿ ಬಂದು ಕುಳಿತುಕೊಳ್ಳುವುದು, ಕಲಾಪವನ್ನು ಸೂಕ್ಷ್ಮವಾಗಿ ಗಮನಿಸುವುದು, ಅಗತ್ಯಬಿದ್ದಾಗ ಪಾಲ್ಗೊಳ್ಳುವುದನ್ನು ಮಾಡಿದ್ದಾರೆ. ಅನೇಕ ವರ್ಷಗಳ ಹಿಂದೆ ವಿಧಾನ ಮಂಡಲದ ಕಲಾಪ ವರದಿ ಮಾಡುತ್ತಿದ್ದ ನಾನು ಹಿರಿಯ ಸದಸ್ಯರು ಗಟ್ಟಿಯಾಗಿ ಹೀಗೆ ಸದನದಲ್ಲಿ ಕುಳಿತುಕೊಳ್ಳುವುದನ್ನು ಗಮನಿಸಿದ್ದೇನೆ. ೬೦-೭೦ರ ದಶಕದಲ್ಲಿ ಕೆಳಮನೆ ಅಥವಾ ಮೇಲ್ಮನೆಗೆ ಆಯ್ಕೆಯಾದವರಲ್ಲಿ ಈ ಶ್ರದ್ಧೆ ಎದ್ದು ಕಾಣುತ್ತದೆ. ಪ್ರಜಾಪ್ರಭುತ್ವದಲ್ಲಿ ಶಾಸಕನಾಗಿ, ಸಂಸದನಾಗಿ ಆಯ್ಕೆಯಾಗುವುದು ಒಂದು ದೊಡ್ಡ ಗೌರವ. ಇದಕ್ಕಿಂತ ದೊಡ್ಡ ಗೌರವದ, ಅತ್ಯುನ್ನತ ಅಧಿಕಾರದ ಮತ್ತೊಂದು ಮನೆ ಪ್ರಜಾಸತ್ತೆಯಲ್ಲಿ ಇಲ್ಲ.

ನನಗೆ ಕುತೂಹಲವಿತ್ತು: ಕರ್ನಾಟಕದ ಎಷ್ಟು ಮಂದಿ ಸದಸ್ಯರು ಸದನಕ್ಕೆ ಬರುತ್ತಾರೆ ಮತ್ತು ಕಲಾಪದಲ್ಲಿ ಭಾಗವಹಿಸುತ್ತಾರೆ ಎಂದು. ಹೆಚ್ಚಿನ ಸಂಖ್ಯೆಯಲ್ಲಿಯೇನೂ ಅವರು ಇರಲಿಲ್ಲ. ಕರ್ನಾಟಕದಿಂದ ಆಯ್ಕೆಯಾಗಿ ತಮ್ಮ ಅವಧಿಯುದ್ದಕ್ಕೂ ಬಾಯಿಬಿಡದೆ ಮನೆಗೆ ಬಂದ ಸದಸ್ಯರ ದೊಡ್ಡ ಪಟ್ಟಿಯೇ ಇದೆ. ಕೆಲವರಿಗೆ ಭಾಷೆ ಬರುವುದಿಲ್ಲ. ಇನ್ನು ಕೆಲವರಿಗೆ ಹಿಂಜರಿಕೆ, ಮತ್ತೆ ಕೆಲವರಿಗೆ ಇಲ್ಲದ ಉಸಾಬರಿ ಏಕೆ ಎಂಬ ತಾತ್ಸಾರ. ಇನ್ನು ಕೆಲವರಿಗೆ ಏನು ಮಾಡಿ ಏನು ಎಂಬ ಅಸಡ್ಡೆ. ಅಂತೂ ಇಂತೂ ಕರ್ನಾಟಕದ ಧ್ವನಿ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಕೇಳಿ ಬರುವುದು ವಿರಳವೇ. ನನ್ನ ಅದೃಷ್ಟಕ್ಕೆ ಅಂದು ಮೊದಲ ಪ್ರಶ್ನೆಯೇ ಕರ್ನಾಟಕದ ಒಬ್ಬ ಸದಸ್ಯರದು ಇತ್ತು. ನೇಕಾರರ ಸಮಸ್ಯೆಗಳ ಬಗ್ಗೆ ಅವರು ಪ್ರಶ್ನೆ ಕೇಳಿದ್ದರು. ದೇಶದಲ್ಲಿ ಸುಮಾರು ಮೂರು ಕೋಟಿ ಮಂದಿ ಪ್ರತ್ಯಕ್ಷವಾಗಿ ಮತ್ತು ಸುಮಾರು ನಾಲ್ಕು ಕೋಟಿ ಮಂದಿ ಅಪ್ರತ್ಯಕ್ಷವಾಗಿ ನೇಕಾರಿಕೆ ಮೇಲೆ ಅವಲಂಬಿತರಾಗಿದ್ದಾರೆ. ಕೃಷಿ ಬಿಟ್ಟರೆ ಇಷ್ಟೊಂದು ಮಂದಿ ಅಸಂಘಟಿತ ವಲಯಲ್ಲಿ ಅನ್ನ ಕಾಣುತ್ತಿರುವುದು ಈ ವಲಯದಲ್ಲಿ ಮಾತ್ರ. ಆದರೆ, ಕರ್ನಾಟಕದ ಆ ಸದಸ್ಯರಿಗೆ ಇತ್ತ ಹಿಂದಿಯೂ ಸ್ಪಷ್ಟವಾಗಿ ಬರುತ್ತಿರಲಿಲ್ಲ. ಅತ್ತ ಇಂಗ್ಲಿಷ್ ಬರುತ್ತಿರಲಿಲ್ಲ. ಅವರು ಎರಡನೇ ಅವಧಿಗೆ ಸದಸ್ಯರಾಗಿರುವುದು. ಸಂವಹನದಲ್ಲಿ ತಮ್ಮ ಸಮಸ್ಯೆಯೇನು ಎಂದು ಅವರಿಗೆ ಮೊದಲ ದಿನವೇ ಗೊತ್ತಾಗಿರಲು ಸಾಕು, ಆದರೆ ಆ ಕೊರತೆ ನೀಗಿಸಿಕೊಳ್ಳಲು ಅವರು ಪ್ರಯತ್ನ ಮಾಡಿದಂತೆ ಕಾಣಲಿಲ್ಲ. ಅವರು ಎತ್ತಿದ ಪ್ರಶ್ನೆ ಮಹತ್ವದ್ದಾಗಿತ್ತು, ಆದರೆ ಅದನ್ನು ಅವರು ಮಂಡಿಸಿದ ರೀತಿ ಪರಿಣಾಮಕಾರಿಯಾಗಿ ಇರಲಿಲ್ಲ. ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ನೀವು ಪರಿಣಾಮಕಾರಿಯಾಗಿ

ಮಾತನಾಡಬೇಕಾದರೆ ಅದು ಒಂದೋ ಹಿಂದಿಯಲ್ಲಿ ಆಗಿರಬೇಕು ಇಲ್ಲವೇ ಇಂಗ್ಲಿಷ್‌ನಲ್ಲಿ ಇರಬೇಕು. ಇಂಗ್ಲಿಷ್‌ಗಿಂತ ಹಿಂದಿಯಲ್ಲಿ



ಮಾತನಾಡಿದರೇ ಹೆಚ್ಚು ಪರಿಣಾಮಕಾರಿ ಎನ್ನುವಂಥ ಮನೋಭೂಮಿಕೆಯ ಸದನವದು, ಪ್ರದೇಶವದು.

ಅವರಿಗೆ ಉತ್ತರ ಕೊಟ್ಟ ಜವಳಿ ಸಚಿವ ಆನಂದ ಶರ್ಮ ಅವರಿಗೆ ಹಿಂದಿ ಮತ್ತು ಇಂಗ್ಲಿಷ್ ಎರಡರ ಮೇಲೂ ಪ್ರಭುತ್ವ ಇದೆ. ಆದರೆ, ಅವರ ಉತ್ತರದಲ್ಲಿ ನೇಕಾರರಿಗೆ ಯಾವ ಭರವಸೆಯೂ ಇರಲಿಲ್ಲ. ತಮ್ಮ ಮುಂದೆ ಕುಳಿತ ಹಣಕಾಸು ಸಚಿವರ ಹೆಸರು ಮತ್ತೆ ಮತ್ತೆ ಹೇಳಿ ಕಳೆದ ಬಜೆಟ್‌ನಲ್ಲಿ ನೇಕಾರರ ಅನುಕೂಲಕ್ಕಾಗಿ ಮೂರು ಸಾವಿರ ಕೋಟಿ ರೂಪಾಯಿ ಅನುದಾನ ಒದಗಿಸಲಾಗಿದೆ ಎಂದು ಅವರು ಹೇಳಿದರೇ ಹೊರತು ಆ ಹಣ ಇದುವರೆಗೆ ಏಕೆ ಬಳಕೆಯಾಗಲಿಲ್ಲ ಎಂದು ವಿವರಿಸಲು ಹೋಗಲಿಲ್ಲ. ಪ್ರಶ್ನೆ ಹಾಗೆಯೇ ಬಿದ್ದುಹೋಯಿತು. ಇನ್ನೊಬ್ಬ ಸದಸ್ಯರಾರೋ ರೇಷ್ಮೆ ಬೆಳೆಗಾರರ ಸಮಸ್ಯೆ ಬಗ್ಗೆ ಕೇಳಿದರು. ಚೀನಾದಿಂದ ಆಮದಾಗುವ ರೇಷ್ಮೆ ನೂಲಿನ ಮೇಲೆ ಹೆಚ್ಚಿನ ತೆರಿಗೆ ಹಾಕಬೇಕು ಎಂದು ಒತ್ತಾಯಿಸಿದರು. ಪರಿಸ್ಥಿತಿಯ ವ್ಯಂಗ್ಯವೋ ಏನೋ ಅಂದು ಸದನದ ಕಲಾಪ ನೋಡಲು ಚೀನಾದ ಒಂದು ನಿಯೋಗ ಬಂದಿತ್ತು! ಪ್ರಶೋತ್ತರ ಅವಧಿ ನಿಗದಿಯಾದ ಹಾಗೆ ಒಂದು ಗಂಟೆಗೆ ಮುಗಿದುಹೋಯಿತು. ಅಂದಿನ ಒಂದು ಗಂಟೆಯಲ್ಲಿ ಉತ್ತರ ಸಿಕ್ಕ ಪ್ರಶ್ನೆಗಳ ಸಂಖ್ಯೆ ಮೂರು ಅಥವಾ ಮೂರುವರೆ ಪಟ್ಟಿಯಲ್ಲಿ ಇದ್ದ ಪ್ರಶ್ನೆಗಳ ಸಂಖ್ಯೆ ೨೦, ಉಳಿದ ಪ್ರಶ್ನೆಗಳು ಪ್ರಸ್ತಾಪವೂ ಆಗಲಿಲ್ಲ. ಉತ್ತರವೂ ಸಿಗಲಿಲ್ಲ. ೨೦ ಪ್ರಶ್ನೆಗಳಿಗೆ ಉತ್ತರ ದೊರಕಿಸಲು ಅಧಿಕಾರಿಗಳಿಗೆ, ಸಚಿವಾಲಯಗಳಿಗೆ ಎಷ್ಟು ಅವಧಿ ಹಿಡಿಯುತ್ತದೆ, ಎಷ್ಟು ಖರ್ಚಾಗುತ್ತದೆ ಎಂದು ಯಾರು ಲೆಕ್ಕ ಇಡುತ್ತಾರೆ? ಲೆಕ್ಕ ಇದ್ದರೂ ಆ ಬಗ್ಗೆ ಯಾರು ತಲೆಕೆಡಿಸಿಕೊಳ್ಳುತ್ತಾರೆ? ಒಂದು ದಿನದ ಸಂಸತ್ ಕಲಾಪಕ್ಕೆ ಒಂದೂವರೆ ಕೋಟಿ ರೂಪಾಯಿ ಖರ್ಚು ಬರುತ್ತದಂತೆ. ಅದರಲ್ಲಿ ಪ್ರಶೋತ್ತರ ಅವಧಿಯ ವೆಚ್ಚವೂ ಸೇರಿದ್ದೀತು. ಪ್ರಶೋತ್ತರ ಅವಧಿಯಲ್ಲಿ ಸಚಿವ ಶರದ್ ಪವಾರ್ ಅವರ ಮಗಳು ಸುಪ್ರಿಯಾ ಸುಳೆ ಸೊಗಸಾದ ಇಂಗ್ಲಿಷ್‌ನಲ್ಲಿ ಪ್ರಶ್ನೆ ಕೇಳಿದರು. ಅವರು ಹಿಂದಿಯಲ್ಲಿ ಏಕೆ ಪ್ರಶ್ನೆ ಕೇಳಲಿಲ್ಲವೋ ಗೊತ್ತಿಲ್ಲ. ಬಹುಶಃ ತಂದೆ ಕೊಡಿಸಿದ ಇಂಗ್ಲಿಷ್ ಶಿಕ್ಷಣದ ಪ್ರಭಾವ ಇದ್ದೀತು.

ಅಂದಿನ ಕಲಾಪದಲ್ಲಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ಭಾಗವಹಿಸಿದ್ದರು. ಸದನ ಸೇರಿದಾಗಲೆಲ್ಲ ಅವರು ಹಾಜರು ಇದ್ದೇ ಇರುತ್ತಾರೆ ಎಂದು ನಮ್ಮ ದೆಹಲಿ ವರದಿಗಾರ ಹೇಳುತ್ತಿದ್ದರು. ಆದರೆ, 'ಕುಮಾರ ದೇವೇಗೌಡರಾಗಲೀ, ಯಡಿಯೂರಪ್ಪ' ಅವರಾಗಲೀ ಸದನದಲ್ಲಿ ಕಾಣಲಿಲ್ಲ. ಹೊರಗಡೆ ಸಿಕ್ಕಿದ್ದ ದೇವೇಗೌಡರು, ಕಲಾಪದ ಗುಣಮಟ್ಟ ಕುಸಿದುಹೋದ ಬಗ್ಗೆ ಬೇಸರದಿಂದ ಮಾತನಾಡಿದರು. 'ಯಾರಾರೋ ಏನೇನೋ ಮಾತನಾಡುತ್ತಾರೆ ಏನು ಮಾಡುವುದು?' 'ಕುಮಾರ ದೇವೇಗೌಡರು ಮತ್ತು 'ಕುಮಾರ ಯಡಿಯೂರಪ್ಪ ಅವರು ಸದನಕ್ಕೆ ಬರದೇ ಇರುವುದಕ್ಕೆ ಇದು ಕಾರಣವಾಗಿರಲಾರದು! ಆದರೆ, ಕರ್ನಾಟಕದ ನೇಕಾರರ ಸಮಸ್ಯೆ ಬಗ್ಗೆ

ಪ್ರಸ್ತಾಪವಾದಾಗ ಪಕ್ಷಭೇದ ಮರೆತು ಎಲ್ಲರೂ ಎದ್ದು ನಿಂತು ಗಲಾಟೆ ಮಾಡಿದ್ದರೆ ಆನಂದ ಶರ್ಮ ಅವರು ಉಳಿದ ಮೂರು ತಿಂಗಳಲ್ಲಿಯಾದರೂ ಮೂರು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಬಗ್ಗೆ ಯೋಚನೆ ಮಾಡುತ್ತಿದ್ದರೋ



ಏನೋ? ರೈತರ, ನೇಕಾರರ ಸಮಸ್ಯೆ, ಪ್ರಶ್ನೆ ಕೇಳಿದ ಯಾರೋ ಒಬ್ಬ ಸದಸ್ಯರ ಸಮಸ್ಯೆ ಅಲ್ಲವಲ್ಲ? ನೇಕಾರರ ಸಮಸ್ಯೆ ಪ್ರಸ್ತಾಪಿಸಿದ ಕರ್ನಾಟಕದ ಸದಸ್ಯರ ಬೆಂಬಲಕ್ಕೆ ಅಡ್ವಾಣಿ, ಸುಷ್ಮಾ ಅಥವಾ ಅನಂತಕುಮಾರ್ (ಅವರೂ ಸದನದಲ್ಲಿ ಹಾಜರಿದ್ದರು) ನಿಂತಿದ್ದರೆ ಆನಂದ ಶರ್ಮ ಅವರಿಗೆ ಅದರ ಗಂಭೀರತೆಯ ಅರಿವಾಗುತ್ತಿತ್ತು ಎಂದೂ ಅನಿಸಿತು. ಹಾಗೆ ಆಗಲಿಲ್ಲ.

ಇನ್ನೇನು ಪ್ರಶೋತ್ತರ ಅವಧಿ ಮುಗಿಯಿತು ಎನ್ನುತ್ತಿದ್ದಂತೆಯೇ ಮುಲಾಯಂ ಸಿಂಗ್ ಯಾದವ್ ಅವರ ಪುತ್ರ ಅಖಿಲೇಶ್ ಯಾದವ್ ಹೊರಗೆ ಹೊರಟು ಹೋದರು. ತಮ್ಮ ಇಲಾಖೆಯ ಕಾಗದಪತ್ರ ಮಂಡಿಸಲು ಮಾತ್ರ ಕುಳಿತಿದ್ದಂತಿದ್ದ ಯುವ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಕೂಡ ಯಾಂತ್ರಿಕವಾಗಿ ಕಾಗದ ಪತ್ರ ಮಂಡಿಸಿ ಹೊರಟು ಹೋದರು. ಅಡ್ವಾಣಿ, ಸುಷ್ಮಾ ಅವರೂ ಜಾಗ ಖಾಲಿ ಮಾಡಿದರು. ದೇವೇಗೌಡರೂ ಹೊರಗೆ ಹೊರಟರು. ಹಿರಿಯರು ಹೊರಟ ಮೇಲೆ ಕಲಾಪದಲ್ಲಿ ಇದ್ದಕಿದ್ದಂತೆ ಗಾಂಭೀರ್ಯ ಕಡಿಮೆ ಆಗಿ ಬಿಡುತ್ತದೆ. ಸದನ ನಡೆಯುವಷ್ಟು ಕಾಲ ಹಿರಿಯರೂ ಇರಬೇಕು, ಕಿರಿಯರೂ ಇರಬೇಕು. ಹಿರಿಯರು ಮಾತನಾಡುವುದನ್ನು ಕಿರಿಯರು ಕೇಳಬೇಕು. ಸಂಸದೀಯ ಕಲಾಪದ ಪಟ್ಟುಗಳನ್ನು ಕಲಿಯುವುದು ಇಂಥ ಸಂದರ್ಭಗಳಲ್ಲಿಯೇ ಪ್ರಣವ್ ಮುಖರ್ಜಿ ಅವರಿಗೆ ಪಕ್ಷದಲ್ಲಿ ಚಾಣಕ್ಯನ ಸ್ಥಾನ ಗಳಿಸಿಕೊಟ್ಟುದು ಇಂಥ ಅನುಭವಗಳೇ, ಸದನದ ನಾಯಕರಾದ ಅವರು ಮುಂದಿನ ಸೀಟಿನಲ್ಲಿ ಕಡತ ನೋಡುತ್ತ ಗಂಭೀರವಾಗಿ ಕುಳಿತುಕೊಂಡಿದ್ದರು. ಹಿರಿಯ ಸದಸ್ಯರು ಕಿರಿಯ ಸದಸ್ಯರಿಗೆ ಮಾತನಾಡಲು ಅವಕಾಶ ಕಲ್ಪಿಸಿ ಕೊಡಬೇಕು. ಅವರು ಮಾತನಾಡುವಾಗ ಕುಳಿತು ಕೇಳಬೇಕು. ಅವರ ಅರಕೆಗಳನ್ನು ತಿಳಿಸಿ ಕೊಡಬೇಕು, ತಿದ್ದಬೇಕು. ಲೋಕಸಭೆ ಮತ್ತು ರಾಜ್ಯಸಭೆಯ ಹೊಸ ಸದಸ್ಯರಿಗೆ ಆಗಾಗ ತರಬೇತಿ ಇರುತ್ತದೆಯೋ ಇಲ್ಲವೋ ಗೊತ್ತಿಲ್ಲ. ಅಂತೂ ಅಂದು ಸದಸ್ಯರು ಗಲಾಟೆ ಮಾಡಬಾರದು ಎಂದು ತೀರ್ಮಾನಿಸಿದಂತೆ ಇತ್ತು. ನಗರಾಭಿವೃದ್ಧಿ ಸಚಿವ ಕಮಲನಾಥ್ ಅವರು ದೆಹಲಿಯ ಅಭಿವೃದ್ಧಿಗಾಗಿ ವಿಶೇಷ ಮಸೂದೆ ಮಂಡಿಸುವವರಿದ್ದರು. ಕಲಾಪ ಪಟ್ಟಿಯಲ್ಲಿ ಕೆಳಗೆ ಇದ್ದ ಈ ಮಸೂದೆಗೆ ಸಭಾಧ್ಯಕ್ಷರು ಪ್ರಶೋತ್ತರ ಅವಧಿ ಮುಗಿಯುತ್ತಿದ್ದಂತೆಯೇ ಅವಕಾಶ ಮಾಡಿಕೊಟ್ಟರು. ಪ್ರಶೋತ್ತರ ಅವಧಿ ಮುಗಿಯುತ್ತಿದ್ದಂತೆಯೇ ಶೂನ್ಯವೇಳೆಯ ಕಾಲ. ಅಂದರೆ ಸದಸ್ಯರು ಗಲಾಟೆ ಮಾಡುವ ಕಾಲ ಎಂದು ಅರ್ಥ! ಆದರೆ, ಶೂನ್ಯ ವೇಳೆ ತೆಗೆದುಕೊಳ್ಳುವುದನ್ನು ಅಧ್ಯಕ್ಷರು ಮುಂದಕ್ಕೆ ಹಾಕಿದ್ದರು.

ದೆಹಲಿಯ ವಿಶೇಷ ಮಸೂದೆ ಮೇಲೆ ಮಾತನಾಡಿದ ಬಿಜೆಪಿ ಸದಸ್ಯ ಶಹನವಾಜ್, 'ದೆಹಲಿ ಸಾಮಾನ್ಯ ಜನರಿಗೆ ದೂರವಾಗಿದೆ, ಇಲ್ಲಿ ಅವರು ಬದುಕಲು ಅವಕಾಶ ಇಲ್ಲ' ಎಂದರು. ಅವರೊಂದಿಗೆ ಆರ್‌ಜೆಡಿಯ ಲಾಲು ಪ್ರಸಾದ್ ಅವರೂ ದನಿಗೂಡಿಸಿದರು. ನಾನೂ ಮೂರು ದಿನ ದೆಹಲಿಯಲ್ಲಿ ಇದ್ದೆ. ಲೋಕಸಭೆ ಕಲಾಪ ನೋಡಲು ಹೋಗಿದ್ದಾಗ ಸಂಸತ್ ಭವನದ ಪ್ರಧಾನಿ ಕಾರ್ಯಾಲಯದ ಮುಂದೆಯೇ ನಡೆದು ಹೋದೆ. ಅವರ ಕೊಠಡಿಯ ಮುಂದೆ ಹದ್ದಿನ ಕಣ್ಣು ಹಾಯಿಸುತ್ತ, ಕೈಯಲ್ಲಿ ಢಂ ಢಂ ಎನಿಸುವ ಶಸ್ತ್ರಗಳನ್ನು ಹಿಡಿದ ಸಿಬ್ಬಂದಿ ನಿಂತಿದ್ದರು. ದೇಶದ ಮುಖ್ಯ ಕಾರ್ಯನಿರ್ವಾಹಕ

ಒಬ್ಬ ಪ್ರಜೆಗೆ ಎಷ್ಟು ಹತ್ತಿರ, ಎಷ್ಟು ದೂರ ಎನಿಸಿತು. ಸಂಸತ್ ಭವನ ಪ್ರವೇಶಿಸುವುದಕ್ಕಿಂತ ಮುಂಚೆ ನನ್ನನ್ನು ಸಂಪೂರ್ಣ ಜಾಲಾಡಿದರು. ಒಬ್ಬ ಪತ್ರಕರ್ತನೂ ಆದ ನನಗೆ ನನ್ನ ಪೆನ್ನು ಮತ್ತು ಪುಟ್ಟ ವಹಿ ತೆಗೆದುಕೊಂಡು ಒಳಗೆ ಹೋಗಲೂ ಅನುಮತಿ ಇರಲಿಲ್ಲ. ಏಕೋ ದೆಹಲಿ ಸಾಮಾನ್ಯ ಜನರಿಗೆ ದೂರವಾಗಿದೆ ಎಂದು ಅನಿಸಿತು, ಎಲ್ಲ ಅರ್ಥದಲ್ಲಿಯೂ.

೧೮.೧೨.೧೧

**ಬೆಳಗಾವಿಯ ಮರಾಠಿ ಮುಖಂಡರಿಗೆ**

**ಇನ್ನಾದರೂ ಬುದ್ಧಿ ಬಂದೀತೇ?**

ನಿಷ್ಠುರದ ಮಾತೇ ಹಾಗೆ. ಸಂಬಂಧಪಟ್ಟವರಿಗೆ ಅದು ಹಿತವಾಗಿರುವುದಿಲ್ಲ. ರುಚಿಸುವುದೂ ಇಲ್ಲ. ನಿಷ್ಠುರದ ಮಾತು ಆಡಿದವರು ತಮ್ಮ ವೈರಿಯಂತೆಯೂ ಕಾಣಬಹುದು. ಆದರೆ, ಬೈದು ಬುದ್ಧಿ ಹೇಳಿದವರೇ ನಮಗೆ ಮಿತ್ರರು. ನಕ್ಕು ಬುದ್ಧಿ ಹೇಳುವವರು ಶತ್ರುಗಳೇ ಆಗಿರುತ್ತಾರೆ. ಬೆಳಗಾವಿಯಿಂದ ಮೊನ್ನೆ ಮುಂಬೈಗೆ ಹೋಗಿದ್ದ ಮಹಾರಾಷ್ಟ್ರ ಏಕೀಕರಣ ಸಮಿತಿಯ ಮುಖಂಡರಿಗೆ ಬುದ್ಧಿ ಹೇಳಿದ ಮಹಾರಾಷ್ಟ್ರ ನವ ನಿರ್ಮಾಣ ಸಮಿತಿಯ ರಾಜ್ ಠಾಕ್ರೆ ಇಂಥ ನಿಷ್ಠುರವಾದ ಆದರೆ ಅತ್ಯಂತ ಸತ್ಯವಾದ ಮಾತುಗಳನ್ನು ಹೇಳಿದ್ದಾರೆ. ರಾಜ್ಯಗಳ ಪುನರ್‌ವಿಂಗಡಣೆಯ ನಂತರ ಬೆಳಗಾವಿಯ ಮರಾಠಿ ಮುಖಂಡರಿಗೆ ಹೀಗೆ ಯಾರೂ ಬುದ್ಧಿ ಹೇಳಿರಲಿಲ್ಲ. ಎಲ್ಲರೂ ಬೆಳಗಾವಿಯ ವಿವಾದದಿಂದ ತಮಗೇನು ಫಾಯಿ ಎಂದು ಲೆಕ್ಕ ಹಾಕಿದವರೇ ಆಗಿದ್ದರು. ಶರದ್ ಪವಾರ್ ಕೂಡ ೮೦ರ ದಶಕದ ನಡುಭಾಗದಲ್ಲಿ ನಿಷೇಧಾಜ್ಞೆ ಉಲ್ಲಂಘಿಸಿ ಬೆಳಗಾವಿಯಲ್ಲಿ ಪ್ರತ್ಯಕ್ಷರಾಗಿ, ಮರಾಠಿ ಭಾಷಿಕರ ಪರವಾಗಿ ಮಾತನಾಡಿ ತಮ್ಮ ರಾಜಕೀಯ ಪುನರುಜ್ಜಿವನ ಸಾಧಿಸಿಕೊಂಡಿದ್ದರು. ನಂತರ ಅವರು ಮಹಾರಾಷ್ಟ್ರದ ಮುಖ್ಯಮಂತ್ರಿಗಳೂ ಆದರು. ಅದೇ ಪವಾರ್ ಹತ್ತು ವರ್ಷಗಳ ನಂತರ ಬೆಳಗಾವಿಗೆ ಬಂದಾಗ ರಕ್ಷಣಾ ಸಚಿವರಾಗಿದ್ದರು.

ಎಂದಿನಂತೆ ಮರಾಠಿ ಪತ್ರಕರ್ತರು ಗಡಿ ವಿವಾದ ಕೆದಕಲು ಹೊರಟಾಗ, 'ದೇಶದ ಗಡಿಯ ಬಗ್ಗೆ ಪ್ರಶ್ನೆ ಕೇಳಿ, ನಾನು ಕೇಂದ್ರದ ರಕ್ಷಣಾ ಸಚಿವ' ಎಂದು ನೆನಪಿಸಿದ್ದರು! ಅದು ಒಂದು ರೀತಿಯಲ್ಲಿ ನುಣುಚಿಕೊಳ್ಳುವ ಪ್ರಯತ್ನವೂ ಆಗಿತ್ತು. ಮತ್ತೆ ಒಂದು ಸಾರಿ ಬೆಳಗಾವಿಗೆ ಬಂದಾಗ, 'ಮರಾಠಿ ಭಾಷೆ ನೆಪದಲ್ಲಿ ಅಂಗಡಿ ಇಟ್ಟುಕೊಂಡು ದಂಧೆ ಮಾಡುವವರು ಇಲ್ಲಿದ್ದಾರೆ' ಎಂದು ಹರಿಹಾಯ್ದಿದ್ದರು. ಅದು, ಮುಖ್ಯವಾಗಿ ಬೆಳಗಾವಿಯಲ್ಲಿನ ಮರಾಠಿ ಪತ್ರಿಕೆಗಳನ್ನು ಉದ್ದೇಶಿಸಿ ಆಡಿದ ಮಾತು ಆಗಿತ್ತು. ಗಡಿ ವಿವಾದ ಎಂಬುದು ಒಂದು ಮುಗಿದ ಅಧ್ಯಾಯ ಎಂದು ಪವಾರ್ ಅವರ ಹಾಗೆ ಮಹಾರಾಷ್ಟ್ರದ ಅನೇಕ ನಾಯಕರಿಗೆ ಮನದಟ್ಟಾಗಿದೆ. ಆದರೆ, ಅದನ್ನು ಅವರು ಬಹಿರಂಗವಾಗಿ ಒಪ್ಪಿಕೊಳ್ಳಲು ಸಿದ್ಧರಿಲ್ಲ. ಬೆಳಗಾವಿಯ ಮರಾಠಿ ನಾಯಕರೆಲ್ಲ ಮುಂಬೈಗೆ ಬಂದಾಗ ಅವರ ಪರ ಒಂದು ಹೇಳಿಕೆ ನೀಡಿ, ವಿಧಾನಸಭೆಯಲ್ಲಿ, ಸಂಸತ್ತಿನಲ್ಲಿ ಒಂದಿಷ್ಟು ಗಲಾಟೆ ಮಾಡಿ ಇವರ ಮೂಗಿಗೆ ತುಪ್ಪ ಹಚ್ಚಿ ಕೈ ಬಿಡುತ್ತಾರೆ. ಇದು ಪ್ರಯೋಜನವಿಲ್ಲದ ಚಿತಾವಣೆ ಎಂದು ಸ್ಪಷ್ಟ ಮಾತುಗಳಲ್ಲಿ ಮೊದಲ ಬಾರಿ ಹೇಳಿದವರು ರಾಜ್ ಠಾಕ್ರೆ, 'ಮರಾಠಿ ಮಾನೂಸ್'ನನ್ನೇ ಕೇಂದ್ರವಾಗಿ ಇಟ್ಟುಕೊಂಡು ಒಂದು ಸಂಘಟನೆ ಕಟ್ಟಲು ಹೊರಟವರಿಗೆ ಇಂಥ ಮಾತು ಆಡಲು ಬಹಳ ಧೈರ್ಯ ಬೇಕಾಗುತ್ತದೆ. ಆದರೆ, ರಾಜಕೀಯದಲ್ಲಿ ಇರುವವರು ಅಪ್ರಿಯ ಮಾತು ಹೇಳಲು ಸಿದ್ಧರಿರಬೇಕು. ಅಂಥ ಅಪ್ರಿಯ ಸತ್ಯವನ್ನು ಅವರು ಹೇಳಿದ್ದಾರೆ.

ಆದರೆ ಭಾವನೆಗಳ ಬೆನ್ನು ಹತ್ತಿದವರಿಗೆ ಸತ್ಯ ಅರ್ಥವಾಗುವುದಿಲ್ಲ. ಮಂದಾ ಬಾಳೆಕುಂದ್ರಿಯವರು ಮೇಯರ್ ಆಗಿ ಆಯ್ಕೆಯಾಗುವಾಗ ಕನ್ನಡಿಗ ಸದಸ್ಯರೂ ಅವರಿಗೆ ಬೆಂಬಲ ವ್ಯಕ್ತಪಡಿಸಿದ್ದರು. ಬರೀ ಕನ್ನಡಿಗ ಕಾರ್ಪೊರೇಟರ್‌ಗಳು ಮಾತ್ರವಲ್ಲ ಬೆಳಗಾವಿಯ ಬಿಜೆಪಿಯ ಒಬ್ಬ ಶಾಸಕರೂ ಬೆಂಬಲ ವ್ಯಕ್ತಪಡಿಸಿದ್ದರು. ಮಂದಾ ಅವರು 'ಗಡಿ ವಿಚಾರಗಳೆಲ್ಲ ನಮ್ಮ ತಲೆನೋವಲ್ಲ, ನಮ್ಮ ಕೆಲಸ ಏನಿದ್ದರೂ ಬೆಳಗಾವಿಯ ಅಭಿವೃದ್ಧಿಯ ಕೆಲಸ' ಎಂದು ವಿವಾದಗಳಿಂದ ದೂರ ಉಳಿದಿದ್ದರೆ ಅವರ ಅಧಿಕಾರವೂ ಉಳಿಯುತ್ತಿತ್ತು; ಪಾಲಿಕೆಯ ಅವಧಿಯೂ ಇನ್ನೂ ಒಂದು ವರ್ಷ ಮೂರು ತಿಂಗಳು ಇರುತ್ತಿತ್ತು. ಹಿಂದೆ ೨೦೦೫ರಲ್ಲಿ ಆಗ ಮೇಯರ್ ಆಗಿದ್ದ ವಿಜಯ್ ಮೋರೆ ಕೂಡ ಇದೇ ರೀತಿ ಅವಿವೇಕ ಮಾಡಿಕೊಂಡರು; ಇನ್ನೂ ಒಂಬತ್ತು ತಿಂಗಳು ಅಧಿಕಾರ ಇರುವಾಗಲೇ ಕುರ್ಚಿಯನ್ನು ಬಿಟ್ಟುಕೊಟ್ಟರು. ಬೆಳಗಾವಿ ಪಾಲಿಕೆಯ ಇತಿಹಾಸದಲ್ಲಿ ಇದೇನು ಹೊಸತಲ್ಲ. ಪ್ರತಿ ಸಾರಿ ಚುನಾವಣೆ ನಡೆದ ನಂತರ ಮೊದಲ ಸಭೆಯಲ್ಲಿಯೇ

ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು ಎಂಬ ನಿರ್ಣಯ ಅಂಗೀಕಾರವಾಗುತ್ತಿತ್ತು. ಅದನ್ನು ಪಾಲಿಕೆಯ ಆಯುಕ್ತರು ಕಸದ ಬುಟ್ಟಿಗೆ ಹಾಕುತ್ತಿದ್ದರು. ಅಲ್ಲಿಗೆ ವಿವಾದ ಮುಗಿದು ಹೋಗುತ್ತಿತ್ತು. ಆಗ ಕನ್ನಡ ಚಳವಳಿಗಾರರು ಈಗಿನಷ್ಟು ಉಗ್ರರಾಗಿರಲಿಲ್ಲ. ಆಗ ಟಿ.ವಿಗಳೇ ಇರಲಿಲ್ಲವಾದ್ದರಿಂದ ಈ ಸುದ್ದಿಗೆ ಅಂಥ ಪ್ರಾಮುಖ್ಯವೂ ಸಿಗುತ್ತಿರಲಿಲ್ಲ. ಎಂಇಎಸ್ ಸದಸ್ಯರು ವಿಧಾನಸಭೆಗೆ ಆರಿಸಿಬಂದಾಗಲೆಲ್ಲ ಮೊದಲ ಅಧಿವೇಶನದಲ್ಲಿ ಕೇಸರಿ ರುಮಾಲು ಧರಿಸಿಕೊಂಡು ಬಂದು ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು ಎಂದು ಘೋಷಣೆ ಕೂಗುತ್ತಿದ್ದರು. ಅವರಿಗಿಂತ ಜೋರಾಗಿ ಕರ್ನಾಟಕದ ಶಾಸಕರು ಕೂಗಿ ಅವರ ಬಾಯಿ ಮುಚ್ಚಿಸುತ್ತಿದ್ದರು.

ಅಲ್ಲಿಗೆ ವಿವಾದ ಮುಗಿಯುತ್ತಿತ್ತು. ಪಾಲಿಕೆಯಲ್ಲಿ ಮಹಾರಾಷ್ಟ್ರ ಪರ ನಿರ್ಣಯ ಅಂಗೀಕರಿಸುವುದು, ಕನ್ನಡ ರಾಜ್ಯೋತ್ಸವದ ದಿನ ಕಪ್ಪು ದಿನ ಆಚರಿಸುವುದು, ಅದರಲ್ಲಿ ಮರಾಠಿ ನಾಯಕರು ಭಾಗವಹಿಸುವುದು ಬೆಳಗಾವಿ ಜನರಿಗೆ ದೊಡ್ಡ ಸುದ್ದಿಯೇನೂ ಅಲ್ಲ. ಅದನ್ನು ಅಲ್ಲಿನ ಕನ್ನಡ ಪತ್ರಿಕೆಗಳು ನಿರ್ಲಕ್ಷಿಸಿಕೊಂಡೇ ಬಂದಿದ್ದುವು. ಮರಾಠಿ ಪತ್ರಿಕೆಗಳಲ್ಲಿ ಆ ಸುದ್ದಿ ಎಷ್ಟೇ ದೊಡ್ಡದಾಗಿ ಬಂದರೂ ಅದು ರಾಜ್ಯ ಮಟ್ಟದ ಸುದ್ದಿ ಆಗುತ್ತಿರಲಿಲ್ಲ. ಅದು ಒಂದು ತಂತ್ರಗಾರಿಕೆಯೂ ಆಗಿತ್ತು. ಈಗಲೂ ಮರಾಠಿ ನಾಯಕರನ್ನು ಉದಾಸೀನ ಮಾಡುವುದೇ ಸರಿಯಾದ ತಂತ್ರ ಎಂದು ಭಾವಿಸುವ ಅನೇಕ ಕನ್ನಡ ನಾಯಕರು ಬೆಳಗಾವಿಯಲ್ಲಿ ಇದ್ದಾರೆ. ಆದರೆ, ಮಾಧ್ಯಮ ಕ್ಷೇತ್ರದಲ್ಲಿ ಆಗಿರುವ 'ಕ್ರಾಂತಿ' ಮತ್ತು 'ಸಾಂದರ್ಭಿಕ ಸ್ಫೂರ್ತಿ'ಯಿಂದ ಹೋರಾಟ ಮಾಡುವ ಕನ್ನಡ ಚಳವಳಿಗಾರರ ಸಂಖ್ಯೆ ಹೆಚ್ಚಿರುವುದರಿಂದ ಈ ವಿವಾದ ದೊಡ್ಡದಾಗಿ ಬಿಂಬಿತವಾಗುತ್ತಿದೆ.

ರಾಜ್ಯ ಸರ್ಕಾರ ಬೆಳಗಾವಿ ಪಾಲಿಕೆಯನ್ನು ವಿಸರ್ಜನೆ ಮಾಡುವಾಗ ಇಂಥ ಭಾವನಾತ್ಮಕವಾದ ವಿಚಾರಗಳನ್ನು ಕಾರಣವಾಗಿ ನೀಡಿಲ್ಲ. ಬೆಳಗಾವಿ ಪಾಲಿಕೆಯಲ್ಲಿ ಆಡಳಿತ ಕುಸಿದು ಹೋದ ಅಥವಾ ದುರಾಡಳಿತದ ಕಾರಣವನ್ನು ಕೊಟ್ಟಿದೆ. ಆದರೆ, ದುರಾಡಳಿತದಲ್ಲಿ ಬರೀ ಪಾಲಿಕೆಯ ಮರಾಠಿ ಸದಸ್ಯರ ಪಾತ್ರ ಮಾತ್ರ ಇದೆಯೇ? ಬೆಳಗಾವಿ ಪಾಲಿಕೆಗೆ ಈಗ ಪಕ್ಷದ ಆಧಾರದ ಮೇಲೆ ಚುನಾವಣೆ ನಡೆಯುತ್ತಿಲ್ಲ. ಮರಾಠಿ ಭಾಷಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗಬಾರದು ಎಂದರೆ ರಾಷ್ಟ್ರೀಯ ಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಬಾರದು ಎಂದು ಸುಮಾರು ಎರಡು ದಶಕಗಳ ಹಿಂದೆಯೇ ತೀರ್ಮಾನಿಸಲಾಯಿತು. ಹೀಗಾಗಿ ಪಕ್ಷದ ಹಂಗು ಇಲ್ಲದೆ ಆಯ್ಕೆಯಾಗುವ ಕಾರ್ಪೊರೇಟರ್‌ಗಳಿಗೆ ವಿಪ್‌ನ ಭಯವೂ ಇಲ್ಲ. ಅವರು ಯಾರಿಗೆ ಬೇಕಾದವರಿಗೆ ಮತ ಹಾಕಬಹುದು. ಮತ ಹಾಕಲು ಬೆಳಗಾವಿ ಪಾಲಿಕೆಯಲ್ಲಿ ಏನೇನು ನಡೆಯುತ್ತಿದೆ ಎಂಬುದು ಈಗ ರಹಸ್ಯವಾಗಿಯೇನೂ ಉಳಿದಿಲ್ಲ. ಅವರು ಮರಾಠಿಗರೇ ಇರಲಿ, ಕನ್ನಡಿಗರೇ ಇರಲಿ, ಹಣಕ್ಕಾಗಿ ರಣಹದ್ದುಗಳಂತೆ ನಡೆದುಕೊಂಡಿದ್ದಾರೆ. ಹಣ ಕೊಟ್ಟು ಆಯ್ಕೆಯಾದ ಮೇಯರ್‌ಗಳು ಸಂತರ ಹಾಗೆ ಕೆಲಸ ಮಾಡಲು ಆಗುವುದಿಲ್ಲ. ಪಾರದರ್ಶಕ ಕಾಯ್ದೆಯಿಂದ ರಕ್ಷಣೆ ಪಡೆಯಲು ಒಂದು ಲಕ್ಷ ರೂಪಾಯಿಗಿಂತ ಕಡಿಮೆ ಮೊತ್ತದ ತುಂಡುಗುತ್ತಿಗೆ ಕಾಮಗಾರಿಗಳ ಮೂಲಕವೇ ಅಭಿವೃದ್ಧಿ ಕೆಲಸ ಏಕೆ ನಡೆಯುತ್ತಿವೆ ಎಂಬುದಕ್ಕೂ ಇಲ್ಲಿ ಉತ್ತರ ಇದೆ. ಹಾಗಾದರೆ, ಪಾಲಿಕೆಯ ದುರಾಡಳಿತಕ್ಕೆ ಯಾರು ಕಾರಣ? ಬರೀ ಪಾಲಿಕೆಯ

ಸದಸ್ಯರು ಮಾತ್ರ ಈ ಮಾತ್ರ ಈ ಹಗರಣದಲ್ಲಿ ಪಾಲುದಾರರೇ? ರಾಜ್ಯದ ಹಾಲಿ ಸರ್ಕಾರ ಬೆಳಗಾವಿಯ ಅಭಿವೃದ್ಧಿ ಕಾರ್ಯಗಳಿಗಾಗಿ ನೂರು ಕೋಟಿ ರೂಪಾಯಿ ಅನುದಾನ ನೀಡಿತ್ತು. ಪಾಲಿಕೆಯೇ ಈ ಹಣವನ್ನು ಖರ್ಚು ಮಾಡಬೇಕಿತ್ತು. ಆದರೆ, ಈ ಹಣ ಖರ್ಚು ಮಾಡುವ ವಿಚಾರದಲ್ಲಿ ಬೆಳಗಾವಿಯ ಇಬ್ಬರು ಶಾಸಕರು ಪಾಲಿಕೆಯ ಕೆಲಸದಲ್ಲಿ ಹಸ್ತಕ್ಷೇಪ ಶುರು ಮಾಡಿದರು. ಅದರಲ್ಲಿ ಒಬ್ಬರು ಆಡಳಿತ ಪಕ್ಷದ ಶಾಸಕರು, ಇನ್ನೊಬ್ಬರು ವಿರೋಧ ಪಕ್ಷದವರು. ಅಂದರೆ ಪಾಲಿಕೆಯಲ್ಲಿ ದುರಾಡಳಿತ ಆಗಿದ್ದರೆ ಅದು ಬರೀ ಪಾಲಿಕೆಯ ಸದಸ್ಯರ ತಪ್ಪು ಮಾತ್ರವಲ್ಲ, ಅದರಲ್ಲಿ ಶಾಸಕರ ಪಾತ್ರವೂ ಇದೆ ಎಂದೇ ಅರ್ಥ.

ಪ್ರಜಾಪ್ರಭುತ್ವದಲ್ಲಿ ಜನಪ್ರತಿನಿಧಿಗಳ ಆಡಳಿತವೇ ಸರ್ವಶ್ರೇಷ್ಠವಾದುದು. ಈಗ ಪಾಲಿಕೆಯ ಆಡಳಿತವನ್ನು ವಿಸರ್ಜನೆ ಮಾಡುವ ಮೂಲಕ ಮರಾಠಿ ಮತದಾರರಿಗೆ ಮಾತ್ರವಲ್ಲ, ಕನ್ನಡ ಮತದಾರರಿಗೂ ಸರ್ಕಾರ ಅನ್ಯಾಯ ಮಾಡಿದೆ. ನೆಗಡಿ ಬಂತು ಎಂದು ಮೂಗನ್ನೇ ಕುಯ್ದುಕೊಂಡಂತೆ ಆಗಿದೆ. ಸರ್ಕಾರದ ಪ್ರತಿನಿಧಿಯಾಗಿ ಪಾಲಿಕೆಯಲ್ಲಿ ಕೆಲಸ ಮಾಡುತ್ತಿದ್ದ ಆಯುಕ್ತರು ಏನು ಮಾಡುತ್ತಿದ್ದರು? ಅವರು ಪಾಲಿಕೆಯ ದುರಾಡಳಿತದ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಿದ್ದರೇ? ಸಲ್ಲಿಸಿದ್ದರೆ ಸರ್ಕಾರ ಏನು ಕ್ರಮ ತೆಗೆದುಕೊಂಡಿತು? ಪಾಲಿಕೆಯ ಆಯುಕ್ತರಿಗೆ 'ನೀವು ಅಲ್ಲಿ ಏನು ಮಾಡುತ್ತಿದ್ದೀರಿ' ಎಂದು ಯಾವಾಗಲಾದರೂ ಸರ್ಕಾರ ವಿಚಾರಿಸಿತ್ತೇ? ಇದು ಬರೀ ಬೆಳಗಾವಿಯ ಸಮಸ್ಯೆಯಲ್ಲ. ಎಲ್ಲ ಪಾಲಿಕೆಗಳ ಹಣೆಬರಹ ಹೀಗೆಯೇ ಆಗಿದೆ. ವಿಧಾನಸೌಧದ ಮೂಗಿನ ಅಡಿಯಲ್ಲಿಯೇ ಇರುವ ಬೆಂಗಳೂರು ಪಾಲಿಕೆಯಲ್ಲಿ ಬಹುಶಃ ಹಿಂದೆ ಎಂದೂ ನಡೆಯದಷ್ಟು ಅಕ್ರಮಗಳು, ಹಗರಣಗಳು ನಡೆದಿವೆ. ಆ ದೃಷ್ಟಿಯಿಂದ ನೋಡುವುದಾದರೆ ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತವನ್ನೂ ವಿಸರ್ಜನೆ ಮಾಡಬೇಕು. ಹಾಗೆ ಮಾಡಿಲ್ಲವಾದ್ದರಿಂದ ಭಾಷೆಯ ದೃಷ್ಟಿಯಿಂದಲೇ ಬೆಳಗಾವಿ ಪಾಲಿಕೆಯ ಆಡಳಿತವನ್ನು ರದ್ದು ಮಾಡಿದಂತೆ ಭಾಸವಾಗುತ್ತದೆ. ಜ್ಞಾನಪೀಠ ಪ್ರಶಸ್ತಿ ಪಡೆದ ಚಂದ್ರಶೇಖರ ಕಂಬಾರರಿಗೆ ಅಭಿನಂದನೆ ಸಲ್ಲಿಸುವ ವಿಚಾರದಲ್ಲಿ ಬೆಳಗಾವಿ ಮೇಯರ್ ನಡೆದುಕೊಂಡ ರೀತಿ ಸರಿ ಇರಲಿಲ್ಲ. ಮರಾಠಿ ಸಾಹಿತ್ಯ ಸಮ್ಮೇಳನಗಳಲ್ಲಿ ಕನ್ನಡವೂ ಸೇರಿದಂತೆ ಇತರ ಭಾಷೆಯ ಸಾಹಿತಿಗಳಿಗೆ ಉದ್ಘಾಟನೆಯ ಗೌರವ ಸಿಕ್ಕಿದೆ. ಆ ಪರಂಪರೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಮಂದಾ ಅವರು ಕಂಬಾರರಿಗೆ ಅಭಿನಂದಿಸುವ ನಿರ್ಣಯವನ್ನು ಅಂಗೀಕರಿಸಬೇಕಿತ್ತು. ಅದಕ್ಕೆ ಪೂರಕವಾದ ಸರ್ವಸಮ್ಮತಿಯ ಒಂದು ವಾತಾವರಣವನ್ನು ಸೃಷ್ಟಿಸಲು ಇತರ ಕನ್ನಡ ಭಾಷಿಕ ಸದಸ್ಯರೂ ಪ್ರಯತ್ನಿಸಬೇಕಿತ್ತು. ಅಂದಿನ ಸಭೆಯಲ್ಲಿ ಕನ್ನಡ ಸದಸ್ಯರು ಭಾಗವಹಿಸಿರಲೇ ಇಲ್ಲ. ಅವರು ಒಳಗೆ ಬರುವ ವೇಳೆಗೆ ಕಾಲಮಿಂಚಿ ಹೋಗಿತ್ತು. ಅದು ಯಾವ ಪಾಲಿಕೆಯೇ ಇರಲಿ, ಅಲ್ಲಿ ಆಯ್ಕೆಯಾಗಿ ಬರುವ ಬಹುತೇಕ ಸದಸ್ಯರಿಗೆ ಸಾಹಿತ್ಯ, ಸಂಸ್ಕೃತಿಯ ಗಂಧಗಾಳಿಯೂ ಇರುವುದಿಲ್ಲ. ಬೆಂಗಳೂರು ಪಾಲಿಕೆಯಲ್ಲಿ ಕಂಬಾರರ ಹೆಸರನ್ನು ಆಡಳಿತ ಪಕ್ಷದ ನಾಯಕರೇ ಕುಂಬಾರ, ಕುಂಬಾರ ಎಂದು ಹತ್ತು ಸಾರಿ ಹೇಳಿದರು! ಭೀಮಸೇನ ಜೋಷಿಯವರಿಗೆ ಶ್ರದ್ಧಾಂಜಲಿ ಸಲ್ಲಿಸುವಾಗ ಆಡಳಿತ ಪಕ್ಷದ ಸದಸ್ಯರೊಬ್ಬರು ಆಡಿದ ಮಾತು ಇನ್ನೂ ಮರೆತು

ಹೋಗಿಲ್ಲ. ಇದು ನಮ್ಮ ಪ್ರತಿನಿಧಿಗಳ ಯೋಗ್ಯತೆಯೇ ಅಥವಾ ಅವರನ್ನು ಆಯ್ಕೆ ಮಾಡಿದ ನಮ್ಮ ಯೋಗ್ಯತೆಯೇ? ಹೇಳುವುದು ಕಷ್ಟ.

ಬೆಳಗಾವಿ ಒಂದು ಸುಂದರ ಊರು, ಕರ್ನಾಟಕದ ಪ್ಯಾರಿಸ್ ಎಂದು ಆ ಊರಿಗೆ ಹೆಸರು. ಅಲ್ಲಿನ ಜನರಿಗೆ ಭಾಷಾ ವಿವಾದದಲ್ಲಿ ಕಿಂಚಿತ್ ಆಸಕ್ತಿಯೂ ಇಲ್ಲ ಎಂಬುದಕ್ಕೆ ಕೆಲವೇ ತಿಂಗಳ ಹಿಂದೆ ನಡೆದ ವಿಶ್ವ ಕನ್ನಡ ಸಮ್ಮೇಳನದ ಯಶಸ್ಸು ಒಂದು ದೊಡ್ಡ ಉದಾಹರಣೆ. ಭಾಷಾ ವಿವಾದದಲ್ಲಿ ಅಲ್ಲಿನ ಜನರಿಗೆ ಆಸಕ್ತಿ ಇದ್ದರೆ ಎಂಇಎಸ್ ಧುರೀಣರು ಕೊಲ್ಲಾಪುರ ಬಂದ್ ಕರೆ ಕೊಡುವ ಬದಲು ಬೆಳಗಾವಿ ಬಂದ್‌ಗೆ ಕರೆ ಕೊಡುತ್ತಿದ್ದರು! ಈ ವಾಸ್ತವದ ಅರಿವು ಗೊತ್ತಿದ್ದರೂ 'ಕಾಗದದ ಹುಲಿ' ಬಾಳ ಠಾಕ್ರೆ

ಗುಡುಗುತ್ತಿದೆ. ನಮ್ಮ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡರು ಠಾಕ್ರೆಯವರನ್ನು ಭೇಟಿ ಮಾಡಲು ಹೊರಟಿದ್ದಾರೆ. ಠಾಕ್ರೆ ಅವರಿಗೆ ಇದಕ್ಕಿಂತ ದೊಡ್ಡ ಸಂತೋಷದ ಸುದ್ದಿ ಇನ್ನೊಂದು ಇರಲಾರದು. ಇದು ಎಂಇಎಸ್ ಹಾಕಿರುವ ಬಲೆಗೆ ಹೋಗಿ ನಾವು ಬಿದ್ದಂತೆ ಅಷ್ಟೇ. ಠಾಕ್ರೆಯವರು ಎಷ್ಟು ಗುಡುಗುತ್ತಾರೆ ಗುಡುಗಲಿ ಎಂದು ನಾವು ಸುಮ್ಮನಿರುವುದೇ ಒಳ್ಳೆಯದು. ಮುಂಬೈನಲ್ಲಿನ ಕನ್ನಡಿಗರ ಮೇಲೆ ದಾಳಿ ಮಾಡುವುದು ಈಗ ಮೊದಲಿನಷ್ಟು ಸುಲಭವಲ್ಲ. ಅದನ್ನು ಅಲ್ಲಿನ ಕಾಂಗ್ರೆಸ್ ಸರ್ಕಾರ ನೋಡಿಕೊಂಡು ಸುಮ್ಮನಿರಲು ಸಾಧ್ಯವಿಲ್ಲ. ಈ ವಿವಾದ ಸ್ವಲ್ಪ ದಿನಗಳಾದ ಮೇಲೆ ತಣ್ಣಗಾಗುತ್ತದೆ. ಆಗಲೂ ರಾಜ್ ಠಾಕ್ರೆಯವರ ಕಿವಿಮಾತಿಗೆ ಬೆಲೆ ಬರುತ್ತದೆ ಎಂದು ಅನಿಸುವುದಿಲ್ಲ. ಅದಕ್ಕಿಂತ ದೊಡ್ಡ ಚಿಂತೆಯ ಸಂಗತಿ ಎಂದರೆ ಇನ್ನು ಯಾವಾಗಲಾದರೂ ಪಾಲಿಕೆಗೆ ಚುನಾವಣೆ ನಡೆದಾಗಲಾದರೂ ಅಲ್ಲಿನ ಸ್ಥಿತಿ ಸುಧಾರಿಸುತ್ತದೆಯೇ? ಇಲ್ಲ ಎನಿಸುತ್ತದೆ. ಬೆಳಗಾವಿಯ ಒಳ್ಳೆಯ ಜನರಿಗೆ ಅದಕ್ಕಿಂತ ದುಃಖದ ಸಂಗತಿ ಮತ್ತೊಂದು ಇರಲಾರದು. ಸರ್ಕಾರ ಎಷ್ಟು ಸಾರಿ ಎಂದು ಪಾಲಿಕೆಯ ಆಡಳಿತವನ್ನು ರದ್ದು ಮಾಡುತ್ತದೆ?

೧೫.೧೨.೧೧

## ದಕ್ಷಿಣದ ಶಾಂತಿನಿಕೇತನಕ್ಕೆ ಒಮ್ಮೆ ಹೋಗಿ ಬನ್ನಿ..

ಈ ಕಡೆಯಿಂದ ಕುವೆಂಪು ಮಾತನಾಡುತ್ತಿದ್ದರು. ಆ ಕಡೆ ಆಗಿನ ತೀರ್ಥಹಳ್ಳಿ ಶಾಸಕರು. ಕುವೆಂಪು ಕೇಳಿದರು "ನಿಮಗೆ ನನ್ನ ಬಗ್ಗೆ ಗೌರವ ಇದೆಯೇ?' 'ಏನ್ ಸರ್ ಹೀಗೆ ಕೇಳುತ್ತಿದ್ದೀರಿ? 'ಆ ಕಡೆಯ ಶಾಸಕರ ಮಾತು. 'ಹಾಗಾದರೆ 'ಕವಿಶೈಲ'ದ ಮೇಲೆ ಪ್ರವಾಸಿ ಮಂದಿರ (ಟಿ.ಬಿ) ಕಟ್ಟುವ ವಿಚಾರ ಬಿಟ್ಟು ಬಿಡಿ' ಎಂದು ಹೇಳಿ ಕುವೆಂಪು ಫೋನ್ ಇಟ್ಟುಬಿಟ್ಟರು. ಶಾಸಕರು ಕಕ್ಕಾವಿಕ್ಕಿ, ತಾವು ಮಾಡಲು ಹೊರಟಿದ್ದ ಘನಂದಾರಿ ಕೆಲಸ ಕುವೆಂಪು ಅವರಿಗೆ ಹೇಗೆ ಗೊತ್ತಾಯಿತು ಎಂದು ಒಂದು ಕಡೆ ಮುಜುಗರ. ಇನ್ನೊಂದು ಕಡೆ ಸಿಕ್ಕಿ ಹಾಕಿಕೊಂಡ ಭಯ. 'ಕವಿಶೈಲ'ದ ಮೇಲೆ ಟಿ.ಬಿ. ಆಗಿದ್ದರೆ ಏನಾಗುತ್ತಿತ್ತು ಎಂದು ಹೇಳುವುದು ಬೇಡ. ಅಲ್ಲಿ ಬರೀ ಬಾಟಲಿಗಳ ಸದ್ದು ಮಾತ್ರ ಇರುತ್ತಿತ್ತು! ಪ್ರಕೃತಿಯ ನಿವಾಂತ ಶಾಂತತೆಗೆ ಭಂಗವೂ ಬರುತ್ತಿತ್ತು. ಅಲ್ಲಿ ಟಿ.ಬಿ. ಕಟ್ಟುವ ವಿಚಾರ ಕುವೆಂಪು ಅವರಿಗೆ ಹೇಗೆ ಗೊತ್ತಾಯಿತು ಎಂಬುದೂ ಒಂದು ಕುತೂಹಲದ ಕಥೆ, ಒಂದು ಸಾರಿ ಲಂಕೇಶ್ 'ಕವಿಶೈಲಕ್ಕೆ ಬಂದಿದ್ದರು. ಅವರಿಗೆ ವಿಷಯ ಗೊತ್ತಾಯಿತು. ಅಂಥ ಕೆಲಸ ಮಾಡುವವರು ಚಂಡಾಲರು' ಎಂದುಕೊಂಡರು ಲಂಕೇಶ್. ಅಲ್ಲಿಯೇ ಇದ್ದ ಕಡಿದಾಳ ಶಾಮಣ್ಣ ಅವರಿಗೆ, 'ಶಾಮಣ್ಣ ನೀವು ಚಾಡಿ ಹೇಳುವ ಕೆಲಸ ಮಾಡಬೇಕಲ್ಲ'

ಎಂದರು. ಶಾಮಣ್ಣ ಎಂದೂ ಯಾರ ಮುಂದೂ ಚಾಡಿ ಹೇಳಿದವರಲ್ಲ. ಇದು ಒಳ್ಳೆಯ ಕೆಲಸಕ್ಕೆ ಚಾಡಿ. ನೀವು ಕುವೆಂಪು ಅವರಿಗೆ ಹೇಳಿ, ಅವರು ತೀರ್ಥಹಳ್ಳಿಯ ಶಾಸಕರ ಜತೆಗೆ ಮಾತನಾಡಲಿ' ಎಂದೂ ಲಂಕೇಶ್ ಸಲಹೆ ಕೊಟ್ಟರು. ಶಾಮಣ್ಣ 'ಉದಯರವಿ'ಗೆ ಹೋದರು. 'ಚಾಡಿ' ಹೇಳಿದರು. ಮುಂದಿನದು ಟೆಲಿಫೋನ್ ಸಂಭಾಷಣೆ.

ಕುಪ್ಪಳಿ ಒಂದೇ ಮನೆಯ ಊರು. ಅಲ್ಲಿ ಕುವೆಂಪು ಮನೆ ಬಿಟ್ಟು ಬೇರೆ ಮನೆಯಿರಲಿಲ್ಲ. ಈಗಲೂ ಅಲ್ಲಿ ಅವರ ಮನೆ ಒಂದೇ ಇದೆ. ಅದು ನಿರ್ಜನ ಪ್ರದೇಶ. ಹಕ್ಕಿಗಳ ಕಲರವ, ತರುಲತೆಗಳ ಮರ್ಮರ, ಕಾಡಿನ ದಿವ್ಯ ಮೌನ ಬಿಟ್ಟರೆ ಬೇರೇನೂ ಇರಲಿಲ್ಲ. ಈಗ ಅಲ್ಲಿಗೆ ಪ್ರತಿವರ್ಷ ಕನಿಷ್ಠ ಎಂದರೂ ಒಂದು ಲಕ್ಷ ಜನ ಭೇಟಿ ಕೊಡುತ್ತಿದ್ದಾರೆ. ಕಳೆದ ವರ್ಷ ಅಲ್ಲಿಗೆ ಭೇಟಿ ಕೊಟ್ಟವರ ಸಂಖ್ಯೆ ೧.೧೦ ಲಕ್ಷ. ಈ ವರ್ಷ ಅದು ೧.೫೦ ಲಕ್ಷ ದಾಟಲಿದೆ. ಕಾರಣ, ಅಲ್ಲಿ ತಲೆ ಎತ್ತಿರುವ ಕುವೆಂಪು ಪ್ರತಿಷ್ಠಾನ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಿಂದ ೧೦ ಕಿಲೋ ಮೀಟರ್ ದೂರ ಕಾಡಿನ ಮಧ್ಯೆ ನಾಚಿಕೊಂಡಂತೆ ಇರುವ ಕುಪ್ಪಳಿ ಈಗ ಒಂದು ಯಾತ್ರಾಸ್ಥಳ, ಅಭ್ಯಾಸ ಸ್ಥಳ, ಶಿವಮೊಗ್ಗ ಜಿಲ್ಲೆಯ ಪ್ರವಾಸಕ್ಕೆ ಬಂದವರು ಕುಪ್ಪಳಿಗೆ ಬಂದೇ ಬರುತ್ತಾರೆ. 'ಕವಿಮನೆ'ಯನ್ನು ನೋಡಿಯೇ ನೋಡುತ್ತಾರೆ. 'ಕವಿಶೈಲ' ಏರಿ ನಿಂತು ಸುತ್ತಲೂ ೩,೬೦೦ ಎಕರೆ ಹಬ್ಬಿಕೊಂಡಿರುವ ಹಚ್ಚ ಹಸಿರು ಅರಣ್ಯವನ್ನು ಕಣ್ಣುತುಂಬಿಕೊಳ್ಳುತ್ತಾರೆ. 'ಕವಿಶೈಲ'ದಲ್ಲಿ ಇರುವ ಕುವೆಂಪು ಸಮಾಧಿಗೆ ನಮಿಸುತ್ತಾರೆ. ಅಲ್ಲಿಗೆ ಹೋದವರಿಗೆಲ್ಲ ಎರಡು ದಿವಸ 'ಇಲ್ಲಿ ಸುಮ್ಮನೆ ಇದ್ದು ಬಿಡೋಣ' ಎನಿಸುತ್ತದೆ. ಅಲ್ಲಿಂದ ಹೊರಡುವಾಗ ಮೊಲೆ ಹಾಲು ಕುಡಿಯುವ ಮಗುವನ್ನು ತಾಯಿ ಬಿಡಿಸಿದಂತೆ ಬೇಸರವಾಗುತ್ತದೆ.

ಎರಡು ವರ್ಷಗಳ ಹಿಂದೆ ನಾನು, ನನ್ನ ಸಂಪಾದಕರು ಕೆಲವು ತಾಸುಗಳ ಮಟ್ಟಿಗೆ ಕುಪ್ಪಳಿಗೆ ಭೇಟಿ ಕೊಟ್ಟಿದ್ದೆವು. 'ಮತ್ತೆ ಬರೋಣ' ಎಂದುಕೊಂಡು ವಾಪಸು ಬಂದಿದ್ದೆವು. ಕಳೆದ ಎರಡು ದಿನ ನಾನು ಮತ್ತೆ ಅಲ್ಲಿಗೆ ಹೋಗಿದ್ದೆ. ಅವರಿಗೆ ಬರಲು ಆಗಲಿಲ್ಲ. ಬರಲು ಅವರಿಗೆ ಎಷ್ಟು ಮನಸ್ಸು ಇತ್ತು ಎಂದು ನನಗೆ ಗೊತ್ತು. ಕಳೆದ ಎರಡು ವರ್ಷಗಳಲ್ಲಿ ಮತ್ತೆ ಕುವೆಂಪು ಪ್ರತಿಷ್ಠಾನ ದೊಡ್ಡದಾಗಿದೆ. ಮೊನ್ನೆ ಅಲ್ಲಿ ಕಲಾಗ್ಯಾಲರಿ ಉದ್ಘಾಟನೆ ಆಯಿತು. ತೇಜಸ್ವಿ ಸಹ್ಯಾದ್ರಿ ಬೆಟ್ಟಗಳಲ್ಲಿ ಸೆರೆ ಹಿಡಿದ ಹಕ್ಕಿಗಳ ೩೮ ಅದ್ಭುತ ಛಾಯಾಚಿತ್ರಗಳ ಕಾಯಂ ಪ್ರದರ್ಶನಕ್ಕೆ ಅಲ್ಲಿ ಈಗ ವ್ಯವಸ್ಥೆ ಆಗಿದೆ. ಜತೆಗೆ ಕುವೆಂಪು ಸಾಹಿತ್ಯ ಆಧಾರಿತ ಚಿತ್ರಕಲೆಗಳ ಪ್ರದರ್ಶನವೂ ಅಲ್ಲಿ ನಡೆಯುತ್ತದೆ. ಕುವೆಂಪು ರಾಷ್ಟ್ರಕವಿ, ದೊಡ್ಡ ಕವಿ. ಹಾಗೆ

ಹೇಳಿದರೆ ಏನೂ ಹೇಳಿದಂತೆ ಆಗದು. ಅವರಿಗೆ ಇದ್ದ ನಿಸರ್ಗದ ವರ ಮತ್ತೆ ಕನ್ನಡದ ಬೇರೆ ಯಾವ ಕವಿಗೂ ಇರಲಿಲ್ಲ ಅನಿಸುತ್ತದೆ. ಕುವೆಂಪು ಪ್ರತಿಷ್ಠಾನಕ್ಕೆ ಈಗಿನ ಹಿರಿಮೆ ಬರಲು ಆ ನಿಸರ್ಗ ರಮ್ಯತೆಯೇ ಮುಖ್ಯ ಕಾರಣ.

ಎಲ್ಲವೂ ಕೈಗೂಡಲು ಒಂದು ಕಾಲ ಎಂದು ಇರುತ್ತದೆ. ಒಂದು ಬೃಹತ್ ಮರ ತಲೆ ಎತ್ತಿ ನಿಲ್ಲಲು ಸಣ್ಣ ಮೊಳಕೆಯೇ ಬೇಕಾಗುತ್ತದೆ. ಅದು ಯಾವ ನೆಲದಲ್ಲಿ, ಯಾರ ಮನಸ್ಸಿನಲ್ಲಿ ಮೂಡುತ್ತದೆ ಎಂದು ಹೇಳುವುದು ಕಷ್ಟ. ಆದರೆ, ಅದು ಒಂದು ದಿವ್ಯ ಮುಹೂರ್ತವಾಗಿರುತ್ತದೆ. ಕುವೆಂಪು ಪ್ರತಿಷ್ಠಾನ ಮಾಡಬೇಕು ಎಂದು ಹೊಳೆದುದು ದೇ. ಜವರೇಗೌಡರಿಗೆ, ಅವರ ಮತ್ತು ಕುವೆಂಪು ಅವರ ಶಿಷ್ಯ ಹಂಪ ನಾಗರಾಜಯ್ಯ

ಮನೆಯಲ್ಲಿ ಅದಕ್ಕೆ ಒಂದು ಹೊಳಹು ಸಿಕ್ಕಿತು. ಇವರೆಲ್ಲ ಸೇರಿಕೊಂಡು ಆಗಿನ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಅವರನ್ನು ಕಂಡರು. ಬಂಗಾರಪ್ಪ ಅವರಿಗೆ ಇದಕ್ಕಿಂತ ಒಳ್ಳೆಯ ಕೆಲಸ ಮತ್ತೊಂದು ಇಲ್ಲ ಅನಿಸಿತ್ತು. ತಕ್ಷಣ 'ಅಸ್ತು' ಎಂದರು. ಹಂಪ. ನಾಗರಾಜಯ್ಯ ಕೊಂಚ ಅವಧಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿದ್ದರು. ಅವರು ಅಧಿಕಾರ ವಹಿಸಿಕೊಂಡು ಮೊದಲು ಸಹಿ ಮಾಡಿದ್ದು ಪ್ರತಿಷ್ಠಾನಕ್ಕೆ ೧೫ ಲಕ್ಷ ರೂಪಾಯಿ ಅನುದಾನ ಕೊಡುವ ಚೆಕ್ಕಿಗೆ, ರುಜು ಮಾಡಿ ದೇಜಗೌ ಕೈಗೆ ಕೊಟ್ಟರು. ಆಗ ಪ್ರತಿಷ್ಠಾನದ ಅಧ್ಯಕ್ಷರಾಗಿದ್ದವರು ದೇಜಗೌ ಅವರೇ. ಮುಂದೆ ನಿವೃತ್ತ ನ್ಯಾಯಮೂರ್ತಿ ಎನ್.ಡಿ. ವೆಂಕಟೇಶ್ ಅಧ್ಯಕ್ಷರಾಗಿದ್ದರು. ಕಳೆದ ಮೂರು ವರ್ಷಗಳಿಂದ ಹಂಪನಾ ಅವರಿಗೆ ಆ ಗೌರವ ಸಿಕ್ಕಿದೆ. ಆರಂಭದ ಹಲವು ವರ್ಷಗಳ ಕಾಲ ಹಂಪನಾ ಅವರ ಮನೆಯ ವಿಳಾಸವೇ ಪ್ರತಿಷ್ಠಾನದ ವಿಳಾಸವೂ ಆಗಿತ್ತು.

ಕುವೆಂಪು ಹೆಸರು ಹೇಳಿದರೆ ಇಲ್ಲ ಎನ್ನುವ ಧೈರ್ಯ ಯಾರಿಗೆ? ಸರ್ಕಾರದಿಂದ ಅಡಚಣೆಯಿಲ್ಲದೆ ಅನುದಾನ ಸಿಕ್ಕಿತು. ಕುವೆಂಪು ಹುಟ್ಟಿದ ಮನೆಯನ್ನು ತದ್ವತ್ ಆಗಿ ಪುನರ್ ಸೃಷ್ಟಿಸಲಾಯಿತು. ಅಲ್ಲಿ ಅವರ ಬದುಕಿಗೆ ಸಂಬಂಧಿಸಿದ, ಲಭ್ಯವಿದ್ದ ಎಲ್ಲ ವಸ್ತುಗಳನ್ನು, ಉಡುಗೆ ತೊಡುಗೆಗಳನ್ನು, ಪುಸ್ತಕಗಳನ್ನು, ಪ್ರಶಸ್ತಿ, ಪದಕಗಳನ್ನು ಇಡಲಾಗಿದೆ. ಜತೆಗೆ ಕುವೆಂಪು ಉಕ್ತಿಗಳೂ ಇವೆ. ಸುತ್ತಲೂ ಹಸಿರು ಹಾಸಿನ ಆವರಣದಲ್ಲಿ, ಹಕ್ಕಿಗಳ ಚಿಲಿಪಿಲಿ ನಡುವೆ ಕುವೆಂಪು ಮನೆ ಒಂದು ದೇಗುಲದಂತೆ ಭಾಸವಾಗುತ್ತದೆ. ಪ್ರವೇಶ ದ್ವಾರದಲ್ಲಿ 'ಕೈ ಮುಗಿದು ಒಳಗೆ ಬಾ' ಎಂದು ಬರೆದಿರುವುದು ಸಾರ್ಥಕವಾಗಿದೆ. ಈ ಕವಿಮನೆ'ಯನ್ನು ಸರಿಯಾಗಿ ಹತ್ತು ವರ್ಷಗಳ ಹಿಂದೆ ಸಮಾಜಕ್ಕೆ ಅರ್ಪಿಸಲಾಯಿತು. ೨ ಲಕ್ಷ ರೂಪಾಯಿ ವೆಚ್ಚದ ಈ ಮನೆಗೆ ಸರ್ಕಾರದ ಜತೆಗೆ 'ಅಮೆರಿಕನ್ನಡ' ಸಂಸ್ಥೆಯೂ ಹಣಕಾಸು ನೆರವು ಕೊಟ್ಟಿತು. ಮನೆಯಿಂದ ನಡೆದುಕೊಂಡು ಹೋಗಿ ಕುವೆಂಪು ಧ್ಯಾನ ಮಾಡುತ್ತಿದ್ದ, ಪ್ರಕೃತಿಯ ಸೊಬಗನ್ನು ಸವಿಯುತ್ತಿದ್ದ 'ಕವಿಶೈಲ'ದಲ್ಲಿ ದೊಡ್ಡ ದೊಡ್ಡ ಶಿಲೆಗಳ ಸ್ಮಾರಕವನ್ನು ಎಸ್.ಎಂ. ಕೃಷ್ಣ ಅವರ ಅಳಿಯ ಸಿದ್ಧಾರ್ಥ ಅವರ ನೆರವಿನಿಂದ ಕಲಾವಿದ ಕೆ.ಟಿ.ಶಿವಪ್ರಸಾದ್ ರೂಪಿಸಿದ್ದಾರೆ. 'ಕವಿಶೈಲ'ದ ಚಿಕ್ಕ ಬಂಡೆಯ ಮೇಲೆ ಕುವೆಂಪು ಅವರ ಗುರು ಟಿ.ಎಸ್. ವೆಂಕಣ್ಣಯ್ಯ, ಬಿ.ಎಂ. ಶ್ರೀಕಂಠಯ್ಯ, ಕುವೆಂಪು ಮತ್ತು ತೇಜಸ್ವಿ ಅವರ ಹಸ್ತಾಕ್ಷರಗಳು ಇವೆ. 'ಕೈಮುಗಿದು ಕೇಳಿಕೊಳ್ಳುತ್ತೇವೆ ಈ ಬಂಡೆಗಳ ಮೇಲೆ ಏನೂ ಬರೆಯಬೇಡಿ' ಎಂದು ಪ್ರತಿಷ್ಠಾನದವರು ಫಲಕ ಹಾಕಿದರೂ ಅವಿವೇಕಿಗಳು ಎಲ್ಲಿ ಬೇಕೆಂದಲ್ಲಿ ತಮ್ಮ ಹಸ್ತಾಕ್ಷರಗಳನ್ನು ಕೆತ್ತಿದ್ದಾರೆ.

ಏಳು ವರ್ಷಗಳ ಹಿಂದೆ ಕುವೆಂಪು ಶತಮಾನೋತ್ಸವ ಭವನ ತಲೆ ಎತ್ತಿದೆ. ಮಲೆನಾಡಿನ ಮನೆಗಳ ಹಾಗೆ ಮಧ್ಯದಲ್ಲಿ ತೆರೆದುಕೊಂಡ ಈ ಭವನದಲ್ಲಿ ಕುವೆಂಪು ಅವರ ಪತ್ನಿಯ ನೆನಪಿನಲ್ಲಿ 'ಹೇಮಾಂಗಣ' ಎಂಬ ಸಭಾಂಗಣ, ಹಂಪಿ ವಿಶ್ವವಿದ್ಯಾಲಯದ ಅಧ್ಯಯನ ಕೇಂದ್ರ, ೫೦ ಜನ ಕುಳಿತು ನೋಡಬಹುದಾದ ಒಂದು ಪುಟ್ಟ ಚಿತ್ರಮಂದಿರ ಇವೆ. ಧರ್ಮಸಿಂಗ್ ಮುಖ್ಯಮಂತ್ರಿಯಾಗಿದ್ದಾಗ ಅಗತ್ಯವಿದ್ದ ೫೦ ಲಕ್ಷ ರೂಪಾಯಿ ಅನುದಾನ ಕೊಟ್ಟರು. ಭವನವನ್ನು ಉದ್ಘಾಟನೆ ಮಾಡುವ ಭಾಗ್ಯ ಆಗಿನ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಸಿಕ್ಕಿತು! ಅದರ ಪಕ್ಕದಲ್ಲಿ ಐದು

ಅತಿಥಿಗೃಹಗಳು ಮತ್ತು ೫೦ ಜನ ಇರಬಹುದಾದ ಮಲಗು ಕೊಠಡಿಗಳೂ ಇವೆ. ಪ್ರತಿಷ್ಠಾನದ ಸಮಕಾರ್ಯದರ್ಶಿಯಾಗಿ ಕಡಿದಾಳ ಪ್ರಕಾಶ್ ಕೆಲಸ ಮಾಡುತ್ತಿದ್ದಾರೆ ಎನ್ನುವುದಕ್ಕಿಂತ ಅವರು ತಮ್ಮನ್ನು ತಾವೇ ಈ ಕೆಲಸಕ್ಕೆ ಸಮರ್ಪಿಸಿಕೊಂಡಿದ್ದಾರೆ. ಪ್ರಕಾಶ್ ಅವರು ಕಡಿದಾಳ ಶಾಮಣ್ಣ ಅವರ ತಮ್ಮ. ಕುವೆಂಪು ಪ್ರತಿಷ್ಠಾನ ಈಗ ದಕ್ಷಿಣ ಭಾರತದ ಶಾಂತಿನಿಕೇತನ ಎಂದು ಹೆಸರು ಮಾಡಿದೆ. ಉತ್ತರದ ಶಾಂತಿನಿಕೇತನ ಕವಿ ರವೀಂದ್ರನಾಥ ಟಾಗೋರರ ನೆನಪಿನಲ್ಲಿ ನಿರ್ಮಿಸಿದ್ದು. ಈಗ ಕರ್ನಾಟಕದಲ್ಲಿ ಕುವೆಂಪು ಮಾತ್ರವಲ್ಲದೇ ಇತರ ಐವರು ಹಿರಿಯ ಕವಿಗಳ ಪ್ರತಿಷ್ಠಾನಗಳೂ ಇವೆ. ಬಿಎಂಶ್ರೀ, ಮಾಸ್ತಿ, ಕಾರಂತ, ಬೇಂದ್ರೆ ಮತ್ತು ಪುತಿನ ಅವರ ಹೆಸರಿನಲ್ಲಿನ ಪ್ರತಿಷ್ಠಾನಗಳು ಅವು. ಎಲ್ಲ ಪ್ರತಿಷ್ಠಾನಗಳಿಗೂ ಸರ್ಕಾರದಿಂದ ವಾರ್ಷಿಕ ೧೨ ಲಕ್ಷ ರೂಪಾಯಿ ಅನುದಾನ ಸಿಗುತ್ತಿದೆ. ಅದುವರೆಗೆ ಕೇವಲ ಒಂದು ಲಕ್ಷ ರೂಪಾಯಿ ಇದ್ದ ಅನುದಾನವನ್ನು ೧೨ ಲಕ್ಷಕ್ಕೆ ಏರಿಸಿದವರು ಬಿ.ಎಸ್. ಯಡಿಯೂರಪ್ಪ. ಬೇರೆ ಪ್ರತಿಷ್ಠಾನಗಳು ಇದ್ದರೂ ದಕ್ಷಿಣದ ಶಾಂತಿನಿಕೇತನ ಎಂಬ ಹೆಸರು ಸಿಕ್ಕುದು ಕುವೆಂಪು ಪ್ರತಿಷ್ಠಾನಕ್ಕೆ ಮಾತ್ರ ಅದಕ್ಕೆ ಕುವೆಂಪು ನಾಮಬಲವೇ ಮುಖ್ಯ ಕಾರಣ. ಜತೆಗೆ ಕುಪ್ಪಳಿಯ ದಿವ್ಯ ಪರಿಸರ, ಕಡಿದಾಳ ಶಾಮಣ್ಣ ಹೇಳುತ್ತಿದ್ದರು: 'ನಾನು ಇಲ್ಲಿಂದ ಸುಮಾರು ನೂರು ಕಿಲೋ ಮೀಟರ್ ದೂರದಲ್ಲಿ ವಾಸವಾಗಿದ್ದೇನೆ. ತಿಂಗಳಲ್ಲಿ ಒಂದು ಸಾರಿ ಎರಡು ಸಾರಿ ಬಂದು ಇಲ್ಲಿ ಇದ್ದು ಹೋಗುತ್ತೇನೆ. ಮನಸ್ಸಿಗೆ ಏನೋ ನೆಮ್ಮದಿ' ಎಂದು, ಶಾಮಣ್ಣ ಮತ್ತು ತೇಜಸ್ವಿ ವಾರಿಗೆಯವರು. ಬಹುಶಃ ಇಂಥದೇ ನೆಮ್ಮದಿಗಾಗಿ, ಆನಂದಕ್ಕಾಗಿ ಹಿಂಡು ಹಿಂಡು ಜನರು, ಮಕ್ಕಳೂ ಇಲ್ಲಿಗೆ ಬರುತ್ತಾರೆ. ನೋಡಿ ಆನಂದಿಸುತ್ತಾರೆ.

ಕೆಲವೇ ದಿನಗಳ ಹಿಂದೆ ನಾನು ಮತ್ತು ನನ್ನ ಸಂಪಾದಕರು ಬೇಂದ್ರೆ ಸ್ಮಾರಕ ಭವನಕ್ಕೂ ಭೇಟಿ ಕೊಟ್ಟಿದ್ದೆವು. ಎರಡು ಅಂತಸ್ತಿನ ಬೇಂದ್ರೆ ಸ್ಮಾರಕ ಭವನದಲ್ಲಿ ಬೇಂದ್ರೆ ಅವರಿಗೆ ಸಂಬಂಧಪಟ್ಟುದು ಏನೂ ಇಲ್ಲ. ಅವರ ಒಂದು ಪುಸ್ತಕವೂ ಅಲ್ಲಿ ಇಲ್ಲ. ಒಂದಿಷ್ಟು ಚಿತ್ರಗಳು ಮಾತ್ರ ಇವೆ. ಅದು ಒಂದು ರೀತಿಯಲ್ಲಿ ತಿರುಳು ಇಲ್ಲದ ಬರೀ ಸಿಪ್ಪೆ, ತೊಗಟೆ. ಕೆಳಗಿನ ಸಭಾಂಗಣದಲ್ಲಿ ಬೇಂದ್ರೆ ಕುರಿತು ಗಿರೀಶ ಕಾರ್ನಾಡರು ನಿರ್ಮಿಸಿದ ಚಿತ್ರದ ಪ್ರದರ್ಶನ ಆಗಾಗ ನಡೆಯುತ್ತದೆ. ಬೇಂದ್ರೆ ಪ್ರತಿಷ್ಠಾನದ ಮುಂಭಾಗದಲ್ಲಿಯೇ ಸಾಧನಕೇರಿಯ ದೊಡ್ಡ ಕೆರೆ ಇದೆ. ಅಲ್ಲಿಗೆ ಮಾತ್ರ ಜನರು ಬರುತ್ತಾರೆ. ಬೇಂದ್ರೆ ಸ್ಮಾರಕ ಭವನ ರಣಗುಟ್ಟುತ್ತದೆ. ಅದಕ್ಕೆ ಯಾರು ಕಾರಣ ಎಂದೆಲ್ಲ ಚರ್ಚಿಸಬೇಕಾದ ಅಗತ್ಯವಿಲ್ಲ.

ಎಲ್ಲರೂ ಕಾರಣ ಇದ್ದರೂ ಇರಬಹುದು. ಕುವೆಂಪು ಮತ್ತು ಬೇಂದ್ರೆಯವರ ನಡುವೆ ಯಾರು ದೊಡ್ಡವರು ಎಂದು ಕೇಳಿದರೆ ಎರಡು ಕಣ್ಣುಗಳ ನಡುವೆ ಯಾವುದು ಶ್ರೇಷ್ಠ ಎಂದು ಕೇಳಿದಂತೆ. ಕುವೆಂಪು ಸ್ಮಾರಕದ ಹಾಗೆಯೇ ಬೇಂದ್ರೆ ಸ್ಮಾರಕವೂ ಜನರನ್ನು ಸೆಳೆಯಬೇಕಿತ್ತು. ಅದು ಉತ್ತರ ಕರ್ನಾಟಕದ ಶಾಂತಿನಿಕೇತನ ಆಗಬಹುದಿತ್ತು. ಆಗಲಿಲ್ಲ. ಆಗುವಂತೆಯೂ ಕಾಣುವುದಿಲ್ಲ. ಬಹುಶಃ ಆ ಕಾರಣಕ್ಕಾಗಿಯೇ ಉತ್ತರ ಕರ್ನಾಟಕದವರೂ ಕುವೆಂಪು ಸ್ಮಾರಕದ ಕಡೆಗೆ ಧಾವಿಸಿ ಬರುತ್ತ ಇರಬಹುದು. ನಾನು ಅಲ್ಲಿ ಇದ್ದ ಎರಡು ದಿನವೂ ಉತ್ತರ ಕರ್ನಾಟಕದ ಅನೇಕ ಮಕ್ಕಳು ಅಲ್ಲಿಗೆ ಬಂದಿದ್ದರು. ಇಂಥ ಒಂದು ಪ್ರತಿಷ್ಠಾನ ಕಟ್ಟಿದವರು, ಕಟ್ಟಿ ಬೆಳೆಸುತ್ತಿರುವ ಎಲ್ಲರೂ ಧನ್ಯಜೀವಿಗಳು.

ಅಲ್ಲಿ ಹೋಗಿ ಎರಡು ದಿನ ಇದ್ದ ಬಂದರೆ ನೀವೂ ಧನ್ಯಜೀವಿಗಳು ಎಂದು ನಿಮಗೆ ಅನಿಸುತ್ತದೆ. ಜೀವನದಲ್ಲಿ ಒಂದು ಸಾರಿ ಹೋಗಬೇಕಾದ ಎರಡು ದಿನ ಇದ್ದು ಬರಬೇಕಾದ ಜಾಗ ಅದು.

೦೧.೦೧.೧೨

**ಸಲಗದಂತೆ ಬಾಳಿ ಸರಿದು ಹೋದರು...**

ಅದು ರಾಷ್ಟ್ರಪತಿಗಳ ಕಚೇರಿಯ ಕರೆ. "ನಿಮಗೆ ಪದ್ಮಶ್ರೀ ಪ್ರಶಸ್ತಿ ಬಂದಿದೆ. ಪ್ರಶಸ್ತಿ ಪ್ರದಾನ ಸಮಾರಂಭದ ತಾಲೀಮಿನಲ್ಲಿ ಭಾಗವಹಿಸಲು ನೀವು ದೆಹಲಿಗೆ ಬರಬೇಕು'. 'ಇಲ್ಲ ನನಗೆ ಬರಲು ಆಗುವುದಿಲ್ಲ. ಅಂಥ ತಾಲೀಮು, ಗಿಲೀಮು ಮಾಡಲು ನನಗೆ ಆಗದು' ಎಂದು ಈ ಕಡೆಯವರು ಫೋನ್ ಇಟ್ಟರು. ಆ ಕಡೆಯವರಿಗೆ ಸೋಜಿಗ "ಏನು ಜನ ಇವರು; ಪ್ರಶಸ್ತಿಗಾಗಿ ದುಂಬಾಲು ಬೀಳುವವರು, ಲಾಬಿ ಮಾಡುವವರು ಇರುವಾಗ, ನಾವೇ ಪ್ರಶಸ್ತಿ ಕೊಡುತ್ತೇವೆ ಎಂದರೂ ಈ ಮನುಷ್ಯ ಹೀಗೆ ಮಾತನಾಡುತ್ತಾನಲ್ಲ?' ಕಳೆದ ಭಾನುವಾರ ತೀರಿಕೊಂಡ ಡಾ.ಬಿ.ಪಿ. ರಾಧಾಕೃಷ್ಣ ಬದುಕಿದ್ದೇ ಹೀಗೆ. ಅವರು ತಮ್ಮ ನಂಬಿಕೆಗಳನ್ನು, ಆದರ್ಶಗಳನ್ನು ಎಂದೂ ಬಿಟ್ಟುಕೊಡಲಿಲ್ಲ. ಆನೆ ನಡೆದದ್ದೇ ದಾರಿ ಎನ್ನುವಂತೆ ಸಂಪೂರ್ಣ ೯೪ ವರ್ಷಗಳ ಕಾಲ ಬಾಳಿದರು.

ಬಿಪಿಆರ್ ಎಂದೇ ಹೆಸರಾಗಿದ್ದ ಬೆಂಗಳೂರು ಪುಟ್ಟಯ್ಯ ರಾಧಾಕೃಷ್ಣ (೧೯೧೮ ಏಪ್ರಿಲ್ ೩೦) ಹುಟ್ಟಿದ್ದು ಬೆಂಗಳೂರಿನಲ್ಲಿಯೇ. ಅವರ ತಂದೆ ಪುಟ್ಟಯ್ಯ ಒಕ್ಕಲಿಗರ ಸಂಘ, ಬೆಂಗಳೂರು ಪ್ರೆಸ್ ಕಟ್ಟಿದವರಲ್ಲಿ ಪ್ರಮುಖರು. ಅವರಿಗೆ ಆರು ಜನ ಮಕ್ಕಳು. ರಾಧಾಕೃಷ್ಣ ಅವರ ಹಾಗೆಯೇ ಎಲ್ಲ ಮಕ್ಕಳೂ ಉನ್ನತ ಅಭ್ಯಾಸ ಗಳಿಸಿ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಹೆಸರು ಮಾಡಿದರು. ರಾಧಾಕೃಷ್ಣ ಸೆಂಟ್ರಲ್

ಕಾಲೇಜಿನಿಂದ ಬಿ.ಎಸ್‌ಸಿ. ಆನರ್ಸ್ ಪದವಿ ಪಡೆದು ಭೂ ವಿಜ್ಞಾನ ಇಲಾಖೆಯಲ್ಲಿ ಕ್ಷೇತ್ರ ಸಹಾಯಕರಾಗಿ ಸೇವೆ (೧೯೩೭) ಆರಂಭಿಸಿದರು. ಆಗ ಇಲಾಖೆಯಲ್ಲಿ ನಾಲ್ಕಾರು ಜನ ಇದ್ದರು. ಅವರು ಇಲಾಖೆಯ ನಿರ್ದೇಶಕರಾಗಿ ನಿವೃತ್ತರಾಗುವಾಗ ಅದು ಹೆಮ್ಮರವಾಗಿ ಬೆಳೆದಿತ್ತು. ಬರೀ ಸಿಬ್ಬಂದಿ ಸಂಖ್ಯೆಯಲ್ಲಿ ಮಾತ್ರವಲ್ಲ ತನ್ನ ಸೇವೆಯ ವಿಸ್ತಾರದಲ್ಲಿಯೂ ಅದು ದೊಡ್ಡ ಆಲದ ಮರವೇ ಆಗಿತ್ತು.

ಕ್ಲೋಸ್‌ಪೇಟ್ ಎಂದು ಮೊದಲು ಹೆಸರಾಗಿದ್ದ ಈಗಿನ ರಾಮನಗರದ ಕಲ್ಲು ಬಂಡೆಗಳ ಕುರಿತಂತೆ ಮೈಸೂರು ವಿಶ್ವವಿದ್ಯಾಲಯದಿಂದ ಪಿಎಚ್‌ಡಿ ಪಡೆದ (೧೯೫೪) ರಾಧಾಕೃಷ್ಣ ನಂತರ ಬರೆದ ಪುಸ್ತಕಗಳು, ಮಾಡಿದ ಅಧ್ಯಯನಗಳು ಅಂತರರಾಷ್ಟ್ರೀಯ ಮನ್ನಣೆ ಪಡೆದುವು. ವಿಶೇಷ ಎಂದರೆ ವಿಜ್ಞಾನಿಗಳನ್ನು ಕುರಿತು ಅವರು ಕನ್ನಡದಲ್ಲಿ ಬರೆದ ಪುಸ್ತಕಗಳಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಬಂತು.

ಹಳ್ಳಿಗಳಿಗೆ ಕೊಳವೆ ಬಾವಿಯ ಶುದ್ಧ ನೀರು ಕೊಟ್ಟವರು ಎಂಬ ಖ್ಯಾತಿ ಮಾಜಿ ಗ್ರಾಮೀಣಾಭಿವೃದ್ಧಿ ಸಚಿವ ಅಬ್ದುಲ್ ನಜೀರ್ ಸಾಬ್ ಅವರ ಹೆಸರಿನಲ್ಲಿಯೇ ಇದೆ. ನಜೀರ್ ಸಾಬರು ಮಂತ್ರಿಯಾಗಿದ್ದುದು ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿಯಾಗಿದ್ದ ೮೦ರ ದಶಕದಲ್ಲಿ. ಆದರೆ, ಕರ್ನಾಟಕದ ಹಳ್ಳಿ ಹಳ್ಳಿಗಳ, ತಾಲ್ಲೂಕುಗಳ ಅಂತರ್ಜಲ ಸಂಪತ್ತಿನ ನಕಾಶೆಯನ್ನು ಸಿದ್ಧ ಮಾಡಿ ತಮ್ಮ ಇಲಾಖೆಯ ಸಿಬ್ಬಂದಿಗೆ ಈ ಜಲ ಸಂಪತ್ತನ್ನು ಗ್ರಾಮೀಣ ಜನರಿಗೆ ಒದಗಿಸಿ ಕೊಡುವಂತೆ ಹೇಳಿದವರು ರಾಧಾಕೃಷ್ಣ. ಅವರು, ತಮ್ಮ ಇಲಾಖೆಯ ಡ್ರಿಲ್ಲಿಂಗ್ ಯಂತ್ರಗಳನ್ನು ಹಳ್ಳಿಗಳಿಗೆ ಕಳುಹಿಸಿ ನಾಮ್ ಕಾ ವಾಸ್ತೆ ದರಕ್ಕೆ ಕೊಳವೆ ಬಾವಿಗಳನ್ನು ಕೊರೆಸಿ ಕೊಟ್ಟಿದ್ದರು. ಅವರು ಆ ಕೆಲಸ ಮಾಡಿದ್ದು ೭೦ರ ದಶಕದಲ್ಲಿಯೇ! ಆದರೆ, ಅಂತರ್ಜಲವನ್ನು ಬೇಕಾಬಿಟ್ಟಿಯಾಗಿ ಬಳಸಲು ಬಿಟ್ಟರೆ ಆಗುವ ಅಪಾಯವೇನು ಎಂದೂ ಅವರಿಗೆ ಗೊತ್ತಿತ್ತು. 'ಅಂತರ್ಜಲ ಬರಿದಾಗುವುದೇ?' ಎಂಬ ಕಿರು ಪುಸ್ತಕವೊಂದನ್ನು ಈ ಎಚ್ಚರಿಕೆ ಕೊಡುವುದಕ್ಕಾಗಿಯೇ ಅವರು ಬರೆದರು.

೭೦ರ ದಶಕದಲ್ಲಿ ಎಂದು ಕಾಣುತ್ತದೆ. ಒಂದು ದಿನ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸಚಿವರ ಸಭೆ ನಡೆದಿತ್ತು. ಕೃಷಿ ಮತ್ತು ಹಣಕಾಸು ಖಾತೆಯ ಸಚಿವರು, ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಆ ವೇಳೆಗಾಗಲೇ

ಕರ್ನಾಟಕದ ಅಂತರ್ಜಲ ಬಳಕೆಗೆ ವಿಶ್ವ ಬ್ಯಾಂಕ್ ನೆರವು ನೀಡಲು ಮುಂದೆ ಬಂದಿತ್ತು. ಆದರೆ, ಪ್ರತಿ ಎರಡು ಕೊಳವೆ ಬಾವಿಗಳ ನಡುವೆ ೮೫೦ ಅಡಿ ಅಂತರ ಇರಲೇಬೇಕು ಎಂಬ ನಿರ್ಬಂಧ ಹಾಕಿತ್ತು. ಆಗಿನ ಕೃಷಿ ಸಚಿವರು ವಿಶ್ವ ಬ್ಯಾಂಕ್ ನೆರವು ಪಡೆಯುವ ನೆಪದಲ್ಲಿ ವಿದೇಶಕ್ಕೂ ಹೋಗಿ ಬಂದಿದ್ದರು. ಸಮ್ಮೇಳನ ಸಭಾಂಗಣದಲ್ಲಿ ಕೃಷಿ ಸಚಿವರು ಮಾತನಾಡುತ್ತ ಈ ೮೫೦ ಅಡಿಯ ನಿರ್ಬಂಧ ತೆಗೆದು ಹಾಕಬೇಕು ಎಂದು ಭೂ ವಿಜ್ಞಾನ ಇಲಾಖೆಯ ನಿರ್ದೇಶಕ ರಾಧಾಕೃಷ್ಣರಿಗೆ ತಾಕೀತು ಮಾಡಿದರು. ರಾಧಾಕೃಷ್ಣ ಖಡಕ್ ಅಧಿಕಾರಿ, 'ನಾನು ಕೃಷಿ ಪರಿಣತನಲ್ಲ. ನೀವು ಭೂ ವಿಜ್ಞಾನ ಪರಿಣತರಲ್ಲ. ವಿಶ್ವ ಬ್ಯಾಂಕ್ ನೆರವು ಪಡೆಯಲು ಹೋಗುವಾಗ ನೀವು ನನ್ನನ್ನು ಕರೆದುಕೊಂಡೂ ಹೋಗಿರಲಿಲ್ಲ. ಈಗ ೮೫೦ ಅಡಿ ನಿರ್ಬಂಧ ತೆಗೆದು ಹಾಕಿ ಎಂದು ಹೇಳಿದರೆ ನಾನು ಕೇಳುವವನಲ್ಲ. ನೀವು ವಿಶ್ವ



ಬ್ಯಾಂಕಿಗೇ ಕೇಳಿರಿ' ಎಂದು ಹೇಳಿ ಕಡತ ತೆಗೆದುಕೊಂಡು ಹೊರಟೇ ಹೋಗಿಬಿಟ್ಟರು. ಕೃಷಿ ಸಚಿವರು ಬಡ ಆಸಾಮಿಯೇನೂ ಆಗಿರಲಿಲ್ಲ. ಆಗಿನ ಸಂಪುಟದಲ್ಲಿ ಪ್ರಬಲ ಭಿನ್ನಮತೀಯರೇ ಆಗಿದ್ದರು. ಅವರ ಪಕ್ಕದಲ್ಲಿ ಕುಳಿತ ಹಣಕಾಸು ಸಚಿವರೂ ಪ್ರಬಲರೇ ಆಗಿದ್ದರು. ಆದರೂ ರಾಧಾಕೃಷ್ಣ ನಿಯಮ ಮುರಿಯಲು ಸಿದ್ಧರಿರಲಿಲ್ಲ. ಮರುದಿನ ಸರ್ಕಾರದ ಅಭಿವೃದ್ಧಿ ಆಯುಕ್ತ ಜಿ.ವಿ.ಕೆ. ರಾವ್ ಅವರು ರಾಧಾಕೃಷ್ಣ ಅವರನ್ನು ಕರೆಸಿ, "ಏನು ನೀವು ಹೀಗೆ ಹೇಳುವುದೇ?' ಎಂದು ಅಸಮಾಧಾನದಿಂದಲೇ ಕೇಳಿದರು. ಇಲ್ಲ ಸರ್, ನಾನು ನಿಯಮ ಮುರಿಯುವುದಿಲ್ಲ. ಅಂತರ್ಜಲ ರಕ್ಷಣೆಗೆ ಈ ನಿಯಮ ಬಹಳ ಮುಖ್ಯ' ಎಂದು ರಾಧಾಕೃಷ್ಣ ತಮ್ಮನ್ನು ಸಮರ್ಥಿಸಿಕೊಂಡರು.

ಬರೀ ಸಚಿವರು ಮಾತ್ರವಲ್ಲ ಒಂದು ಸಾರಿ ಮುಖ್ಯಮಂತ್ರಿಗೂ ರಾಧಾಕೃಷ್ಣ ಇದೇ ರೀತಿ ಉತ್ತರ ಕೊಟ್ಟಿದ್ದರು. ಚಿತ್ರದುರ್ಗ ಜಿಲ್ಲೆಯಲ್ಲಿ ಯಾರೋ ಒಬ್ಬರು ಮೈಲುತುತ್ತೆ ಬಳಸಿ ತಾಮ್ರ ಉತ್ಪಾದನೆ ಮಾಡುತ್ತೇನೆ ಎಂದು ಹೊರಟಿದ್ದರು. ಅವರಿಗೆ ಸಹಾಯ ಮಾಡಲು ಆಗಿನ ಮುಖ್ಯಮಂತ್ರಿಗೆ ಆಸೆಯೂ ಇತ್ತು. 'ನೋಡಿ ರಾಧಾಕೃಷ್ಣ, ಅವರಿಗೆ ಅನುಮತಿ ಕೊಡಿ' ಎಂದರು. "ಅವನಂಥ ಕ್ವಾಕ್‌ಗಳು ತಾಮ್ರ ಉತ್ಪಾದನೆ ಮಾಡುವುದಾದರೆ ನಾವು ಇಲಾಖೆಯಲ್ಲಿ ಇರಬೇಕಿಲ್ಲ

ಸರ್' ಎಂದು ರಾಧಾಕೃಷ್ಣ ಥಟ್ಟನೆ ಉತ್ತರ ಕೊಟ್ಟರು. ಆ ಮುಖ್ಯಮಂತ್ರಿ ಮುಖ ಹುಳ್ಳಗೆ ಮಾಡಿಕೊಂಡರು. ಆದರೆ, ಒತ್ತಾಯ ಮಾಡಲಿಲ್ಲ. ಬರೀ ತಾಮ್ರ ಮಾತ್ರವಲ್ಲ ಎಲ್ಲ ಖನಿಜ ಸಂಪತ್ತಿನ ನಿರ್ವಹಣೆಯ ಬಗೆಗೂ ರಾಧಾಕೃಷ್ಣ ಅವರಿಗೆ ಅದೇ ಬಗೆಯ ತಾದಾತ್ಮ್ಯವಿತ್ತು. ಅದಕ್ಕೆ ಸಾಕ್ಷಿಯಾಗಿ ಅವರು, 'ಕರ್ನಾಟಕದ ಅಂತರ್ಜಲ (ಕನ್ನಡ-ಇಂಗ್ಲಿಷ್-ಹಿಂದಿ ಆವೃತ್ತಿ)', 'ಕರ್ನಾಟಕದ ಖನಿಜ ಸಂಪತ್ತು (ಕನ್ನಡ ಮತ್ತು ಇಂಗ್ಲಿಷ್), 'ಗೋಲ್ಡ್ ಇನ್ ಇಂಡಿಯಾ', 'ಹಟ್ಟಿ ಗೋಲ್ಡ್ ಮೈನ್ಸ್', 'ಜಿಯಾಲಜಿ ಆಫ್ ಕರ್ನಾಟಕ', 'ಗದಗ ಗೋಲ್ಡ್', 'ಅಂತರ್ಜಲ' (ಎಸ್. ಜಿತೇಂದ್ರಕುಮಾರ್ ಜತೆಯಾಗಿ) ಎಂಬಿತ್ಯಾದಿ ಪುಸ್ತಕ ಬರೆದರು. ಕರ್ನಾಟಕ ಮಾತ್ರವಲ್ಲ ಇಡೀ ಭಾರತದ ಭೂ ವಿಜ್ಞಾನ ಕುರಿತ ಅವರ ಅಪಾರ ತಿಳಿವಳಿಕೆಯನ್ನು ಹಂಚಿಕೊಳ್ಳಬೇಕು ಎಂದೇ ದೇಶ-ವಿದೇಶಗಳ ಭೂ ವಿಜ್ಞಾನಿಗಳು ಇವರನ್ನು ಭೇಟಿ ಮಾಡಿ ಚರ್ಚಿಸುತ್ತಿದ್ದರು. ಭಾರತಕ್ಕೆ ಬಂದರೆ ಅವರು ಕರ್ನಾಟಕಕ್ಕೆ ಬಂದೇ ಹೋಗುತ್ತಿದ್ದರು. ಅವರ ಭೇಟಿಯ ಸಂಗಾತಿ ರಾಧಾಕೃಷ್ಣ ಅವರೇ ಆಗಿರುತ್ತಿದ್ದರು.

ಭೂ ವಿಜ್ಞಾನದ ಬಗೆಗಿನ ಪ್ರೀತಿಯ ಫಲವಾಗಿಯೇ ಬೆಂಗಳೂರಿನಲ್ಲಿ ಜಿಯಾಲಜಿಕಲ್ ಸೊಸೈಟಿ ಆಫ್ ಇಂಡಿಯಾ ಸಂಸ್ಥೆಯನ್ನು ರಾಧಾಕೃಷ್ಣ ಹುಟ್ಟಿ ಹಾಕಿದರು. ೧೯೫೮ರಿಂದ ೬೪ರ ವರೆಗೆ ಅವರೇ ಸ್ಥಾಪಕ ಕಾರ್ಯದರ್ಶಿಯಾಗಿದ್ದರು. ನಂತರ 'ಜರ್ನಲ್ ಆಫ್ ಜಿಯಾಲಜಿಕಲ್ ಸೊಸೈಟಿ ಆಫ್ ಇಂಡಿಯಾ'ದ ಸಂಪಾದಕರಾಗಿ ೧೯೯೨ರ ವರೆಗೆ ಕೆಲಸ ಮಾಡಿದರು. ೯೨ರಿಂದ ೨೦೦೬ರ ವರೆಗೆ ಅವರೇ ಸೊಸೈಟಿಯ ಅಧ್ಯಕ್ಷರೂ ಆಗಿದ್ದರು. ಕಳೆದ ೫೩ ವರ್ಷಗಳಿಂದ ಈ ಜರ್ನಲ್ ತನ್ನ ನಿಯತಕಾಲಿಕತನವನ್ನು ಕಳೆದುಕೊಂಡಿಲ್ಲ. ಕಳೆದ ನಾಲ್ಕು ದಶಕಗಳಿಗೂ ಹೆಚ್ಚು ಕಾಲದಿಂದ ತಿಂಗಳ ಪತ್ರಿಕೆಯಾಗಿರುವ ಈ ಜರ್ನಲ್ ಅಚ್ಚುಕಟ್ಟಾಗಿ, ವಿಷಯ ಸಮೃದ್ಧವಾಗಿ ಪ್ರತಿ ತಿಂಗಳು ೧ನೇ ತಾರೀಖು ಚಂದಾದಾರರ ಮನೆಯಲ್ಲಿ ಇರುತ್ತದೆ.

ಸುಮಾರು ಐದು ದಶಕಗಳಿಂದ ರಾಧಾಕೃಷ್ಣ ಅವರ ಒಡನಾಡಿಯಾಗಿದ್ದ, ಭೂ ವಿಜ್ಞಾನ ಇಲಾಖೆಯಲ್ಲಿ ಮುಖ್ಯ ಡ್ರಿಲರ್ ಆಗಿ ನಿವೃತ್ತರಾದ ಎಸ್. ಜಿತೇಂದ್ರಕುಮಾರ್ ಅವರ ಮನೆಗೆ ನಾನು ರಾಧಾಕೃಷ್ಣ ಅವರ ಕುರಿತು ಮಾತನಾಡಲು ಹೋದಾಗ ಫೆಬ್ರುವರಿ ತಿಂಗಳ ಸಂಚಿಕೆ ಅವರ ಮೇಜಿನ ಮೇಲೆ ಇತ್ತು! ರಾಧಾಕೃಷ್ಣ ಅವರು ಜರ್ನಲ್‌ನ ಸಂಪಾದಕರಾಗಿದ್ದಾಗ, ಬರೀ ಭೂ ವಿಜ್ಞಾನ ಮಾತ್ರವಲ್ಲ ಬದುಕಿಗೆ ಸಂಬಂಧಿಸಿದ ಅನೇಕ ವಿಷಯಗಳ ಬಗೆಗೆ ಸಂಪಾದಕೀಯ ಬರೆದಿದ್ದರು. ಸಂಪಾದಕೀಯಗಳನ್ನು ಒಳಗೊಂಡ 'ಬ್ಯಾಂಡಮ್ ಹಾರ್ವೆಸ್ಟ್' ಹೆಸರಿನ ಎರಡು ಸಂಪುಟಗಳು ಬಿಡುಗಡೆಯಾಗಿವೆ, ಮೂರನೇ ಸಂಪುಟ ಬಿಡುಗಡೆಗೆ ಅಣಿಯಾಗಿದೆ. ಸಹ್ಯಾದ್ರಿ ಬೆಟ್ಟ ಸಾಲುಗಳ ಬಗ್ಗೆ ಸಂಪೂರ್ಣ ಮಾಹಿತಿಯುಳ್ಳ 'ಸಹ್ಯಾದ್ರಿ-೧' ಮತ್ತು 'ಸಹ್ಯಾದ್ರಿ ೨' ಅವರ ಮೇರುಕೃತಿಗಳು. ರಾಧಾಕೃಷ್ಣ ಅವರು ತಮ್ಮ ತಂದೆ ಪುಟ್ಟಯ್ಯ ಅವರನ್ನು ಕುರಿತು ಬರೆದ ನನ್ನ ತಂದೆ' ಪುಸ್ತಕದಲ್ಲಿ ಬೆಂಗಳೂರಿನ ಇತಿಹಾಸವೇ ಸಿಗುತ್ತದೆ.

ಪ್ರಖ್ಯಾತ ವಿಜ್ಞಾನಿ ಸಿ.ವಿ. ರಾಮನ್ ಅವರ ನಿಕಟ ಒಡನಾಡಿಯಾಗಿದ್ದ ರಾಧಾಕೃಷ್ಣ, ಸ್ವತಃ 'ರಾಮನ್' ಮಾತ್ರವಲ್ಲದೇ ಶ್ರೀನಿವಾಸ್ ರಾಮಾನುಜಂ', 'ಮೇಡಂ ಕ್ಯೂರಿ, 'ಡಾರ್ವಿನ್' 'ಐನ್‌ಸ್ಟೀನ್' ಮತ್ತು 'ಬಿ.ಜಿ.ಎಲ್. ಸ್ವಾಮಿ' ಅವರ ಜೀವನ ಚರಿತ್ರೆಯ ಪುಸ್ತಕಗಳನ್ನು ಕನ್ನಡದಲ್ಲಿ ಬರೆದರು. 'ರಾಮನ್', 'ಡಾರ್ವಿನ್' ಮತ್ತು 'ಮೇಡಂ ಕ್ಯೂರಿ' ಜೀವನ ಚರಿತ್ರೆಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನವೂ ರಾಧಾಕೃಷ್ಣ ಅವರಿಗೆ ಸಂದಿತು. ಒಬ್ಬ ಭೂ ವಿಜ್ಞಾನಿಗೆ ಅದು ದೊಡ್ಡ ಗೌರವದಂತೆ ಕಾಣಿಸಿತ್ತು. ತಮಿಳುನಾಡಿನ ಚಿದಂಬರಂನಲ್ಲಿ ನಡೆದ ೯೪ನೇ ಭಾರತ ವಿಜ್ಞಾನ ಕಾಂಗ್ರೆಸ್ ಅಧಿವೇಶನದಲ್ಲಿ ಜವಾಹರಲಾಲ್ ನೆಹರೂ ಜನ್ಮ ಶತಮಾನೋತ್ಸವ ಪ್ರಶಸ್ತಿಯೂ ಸೇರಿದಂತೆ ಹಲವು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದ ರಾಧಾಕೃಷ್ಣ ಅವರದು ತುಂಬು ಕುಟುಂಬ. ಅವರಿಗೆ ಇಬ್ಬರು ಪುತ್ರರು, ನಾಲ್ವರು ಪುತ್ರಿಯರು. ಪತ್ನಿ ಮೊದಲೇ ನಿಧನರಾಗಿದ್ದರು.

ಒಂಬತ್ತು ದಶಕಗಳಿಗೂ ಮೀರಿ ಬಾಳಿದ ರಾಧಾಕೃಷ್ಣ ಅವರದು 'ಬಳಪವಿಟ್ಟಳುಪದೊಂದಗ್ಗಳಿಕೆ'ಯಂಥ ಬರವಣಿಗೆ ಅವರು ಬರೆದುದನ್ನು ತಿದ್ದುತ್ತಲೇ ಇರಲಿಲ್ಲ. ಅಂಥ ಪರಿಶುದ್ಧತೆಯನ್ನು ಅವರು ಬರವಣಿಗೆಯಲ್ಲಿ ಮಾತ್ರವಲ್ಲ ಬದುಕಿನಲ್ಲಿಯೂ ಅಳವಡಿಸಿಕೊಂಡಿದ್ದರು. ಅವರು ತಮ್ಮ ಹಿಂದೆ ಅಳಿಸಲಾಗದ ಹೆಜ್ಜೆಗಳನ್ನು ಬಿಟ್ಟು ಹೋಗಿದ್ದಾರೆ.

೦೫.೦೨.೧೨

**ತಂದೆಯಂಥ ಮಗನಿಗಾಗಿ;**

**ತಾಯಿಯಂಥ ಊರಿಗಾಗಿ**

ನೀನು ಬರೆಯಬೇಕು' : ನಲ್ವತ್ತು ವರ್ಷಗಳ ನಂತರ ನನ್ನ ಕಾಲೇಜು ಸಹಪಾಠಿ ಫೋನ್ ಮಾಡಿದ್ದಳು. ಆಕೆಯ ದನಿಯಲ್ಲಿ ಕೋರಿಕೆಯಿತ್ತು, ಆಗ್ರಹವಿತ್ತು, ಹತಾಶೆಯಿತ್ತು. ನಾನು ಬರೆದರೆ ಏನಾದರೂ ಆಗಬಹುದು ಎಂಬ ನಂಬಿಕೆಯೂ ಇದ್ದಂತೆ ಇತ್ತು. ಆಕೆ ತೀರಾ ನೊಂದುಕೊಂಡಿದ್ದಳು. ನಮ್ಮ ಊರು ಮುದ್ದೇಬಿಹಾಳಕ್ಕೆ ಕೇವಲ ೧೫ ಕಿಲೋ ಮೀಟರ್ ದೂರದ ತಂಗಡಗಿಯಿಂದ ಬರುವಾಗ ಕಾರು ಮುಳುಗುವಂಥ ಒಂದು ದೊಡ್ಡ ಹಳ್ಳದಲ್ಲಿ ಆಕೆಯ ಮಗನ ಸೊಂಟ ಮುರಿದು ಹೋಗಿತ್ತು. ಆತನನ್ನು ಯಾವ ಯಾವುದೋ ಆಸ್ಪತ್ರೆಗೆ ಸೇರಿಸಿ ಈಗ ಬೆಂಗಳೂರಿನ ಆಸ್ಪತ್ರೆಗೆ ಸೇರಿಸಿದ್ದಾರಂತೆ, ಆತ ಮತ್ತೆ ಸಹಜ ಸ್ಥಿತಿಗೆ ಮರಳುವುದು ಕಷ್ಟವಂತೆ. ಮುದ್ದೇಬಿಹಾಳದ ಜನರಿಗೆ ಒಂದು ಒಳ್ಳೆಯ ರಸ್ತೆಗೂ ಅರ್ಹತೆಯಿಲ್ಲವೇ?' ಆಕೆ ಕೇಳುತ್ತಿದ್ದಳು.

ನಾನೂ ಊರು ಬಿಟ್ಟು ೪೦ ವರ್ಷವಾಯಿತು. ಮತ್ತೆ ಹೋದುದು ಆಗಲೋ ಈಗಲೋ, ಅದೂ ಹೀಗೆ ಹೋಗಿ ಹಾಗೆ ಬಂದುದು. ಆರು ತಿಂಗಳ ಹಿಂದೆ ಹೋಗಿದ್ದೆ. ಅದೂ ಹಾರುಭೇಟಿಯೇ, ಊರಿನಲ್ಲಿ ಒಂದೇ ಒಂದು ರಸ್ತೆಯೂ ಸರಿ ಇರಲಿಲ್ಲ. ಗುಂಡಿಗಳಿಗೆ, ಹಳ್ಳಗಳಿಗೆ ಲೆಕ್ಕ ಇರಲಿಲ್ಲ. ಮುಖ್ಯ ರಸ್ತೆಯ ಕಥೆಯೇ ಅದು. ಅದು ನನಗೆ ಹೊಸದೂ ಅನಿಸಲಿಲ್ಲ. ಜಿಲ್ಲಾ ಕೇಂದ್ರಗಳ ರಸ್ತೆಗಳು ಇದಕ್ಕೂ ಅಧ್ವಾನ ಸ್ಥಿತಿಯಲ್ಲಿ ಇದ್ದುದನ್ನು ನಾನೇ

ನೋಡಿದ್ದೆ. ಹಾಗೆಂದು ಊರು ಬೆಳೆದಿಲ್ಲ ಎಂದು ಅಲ್ಲ. ನಾನು ಊರ ಹೊರಗೆ ಇದ್ದ ಕನ್ನಡ ಶಾಲೆಯಲ್ಲಿ ಕಲಿತವನು. ಈಗ ಅದು ಊರಿನ ಮಧ್ಯಕ್ಕೆ ಬಂದಿದೆ. ಶಾಲೆಯ ಸ್ಥಿತಿ ಮಾತ್ರ ನಾವು ಕಲಿಯುವಾಗ ಹೇಗೆ ಇತ್ತೋ ಹಾಗೆಯೇ ಇದೆ! ಸುಣ್ಣ ಬಣ್ಣವನ್ನಾದರೂ ಹಚ್ಚಿದ್ದಾರೆಯೇ? ಒಂದು ಕೊಠಡಿಯಾದರೂ ಹೊಸದಾಗಿ ಸೇರಿದೆಯೇ? ಹೊರಗಿನಿಂದ ಕಾಣುತ್ತಿರಲಿಲ್ಲ. ನಾನು ಒಳಗೆ ಹೋಗಿ ನೋಡಲಿಲ್ಲ. ಸುಮ್ಮನೆ ಊರಿನಲ್ಲಿ ಸೈಟು ಬೆಲೆ ಎಷ್ಟು ಎಂದು ಕೇಳಿದೆ. ಬೆಂಗಳೂರಿಗಿಂತ ಕಮ್ಮಿಯೇನೂ ಇರಲಿಲ್ಲ!

ನಮ್ಮ ಊರಿಗೆ ಕೃಷ್ಣಾ ನದಿ ಕೇವಲ ಒಂಬತ್ತು ಕಿಲೋ ಮೀಟರ್ ದೂರದಲ್ಲಿ ಹರಿಯುತ್ತಾಳೆ. ಆಕೆ ಹೆದ್ದೊರೆ, ಹಳೆಯ ಗೆಳೆಯರು ಹೇಳುತ್ತಿದ್ದರು : 'ನಮ್ಮ ಊರಿಗೆ ೧೫ ದಿನಕ್ಕೆ ಒಮ್ಮೆ ನೀರು ಬರುತ್ತದೆ. ಎಷ್ಟು ಹೊತ್ತಿಗೆ ಬರುತ್ತದೆ ಗೊತ್ತಿಲ್ಲ. ನಲ್ಲಿ ಗೊರ ಗೊರ ಸದ್ದು ಮಾಡುವುದನ್ನೇ ಕಾಯುತ್ತ ಕೂರುತ್ತೇವೆ. ನೀರು ಬಂತು ಎಂದರೆ ಸಂಭ್ರಮಪಟ್ಟು ಹಂಡೆ, ಕೊಡ ಮಾತ್ರವಲ್ಲ, ಚೊಂಬು, ಲೋಟದಲ್ಲಿಯೂ ತುಂಬಿ ಇಟ್ಟುಕೊಳ್ಳುತ್ತೇವೆ. ಮತ್ತೆ ೧೫ ದಿನ ಕಾಯಬೇಕಲ್ಲ?' ಜನರಿಗೆ ಅವರ ಯೋಗ್ಯತೆಗೆ ತಕ್ಕಂಥದು ಸಿಗುತ್ತದೆಯೇ? ಇದರಲ್ಲಿ ಊರ ಜನರ ತಪ್ಪು ಮಾತ್ರ ಇದೆಯೇ? ಗೊತ್ತಾಗಲಿಲ್ಲ. ಜನರಲ್ಲಿ ಸಿಟ್ಟು ಕಡಿಮೆ ಆಗಿದೆ ಅನಿಸಿತ್ತು ಅಷ್ಟೇ. ಇನ್ನೊಬ್ಬ ಗೆಳೆಯನ ಹುಡ್ಕೊ ಬಡಾವಣೆಯ ಮನೆಗೆ ಹೋದೆ. ರಾತ್ರಿಯಾಗಿತ್ತು. ಹಾದಿಯಲ್ಲಿ ಒಂದೇ ಒಂದು ಬೀದಿ ದೀಪ ಇರಲಿಲ್ಲ. ರಸ್ತೆ ಮೊದಲೇ ಇರಲಿಲ್ಲ. ಒಂದಿಷ್ಟು ಮಳೆ ಬಂದು ಇಡೀ ರಸ್ತೆಯಲ್ಲಿ ಕೊಚ್ಚೆ, ಹೊಂಡ ಇದ್ದುವು. ಕತ್ತಲೆಯಲ್ಲಿ ಕೊಚ್ಚೆ, ಹೊಂಡ ದಾಟುವುದು ಕಷ್ಟವಾಯಿತು. ಅದೆಲ್ಲ ಗೊತ್ತಿದ್ದ ಗೆಳೆಯ ಮುಂದೆ ಸರ ಸರ ನಡೆದು ಹೋದ. ನಮಗೆ ಎಲ್ಲವೂ ರೂಢಿಯಾಗಿ ಬಿಡುತ್ತದೆ ಎಂದುಕೊಂಡೆ.

ಕಳೆದ ಆರೆಂಟು ತಿಂಗಳಲ್ಲಿ ಸ್ಥಿತಿ ಮತ್ತಷ್ಟು ಬಿಗಡಾಯಿಸಿದೆ. ನಮ್ಮ ಊರು ಬಂದು ಸೇರಲು ಯಾವ ರಸ್ತೆಯೂ ಸರಿಯಿಲ್ಲ. ಹತ್ತು ಹದಿನೈದು ನಿಮಿಷಗಳಲ್ಲಿ ಬಂದು ತಲುಪಬಹುದಾದ ದಾರಿ ಸಾಗಲು ಗಂಟೆಗಟ್ಟಲೆ ಹಿಡಿಯುತ್ತದೆ. ಮಧ್ಯದಲ್ಲಿ ನಿಮ್ಮ ಸೊಂಟಕ್ಕೆ ಯಾವ ಖಾತ್ರಿಯೂ ಇಲ. ಕಾಲೇಜು ಗೆಳತಿ ಹೇಳುತ್ತಿದ್ದಳು, 'ನಾಲ್ಕು ವರ್ಷವಾಯಿತು. ತಂಗಡಗಿಯಿಂದ ಮುದ್ದೇಬಿಹಾಳದ ರಸ್ತೆ ಸರಿ ಹೋಗಲಿಲ್ಲ. ಆಲಮಟ್ಟಿಯಿಂದ ಬರುವ ರಸ್ತೆ ಸ್ಥಿತಿಯೂ ಹೀಗೆಯೇ ಇದೆ. ಮೊದಲು ಒಂದೋ ಎರಡೋ ಗುಂಡಿಗಳು ಇದ್ದುವು. ದಿನಕ್ಕೊಂದು ಗುಂಡಿ ಸೇರಿಕೊಂಡು ಈಗ ದೊಡ್ಡ ಹಳ್ಳಗಳು ಆಗಿವೆ. ಹಳ್ಳಗಳ ನಡುವೆ ರಸ್ತೆ ಹುಡುಕಿಕೊಂಡು ಜನರು ಅಡ್ಡಾಡುತ್ತಿದ್ದಾರೆ. ರಸ್ತೆಯ ಆಜುಬಾಜು ಇದ್ದ ಕಬ್ಬಿನ ಗದ್ದೆಗಳ ರೈತರು ತಾವೇ ಟ್ರ್ಯಾಕ್ಟರ್‌ಗಳಲ್ಲಿ ಮಣ್ಣು ತಂದು ಹಳ್ಳಗಳನ್ನು ತುಂಬಿದ್ದಾರೆ. ಮಣ್ಣು ಹಾರಿ ಹೋಗಿ ಮತ್ತೆ ಹಳ್ಳಗಳು ಬಾಯಿ

ತೆರೆದುಕೊಂಡು ನಿಂತಿವೆ. ನಿನಗೆ ಗೊತ್ತೇ, ನಾಲ್ಕು ವರ್ಷಗಳ ಹಿಂದೆ ತಂಗಡಗಿ ರಸ್ತೆಯನ್ನು ಒಂದೂ ಕಾಲು ಕೋಟಿ ರೂಪಾಯಿ ಖರ್ಚು ಮಾಡಿ ರಿಪೇರಿ ಮಾಡಿದ್ದರು. ಎಂಟೊಂಬತ್ತು ತಿಂಗಳ ಹಿಂದೆ ಇದೂ ಸೇರಿ ಕೆಲವು ರಸ್ತೆಗಳನ್ನು ಮತ್ತೆ ೬೫ ಲಕ್ಷ ರೂಪಾಯಿ ಖರ್ಚು ಮಾಡಿ ರಿಪೇರಿ ಮಾಡಿದರು. ಆಗ ಬರೀ ಸಣ್ಣ ಹೊಂಡ ಮುಚ್ಚಿದರು. ದೊಡ್ಡ ಹಳ್ಳ ಹಾಗೆಯೇ ಬಿಟ್ಟರು! ಈಗೇನೋ ೧೭ ಕೋಟಿ ರೂಪಾಯಿ



ಖರ್ಚು ಮಾಡಿ ಮತ್ತೆ ಎಲ್ಲ ರಸ್ತೆ ರಿಪೇರಿ ಮಾಡುತ್ತಾರಂತೆ. ಮುಖ್ಯಮಂತ್ರಿ ಬಳಿ ಕಡತ ಇದೆಯಂತೆ.

'ಮೊನ್ನೆ ಊರ ಜನರೆಲ್ಲ ಸೇರಿ ಬಂದ್ ಮಾಡಿದರು. ಬಂದ್ ಮಾಡಿದವರು ಯಾರು ಗೊತ್ತೆ? ಪಡ್ಡೆ ಹುಡುಗರು! ಇಡೀ ದಿನ ಒಂದು ಕಪ್ಪು ಚಹವೂ ಸಿಗಲಿಲ್ಲ. ಈಗ ವ್ಯಾಪಾರಸ್ಥರು ಸರದಿ ಉಪವಾಸ ಮಾಡುತ್ತಿದ್ದಾರೆ. ಅವರಿಗೂ ನೆಂಟರ ಮೇಲೆ ಪ್ರೀತಿ, ಅಕ್ಕಿಯ ಮೇಲೆ ಆಸೆ, ಹಾಗೂ ಸೈ ಹೀಗೂ ಸೈ! ನಾವು ಮತ್ತೆ ಏನು ಮಾಡಬಹುದು? ಶಾಸಕ ನಮ್ಮ ಊರಿನವರಲ್ಲ. ಅವರಿಗೆ ನಮ್ಮ ವೋಟು ಬೇಕಾದಂತೆಯೂ ಕಾಣುವುದಿಲ್ಲ. ಮೊದಲಿನಿಂದಲೂ ಹಾಗೆಯೇ ಅಲ್ಲವೇ? ಅವರಿಗೆ ವೋಟು ಹಾಕುವ ನಲ್ವತ್ತು ಹಳ್ಳಿಗಳು ಇವೆ. ಅವರ ವಿರುದ್ಧ ನಿಲ್ಲುವ ಅಭ್ಯರ್ಥಿಗೂ ನಲ್ವತ್ತು ಐವತ್ತು ಹಳ್ಳಿಗಳು ಇವೆ. ಮೊದಲು ದೇಶಮುಖರು ಗೆಲ್ಲುತ್ತಿದ್ದರು. ಈಗ ನಾಡಗೌಡರು ಗೆಲ್ಲುತ್ತಿದ್ದಾರೆ. ಧಣಿಗಳು, ಹೊಟ್ಟೆ ತುಂಬಿದವರು! ಅವರು ಹೆಸರಿಗೆ ನಮ್ಮ ಊರಿನ ಶಾಸಕರು. ನಮಗೂ ಅವರಿಗೂ ಸಂಬಂಧವೇ ಇಲ್ಲ. ಅವರು ನಮ್ಮ ಊರಿಗೆ ಯಾವಾಗ ಬರುತ್ತಾರೆ, ಯಾವಾಗ ಹೋಗುತ್ತಾರೆ. ಒಂದೂ ಗೊತ್ತಾಗುವುದಿಲ್ಲ. ಐ.ಬಿ.ಗೆ ಬಂದು ಹೋಗುತ್ತಾರಂತೆ. ವಿಚಿತ್ರ ಎಂದರೆ ಅವರೂ ಇದೇ ರಸ್ತೆಯಲ್ಲಿಯೇ ಸಂಚರಿಸುತ್ತಾರೆ. ಅವರಿಗೆ ರಸ್ತೆ ಕಾಣುವುದಿಲ್ಲವೇ?

“ನಿನಗೆ ಗೊತ್ತಾ? ನಿಮ್ಮ ಊರಿನಲ್ಲಿ ಭೂ ಮಾಫಿಯಾ ಇರುವ ಹಾಗೆ ಇಲ್ಲಿ ಗುತ್ತಿಗೆದಾರರ ಮಾಫಿಯಾ ಇದೆ. ಅವರಿಗೆ ಯಾರ ರಕ್ಷಣೆ ಇದೆ ಎಂದು ನಾನು ಹೇಳಬೇಕಿಲ್ಲ. ನಾನು ಹೇಳಿದೆ ಎಂದು ನೀನು ಬರೆದು ಬಚಾವಾಗಬಹುದು. ನಾನು ಇಲ್ಲಿಯೇ ಇರಬೇಕು, ಬದುಕಬೇಕು! ಯಾರು ಗುತ್ತಿಗೆ ತೆಗೆದುಕೊಂಡರೂ ಅವರಿಂದ ಒಬ್ಬ ಗುತ್ತಿಗೆದಾರನೇ ಕಿತ್ತುಕೊಂಡು ಕೆಲಸ ಮಾಡುತ್ತಾನೆ. ಕೆಲಸ ಹೇಗೆ ಮಾಡುತ್ತಾನೆ ಎಂದು ನೀನು ಬಂದು ನೋಡು. ಎಲ್ಲ ರಾಕ್ಷಸರ ಹಾಗೆ ಇದ್ದಾರೆ. ಯಾರಿಗೂ ಒಂಚೂರೂ ಭಯವಿಲ್ಲ. ದುಡ್ಡು ಕೊಳ್ಳೆ ಹೊಡೆಯುತ್ತಿದ್ದಾರೆ. ಒಂದೇ ಒಂದು ರಸ್ತೆ ಕೆಲಸದ ಬಳಿಯೂ ಅದರ ಖರ್ಚು ವೆಚ್ಚದ ಫಲಕವಿಲ್ಲ. ಕೇಳಿದರೆ ಹೇಳುವುದಿಲ್ಲ. ಅದೇನು ಪಾರದರ್ಶಕ ಕಾಯ್ದೆಯೋ ಒಂದೂ ತಿಳಿಯದು. ನಮ್ಮ ಊರಿನ ಆಸುಪಾಸಿನ ರಸ್ತೆಗಳ ನಿರ್ಮಾಣ, ದುರಸ್ತಿ ಕೆಲಸವನ್ನು ಕೃಷ್ಣಾ ಭಾಗ್ಯ ಜಲ ನಿಗಮದ ಅಧಿಕಾರಿಗಳು ಮಾಡಬೇಕು. ಅವರೆಲ್ಲ ಆಲಮಟ್ಟಿಯಲ್ಲಿ ಎಲ್ಲಿ ಇರುತ್ತಾರೆ? ಬೆಂಗಳೂರಿನಲ್ಲಿಯೇ ಅಲ್ಲವೇ ಅವರು ಇರುವುದು? ಇಲ್ಲಿ ಇದ್ದರೆ ಅವರಿಗೆ ನಮ್ಮ ಕಷ್ಟ ಗೊತ್ತಾಗುತ್ತಿತ್ತು. ಕೇಳುವವರು ಇಲ್ಲ ಎಂದ ಮೇಲೆ ಒಂದು ಸಾರಿ ಮುದ್ದೇಬಿಹಾಳದಿಂದ ತಂಗಡಗಿಗೆ ರಸ್ತೆ ಮಾಡಿದೆವು ಎಂದು ಬಿಲ್ಲು ಹಾಕುತ್ತಾರೆ. ಇನ್ನೊಂದು ಸಾರಿ ಅದೇ ಬಿಲ್ಲನ್ನು ತಂಗಡಗಿಯಿಂದ

ಮುದ್ದೇಬಿಹಾಳಕ್ಕೆ ರಸ್ತೆ ಮಾಡಿದೆವು ಎಂದು ಹಾಕುತ್ತಾರೆ! ಊರಿನ ರಸ್ತೆ ಕೆಲಸ ನೋಡಿಕೊಳ್ಳಲು ಪುರಸಭೆಯಲ್ಲಿ ಒಬ್ಬ ಎಂಜಿನಿಯ ಇಲ್ಲ ಗೊತ್ತಾ?

ಎಲ್ಲದಕ್ಕೂ ರಾಜಕಾರಣ. ಶಾಸಕರಿಗೆ ಕೇಳಿದರೆ ಮುಂದೆ ಶಾಸಕರಾಗಲು ಹೊರಟವರು ಅಡ್ಡಿಯಾಗಿದ್ದಾರೆ ಎನ್ನುತ್ತಾರೆ. ಇವರು ಕಾಂಗ್ರೆಸ್ಸು, ಅವರು ಬಿಜೆಪಿ, ಕೆಲಸ ಆದರೆ ನಾನು ಮಾಡಿದೆ ಎಂದು ಬಿಜೆಪಿ ಅಭ್ಯರ್ಥಿ ಹೇಳುತ್ತಾರೆ. ಆಗದಿದ್ದರೆ ಕಾಂಗ್ರೆಸ್ ಶಾಸಕರು ಮಾಡಿಸಲಿಲ್ಲ ಎನ್ನುತ್ತಾರೆ. ಈಗಿನ ಕಾಂಗ್ರೆಸ್ ಶಾಸಕರ ವಿರುದ್ಧ ಹತ್ತಿರದ

ಊರಿನ ಇನ್ನೊಬ್ಬ ಕಾಂಗ್ರೆಸ್ ಶಾಸಕ ಪಿತೂರಿ ಮಾಡುತ್ತಿದ್ದಾರಂತೆ. ಅವರು ಏನಾದರೂ ಮಾಡಲಿ, ನಾವು ಏನು ಮಾಡಬೇಕು? ನಿನಗೇ ಏಕೆ ಹೇಳಿದೆ ಗೊತ್ತೆ? ಇಲ್ಲಿನ ಬಹುತೇಕ ಪತ್ರಕರ್ತರು ಹಾಳಾಗಿ ಹೋಗಿದ್ದಾರೆ. ಕೆಲವರಿಗೆ ತಿಂಗಳಿಗೆ ಇಂತಿಷ್ಟು ಎಂದು ಅಧಿಕಾರಿಗಳು ದುಡ್ಡು ಕೊಡುತ್ತಾರಂತೆ. ಆಲಮಟ್ಟಿಯಲ್ಲಿ ಒಂದು ಡೈರಿಯನ್ನೇ ಅದಕ್ಕಾಗಿ ಇಟ್ಟಿದ್ದಾರಂತೆ. ತಿಂಗಳಿಗೊಮ್ಮೆ ಹೋಗಿ ಎರಡು ಸಾವಿರ ಮೂರು ಸಾವಿರ ಹಣ ಇಸಿದುಕೊಂಡು ಬಂದು ನಿಮ್ಮವರು ಹೊಟ್ಟೆ ಹೊರೆಯುತ್ತಿದ್ದಾರೆ. ನಾಚಿಗೆಗೆಟ್ಟವರಪ್ಪ? ಹೀಗಾದರೆ ಹೇಗೋ? ನಮ್ಮ ಊರು ಮಾತ್ರ ಹೀಗೆ ಆಗಿದೆಯೇ? ಎಲ್ಲ ಊರುಗಳೂ ಹೀಗೆಯೇ ಇವೆಯೇ? ಮತ್ತೆ ಸರ್ಕಾರ, ಅಷ್ಟು ಅಭಿವೃದ್ಧಿ ಆಗಿದೆ, ಇಷ್ಟು ಅಭಿವೃದ್ಧಿ ಆಗಿದೆ ಎಂದು ಹೇಳುತ್ತದೆಯಲ್ಲ? ಎಲ್ಲಿ ಆಗಿದೆ ಮಾರಾಯ? ಹೀಗೆಯೇ ಆದರೆ, ನಮ್ಮ ಊರುಗಳೆಲ್ಲ ನಾಶವಾಗಿ ಬಿಡುತ್ತವೆಯಲ್ಲವೊ?... ರಾಜಕಾರಣದಲ್ಲಿ ಇರುವ, ಅಧಿಕಾರದಲ್ಲಿ ಇರುವ ನಿನ್ನ ಗೆಳೆಯ-ಗೆಳತಿಯರ ಬಗ್ಗೆ ಹೇಳಲು ಬೇಕಾದಷ್ಟು ಇದೆ. ಹೇಳಲೇ?'

ಜತೆಗೆ ಕಲಿಯುವಾಗ ಪೆದ್ದಿಯ ಹಾಗೆ ಇದ್ದ ಈ ಹುಡುಗಿಗೆ ಇಷ್ಟು ಸಿಟ್ಟು ಹೇಗೆ ಬಂತು? ಗೊತ್ತಾಗಲಿಲ್ಲ. 'ಹೋಗಲಿ, ಎಷ್ಟು ದಿನಕ್ಕೊಮ್ಮೆ ನೀರು ಬರುತ್ತಿದೆ' ಎಂದು ಸುಮ್ಮನೆ ಕೇಳಿದೆ. 'ಅದೊಂದು ಸರಿ ಹೋಗಿದೆಯಪ್ಪ. ಈಗ ವಾರಕ್ಕೆ ಒಮ್ಮೆ ನೀರು ಬರುತ್ತಿದೆ. ಒಳ್ಳೆಯದಾಯಿತು' ಎಂದಳು. ನಗಬೇಕು ಅನಿಸಿತು. 'ವಾರಕ್ಕೆ ಒಮ್ಮೆ ನೀರು ಬರುವುದೇನು ದೊಡ್ಡ ವಿಷಯವೇ? ದಿನ ಬಿಟ್ಟು ದಿನ ನೀರು ಬರದೇ ಇದ್ದರೆ ಬೆಂಗಳೂರಿನಲ್ಲಿ ಹಾಹಾಕಾರ ಆಗುತ್ತದೆ ಗೊತ್ತೆ? ವಾರಕ್ಕೊಮ್ಮೆ ನೀರು ಬಂದರೆ ಅದು ನಮಗೆ ಮೊದಲ ಪುಟದ ಸುದ್ದಿ, ದೊಡ್ಡ ಹಲ್ಲಾಗುಲ್ಲಾ ಆಗುತ್ತದೆ. ನೋಡು, ರಾಜಕಾರಣಿಗಳು ನಿಮಗೆ ಹೇಗೆ ಮಂಕುಬೂದಿ ಹಾಕುತ್ತಾರೆ ಎಂದರೆ ಒಂಬತ್ತು ಕಿಲೋ ಮೀಟರ್ ದೂರ ಇರುವ ಮುದ್ದೇಬಿಹಾಳಕ್ಕೆ ಕೃಷ್ಣಾ ನದಿಯಿಂದ ನೀರು ಕೊಡಲು ಆಗುವುದಿಲ್ಲ. ಕೋಲಾರಕ್ಕೂ ಅದೇ ನೀರು ಕೊಡುತ್ತಾರಂತೆ ಗೊತ್ತಾ' ಎಂದು ನಾನು ನಗುತ್ತ ಕೇಳಿದೆ.

'ನಿನಗೆ ನಾನು ಫೋನ್ ಮಾಡಿದ್ದು ಅದಕ್ಕಾಗಿಯೇ ಮಾರಾಯ. ನನ್ನ ಮಗನ ಕಥೆ ಏನಾಗುತ್ತದೆ ಗೊತ್ತಿಲ್ಲ. ಅದು ನನ್ನ ಹಣೆಬರಹ. ನೀವೆಲ್ಲ ಬೆಂಗಳೂರಿನ ಬಗ್ಗೆ ಮಾತ್ರ ಯೋಚನೆ ಮಾಡಿದರೆ ನಾವು ಉಳಿಯುವುದು ಕಷ್ಟ ರಾಜಕಾರಣಿಗಳಿಗೆ, ಅಧಿಕಾರಿಗಳಿಗೆ ನಮ್ಮ ಕಡೆ ಗಮನ ಇಲ್ಲ. ನೀವೂ ನಮ್ಮನ್ನು ಮರೆತರೆ ನಮ್ಮ ಪಾಡು ಯಾರು

ಕೇಳುತ್ತಾರೆ? ನೀನು ಬರೆದುಬಿಟ್ಟರೆ ಏನಾದರೂ ಭಾರಿ ಬದಲಾವಣೆ ಆಗುತ್ತದೆ ಎಂದು ನನಗೆ ಅನಿಸಿಲ್ಲ. ಆದರೆ, ಅಧಿಕಾರದಲ್ಲಿ ಇದ್ದವರಿಗೆ ಸ್ವಲ್ಪ ನಾಚಿಕೆಯಾದೀತು ಎಂದು ಅನಿಸಿದೆ... ಬರೆಯುತ್ತೀಯಾ?...' ಆಕೆ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು : ತಂದೆಯಂಥ ಮಗನಿಗಾಗಿ; ತಾಯಿಯಂಥ ಊರಿಗಾಗಿ...

೧೯.೨.೧೨

೪೨ / ನಾಲ್ಕನೇ ಆಯಾಮ ೫ನೇ ಸಂಪುಟ

**ಮಾಧ್ಯಮಗಳಿಗೆ ಲಕ್ಷ್ಮಣ ರೇಖೆ :**

**ಹಾಕುವವರು ಯಾರು?**

ಒಂದು ಮನೆ. ಅಲ್ಲಿ ಒಬ್ಬ ಪುರುಷ ಮತ್ತು ಒಬ್ಬ ಮಹಿಳೆ ಕುಳಿತಿದ್ದಾರೆ. ಮಹಿಳೆಯರ ಒಂದು ಗುಂಪು ಏಕಾಏಕಿ ಆ ಮನೆಗೆ ನುಗ್ಗುತ್ತದೆ. ಮನೆಯ ಹಜಾರದಲ್ಲಿಯೇ ಸೋಫಾ ಮೇಲೆ ಕುಳಿತ, ಸಾಕಷ್ಟು ಸುಶಿಕ್ಷಿತ ಎನಿಸುವ ಪುರುಷನ ತಲೆಗೆ, ಕೆನ್ನೆಗೆ ಚೆನ್ನಾಗಿ ಥಳಿಸುತ್ತದೆ. ಅವರ ಪಕ್ಕದಲ್ಲಿ ಕುಳಿತ ಅಷ್ಟೇ ಸುಶಿಕ್ಷಿತಳಾದ ಮಹಿಳೆಗೂ ಅದೇ ಗುಂಪು ಮುಖ ಮೂತಿ ಎನ್ನದೆ ಬಾರಿಸುತ್ತದೆ. ಆಕೆಯ ಮುಂಗೂದಲನ್ನು ಹಿಡಿದು ಎಳೆದಾಡುತ್ತದೆ. ಇಬ್ಬರಿಗೂ ಬಾಯಿಗೆ ಬಂದಂತೆ ಬೈಯುತ್ತದೆ. ಕಾರಣ, ಅವರಿಬ್ಬರ ಮಧ್ಯೆ ಅನೈತಿಕ ಸಂಬಂಧ ಇದೆ ಎಂಬ ಆರೋಪ. ಪುರುಷನಿಗೆ ಒಬ್ಬ ಹೆಂಡತಿ ಇದ್ದಾಳೆ. ಮಹಿಳೆಗೆ ಒಬ್ಬ ಗಂಡ ಇದ್ದಾನೆ. ಏಟು ತಿಂದ ಪುರುಷ ಮತ್ತು ಮಹಿಳೆ, ತಮ್ಮತಮ್ಮ ಹೆಂಡತಿ ಮತ್ತು ಗಂಡನನ್ನು ತೊರೆದು ಈ ಮನೆಯಲ್ಲಿ ಸಹಜೀವನ ನಡೆಸುತ್ತಿದ್ದಾರೆ. ಹಲ್ಲೆ ಮಾಡಲು ಬಂದ ಗುಂಪಿನಲ್ಲಿ ಆ ಪುರುಷನ ಹೆಂಡತಿಯೂ ಇದ್ದಾಳೆ. ಆಕೆಯೇ ಈ ಗುಂಪನ್ನು ಕರೆದುಕೊಂಡು ಬಂದಿದ್ದಾಳೆ... ಇದು ಯಾವುದೇ ಮನೆಯಲ್ಲಿ ನಡೆಯಬಹುದಾದ ಒಂದು ಘಟನೆ.

ವಿಶೇಷವೇನು ಎಂದರೆ ಆ ಪುರುಷ ಮತ್ತು ಮಹಿಳೆಯ ಮೇಲೆ ಹಲ್ಲೆ ನಡೆಯುವುದನ್ನು ಟೀವಿ ವಾಹಿನಿಗಳು ಚಿತ್ರೀಕರಣ ಮಾಡಿಕೊಳ್ಳುತ್ತವೆ. ತಮ್ಮ ೨೪ ಗಂಟೆಗಳ ಸುದ್ದಿಯಲ್ಲಿ ಅಗ್ರ ವಾರ್ತೆಯಾಗಿ ಪ್ರಕಟ ಮಾಡುತ್ತವೆ. ಹಿನ್ನೆಲೆಯಲ್ಲಿ ಯಾವುದೋ ಚಿತ್ರದ ಕೆಟ್ಟ ಹಾಡೊಂದನ್ನೂ ಪ್ರಸಾರ ಮಾಡುತ್ತವೆ. ಇದು ಯಾವುದೋ ಒಂದು ಅವಧಿಯ ವಾರ್ತೆಯ ಒಂದು ತುಣುಕಾಗಿ ಇರುವುದಿಲ್ಲ. ದಿನದ ೨೪ ಗಂಟೆಗಳಲ್ಲಿ ಮತ್ತೆ ಮತ್ತೆ ಪ್ರಸಾರವಾಗುತ್ತದೆ. ಹೆಂಡತಿಯ ಜತೆಗೆ ಬಂದ ಗುಂಪು, ಪುರುಷ ಮತ್ತು ಅವರ ಜತೆಗೆ ಇದ್ದ ಮಹಿಳೆಗೆ ಬಾರಿಸಿದ ನಂತರ ವಿವೇಕನಗರ ಪೊಲೀಸರು ಸ್ಥಳಕ್ಕೆ ಬರುತ್ತಾರೆ. ಈ ಪುರುಷ ಮತ್ತು ಮಹಿಳೆಯನ್ನು ಠಾಣೆಗೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿಯೂ ಟೀವಿ ವಾಹಿನಿಗಳು ಬೆನ್ನಟ್ಟುತ್ತವೆ...

ಸುದ್ದಿ ಪತ್ರಿಕೆಗಳಿಗೂ ಟೀವಿ ವಾಹಿನಿಗಳಿಗೂ ಇರುವ ವ್ಯತ್ಯಾಸ ಇದು. ಘಟನೆ ನಡೆಯುವ ಸ್ಥಳದಲ್ಲಿ ಸುದ್ದಿ ಪತ್ರಿಕೆಗಳು ಇರಬೇಕಾಗಿಲ್ಲ. ಆದರೆ, ಟೀವಿ ವಾಹಿನಿಗಳು ಆ ಸ್ಥಳದಲ್ಲಿ ಇರಲೇಬೇಕು. ಪತ್ರಿಕೆಗಳು ಇಂಥ ಅಪರಾಧ ಘಟನೆಗಳು ನಡೆದ ಮೇಲೂ ಅದನ್ನು ವರದಿ ಮಾಡುತ್ತವೆ. ಹಾಗೆ ನೋಡಿದರೆ ನಡೆದ ಮೇಲೆಯೇ ಅವು ವರದಿ ಮಾಡುತ್ತವೆ. ಆದರೆ, ಟೀವಿ ವಾಹಿನಿಗಳು ಅಪರಾಧ ನಡೆಯುವ ಸ್ಥಳದಲ್ಲಿಯೇ ಇರಬೇಕು ಎಂದು ಬಯಸುತ್ತವೆ. ಜತೆಗೊಂದು ದೃಶ್ಯ ಇಲ್ಲದೇ ಇದ್ದರೆ ಅದು ಅವರಿಗೆ ಸುದ್ದಿ ಆಗಲು ಸಾಧ್ಯವೇ ಇಲ್ಲ. ಅವರಿಗೆ ಬೈಟ್ ಬೇಕೇ ಬೇಕು; ಬರೀ ಬೈಟ್ ಮಾತ್ರವಿದ್ದರೆ ಸಾಲದು ಈಗ ದೃಶ್ಯವೇ ಬೇಕು. ಇಲ್ಲವಾದರೆ, ಯಾರೋ ಒಬ್ಬ ಪುರುಷ ಯಾವುದೋ ಮಹಿಳೆಯ ಜತೆಗೆ ಸಂಬಂಧವಿಟ್ಟುಕೊಳ್ಳುತ್ತಾನೆ, ಆತನ ಹೆಂಡತಿ ತನ್ನ ಓಣಿಯ ಹೆಂಗಸರನ್ನೆಲ್ಲ ಸೇರಿಸಿ ಗಂಡನ ಮನೆಗೆ ದಾಳಿ ಇಡುತ್ತಾಳೆ; ಆಕೆಯ ಗಂಡ ಮತ್ತು ಆತನ ಜತೆಗೆ ಇದ್ದ ಹೆಂಗಸನ್ನು ಎಲ್ಲ ಸೇರಿ ಥಳಿಸುತ್ತಾರೆ. ಅಲ್ಲಿ ಟೀವಿ ವಾಹಿನಿಯವರಿಗೆ ಏನು ಕೆಲಸ? ಹೀಗೆ ಯಾರು ಯಾರೋ ಕಾನೂನನ್ನು ಕೈಗೆ ತೆಗೆದುಕೊಂಡು ಯಾರು ಯಾರನ್ನೋ ಹೊಡೆಯುವುದನ್ನು ನಿರ್ವಿಕಾರವಾಗಿ ಚಿತ್ರಿಸಬಹುದೇ? ಅದೇ ಗುಂಪಿನಲ್ಲಿ ಇದ್ದ ಒಬ್ಬ ಮಹಿಳೆ, ಪುರುಷನ ತಲೆಯ ಮೇಲೆ ಕಲ್ಲು ಎತ್ತಿ ಹಾಕಿದರೂ ಟೀವಿ ವಾಹಿನಿಗಳು ಅದನ್ನೂ ಅಷ್ಟೇ ನಿರ್ವಿಕಾರವಾಗಿ ಚಿತ್ರೀಕರಿಸಿಕೊಳ್ಳುತ್ತವೆಯೇ? ಚಿತ್ರೀಕರಿಸಿಕೊಳ್ಳಬಹುದೇ?

ಆ ಜಾಗಕ್ಕೆ ಪೊಲೀಸರು ಬರುತ್ತಾರೆ ಎಂದರೆ ಅಲ್ಲಿ ಒಂದು ಅಪರಾಧ ಕೃತ್ಯ ನಡೆದಿದೆ ಎಂದೇ ಅರ್ಥ. ಹಾಗಾದರೆ ಅಪರಾಧ ನಡೆಯುವ ಸ್ಥಳಕ್ಕೆ ಟೀವಿ ವಾಹಿನಿಯವರು ಹೋಗಿ ಅದನ್ನು ಚಿತ್ರೀಕರಿಸಬಹುದೇ? ಭಾರತೀಯ

ದಂಡ ಸಂಹಿತೆಯಲ್ಲಿ ಅಪರಾಧಕ್ಕೆ ಎಷ್ಟು ಶಿಕ್ಷೆಯಿದೆಯೋ ಅಪರಾಧಕ್ಕೆ ಕುಮ್ಮಕ್ಕು ಕೊಡುವುದಕ್ಕೂ ಅಷ್ಟೇ ಶಿಕ್ಷೆ ಇದೆ. ವಾಹಿನಿಯವರು ಚಿತ್ರೀಕರಿಸಿಕೊಳ್ಳುತ್ತಾರೆ ಎಂದರೆ ನಮ್ಮ ರೋಷಾವೇಶ ಇದ್ದಕಿದ್ದಂತೆ ಹಲವು ಮಡಿ ಹೆಚ್ಚಾಗುತ್ತದೆ. ಒಂದು ಏಟು ಹಾಕುವಲ್ಲಿ ನಾಲ್ಕು ಏಟು ಹಾಕುತ್ತೇವೆ. ನಾಲ್ಕು ಏಟು ಎಂಟು ಏಟು ಆದರೂ ಆಗಬಹುದು. ಬರೀ ಕೈಯಿಂದ ಹೊಡೆದರೆ ಸಾಲದು ಎಂದು ಕೈಗೆ ಇನ್ನೇನಾದರೂ ಸಿಕ್ಕರೆ ಅದನ್ನೂ ಬಳಸಬಹುದು! ಹೀಗೆ 'ಪೌರುಷ' ಏರುತ್ತ ಹೋಗಿ ಏನಾದರೂ ಹೆಚ್ಚ ಕಡಿಮೆಯಾದರೆ ಅದಕ್ಕೆ ವಾಹಿನಿಯವರು

ಪ್ರೇರಣೆ ಕೊಟ್ಟಂತೆಯೇ ಅಲ್ಲವೇ? ವಾಹಿನಿಗಳ ಮುಂದೆಯೇ ಆ ಹೆಂಡತಿ ತನ್ನ ಸೇಡನ್ನು ತೀರಿಸಿಕೊಳ್ಳಲು ಏಕೆ ಬಯಸುತ್ತಾಳೆ? ಹಾಗಾದರೂ ತನ್ನ ಗಂಡನ ಮತ್ತು ಆತನ ಜತೆಗೆ ಇರುವ ಹೆಣ್ಣಿನ ಮಾನ ಹೋಗಲಿ ಎಂದು ಆಕೆ ಬಯಸುತ್ತಾಳೆಯೇ? ಆಕೆಗೆ ನೆಲದ ಕಾನೂನಿನಲ್ಲಿ ನಂಬಿಕೆ ಹೊರಟು ಹೋಗಿದೆಯೇ? ಆಕೆಗೆ ನೆಲದ ಕಾನೂನಿನಲ್ಲಿ ನಂಬಿಕೆ ಕಡಿಮೆ ಆಗಿದೆ ಎಂದೇ ಅಂದುಕೊಳ್ಳೋಣ. ಮಾಧ್ಯಮದವರಾಗಿ ನಾವೂ ನಂಬಿಕೆ ಕಳೆದುಕೊಳ್ಳುವುದೇ? ಯಾವುದಾದರೂ ಪತ್ರಿಕೆಗೆ ಒಬ್ಬ ಹೆಣ್ಣು ಮಗಳು ಫೋನ್ ಮಾಡಿ ತನ್ನ ಗಂಡ ಅನೈತಿಕ ಸಂಬಂಧವಿಟ್ಟುಕೊಂಡಿದ್ದಾನೆ, ಅವರ ಚಿತ್ರ ತೆಗೆದುಕೊಂಡು ಪತ್ರಿಕೆಯಲ್ಲಿ ಹಾಕಿರಿ ಎಂದರೆ ನಾವು, ವಾಹಿನಿಯವರು ಮಾಡಿದಂತೆ ಮಾಡುತ್ತೇವೆಯೇ?

ಗಂಡು ಹೆಣ್ಣಿನ ನಡುವಿನ ಇಂಥ ಸಂಬಂಧ ರೋಚಕವಾಗಿರುತ್ತದೆ. ಅದು ವಾಹಿನಿಗಳಿಗೆ ರೋಚಕ ಸಾಮಗ್ರಿ ಎಂದು ಖಂಡಿತ ಅನಿಸುತ್ತದೆ. ವಾಹಿನಿಗಳು ರೋಚಕತೆಯ ಬೆನ್ನು ಹತ್ತಿರುವುದರಿಂದಲೇ ಜನರೂ ಅವರನ್ನು ಕರೆಸಿ ಅವರ ಮುಂದೆಯೇ 'ನ್ಯಾಯ ಇತ್ಯರ್ಥ' ಮಾಡುತ್ತಿರುವಂತಿದೆ. ಮೈಸೂರು ವಿಶ್ವವಿದ್ಯಾಲಯದಲ್ಲಿ ಶಿವಬಸವಯ್ಯ ಎಂಬ ಪ್ರಾಧ್ಯಾಪಕರು ತಮ್ಮ ಪಿಎಚ್.ಡಿ. ವಿದ್ಯಾರ್ಥಿನಿಯೊಬ್ಬರ ಜತೆಗೆ ಅನುಚಿತವಾಗಿ ನಡೆದುಕೊಂಡ ಘಟನೆ ಬಹಿರಂಗವಾಗುತ್ತಿದ್ದಂತೆಯೇ ಅಂಥದೇ ಇನ್ನೊಂದು ಘಟನೆಯ ಬೆನ್ನು ಹತ್ತಿ ಒಬ್ಬ ಅಧ್ಯಾಪಕ ಮತ್ತು ಆತನ ವಿದ್ಯಾರ್ಥಿನಿ ಜತೆಗಿದ್ದ ಅನೈತಿಕ ಸಂಬಂಧವನ್ನು ವಾಹಿನಿಗಳು ಬಯಲಿಗೆ ಎಳೆದುವು. ಅದು ವಾಹಿನಿಗಳಿಗೆ ಹೇಗೆ ಗೊತ್ತಾಯಿತು ಎಂಬುದು ವಿಸ್ಮಯ! ಆ ಅಧ್ಯಾಪಕನ ಹೆಂಡತಿಯೇ ವಾಹಿನಿಗಳಿಗೆ ಮಾಹಿತಿ ಕೊಟ್ಟಿರಬೇಕು. ಆಕೆ, ಟೀವಿ ವಾಹಿನಿಗಳ ಜತೆಗೆ ಗಂಡನ ಮನೆಗೆ ಹೋಗಿ ಅವನ ಮನೆಯ ಮುಂದೆ ಬಿದ್ದು ಹೊರಳಾಡಿ ಅತ್ತು ರಂಪಾಟ ಮಾಡಿದ್ದನ್ನು ವಾಹಿನಿಗಳು ಸಂಭ್ರಮದಿಂದ ಗಂಟೆಗಟ್ಟಲೆ ಪ್ರಸಾರ ಮಾಡಿದುವು. ಅಧ್ಯಾಪಕನ ಜತೆಗೆ ಸಂಬಂಧವಿಟ್ಟುಕೊಂಡಿದ್ದ ವಿದ್ಯಾರ್ಥಿನಿಯ ಮನೆಗೂ ಹೋದುವು. ವಾಹಿನಿಗಳ ಜತೆಗೆ ಮಾತನಾಡಲು ನಿರಾಕರಿಸಿದ ವಿದ್ಯಾರ್ಥಿನಿ ಎರಡೂ ಕೈ ಜೋಡಿಸಿ ತನ್ನನ್ನು ತನ್ನ ಪಾಡಿಗೆ ಬಿಟ್ಟು ಬಿಡಲು ಗೋಗರೆಯುತ್ತಿದ್ದಳು. ಮುಂದೆ ಏನಾಯಿತು ಎಂದು ಯಾರಿಗೂ ಗೊತ್ತಿಲ್ಲ. ಮಾಧ್ಯಮಗಳು 'ಟ್ರಯಲ್' ಮಾಡಲು ನಿಂತಾಗ ಆಗುವುದು ಹೀಗೆಯೇ. ಅದು ಒಂದು ಕ್ಷಣದಲ್ಲಿ ಮುಗಿದು ಹೋಗುತ್ತದೆ. ಅಪರಾಧಿ ಯಾರು, ನಿರಪರಾಧಿ ಯಾರು ಎಂಬುದನ್ನು ಒಂದು ಕ್ಷಣದಲ್ಲಿ ನಿರ್ಣಯ ಮಾಡಿ, ಹಣೆಪಟ್ಟಿ ಹಚ್ಚಿ ಅಲ್ಲಿಂದ ಕಾಲು ತೆಗೆದು ಬಿಡುತ್ತೇವೆ. ಜೀವನ ಅಷ್ಟು ಸುಲಭವಾಗಿರುವುದಿಲ್ಲ. ಆದರೆ, ಅದನ್ನು ಅರ್ಥ ಮಾಡಿಕೊಳ್ಳುವಷ್ಟು ವ್ಯವಧಾನ ನಮಗೆ ಇರುವುದಿಲ್ಲ.

ಒಂದು ಸಾರಿ 'ಟ್ರಯಲ್' ಮಾಡುವ ನ್ಯಾಯಾಧೀಶನ ಸ್ಥಾನದಲ್ಲಿ ನಾವು ಕುಳಿತು ಬಿಟ್ಟರೆ ತೀರ್ಪು ಕೊಡುವುದು ಕಷ್ಟವೇನೂ ಅಲ್ಲ. ನಮ್ಮ ಭಾಷೆ ಬದಲಾಗಿ ಬಿಡುತ್ತದೆ. ನಮ್ಮ ವಾಹಿನಿಗಳ ಯಾವ ಹೊತ್ತಿನ ಸುದ್ದಿಯನ್ನು ನೀವು ನೋಡಿದರೂ ಈ ಪೂರ್ವಗ್ರಹೀತ ನಮಗೆ ಗೊತ್ತಾಗುತ್ತದೆ. ವಾರ್ತಾ ವಾಚಕಿ ಮೊದಲೇ ತೀರ್ಮಾನಕ್ಕೆ ಬಂದು ಅದಕ್ಕೆ ಪೂರಕವಾಗಿಯೇ ಸುದ್ದಿಯನ್ನು ರೂಪಿಸುತ್ತ ಹೋಗುತ್ತಾಳೆ. ಮಾಧ್ಯಮ ಕ್ಷೇತ್ರದಲ್ಲಿ ಕೆಲಸ ಮಾಡಿದ ನಮ್ಮ ಹಿರಿಯರು ಬಹು ಹಿಂದೆಯೇ 'ಸಂಗತಿ ಪವಿತ್ರ, ಟೀಕು

ಸ್ವತಂತ್ರ' ಎಂದರು. ಈಗ ಸಂಗತಿ ಮತ್ತು ಟೀಕುವಿನ ನಡುವಿನ ಅಂತರ ಬಹಳ ಕಡಿಮೆಯಾಗುತ್ತಿದೆ. ವಾಹಿನಿಗಳ ಪ್ರಭಾವ ನೇರವಾಗಿ ಪತ್ರಿಕೆಗಳ ಮೇಲೂ ಆಗಿದೆ. ಈಗ ಬಹುತೇಕ ಪತ್ರಿಕೆಗಳ ಸುದ್ದಿ ಟೀಕುವೇ ಆಗಿರುತ್ತದೆ. ಅದನ್ನು ಸುಲಭವಾಗಿ ಸಂಪಾದಕೀಯ ಎಂದು ಬಣ್ಣಿಸಬಹುದು. ಸಂಗತಿ ನೇರವಾಗಿ, ನಿರ್ದುಷ್ಟವಾಗಿ ಇರಬೇಕು. ಸಂಪಾದಕೀಯದಲ್ಲಿ ಅಭಿಪ್ರಾಯ ಇರಬೇಕು. ಸಂಪಾದಕೀಯ ಓದಿ ಜನರು ಸಂಗತಿಯನ್ನು ಅರ್ಥೈಸಿಕೊಳ್ಳುವುದನ್ನು ಕಲಿಯಬೇಕು. ಸಂಗತಿಯನ್ನೇ ಓದಿ ಅಲ್ಲ.

ಒಂದು ಸಾರಿ ಸುದ್ದಿಯಲ್ಲಿ ಹೀಗೆ ಟೀಕು ಸೇರಿಕೊಳ್ಳುತ್ತ ಹೋದರೆ ಆಗ ನಮ್ಮ ಭಾಷೆ ಮತ್ತೆ ಬದಲಾಗುತ್ತದೆ. ಸರಳ, ನೇರ ಭಾಷೆ ಸಾಲದು ಎನಿಸತೊಡಗುತ್ತದೆ. ಟ್ಯಾಬ್ಲಾಯ್ಡ್ ಭಾಷೆಯ ಬಳಕೆಗೆ ನಾವು ಜಾರಿಕೊಳ್ಳುವುದು ಇಂಥದೇ ಸಂದರ್ಭದಲ್ಲಿ, ಟ್ಯಾಬ್ಲಾಯ್ಡುಗಳಿಗೆ ತಮ್ಮದೇ ಜರೂರುಗಳು ಇರುತ್ತವೆ. ಅವುಗಳ ಭಾಷೆ ಬೇರೆ, ನಿಲುವು ಬೇರೆ. ಅದು ಹಾಗೆಯೇ ಇರಬೇಕು. ದೈನಿಕಗಳ ವಿಚಾರ ಹಾಗಲ್ಲ. ಅವುಗಳ ಭಾಷೆ ಬೇರೆ, ನಿಲುವು ಬೇರೆ. ಈಗ ಈ ಅಂತರ ಕಡಿಮೆಯಾಗುತ್ತಿದೆ. ಹಾಗೆ ಆದರೆ, ದೈನಿಕಗಳ ಬದಲು ಟ್ಯಾಬ್ಲಾಯ್ಡುಗಳೇ ಇರಬಹುದಲ್ಲ! ಆಗ ಜನರಿಗೆ ನಾವು ಆಯ್ಕೆ ಕೊಟ್ಟಂತೆ ಆಗುವುದಿಲ್ಲ. ಅವರು ದೈನಿಕಗಳನ್ನು ಕೊಂಡು ಓದಬೇಕಾದ ಅಗತ್ಯವಿಲ್ಲ. ವಾಹಿನಿಗಳ ಜತೆಗೆ ಪೈಪೋಟಿ ಮಾಡುತ್ತ ಮಾಡುತ್ತ ಬರೀ ಸುದ್ದಿಯ ಭಾಷೆ ಮಾತ್ರ ಬದಲಾಗುತ್ತಿಲ್ಲ. ಪತ್ರಿಕೆಗಳ ಲೀಡ್ ಸುದ್ದಿಯ ಶೀರ್ಷಿಕೆಯಲ್ಲಿಯೂ ರೋಚಕತೆ ಢಾಳವಾಗಿ ಗೋಚರಿಸತೊಡಗಿದೆ. ಅದರಲ್ಲಿ ಸೃಜನಶೀಲತೆಗಿಂತ ಕಸರತ್ತು ಕಾಣತೊಡಗಿದೆ. ನಾವು ಮೆಲುದನಿಯಲ್ಲಿ ಮಾತನಾಡುವ ಬದಲು ಅರಚತೊಡಗಿದ್ದೇವೆ ಅನಿಸತೊಡಗಿದೆ. ಬರೀ ಲೀಡ್ ಸುದ್ದಿಯ ಶೀರ್ಷಿಕೆಯಲ್ಲಿ ಮಾತ್ರ ಈ ಕಸರತ್ತು ಅಥವಾ 'ಸೃಜನಶೀಲತೆ' ಇದ್ದರೆ ಸಾಕೇ? ಒಳಪುಟಗಳಲ್ಲಿ ಅದೇ ಕಸರತ್ತು ಕಾಣುವುದಿಲ್ಲ. ಅಂದರೆ ಬರೀ ಮೊದಲ ಪುಟದ ಲೀಡ್ ಸುದ್ದಿಯ ಶೀರ್ಷಿಕೆ ಮಾತ್ರ ನೋಡಿ ಜನರು ಪತ್ರಿಕೆಗಳನ್ನು ಕೊಳ್ಳಬೇಕೇ? ನಾವು ಹಾಗೆಯೇ ಯೋಚಿಸುತ್ತ ಇರುವಂತೆ ಕಾಣುತ್ತದೆ. ಆಗ ಸಂಜೆ ಪತ್ರಿಕೆಗಳಿಗೂ ನಮಗೂ ವ್ಯತ್ಯಾಸ ಇರುವುದಿಲ್ಲ!

ದೈನಿಕಗಳು ವಾಹಿನಿಗಿಂತ ಬೇರೆ. ವಾಹಿನಿಗಳೂ ಈಗಿಗಿಂತ ಭಿನ್ನವಾಗಿ ಇರಲು ಸಾಧ್ಯವಿದೆ. 'ಪ್ರದರ್ಶನ'ದ ಬೆನ್ನು ಹತ್ತಿದಾಗ ಹೀಗೆಯೇ ಆಗುತ್ತದೆ. ಎಷ್ಟು ಪ್ರದರ್ಶನ ಮಾಡಿದರೂ ಸಾಲದು ಎನಿಸುತ್ತದೆ. ಜನರ ಅಭಿರುಚಿ ಕೂಡ ಹಾಳಾಗಿ ಬಿಡಬಹುದು. ತೆಲುಗಿನಲ್ಲಿ ಈ ಸಮಸ್ಯೆ ಇದ್ದಂತೆ ಕಾಣುತ್ತದೆ. ಮೊದಲು ಸಿನಿಮಾಗಳಲ್ಲಿ 'ಕ್ಯಾಬರೆ' ಡಾನ್ಸ್ ಮಾಡುವ ಪಾತ್ರ ಬೇರೆಯದೇ ಆಗಿತ್ತು. ಬರು ಬರುತ್ತ ಈಗ ನಾಯಕಿಯೇ ಐಟಂ ಸಾಂಗಿಗೆ ಹೊಟ್ಟೆ-ಎದೆ ಬಿಟ್ಟುಕೊಂಡು

ಕುಣಿಯುತ್ತಿದ್ದಾಳೆ. ಆದರೂ ನಮಗೆ ಸಾಕು ಎನಿಸಿಲ್ಲ. 'ಕ್ಯಾಬರೆ' ಡಾನ್ಸ್ ಮಾಡುತ್ತಿದ್ದ ಪಾತ್ರಕ್ಕೆ ಅದು ಉಪಜೀವನದ ದಾರಿಯಾಗಿತ್ತು. ನಾಯಕಿಗೆ ಅದು ಉಪಭೋಗದ ದಾರಿ. ಪ್ರೇಕ್ಷಕನಿಗೆ ಅದು ಯಾವ ದಾರಿ? ಗೊತ್ತಿಲ್ಲ. ಪ್ರಾದೇಶಿಕ ಭಾಷೆಗಳ ವಾಹಿನಿಗಳಲ್ಲಿ ಕಾಣುತ್ತಿರುವ ಈ ಅಪಭ್ರಂಶದಂಥ ನಡವಳಿಕೆ ಇಂಗ್ಲಿಷ್ ವಾಹಿನಿಗಳಲ್ಲಿ ಕಾಣುವುದಿಲ್ಲ. ಅಲ್ಲಿಯೂ ಕೂಗಾಟ ಜಾಸ್ತಿ, ರೋಚಕತೆಯೂ ಇರುತ್ತದೆ ಎಂದು ಅನೇಕ ಸಾರಿ ಅನಿಸುತ್ತದೆ. ಆದರೆ, ಅವರು ಪ್ರಾದೇಶಿಕ ವಾಹಿನಿಗಳ ಹಾಗೆ ಕಾಮ, ಕ್ರೌರ್ಯ, ಹಿಂಸೆ, ಅಪರಾಧ ಮತ್ತು ಮೂಢನಂಬಿಕೆಯ ಬೆನ್ನು ಹತ್ತಿದಂತೆ

ಕಾಣುವುದಿಲ್ಲ. ನಮ್ಮ ಟೀವಿ ವಾಹಿನಿಗಳಿಗೆ ಇನ್ನೂ ಹದಿ ಹರಯ. 'ವಯಸ್ಕ ಆಗುತ್ತ ಅವು ಕೂಡ ಆರಂಭದ ಈ ಸಮಸ್ಯೆಗಳನ್ನು ಬಗೆ ಹರಿಸಿಕೊಳ್ಳಬಹುದು. ಇಲ್ಲವಾದರೆ, ಜನರ ಕೈಯಲ್ಲಿ ರಿಮೋಟ್ ಇದ್ದೇ ಇರುತ್ತದೆ. ಟಿಆಪಿ ಗಳಿಸಬೇಕಾದರೆ ಜನರು ರಿಮೋಟ್‌ನ 'ಆಫ್' ಗುಂಡಿಯನ್ನು ಒತ್ತದಂತೆ ನೋಡಿಕೊಳ್ಳಬೇಕು. ನಮಗೆ ನಾವೇ ಲಕ್ಷಣ ರೇಖೆ ಹಾಕಿಕೊಂಡರೆ ಈ ಸಮಸ್ಯೆ ಇರುವುದಿಲ್ಲ. ಮೂವರು ಮಾಜಿ ಸಚಿವರ ಬ್ಲೂ ಫಿಲಂ ವೀಕ್ಷಣೆ ಹಗರಣದಲ್ಲಿ ನಾವು ಪ್ರದರ್ಶನ ಪಿಪಾಸೆಗೆ ಬಲಿಯಾದೆವು; ಲಕ್ಷಣ ರೇಖೆಯನ್ನು ದಾಟಿದೆವು ಎಂಬ 'ಗೂಬೆ' ಈಗ ನಮ್ಮ ತಲೆಯ ಮೇಲೆ ಕುಳಿತಿದೆ! ಅದು ನಿರಾಧಾರವಾದುದೇನೂ ಅಲ್ಲ!

೧೬.೦೨.೧೨

**ಸಂದರ್ಶನಕ್ಕೆ ಹೋಗುವವರಿಗೆ**

**ಹೇಳಲೇಬೇಕು ಅನಿಸಿದ್ದು**

ನೌಕರಿಗಾಗಿ ಅಕ್ಷರಶಃ ನಾಯಿಯ ಹಾಗೆ ಅಲೆದ ನಮಗೆ ಸಂದರ್ಶನಕ್ಕೆ ಕರೆ ಬರುವುದೇ ಒಂದು ದೊಡ್ಡ ಸಂಗತಿಯಾಗಿತ್ತು. ಅರ್ಜಿ ಹಾಕುವುದರಲ್ಲಿಯಂತೂ ನಮ್ಮ ವಾರಿಗೆಯವರು ಎತ್ತಿದ ಕೈಯಾಗಿದ್ದರು. ಪತ್ರಿಕೆಗಳಲ್ಲಿ ಬರುವ ಎಲ್ಲ ನೌಕರಿಗಳಿಗೂ, ನಮ್ಮ ವಿದ್ಯಾರ್ಹತೆಗೆ ಹೊಂದಾಣಿಕೆ ಆಗುವಂತಿದ್ದರೆ ಅರ್ಜಿ ಹಾಕಿಯೇ ಬಿಡುತ್ತಿದ್ದೆವು. ಸಂದರ್ಶನಕ್ಕೆ ಕರೆ ಬರುತ್ತದೆ ಎಂದು ಅಂಚೆ ಕಚೇರಿಗೆ ನಿತ್ಯ ಅಲೆಯುತ್ತಿದ್ದೆವು. ಅಂಚೆಯಣ್ಣನಿಗೆ ಹೇಳಿ ಇಡುತ್ತಿದ್ದೆವು. ಸಂದರ್ಶನಕ್ಕೆ ಕರೆ ಬಂದರೆ ಅದು ಜೀವನ್ಮರಣದ ಪ್ರಶ್ನೆ ಎನ್ನುವಂತೆ ಸಿದ್ಧರಾಗುತ್ತಿದ್ದೆವು.

ಕಳೆದ ವಾರ ನಾನು ಮತ್ತು ನನ್ನ ಸಂಪಾದಕರು ಎರಡು ಭಿನ್ನ ಹುದ್ದೆಗಳಿಗೆ ಸಂದರ್ಶನ ಮಾಡುತ್ತಿದ್ದಾಗ ನನ್ನ ನಿರುದ್ಯೋಗ ಜೀವನದ ಗಳಿಗೆಗಳೆಲ್ಲ ನೆನಪಾದುವು. ಈಗಿನ ಹುಡುಗ- ಹುಡುಗಿಯರು ಜೀವನದ ಉದ್ದಕ್ಕೂ ಅನ್ನ ಕೊಡುವ ಒಂದು ನೌಕರಿಗೆ ಸಂದರ್ಶನಕ್ಕೆ ಬರುವಾಗಲೂ ಏಕೆ ಸಿದ್ಧರಾಗಿರುವುದಿಲ್ಲ ಎಂದು ಚಿಂತೆಯಾಯಿತು. ನೂರಾರು ಸಂದರ್ಶನ ಮಾಡಿದ ನನ್ನ ಸಂಪಾದಕರಿಗೂ ಹಾಗೆಯೇ ಅನಿಸಿತು. 'ಈ ಮಕ್ಕಳಿಗೆ ಕಾಲೇಜಿನಲ್ಲಿ ಏನೂ ಹೇಳಿಕೊಡುವುದಿಲ್ಲವೇ' ಎಂದು ಅವರು ನನ್ನನ್ನೇ ಕೇಳಿದರು.

ಸಂದರ್ಶನದಲ್ಲಿ ಹೇಗೆ ಪಾಲುಗೊಳ್ಳಬೇಕು ಎಂಬ ಕುರಿತು ನೂರಾರು ಪುಸ್ತಕಗಳು ಬಂದಿರಬಹುದು. ಸಾವಿರಾರು ಲೇಖನಗಳೂ ಪ್ರಕಟವಾಗಿರಬಹುದು. ನಮ್ಮ ವಿದ್ಯಾರ್ಥಿಗಳು ಅವುಗಳನ್ನು ಗಮನಿಸುವುದಿಲ್ಲ ಎನಿಸುತ್ತದೆ. ಕನಿಷ್ಠ ಪಕ್ಷ ನಮ್ಮ ಎದುರು ಹಾಜರಾದ ಅಭ್ಯರ್ಥಿಗಳ ಪೈಕಿ ಬಹುತೇಕರಿಗೆ ಆ ಸಮಸ್ಯೆ ಇತ್ತು ಎಂದು ಅನಿಸಿತು. ಕೆಲವು ತಿಂಗಳ ಹಿಂದೆ ಪತ್ರಕರ್ತರ ನೇಮಕದ ಸಮಯದಲ್ಲಿಯೂ ನಮಗೆ ಇದೇ ಅನುಭವವಾಗಿತ್ತು. ಆಗ ಭಾವೀ ಪತ್ರಕರ್ತರಿಗೆ ಕೆಲವು ಕಿವಿ ಮಾತು ಹೇಳಿದ್ದೆ. ಪ್ರತಿ ಸಾರಿ ಇಂಥ ಸಂದರ್ಶನ ನಡೆದಾಗಲೂ ನಾನು ಹೀಗೆ ಏನಾದರೂ ಬರೆಯಬಹುದು ಎಂದು ನನ್ನ ವಾರಿಗೆಯ ಗೆಳೆಯರು ಕೀಟಲೆಯ ಮಾತು ಆಡುತ್ತಾರೆ. ಅವರು ಕೀಟಲೆ ಮಾಡಿದರೂ ನಮ್ಮ ವಿದ್ಯಾರ್ಥಿಗಳ ತಿಳಿವಳಿಕೆ ಕಡಿಮೆ ಇದೆ ಎಂದು ನನಗೆ ಮತ್ತೆ ಈ ಸಾರಿಯ ಸಂದರ್ಶನದಲ್ಲಿಯೂ ಅನಿಸಿತು. ಈ ಸಾರಿಯ ಸಂದರ್ಶನದಲ್ಲಿ ನಾನು ಕಂಡ ಕೆಲವು ಸಂಗತಿಗಳನ್ನು ಕುರಿತು ಬರೆದರೆ ಯುವಕ- ಯುವತಿಯರಿಗೆ ಸುಧಾರಿಸಿಕೊಳ್ಳಲು ಅನುಕೂಲವಾದೀತು ಎಂಬ ಅನಿಸಿಕೆಯಲ್ಲಿಯೇ ಈ ಅಂಶಗಳನ್ನು ಇಲ್ಲಿ ಬರೆದಿದ್ದೇನೆ.

ನೌಕರಿಯ ಸಂದರ್ಶನ ನಿಮ್ಮ ಜೀವನವನ್ನೇ ರೂಪಿಸಬಹುದು. ಒಂದು ಒಳ್ಳೆಯ ಸಂಸ್ಥೆಯಲ್ಲಿ ಕೆಲಸ ಸಿಗುವುದು ಸುಲಭವಲ್ಲ. ಸಂದರ್ಶನಕ್ಕೆ ನಿಮಗೆ ಕರೆ ಬಂದರೆ ನೀವು ಅದನ್ನು ನೌಕರಿಯಾಗಿ ಪರಿವರ್ತಿಸಿಕೊಳ್ಳಬೇಕು. ಅದಕ್ಕೆ ಬಹಳ ಕಷ್ಟಪಡಬೇಕಿಲ್ಲ. ಸಂದರ್ಶನಕ್ಕೆ ಬರುವಾಗ ನೀವು ಢಾಳವಾದ, ಕಣ್ಣಿಗೆ ರಾಚುವಂಥ ಬಣ್ಣ ಬಣ್ಣದ ಬಟ್ಟೆಗಳನ್ನು ಹಾಕಿಕೊಳ್ಳಬೇಡಿ. ಬಿಳಿ, ತಿಳಿ ಬಣ್ಣದ ಬಟ್ಟೆಗಳು ಯಾವಾಗಲೂ ನಿಮ್ಮ ವ್ಯಕ್ತಿತ್ವವನ್ನು ಸೌಮ್ಯವಾಗಿ ಬಿಂಬಿಸುತ್ತವೆ. ದಟ್ಟ ನೀಲಿ, ಹಸಿರು, ಕೆಂಪು ಅಥವಾ ಹಳದಿ ಬಣ್ಣದ, ಚೆಕ್ಸ್ ಇರುವ ಅಂಗಿಗಳು ಸಂದರ್ಶಕರಿಗೆ ಮೆಚ್ಚುಗೆಯಾಗದೇ ಹೋಗಬಹುದು. ಫಾರ್ಮಲ್ ಪ್ಯಾಂಟುಗಳನ್ನು ಧರಿಸಿ, ಕಾಲು ತುಂಬ ಕಿಸೆ ಇರುವ ಪ್ಯಾಂಟುಗಳು ಬೇಡ. ಸಾಧ್ಯವಾದರೆ, ಶೂಗಳನ್ನು ಚೆನ್ನಾಗಿ ಪಾಲಿಷ್ ಮಾಡಿ ಹಾಕಿಕೊಂಡು ಬನ್ನಿ. ಇಲ್ಲವಾದರೆ ಚಪ್ಪಲಿ, ಸ್ಯಾಂಡಲ್ ಹಾಕಿಕೊಂಡು ಬಂದರೆ ತಪ್ಪೇನೂ ಇಲ್ಲ. ಹವಾಯಿ ಚಪ್ಪಲಿ ಮಾತ್ರ ಹಾಕಿಕೊಂಡು ಬರಬೇಡಿ.

ನಿಮ್ಮ ಬಗ್ಗೆ ಹೇಳಿಕೊಳ್ಳುವಾಗ ನಿಮ್ಮ ಊರು ಎಷ್ಟೇ ಚಿಕ್ಕದಾಗಿದ್ದರೂ, ಹಳ್ಳಿಯಾಗಿದ್ದರೂ ನಾಚಿಕೊಳ್ಳದೇ ಹೇಳಿ, ಅದು ಸಂದರ್ಶಕರಿಗೆ ಗೊತ್ತಿರಲಿಕ್ಕಿಲ್ಲ ಎಂದು ನೀವು ಅಂದುಕೊಳ್ಳುವುದು ಬೇಡ. ಹಾಗೆ ಹೇಳುವಾಗ ಅದು ಎಲ್ಲಿ ಇದೆ, ಯಾವ ತಾಲ್ಲೂಕಿನಲ್ಲಿ ಇದೆ ಎಂದು ಬೇಕಾದರೆ ಹೇಳಿರಿ. ಸುಮ್ಮನೇ ಮೈಸೂರು, ತುಮಕೂರು ಎಂದು

ಹೇಳುವುದು ಬೇಡ. ನಿಮ್ಮ ಕುಟುಂಬದ ಬಗ್ಗೆ ಹೇಳುವಾಗಲೂ ನಿಮ್ಮ ತಂದೆ ತಾಯಿ ಬಡವರಾಗಿದ್ದರೆ ಹೇಳಲು ಸಂಕೋಚ ಬೇಡ. ಅವರು ಕಷ್ಟಪಡುತ್ತಿದ್ದರೆ ಅದನ್ನೂ ಹೇಳಿರಿ. ನಿಮ್ಮ ತಂದೆ ಕೂಲಿ ಮಾಡುತ್ತಿದ್ದರೆ ಹೇಳಲು ಹಿಂಜರಿಯಬೇಡಿ. ನಿಮ್ಮ ಶಿಕ್ಷಣದ ಬಗ್ಗೆ ಹೇಳುವಾಗ ಕ್ರಮವಾಗಿ ಹೇಳಿರಿ. ಮೊದಲು ನಿಮ್ಮ ಪದವಿ ಬಗ್ಗೆ ಹೇಳಿ ನಂತರ ನಿಮ್ಮ ಪ್ರಾಥಮಿಕ ಶಿಕ್ಷಣದ ಬಗ್ಗೆ ಹೇಳಬೇಡಿ. ನೀವು ಮಾತೃಭಾಷೆ ಮಾಧ್ಯಮದಲ್ಲಿ ಓದಿದ್ದರೆ ಅದನ್ನು ಹೇಳಲು ನಾಚಿಕೆ ಬೇಡ. ನೀವು ಯಾವ ವರ್ಷ ಪದವಿ ಪೂರೈಸಿದಿರಿ



ಎಂದು ಕೇಳಿದರೆ ತಡವರಿಸಬೇಡಿ. ಅದೂ ನಿಮಗೆ ಸರಿಯಾಗಿ ಗೊತ್ತಿಲ್ಲವೇ ಎಂದೂ ಸಂದರ್ಶಕರಿಗೆ ಅನಿಸಬಹುದು.

ನೀವು ಸಂದರ್ಶನ ಕೊಡಲು ಹೋದ ಸಂಸ್ಥೆಯವರು ಅರ್ಜಿ ನಮೂನೆ ಕೊಟ್ಟು ಭರ್ತಿ ಮಾಡಲು ಹೇಳಿದರೆ ಅದನ್ನು ಸರಿಯಾಗಿ ತುಂಬಿರಿ. ಯಾವ ಕಲಮನ್ನೂ ಹಾಗೆಯೇ ಬಿಡಬೇಡಿ. ಇಂಥ ಒಂದು ನಮೂನೆ ಹಾಗೂ ನೀವು ಮೂಲದಲ್ಲಿ ಬರೆದುಕೊಟ್ಟ ಅರ್ಜಿ ಅಮೂಲ್ಯವಾದುವು. ಅಲ್ಲಿಯೇ ನಿಮ್ಮ ವ್ಯಕ್ತಿತ್ವ ಗೊತ್ತಾಗುತ್ತದೆ. ನೀವು ಬರೆಯುವ ಅರ್ಜಿ ಯಾವ ಭಾಷೆಯಲ್ಲಿ ಇರಬೇಕು ಎಂಬುದು ಬಹಳ ಮುಖ್ಯ ಇರಬೇಕಾದ ಕಡೆ ಕನ್ನಡದಲ್ಲಿಯೇ ಅರ್ಜಿ ಹಾಗೆಯೇ ಮಾಡಿ. ಇಂಗ್ಲಿಷ್‌ನಲ್ಲಿ ಇರಬೇಕಿದ್ದರೂ ಅದನ್ನು ನೀವೇ ಬರೆಯಿರಿ. ಯಾವುದೋ ಅಂಗಡಿಯಲ್ಲಿ ಸಿಗುವ ಮುದ್ರಿತ ಅರ್ಜಿಯನ್ನು ತುಂಬಿ ಕಳುಹಿಸಬೇಡಿ. ಎಲ್ಲರ ಅರ್ಜಿಗಳೂ ಒಂದೇ ರೀತಿ ಇದ್ದರೆ ನಿಮ್ಮ ವೈಶಿಷ್ಟ್ಯವೇನು ಎಂದು ತಿಳಿಯುವುದಿಲ್ಲ. ಕೈಬರಹದ ಅರ್ಜಿಯಾಗಿದ್ದರೂ ಅದರಲ್ಲಿ ನಿಮ್ಮ ಹೆಸರು, ವಿಳಾಸ, ವಿದ್ಯಾರ್ಹತೆ, ಅನುಭವ, ನಿಮಗೇ ವಿಶಿಷ್ಟವಾದ ಸಾಧನೆಗಳು, ನಿಮ್ಮ ಸಂಪರ್ಕ ಸಂಖ್ಯೆ. ಇ-ಮೇಲ್ ವಿಳಾಸ ಇತ್ಯಾದಿ ಮಾಹಿತಿಗಳು ಇರಲಿ. ನಿಮ್ಮ ವಿದ್ಯಾರ್ಹತೆ ವಿವರ ಕೊಡುವಾಗ ನೀವು ಯಾವ ಶ್ರೇಣಿಯಲ್ಲಿ ಪಾಸಾಗಿದ್ದೀರಿ ಎಂಬುದನ್ನು ತಪ್ಪದೇ ಉಲ್ಲೇಖ ಮಾಡಿರಿ. ನಿಮ್ಮ ಅಂಕಗಳು ಚೆನ್ನಾಗಿ ಇದ್ದಷ್ಟೂ ನಿಮಗೆ ನೌಕರಿ ಸಿಗುವ ಸಾಧ್ಯತೆ ಹೆಚ್ಚು.

ಸಂದರ್ಶನಕ್ಕೆ ಬರುವಾಗ ನಿಮ್ಮ ವಿದ್ಯಾರ್ಹತೆಯ ನಕಲು ಪ್ರತಿಗಳ ಜತೆಗೆ ಮೂಲ ಅಂಕಪಟ್ಟಿಗಳನ್ನೂ ತೆಗೆದುಕೊಂಡು ಬನ್ನಿ, ಏನೋ ಕಾರಣ ಹೇಳಿ 'ತಂದಿಲ್ಲ' ಎನ್ನಬೇಡಿ. ಅವನ್ನು ನೀವು ಪಾಸಾದ ಕ್ರಮದಲ್ಲಿ ಜೋಡಿಸಿ ಇಡಿ. ಸಂದರ್ಶಕರು ಕೇಳಿದ ತಕ್ಷಣ ಕಡತವನ್ನು ತೆಗೆದು ಅವರ ಮುಂದೆ ಇಟ್ಟು ಅದೇ ಕ್ರಮದಲ್ಲಿ ನಿಧಾನವಾಗಿ ತೋರಿಸಿರಿ. “ಪರ್' 'ಪ' ಎಂದು ಸದ್ದು ಮಾಡುತ್ತ ಫೈಲ್‌ಗಳನ್ನು ತೆರೆಯಬೇಡಿರಿ. ನೀವು ಉನ್ನತ ಶ್ರೇಣಿಯಲ್ಲಿ ಪಾಸಾಗಿದ್ದರೆ, ಪದಕಗಳನ್ನು ಗಳಿಸಿದ್ದರೆ ಅದನ್ನೂ ಹೇಳಿರಿ, ಶೈಕ್ಷಣಿಕ ಅರ್ಹತೆ ಮಾತ್ರವಲ್ಲದೇ ಇತರ ಯಾವುದಾದರೂ ಕ್ಷೇತ್ರದಲ್ಲಿ ನಿಮಗೆ ಆಸಕ್ತಿಯಿದ್ದರೆ ಹೇಳಲು ಮರೆಯಬೇಡಿ. ಅದು ಸಂದರ್ಶಕರಲ್ಲಿ ಅಚ್ಚರಿ, ಆಸಕ್ತಿ ಮೂಡಿಸುತ್ತದೆ. ಈತ-ಈಕೆ ಬರೀ ಕಾಲೇಜಿಗೆ ಹೋಗಿಲ್ಲ, ಇತರ ಆಸಕ್ತಿಗಳನ್ನೂ ಬೆಳೆಸಿಕೊಂಡಿದ್ದಾರೆ ಎಂದು ಮೆಚ್ಚಿಕೊಳ್ಳುತ್ತಾರೆ. ಸಂಗೀತ, ಸಾಹಿತ್ಯದಂಥ ಲಲಿತ ಕಲೆಗಳು ನಿಮ್ಮ ವ್ಯಕ್ತಿತ್ವವನ್ನು ತುಂಬುತ್ತವೆ ಎಂದು ಗೊತ್ತಿರಲಿ.

ಸಂದರ್ಶಕರು ಕೇಳಿದ ಪ್ರಶ್ನೆಗೆ ಉತ್ತರ ಕೊಡುವಾಗ ತಡವರಿಸಬೇಡಿ. ನಿಮಗೆ ಗೊತ್ತಿರುವಷ್ಟನ್ನು ಸ್ಪಷ್ಟವಾಗಿ, ಖಚಿತವಾಗಿ ಹೇಳಿರಿ. ಸ್ಪಷ್ಟ ಸಂವಹನ ಎಂಬುದು ಬಹುದೊಡ್ಡ ಕಲೆ. ನಿಮ್ಮ ಮಾತಿನಲ್ಲಿಯೇ ನೀವು ಸಂದರ್ಶಕರನ್ನು ಮೆಚ್ಚಿಸಬಹುದು. ಸ್ಪಷ್ಟ ಮಾತು ಸ್ಪಷ್ಟ ಚಿಂತನೆಯ ಫಲ. ಉತ್ತರ ಕರ್ನಾಟಕದವರು ಮಾತನಾಡುವಾಗ ಆತುರ ಮಾಡುತ್ತಾರೆ. ವೇಗವಾಗಿ ಮಾತನಾಡುತ್ತಾರೆ ಎಂದು ಅನಿಸುತ್ತದೆ. ನಿಧಾನವಾಗಿ ಮಾತನಾಡಿರಿ. ಅಕ್ಷರಗಳನ್ನು ನುಂಗಬೇಡಿ. ನಿಮ್ಮ ಮಾತು ಅರ್ಥವಾಗದಿದ್ದರೆ ಪ್ರಯೋಜನವಿಲ್ಲ. ಸಂದರ್ಶಕರು ಕೇಳುವ ಪ್ರಶ್ನೆಗಳನ್ನು ಸರಿಯಾಗಿ ಕೇಳಿಸಿಕೊಳ್ಳಿ. ಅವರಿಗೆ

ಮತ್ತೆ ಮತ್ತೆ ಪ್ರಶ್ನೆ ಪುನರಾವರ್ತಿಸುವಂತೆ ನಡೆದುಕೊಳ್ಳಬೇಡಿ. ನಿಮಗೆ ಸರಿಯಾಗಿ ಕಿವಿ ಕೇಳಿಸುವುದಿಲ್ಲ ಎನಿಸಿಬಿಡಬಹುದು! ನಿಮ್ಮ ನಡೆ ನುಡಿಯಲ್ಲಿ ನೀವು 'ಸಂಘಟಿತರಾಗಿದ್ದೀರಿ ಎಂದು ಗೊತ್ತುಮಾಡಿಕೊಡಿ.

ಸಂದರ್ಶನಕ್ಕೆ ಬರುವ ಹಿಂದಿನ ದಿನ ಚೆನ್ನಾಗಿ ನಿದ್ದೆ ಮಾಡಿರಿ. ಆಕಳಿಸುತ್ತ ಬೇಜಾರಿನಲ್ಲಿ ಕುಳಿತುಕೊಳ್ಳಬೇಡಿ. ನೀವು ಸಂದರ್ಶನಕ್ಕೆ ಭಾರಿ ಬೇಜಾರಿನಿಂದ ಬಂದ್ದಿದೀರಿ ಎಂದು ಅನಿಸಿದರೆ ನಿಮಗೆ ಖಂಡಿತ ನೌಕರಿ ಸಿಗುವುದಿಲ್ಲ. ಸಂದರ್ಶನಕ್ಕೆ ಬಂದಾಗ 'ಧೋರಣೆ'ಯಿಂದ ನಡೆದುಕೊಳ್ಳಬೇಡಿ. ಕೈಗೆ ಕೆಟ್ಟದಾಗಿ ಬಣ್ಣ ಬಣ್ಣದ ದಾರಗಳನ್ನು ಕಟ್ಟಿಕೊಳ್ಳಬೇಡಿ. ಬಟ್ಟೆಗೆ ವಿಪರೀತ ಸೆಂಟ್ ಹಾಕಿಕೊಂಡು ಬರಬೇಡಿ. ಸಂದರ್ಶನದ ಕೊಠಡಿಯಲ್ಲಿ ಅದು 'ಅಸಹನೀಯ' ಅನಿಸಬಹುದು. ಸಂದರ್ಶಕರ ಮೇಜಿನ ಮೇಲೆ ಕೈ ಇಟ್ಟು ಮಾತನಾಡಬೇಡಿ. ಅದು ಅವಿಧೇಯತೆಯಂತೆ ತೋರಬಹುದು. ಕುರ್ಚಿಯಲ್ಲಿ ಕಾಲ ಮೇಲೆ ಕಾಲು ಹಾಕಿಕೊಂಡೂ ಕುಳಿತುಕೊಳ್ಳಬೇಡಿ. ನೇರವಾಗಿ ಕುಳಿತುಕೊಳ್ಳಿ ಆದರೆ, ನಿಮ್ಮ ಭಂಗಿಯಲ್ಲಿ ವಿನಯ ಇರಲಿ, ನಿಮ್ಮ ಕನ್ನಡಕವನ್ನು ಎದೆಯ ಮೇಲಿನ ಗುಂಡಿಯಲ್ಲಿ ಸಿಕ್ಕಿಸಿಕೊಳ್ಳಬೇಡಿ. ಕಪ್ಪು ಕನ್ನಡಕವಿದ್ದರೆ ಅದನ್ನು ತೆಗೆದು ಇಟ್ಟು ಬನ್ನಿ. ಅದನ್ನು ಹಾಕಿಕೊಂಡು ಕುಳಿತುಕೊಳ್ಳುವುದಂತೂ ಶುದ್ಧ ಅವಿವೇಕ! ಅದೆಲ್ಲ ಸಂದರ್ಶಕರನ್ನು ಮೆಚ್ಚಿಸುವುದಿಲ್ಲ.

ನೀವು ಹಿಂದೆ ಯಾವುದಾದರೂ ಸಂಸ್ಥೆಯಲ್ಲಿ ಕೆಲಸ ಮಾಡಿದ್ದರೆ ಅಲ್ಲಿ ನಿಮಗೆ ಪ್ರಶಸ್ತಿ, ಬಹುಮಾನ ಬಂದಿದ್ದರೆ ಅದನ್ನು ತೋರಿಸಿರಿ. ನೀವು ಮಾಡಿದ ಕೆಲಸವನ್ನು ತೋರಿಸಲು ಸಾಧ್ಯವಿದ್ದರೆ ಅದನ್ನೂ ತಂದು ತೋರಿಸಿರಿ. ತೋರಿಸಬಹುದೇ ಎಂದು ಸಂದರ್ಶಕರಿಗೆ ಕೇಳಿರಿ. ಅವರು ಒಪ್ಪಬಹುದು. ಒಪ್ಪಿದರೆ ತೋರಿಸಿ, ಅದು ಅವರಿಗೆ ಮೆಚ್ಚುಗೆಯಾಗಬಹುದು. ಅದನ್ನು ಸಿ.ಡಿ. ಅಥವಾ ಪೆನ್‌ಡ್ರೈವ್‌ನಲ್ಲಿ ಹಾಕಿಕೊಂಡು ಬನ್ನಿರಿ. ಅದರಲ್ಲಿ ನೀವು ತೋರಿಸಬೇಕು ಎಂದುಕೊಂಡ ಸಂಗತಿಗಳು ಮಾತ್ರ ಇರಲಿ, ಇತರೆ ನೂರೆಂಟು ಸಂಗತಿಗಳ ಜತೆಗೆ ಇದನ್ನೂ ಸೇರಿಸಬೇಡಿ. ಅಷ್ಟೆಲ್ಲ ತಾಳ್ಮೆ, ವೇಳೆ ಸಂದರ್ಶಕರಿಗೆ ಇರಬೇಕು ಎಂದು ಬಯಸುವುದು ಸರಿಯಲ್ಲ.

ನಿಮಗೆ ನೌಕರಿ ಸಿಕ್ಕರೆ ನೀವು ಏನು ಮಾಡುತ್ತೀರಿ, ಹೇಗೆ ಕೆಲಸ ಮಾಡುತ್ತೀರಿ ಎಂದು ಸಂದರ್ಶಕರಿಗೆ ಹೇಳಿರಿ. ಅದನ್ನು ಬಿಟ್ಟು ನೀವು ಸಂಸ್ಥೆಯನ್ನು ಹೇಗೆ ನಡೆಸಬೇಕು ಎಂದು ಅವರಿಗೆ ಬುದ್ಧಿ ಹೇಳಲು ಹೋಗಬೇಡಿ. ಅದು ಅವರಿಗೆ

ಗೊತ್ತಿಲ್ಲದೇ ಇದ್ದರೆ ಅವರು ಮಾಲೀಕರು ಆಗಲು ಸಾಧ್ಯವಿಲ್ಲ. ಅವರಿಗೆ ಗೊತ್ತಿಲ್ಲದೇ ಇರುವುದು ನಿಮಗೆ ಗೊತ್ತಿರಲು ಸಾಧ್ಯವೇ ಇಲ್ಲ. ಅದನ್ನೆಲ್ಲ ಹೇಳಲು ಹೋಗಿ ನೀವು ಅಪಹಾಸ್ಯಕ್ಕೆ ಈಡಾಗಲೂಬಹುದು. ಅದರ ಬದಲು ನಿಮಗೆ ಅವಕಾಶ ಸಿಕ್ಕರೆ ಅದನ್ನು ಹೇಗೆ ಬಳಸಿಕೊಳ್ಳುತ್ತೀರಿ ಎಂದು ಹೇಳಿದರೆ ನೀವು ನೌಕರಿಗೆ ಅರ್ಹರೋ ಅಲ್ಲವೋ ಎಂದು ಅವರಿಗೆ ತಕ್ಷಣ ಗೊತ್ತಾಗುತ್ತದೆ. ಹೇಗಿದ್ದರೂ ನಿಮ್ಮನ್ನು ಮಾಲೀಕರ ಹುದ್ದೆಗೆ ಸಂದರ್ಶನಕ್ಕೆ ಕರೆದಿರುವುದಿಲ್ಲ; ನೌಕರಿಗೆ ಕರೆದಿರುತ್ತಾರೆ ಎಂದು ಮರೆಯಬೇಡಿ! ನೀವು ನೌಕರಿಗೆ ಸೇರಲು ಎಷ್ಟು ಸಮಯ ಹಿಡಿಯುತ್ತದೆ ಎಂಬುದನ್ನು ಮುಚ್ಚಿ ಇಡಬೇಡಿ. ಒಂದು ತಿಂಗಳು ಬೇಕಾದರೆ ಹಾಗೆಯೇ ತಿಳಿಸಿ, ನೀವು ಸಂದರ್ಶಕರಿಗೆ ಅಷ್ಟು ಇಷ್ಟವಾಗಿದ್ದರೆ

ಅವರು ನಿಮ್ಮನ್ನು ಕಳೆದುಕೊಳ್ಳಲು ಇಷ್ಟಪಡುವುದಿಲ್ಲ. ಸಂದರ್ಶನಕ್ಕೆ ಹೋದಾಗ ನೀವು ತಿಳಿಸಿಕೊಡಬೇಕಾದುದು ಇದನ್ನೇ; ನೀವು ಒಬ್ಬ ಕಳೆದುಕೊಳ್ಳಬಾರದ ಅಭ್ಯರ್ಥಿ ಎಂದು!

ನಾನು ಇಲ್ಲಿ ಹೇಳಿದ್ದೆಲ್ಲ ಚಿಕ್ಕಚಿಕ್ಕ ಸಂಗತಿಗಳು. ಈ ಚಿಕ್ಕಚಿಕ್ಕ ಸಂಗತಿಗಳೇ ನಮ್ಮ ವಿದ್ಯಾರ್ಥಿಗಳಿಗೆ ಗೊತ್ತಿಲ್ಲ ಎಂದು ಅನಿಸಿತು. ಚಿಕ್ಕಚಿಕ್ಕ ಸಂಗತಿಗಳನ್ನೆಲ್ಲ ಚೊಕ್ಕವಾಗಿ ಮಾಡಿದರೆ ಅದೇ ಪರಿಪೂರ್ಣತೆ ಕಡೆಗಿನ ಮೆಟ್ಟಿಲು. ಅಂಥ ಮೆಟ್ಟಿಲುಗಳನ್ನು ಒಂದೊಂದಾಗಿ ಏರಿರಿ. ಅಲ್ಲಿ ಯಶಸ್ಸು ನಿಮ್ಮನ್ನು ಬಾಚಿಕೊಳ್ಳಲು ಮುಂದೆ ತೋಳು ತೆರೆದು ನಿಂತಿರುತ್ತದೆ!

೧೫.೦೩.೧೧

**ಸರ್ಕಾರ ಮಾಡಲಾಗದ್ದು**

**ಸಾರ್ವಜನಿಕ ಮಾಡಬಹುದಾದದ್ದು**

ತಿಂಗಳೇ ಆಗಿರಬೇಕು. 'ಚರಕ'ದ ಪ್ರಸನ್ನ ನಮ್ಮ ಕಚೇರಿಗೆ ಬಂದಿದ್ದರು. ದೇಸಿ ಧರ್ಮದರ್ಶಿ ಸಂಸ್ಥೆ ಪ್ರತಿವರ್ಷ ಕೊಡುವ ದಾಸಿಮಯ್ಯ ಪ್ರಶಸ್ತಿಗಳನ್ನು ಅಂದೇ ಅವರು ಪ್ರಕಟಿಸಿದ್ದರು. ಅವರು ಕರೆದ ಪತ್ರಿಕಾಗೋಷ್ಠಿಗೆ ನಮ್ಮಿಂದ ಯಾರೂ ಹೋಗಿರಲಿಲ್ಲ. ನಾವು ಅಷ್ಟೇ ಅಲ್ಲ ಇತರ ಯಾವ ಪತ್ರಿಕೆಯಿಂದಲೂ ಹೋದಂತೆ ಕಾಣಲಿಲ್ಲ. ಎಲ್ಲರೂ ಯಡಿಯೂರಪ್ಪ, ರೇಣುಕಾಚಾರ್ಯ ಎಂದು ಅಲೆದಾಡುತ್ತಿದ್ದರು ಎನಿಸುತ್ತದೆ! 'ಎಲ್ಲ ಪತ್ರಿಕಾ ಕಚೇರಿಗಳಿಗೂ ಹೋಗಿ ಪ್ರಕಟಣೆ ಕೊಟ್ಟು ಬರುತ್ತೇನೆ' ಎಂದ ಪ್ರಸನ್ನ ದನಿಯಲ್ಲಿ ನಮ್ಮ ಅಸೂಕ್ಷ್ಮತೆ ಬಗ್ಗೆ ಬೇಸರವಿತ್ತೇ, ಸಿಟ್ಟು ಇತ್ತೇ ಅಥವಾ ಅವರಿಗೆ ಅದು ರೂಢಿಯಾಗಿತ್ತೇ ಗೊತ್ತಾಗಲಿಲ್ಲ. ಪ್ರಸನ್ನ ಹೇಳುತ್ತಿದ್ದರು: 'ನೋಡಿ, ಕೈಮಗ್ಗ ಕ್ಷೇತ್ರದಲ್ಲಿ ಕೆಲಸ ಮಾಡುವ ವ್ಯಕ್ತಿಗಳಿಗೆ ದೇಶದಲ್ಲಿಯೇ ಒಂದು ಪ್ರಶಸ್ತಿಯಿಲ್ಲ. ಅದನ್ನು ನಮ್ಮ ಸಂಸ್ಥೆ ಕೊಡುತ್ತಿದೆ. ೪೦,೦೦೦ ರೂಪಾಯಿ ನಗದು, ಗಾಂಧಿ ಪ್ರತಿಮೆ ಮುಂತಾಗಿ... ಇದು ನಾಲ್ಕನೇ ವರ್ಷ. ಈ ವರ್ಷ ಖಾದಿ ಕ್ಷೇತ್ರವನ್ನು ಆಯ್ದುಕೊಂಡು ಒಬ್ಬ ವ್ಯಕ್ತಿಗೆ, ಎರಡು ಸಂಸ್ಥೆಗಳಿಗೆ ಪ್ರಶಸ್ತಿ ಪ್ರಕಟಿಸಿದ್ದೇವೆ. ರೋಣ ತಾಲ್ಲೂಕಿನ ಸವಡಿಯ ರಂಗಪ್ಪ ಹೂಗಾರ್ ಅವರಿಗೆ ವೈಯಕ್ತಿಕ ಪ್ರಶಸ್ತಿ ಕೊಟ್ಟಿದ್ದೇವೆ, ತುಂಬ ಕೆಲಸ ಮಾಡಿದ್ದಾರೆ' ಎಂದು ಹೇಳಿ ಹೊರಟುಹೋದರು.

ಇದೆಲ್ಲ ಸೋಜಿಗ. ನೇಕಾರಿಕೆ, ನಾಗರಿಕತೆಯಷ್ಟೇ ಹಳೆಯ ವೃತ್ತಿ. ಕೃಷಿ ಬಿಟ್ಟರೆ ಅತಿ ಹೆಚ್ಚು ಜನ, ಜೀವನೋಪಾಯಕ್ಕೆ ಅವಲಂಬಿಸಿದ್ದು ನೇಕಾರಿಕೆಯನ್ನು, ಆದರೂ ಆ ಕ್ಷೇತ್ರದಲ್ಲಿ ಕೆಲಸ ಮಾಡಿದ ಒಬ್ಬ ವ್ಯಕ್ತಿಗೆ ಇಷ್ಟು ವರ್ಷಗಳಾದರೂ ರಾಜ್ಯ ಸರ್ಕಾರವಾಗಲೀ, ಕೇಂದ್ರ ಸರ್ಕಾರವಾಗಲೀ ಒಂದು ಪ್ರಶಸ್ತಿ ಇಟ್ಟಿಲ್ಲ ಎಂದರೆ ಏನು ಹೇಳುವುದು? ಕೈಮಗ್ಗದ್ದು ಮುಗಿದು ಹೋದ ಕಥೆ (ಸನ್‌ಸೆಟ್ ಇಂಡಸ್ಟ್ರಿ) ಎಂದು ಎಲ್ಲರೂ ತೀರ್ಮಾನ ಮಾಡಿಬಿಟ್ಟಿದ್ದಾರೆ. ನೇಕಾರರನ್ನು ದೇವಾಂಗರು ಎಂದು ಜಾತಿ ಆಧಾರದ ಮೇಲೆ ಸಂಘಟಿಸುವ ಪ್ರಯತ್ನ ನಡೆಯುತ್ತದೆಯೇ ಹೊರತು ವೃತ್ತಿ ಆಧಾರದ ಮೇಲೆ ಸಂಘಟಿಸುವ ಪ್ರಯತ್ನ ನಡೆಯುವುದಿಲ್ಲ. ದೇವರಾಜ ಅರಸು ಮುಖ್ಯಮಂತ್ರಿ ಆಗಿದ್ದಾಗ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ (ಕೆಎಚ್‌ಡಿಸಿ) ಎಂಬ ಸಂಸ್ಥೆಯನ್ನು ಸೃಷ್ಟಿಸಿ ಕೈಮಗ್ಗ ನೇಕಾರರಿಗೆ ಒಂದಿಷ್ಟು ಅನುಕೂಲ ಮಾಡಲು ಪ್ರಯತ್ನ ಮಾಡಿದರೇನೋ ನಿಜ. ಮದನಗೋಪಾಲರಂಥ ಒಳ್ಳೆಯ ಅಧಿಕಾರಿಗಳು ಆ ಸಂಸ್ಥೆಗೆ ವ್ಯವಸ್ಥಾಪಕ ನಿರ್ದೇಶಕರಾಗಿ ಇದ್ದಾಗ ಅದಕ್ಕೆ ಒಂದಿಷ್ಟು ಜೀವ ಬಂದಿತ್ತು. ಉಳಿದಂತೆ ಕೆಎಚ್‌ಡಿಸಿ ಕಚೇರಿಯಲ್ಲಿ, ಮಳಿಗೆಗಳಲ್ಲಿ ನೊಣ ಹೊಡೆಯುವವರೂ ಇರುವುದಿಲ್ಲ. ಸರ್ಕಾರಕ್ಕೇ ಬೇಡವಾದ ಒಂದು ನಿಗಮದಲ್ಲಿ ಜನರಿಗೆ ಏನು ಆಸಕ್ತಿ? ರೈತರ ಹಾಗೆ ನೇಕಾರರೂ ನೇಣಿಗೆ ಶರಣಾಗುತ್ತಾರೆ.

ರಂಗಪ್ಪ ಹೂಗಾರ್ ಅವರ ಜತೆಗೆ ಮಾತನಾಡುತ್ತಿದ್ದೆ. ಅವರು ಖಾದಿ ಕ್ಷೇತ್ರದಲ್ಲಿ ಕಳೆದ ಐದು ದಶಕಗಳಿಗೂ ಹೆಚ್ಚು ಅವಧಿಯಿಂದ ಕೆಲಸ ಮಾಡಿದವರು. ಖಾದಿ ಕ್ಷೇತ್ರದಲ್ಲಿ ನೂಲನ್ನೂ ನಾವೇ ಸಿದ್ಧಪಡಿಸಬೇಕು, ಬಟ್ಟೆಯನ್ನೂ ನಾವೇ ನೇಯಬೇಕು. ಕೈಮಗ್ಗ ಕ್ಷೇತ್ರದಲ್ಲಿ ಸಿದ್ಧವಾದ ನೂಲನ್ನು ಬಳಸಿ ಬಟ್ಟೆ ನೇಯಬೇಕು. ಖಾದಿಯಲ್ಲಿ ಕೈಯಿಂದ ರಾಟೆ ತಿರುಗಿಸಿ ತಕಲಿ ಹಿಡಿದು ನೂಲು ತೆಗೆಯಬೇಕು. ಗಾಂಧಿತಾತ ಹೇಳಿಕೊಟ್ಟ ರೀತಿಯದು. ಅದಕ್ಕೆ ಆಗ ಒಂದು ಅರ್ಥವಿತ್ತು, ಉದ್ದೇಶವಿತ್ತು. ಮನೆ ಮನೆಯನ್ನೂ ಸ್ವಾವಲಂಬಿ ಮಾಡುವ ಕನಸು ಅದು. ರಾಟೆ-ತಕಲಿಗಳು ಮೂಲೆ ಸೇರಿ ಎಷ್ಟು ದಶಕಗಳಾದುವು? ಈಗ ಅವು ಯಾರಿಗೆ ಬೇಕು? ಆದರೆ, ರಂಗಪ್ಪ ಹೂಗಾರ್ ಅವರಂಥವರು ಗಾಂಧಿ ಸತ್ತು ಆರು ದಶಕಗಳು ಕಳೆದ ನಂತರವೂ ರಾಟೆ-ತಕಲಿಯಲ್ಲಿ ನಂಬಿಕೆ ಇಟ್ಟುಕೊಂಡಿದ್ದಾರೆ. ಅವರು ಕೇವಲ ೧೭-೧೮ ವರ್ಷ ವಯಸ್ಸಿನ ಹುಡುಗನಾಗಿದ್ದಾಗ ತಮ್ಮ ಊರಿನ ಖಾದಿ ಕೆಲಸಗಾರರ ಸಹಕಾರಿ ಉತ್ಪಾದಕರ ಸಂಘದಲ್ಲಿ ಸಹಾಯಕ ಗುಮಾಸ್ತೆಯಾಗಿ ಕೆಲಸಕ್ಕೆ ಸೇರಿಕೊಂಡರು. ಶಿವಪ್ಪ ನೆಲ್ಲೂರು, ದೊಡ್ಡಮೇಟಿ ಅಂದಾನಪ್ಪ ಅವರಂಥ ಸ್ವಾತಂತ್ರ್ಯ

ಹೋರಾಟಗಾರರ ಪ್ರಭಾವ ಈ ಹುಡುಗನ ಮೇಲೆ ಆಗಿತ್ತು. ವಿನೋಬಾ ಭಾವೆ ಅವರ ಪ್ರಭಾವದಿಂದ ವಾರ್ಧಾ ಆಶ್ರಮಕ್ಕೂ ಹೋಗಿ ಅಲ್ಲಿ ಖಾದಿ ಕ್ಷೇತ್ರದಲ್ಲಿ ಒಂದಿಷ್ಟು ದಿನ ತರಬೇತಿ ಪಡೆದು ಬಂದರು. ಈಗ ಸಂಘ ಗದುಗಿನಲ್ಲಿಯೇ ಕಚೇರಿ ತೆರೆದಿದೆ. ರಂಗಪ್ಪ ಕೂಡ ರೋಣ ಬಿಟ್ಟು ಗದುಗಿಗೇ ಬಂದಿದ್ದಾರೆ.

೧೯೫೮ರಲ್ಲಿ ಸಹಾಯಕ ಗುಮಾಸ್ತೆಯಾಗಿ ಸಂಸ್ಥೆ ಸೇರಿದ್ದ ರಂಗಪ್ಪ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿ ಕಳೆದ ನಾಲ್ಕು ವರ್ಷದಿಂದ ಆ ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ. ಈಗ ಅವರು ಬೆಂಗೇರಿಯ ಖಾದಿ ಗ್ರಾಮೋದ್ಯೋಗ ಪ್ರಾದೇಶಿಕ

ಕೇಂದ್ರದ ಉಪಾಧ್ಯಕ್ಷರೂ ಹೌದು. ಗದಗ ಜಿಲ್ಲೆಯ ಹಲವು ಪಟ್ಟಣ, ಗ್ರಾಮಗಳಲ್ಲಿ ಖಾದಿ ಕೆಲಸಗಾರರು ರಂಗಪ್ಪ ಹೂಗಾರ್ ನೇತೃತ್ವದ ಸಂಘದ ಆಶ್ರಯದಲ್ಲಿ ತಯಾರಿಸುವ ವಿವಿಧ ಅಳತೆಯ ಧರಿ ಜಮಖಾನೆಗೆ ಎಲ್ಲಿಲ್ಲದ ಬೇಡಿಕೆ, ವಿಶೇಷ ಎಂದರೆ ಇಲ್ಲಿ ಹೆಣ್ಣು ಮಕ್ಕಳೇ ಹೆಚ್ಚು ಕೆಲಸ ಮಾಡುತ್ತಿದ್ದಾರೆ. ಅವರಲ್ಲಿ ಮುಸಲ್ಮಾನ ಮಹಿಳೆಯರೂ ಇರುವುದು ಇನ್ನೊಂದು ವಿಶೇಷ. ಎಲ್ಲರಿಗೂ ವಾರ-ವಾರ ತಪ್ಪದೇ ಪಗಾರ ಕೊಡುತ್ತಾರೆ. ಸುಮಾರು ೨೭೦ ಜನ ಹೆಣ್ಣು ಮಕ್ಕಳು ಮತ್ತು ೬೫ ಜನ ಗಂಡಸರು ಈ ಸಂಘದ ಅಡಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ತಿಂಗಳಿಗೆ ಎಂಟು ಲಕ್ಷ ರೂಪಾಯಿಗಳನ್ನು ಪಗಾರಕ್ಕಾಗಿಯೇ ಸಂಘ ತೆಗೆದು ಇಟ್ಟಿದೆ. ಮೊದಲು, ವರ್ಷಕ್ಕೆ ೧೦ ರಿಂದ ೧೨ ಲಕ್ಷ ರೂಪಾಯಿ ವಹಿವಾಟು ಮಾಡುತ್ತಿದ್ದ ಸಂಘ ಈಗ ೯೦ ಲಕ್ಷದಿಂದ ಒಂದು ಕೋಟಿ ರೂಪಾಯಿ ವರೆಗೆ ವಹಿವಾಟು ಮಾಡುತ್ತಿದೆ. 'ಖಾದಿ ಕ್ಷೇತ್ರದಿಂದ ಕೆಲಸಗಾರರು ವಿಮುಖರಾಗಬಾರದು ಎಂದರೆ ಅವರಿಗೆ ವಾರ-ವಾರ ಕನಿಷ್ಠ ಪಗಾರವನ್ನಾದರೂ ಕೊಡಬೇಕು. ಇಲ್ಲದಿದ್ದರೆ ಅಲ್ಲಿ ಉಳಿಯುವುದಿಲ್ಲ. ಯಾವುದೋ ಕೂಲಿ-ನಾಲಿ ಮಾಡಲು ಹೊರಟುಹೋಗುತ್ತಾರೆ. ಇಲ್ಲವಾದರೆ ಊರು ಬಿಟ್ಟು ಗುಳೆ ಹೋಗುತ್ತಾರೆ. ಮುಂಡರಗಿ, ಕಂಪ್ಲಿ ಮತ್ತು ಅಳವಂಡಿಗಳಲ್ಲಿ ನೇಕಾರರ ತಲಾ ೭೦ ಮನೆಗಳು ಇವೆ. ಅಲ್ಲಿ ಎಲ್ಲರಿಗೂ ಉದ್ಯೋಗ ಕೊಟ್ಟಿದ್ದೇವೆ. ನನಗೆ ಒಂದು ಸಂತೋಷ ಎಂದರೆ ನಾವು ಎಲ್ಲೆಲ್ಲಿ ಕೆಲಸ ಕೊಟ್ಟಿದ್ದೇವೆಯೋ ಅವರಾರೂ ಊರು ಬಿಟ್ಟು ಹೋಗಿಲ್ಲ. ಅದಕ್ಕಿಂತ ಇನ್ನೇನು ಬೇಕು ಎಂದು ರಂಗಪ್ಪ ಕೇಳಿದರು.

ಗದುಗಿನ ಖಾದಿ ಸಂಘಕ್ಕೆ ಸಾಧ್ಯವಾದುದು ಎಲ್ಲ ಕಡೆ ಏಕೆ ಸಾಧ್ಯವಾಗುವುದಿಲ್ಲ ಎಂಬುದಕ್ಕೂ ರಂಗಪ್ಪ ಅವರೇ ಕಾರಣ ಕೊಟ್ಟರು. 'ಮೊದಲು ಖಾದಿ ಗ್ರಾಮೋದ್ಯೋಗ ಆಯೋಗ ಮತ್ತು ಮಂಡಳಿ ಎಲ್ಲ ಖಾದಿ ಸಂಘಗಳಿಗೆ ದುಡಿಯುವ ಬಂಡವಾಳ ಕೊಡುತ್ತಿದ್ದುವು, ಈಗ ನಿಲ್ಲಿಸಿವೆ. ಸಂಘಗಳು ಮಾರಿದ ಖಾದಿಗೆ ಸರ್ಕಾರ ಪ್ರತಿ ವರ್ಷ ರಿಬೇಟ್ ಮೊತ್ತವನ್ನು ಭರಿಸಬೇಕು. ಮೂರು ವರ್ಷಗಳಿಂದ ಕೊಟ್ಟಿಲ್ಲ. ಅಲೆದಾಡಿ ಸಾಕಾಗಿದೆ. ಕೈಗಾರಿಕೆ ಇಲಾಖೆಯಲ್ಲಿ ನಮ್ಮನ್ನು ಕೇಳುವವರು ಯಾರೂ ಇಲ್ಲ. ನಾವು ಲಂಚ ಕೊಡುವುದಿಲ್ಲ. ಅದು ನಮ್ಮ ಸಮಸ್ಯೆಯೇ ಅಥವಾ ಸರ್ಕಾರದ ಸಮಸ್ಯೆಯೇ ಗೊತ್ತಾಗುವುದಿಲ್ಲ. ರೈಲ್ವೆ ಇಲಾಖೆ ಪ್ರತಿ ವರ್ಷ ೨೦ ಕೋಟಿ ರೂಪಾಯಿ ಮೊತ್ತದ ಖಾದಿ ವಸ್ತ್ರಗಳನ್ನು ಖರೀದಿಸುತ್ತದೆ. ನಮ್ಮ ಸರ್ಕಾರ ತನ್ನ ಎಲ್ಲ ಆಸ್ಪತ್ರೆಗಳಿಗೆ ಖಾದಿ ಬೆಡ್‌ಶೀಟು, ಟವೆಲ್ ಖರೀದಿಸಿಬಿಟ್ಟರೆ ಸಾಕು. ಇಡೀ ಉದ್ಯಮ

ಬದುಕುತ್ತದೆ. ಅವರು ನಮಗೆ ರಿಬೇಟ್ ಕೊಡುವುದೂ ಬೇಡ. ಆ ಹಣ ಬಿಡುಗಡೆ ಮಾಡಿ ಎಂದು ನಾವು ಅವರ ಹಿಂದೆ ಅಲೆಯುವುದೂ ಬೇಡ. ಆದರೆ, ಇದನ್ನು ಯಾರಿಗೆ ಹೇಳುವುದು?...'

ಅವರೇ ಹೇಳಿದರು "ನಿಮಗೆ ಗೊತ್ತಿರಲಿಕ್ಕಿಲ್ಲ. ರಾಜ್ಯದಲ್ಲಿ ಖಾದಿ ಉದ್ಯಮಕ್ಕೆ ಬಂಗಾರಪ್ಪ ಬಿಟ್ಟರೆ ಈಗಿನ ಸದಾನಂದಗೌಡ ಸರ್ಕಾರವೇ ಒಂದಿಷ್ಟು ಉತ್ತೇಜನ ಕೊಟ್ಟುದು. ಬಂಗಾರಪ್ಪನವರು ಒಂದು ಖಾದಿ ಲಡಿಗೆ ಹತ್ತು ಪೈಸೆ ಪ್ರೋತ್ಸಾಹಧನ ಕೊಟ್ಟಿದ್ದರು. ಸದಾನಂದಗೌಡರು ಇಡೀ ವಲಯಕ್ಕೆ ಏಳು ಕೋಟಿ ರೂಪಾಯಿ ಇಟ್ಟಿದ್ದಾರೆ. ಸಾಯುವವರಿಗೆ ಇದು ಗುಟುಕು ನೀರು ಹಾಕಿ ಜೀವ ಹಿಡಿಸಿದಂತೆ. ಈ ನಡುವೆ ಬಂದ



ಯಾವ ಮುಖ್ಯಮಂತ್ರಿಗೂ ಖಾದಿ ಎಂಬ ಒಂದು ಉದ್ಯಮ ಇದೆ ಎಂದು ನೆನಪಾಗಲಿಲ್ಲ. ನಾವು ಹೇಳಿದರೂ ಅವರಿಗೆ ಅರ್ಥವಾಗಲಿಲ್ಲ.'

ಇದು ಅಸೂಕ್ಷ್ಮತೆಯ ಕಾಲ. ಯಾವುದಕ್ಕೂಯಾರೂ ಹೆಚ್ಚು ತಲೆ ಕೆಡಿಸಿಕೊಳ್ಳುವುದಿಲ್ಲ. ಒಂದು ಒತ್ತಡ ವಲಯ ಎಂಬುದು ಇಲ್ಲದೇ ಇದ್ದರೆ ಆಗುವುದು ಹೀಗೆಯೇ, ಪ್ರಸನ್ನ ಅವರು ಕೆಲವು ದಿನಗಳ ಹಿಂದೆ ಜವಳಿ ಸಚಿವರು ಕರೆದ ಒಂದು ಸಭೆಗೆ ಹೋಗಿದ್ದರು. ಕೈಮಗ್ಗ ಕ್ಷೇತ್ರದ ಉದ್ಧಾರ ಕುರಿತು ಅಲ್ಲಿ ಚರ್ಚೆ ನಡೆಯಬೇಕಿತ್ತು. ಸಭೆಗೆ ಬಂದವರೆಲ್ಲ ವಿದ್ಯುತ್ ಮಗ್ಗ ಇಟ್ಟುಕೊಂಡ ಸಾಹುಕಾರರು. ಕೈಮಗ್ಗ ಕ್ಷೇತ್ರದ ಬಗ್ಗೆ ಮಾತನಾಡಿದವರು ಪ್ರಸನ್ನ ಮಾತ್ರ. ಅದು ವಿಪರ್ಯಾಸವೇ? ದುರಂತವೇ ಗೊತ್ತಿಲ್ಲ. ಅವರ ಮಾತು ಯಾರಿಗೂ ಅರ್ಥವಾಗಲಿಲ್ಲ. ಸಭೆ ಮುಂದಕ್ಕೆ ಹೋಯಿತು. ಕೈಮಗ್ಗ ಮತ್ತು ಖಾದಿ ಕ್ಷೇತ್ರ ಹೀಗೆ ದಯನೀಯ ಸ್ಥಿತಿ ಅನುಭವಿಸುತ್ತಿರುವುದಕ್ಕೆ ಅದರ ಪರವಾಗಿ ಗಟ್ಟಿಯಾಗಿ ಮಾತನಾಡುವ ಒಂದು ವಕೀಲಿ ವಲಯವಿಲ್ಲ. ಅಲ್ಪಸ್ವಲ್ಪ ವಕೀಲಿ ಮಾಡುವವರ ದನಿ ಸರ್ಕಾರಕ್ಕೆ ಕೇಳುತ್ತಿಲ್ಲ. 'ದೇಸಿ'ಯಂಥ ಒಂದು ಧರ್ಮದರ್ಶಿ ಸಂಸ್ಥೆ ಮಾಡುವಷ್ಟನ್ನೂ ಸರ್ಕಾರ ಮಾಡದೇ ಇರುವುದಕ್ಕೆ ತಾತ್ಸಾರ ಕಾರಣ ಎನ್ನೋಣವೇ? ಅಜ್ಞಾನ ಕಾರಣ ಎನ್ನೋಣವೇ?

೦೧.೦೪.೨೦೧೨

**ಮಲಪ್ರಭೆ ಎಂಬ ಗಂಗೆ ಗಟಾರವಾಗಿ..**

ಅದು ಅಕ್ಷರಶಃ ಏಕಾಂಗಿ ಹೋರಾಟ. ಅದರಲ್ಲಿ ವೈಯಕ್ತಿಕ ಹಿತಾಸಕ್ತಿಯೇನೂ ಇಲ್ಲ. ಒಂದು ತಾಲ್ಲೂಕು ಕೇಂದ್ರ ಮತ್ತು ಸುತ್ತಮುತ್ತಲಿನ ೩೪ ಹಳ್ಳಿಗಳಿಗೆ ಶುದ್ಧ ಕುಡಿಯುವ ನೀರು ಕೊಡಬೇಕು ಎಂದು ಒಬ್ಬ ಹೆಣ್ಣು ಮಗಳು ಕಂಬ ಕಂಬ ಅಲೆಯುತ್ತಿದ್ದಾರೆ. ವಿಧಾನಸೌಧದ ಕಂಬಗಳ ಮೌನ ನೋಡಿ ಎದುರಿನ ಕೆಂಪು ಕಟ್ಟಡದ ಮೊರೆ ಹೋಗಿದ್ದಾರೆ. ಆದರೂ ಅವರಿಗೆ ಸಿಕ್ಕ ಯಶಸ್ಸು ಅಲ್ಪಸ್ವಲ್ಪ.

ಡಾ. ಪೂರ್ಣಿಮಾ ಗೌರೋಜಿ ಎಂಬ ಈ ನೇಕಾರ ಹೆಣ್ಣುಮಗಳು ಅಥಣಿ ಹತ್ತಿರ ವಿಶಾಲ ಕೃಷ್ಣಾ ನದಿಯ ದಂಡೆಯಲ್ಲಿ ಬೆಳೆದವರು. ಮದುವೆಯಾಗಿ ಗಂಡನ ಮನೆಗೆಂದು ರಾಮದುರ್ಗಕ್ಕೆ ಬಂದರು. ಮನೆಯ ಅಂಚಿನಲ್ಲಿಯೇ ನದಿ, ನದಿಯಲ್ಲಿ ನೀರು ಇಲ್ಲ. ಅದರ ಹರಿವಿನ ಗುಂಟ ಆಪು ಎಂಬ ವಿಷಕಾರಿ ಜೊಂಡು ಸಸ್ಯ ಆಳೆತ್ತರ ಬೆಳೆದಿದೆ. ಅಲ್ಲಲ್ಲಿ ನೀರು ಮಡುಗಟ್ಟಿ ನಿಂತಿದೆ. ಮಡುಗಟ್ಟಿ ನಿಂತ ನೀರು ಕೊಳೆಯುತ್ತದೆ. ಕೊಳೆತ ನೀರಿಗೆ ಚರಂಡಿ ನೀರಿನ ವಾಸನೆ ಬರುತ್ತದೆ. ಅಲ್ಲಿ ಹಂದಿಗಳು ಮೈಚಾಚಿ ಮಲಗಿವೆ. ಒಂದು ಕಾಲದಲ್ಲಿ ೧೫೦ ಮೀಟರ್ ಅಗಲ ಹರಿಯುತ್ತಿದ್ದ ನದಿಯ ಪಾತ್ರ ಈಗ ಐದಾರು ಅಡಿಗೆ ಇಳಿದಿದೆ. ನದಿಯ ಎರಡೂ ಅಂಚಿನ ರೈತರು ನದಿಯ ಪಾತ್ರವನ್ನೇ ಅತಿಕ್ರಮಿಸಿ ಕಬ್ಬು ಬೆಳೆಯುತ್ತಿದ್ದಾರೆ.

ಎಲ್ಲೋ ತಗ್ಗಿನಲ್ಲಿ ನಿಂತ ತುಸು ನೀರನ್ನು ಎತ್ತಿ ರಾಮದುರ್ಗದ ಮತ್ತು ಸುತ್ತಮುತ್ತಲಿನ ೩೪ ಹಳ್ಳಿಗಳಿಗೆ ಪೂರೈಸಲಾಗುತ್ತಿದೆ.

ಇಂಥ ನೀರು ಕುಡಿದರೆ ಕಾಮಾಲೆ, ಅತಿಸಾರ, ಕ್ಷಯದಂಥ ರೋಗಗಳು ಹಬ್ಬುತ್ತವೆ. ೧೧ ವರ್ಷಗಳ ಹಿಂದೆಯೇ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಈ ನೀರಿನಲ್ಲಿ ಕಬ್ಬಿಣದ ಅಂಶ ವಿಪರೀತ ಇರುವುದರಿಂದ ಇದು ಕುಡಿಯಲು ಯೋಗ್ಯವಲ್ಲ ಎಂದು ವರದಿ ಕೊಟ್ಟಿದೆ. ಅದನ್ನು ತರಿಸಿಕೊಂಡವರು ಕೂಡ ಈ ಮಹಿಳೆಯೇ, ಅವರು ಹೀಗೆ ತಲೆಕೆಡಿಸಿಕೊಳ್ಳಲು ಕಾರಣವಿತ್ತು. ನದಿಯ ಅಂಚಿನಲ್ಲಿ ಮನೆ. ಅಲ್ಲಿಯೇ ಪೂರ್ಣಿಮಾ ಆಯುರ್ವೇದ ಕ್ಲಿನಿಕ್ ನಡೆಸುತ್ತಿದ್ದರು. ಅವರ ಬಳಿ ಚಿಕಿತ್ಸೆಗೆ ಬರುತ್ತಿದ್ದ ಬಹುಪಾಲು ಜನರು ಅತಿಸಾರ ಮತ್ತು ಕಾಮಾಲೆ ಸಮಸ್ಯೆಯಿಂದ ಬಳಲುತ್ತಿದ್ದರು. ಅದಕ್ಕೆ ಕಾರಣ ನದಿ ದಂಡೆಯಲ್ಲಿಯೇ ಇತ್ತು. ಅದಕ್ಕೆ ಪರಿಹಾರವನ್ನೂ ಅವರೇ ಹುಡುಕತೊಡಗಿದರು.

ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಕಣಕುಂಬಿಯಲ್ಲಿ ಹುಟ್ಟುವ ಮಲಪ್ರಭೆ ನದಿ ಸುಮಾರು ೧೬೦ ಕಿಲೋ ಮೀಟರ್ ಹರಿದು ಕೂಡಲಸಂಗಮದಲ್ಲಿ ಕೃಷ್ಣಾ ನದಿಯನ್ನು ಸೇರುತ್ತದೆ. ೧೯೭೩ರಲ್ಲಿ ಸವದತ್ತಿ ತಾಲ್ಲೂಕಿನ ನವಿಲುತೀರ್ಥದ ಬಳಿ ಅಣೆಕಟ್ಟೆ ಕಟ್ಟಿ ೪೦ ಟಿಎಂಸಿ ಅಡಿ ನೀರು ಸಂಗ್ರಹಿಸಲು ಶುರು ಮಾಡಿದ ಮೇಲೆ ಕೆಳಹಂತದ ಊರುಗಳಲ್ಲಿ ನೀರಿನ ಕೊರತೆ ಶುರುವಾಯಿತು. ಅಣೆಕಟ್ಟೆ ಕಟ್ಟುತ್ತಿದ್ದಂತೆಯೇ ಈ ಸಮಸ್ಯೆ ಶುರುವಾಗಲಿಲ್ಲ. ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳಿಗೆ ಇದೇ ಅಣೆಕಟ್ಟೆಯಿಂದ ಕುಡಿಯುವ ನೀರು ಪೂರೈಸುವ ಯೋಜನೆ ಹಾಕಿಕೊಳ್ಳುತ್ತಿದ್ದಂತೆಯೇ ನದಿಯ ಕೆಳಭಾಗದಲ್ಲಿ ನೀರಿನ ಹರಿವು ಕಡಿಮೆಯಾಯಿತು. ಈ ಅಣೆಕಟ್ಟೆ ನಿರ್ಮಾಣವಾದ ನಂತರ ಅದು ತುಂಬಿದ್ದು ಐದಾರು ಸಾರಿ ಮಾತ್ರ ಇರಬೇಕು. ಅವಳಿ ನಗರಗಳು ರಕ್ಕಸವೇಗದಲ್ಲಿ ಬೆಳೆಯುತ್ತ ಹೋದಂತೆ ಅವುಗಳ ದಾಹವೂ ಹೆಚ್ಚುತ್ತಹೋಯಿತು. ಅಣೆಕಟ್ಟೆಯಲ್ಲಿ ಸಂಗ್ರಹವಾದ ನೀರು ಮೂರು ಹಂತಗಳ ಕುಡಿಯುವ ನೀರಿಗೇ ಸಾಕಾದಂತೆ ಆಯಿತು. ಬೆಳೆಯುವ ನಗರಗಳಿಗೆ ಪಟ್ಟಣಗಳು, ಹಳ್ಳಿಗಳು ಬಲಿಯಾಗಬೇಕಾಯಿತು. ನದಿಯ ಕೆಳಹಂತದ ಊರುಗಳಿಗೂ ಶುದ್ಧ ಕುಡಿಯುವ ನೀರು ಬೇಕು, ಬರೀ ದೊಡ್ಡ ನಗರಗಳಿಗೆ ಕೊಟ್ಟರೆ ಸಾಲದು ಎಂದು ಯೋಜಕರಿಗೆ ಹೊಳೆಯಲೇ ಇಲ್ಲ.

ಅಣೆಕಟ್ಟೆ ನಿರ್ಮಾಣಕ್ಕಿಂತ ಮುಂಚೆ ೧೫೦ ಮೀಟರ್ ಅಗಲ ಹರಿಯುತ್ತಿದ್ದ ಮಲಪ್ರಭೆ ಒಂದು 'ಸಂಸ್ಕೃತಿ'ಯಾಗಿದ್ದಳು. ಹೆಣ್ಣು ಮಕ್ಕಳು ನದಿಗೆ ಬಟ್ಟೆ ಒಗೆಯಲು ಹೋಗುತ್ತಿದ್ದರು; ಕಷ್ಟ ಸುಖ ಹಂಚಿಕೊಳ್ಳುತ್ತಿದ್ದರು. ನದಿಯಲ್ಲಿ ನೀರು ಕಡಿಮೆಯಿದ್ದಾಗ ಅಂಚಿನ ಬಿಳಿ ಮರಳಿನಲ್ಲಿ ಮಕ್ಕಳು ಆಟವಾಡುತ್ತಿದ್ದರು, ಹಿರಿಯರು ಕುರಿತು ಹರಟೆ ಹೊಡೆಯುತ್ತಿದ್ದರು. ಹುಣ್ಣಿಮೆಯ ಚಂದಿರನ ಬೆಳಕಿನಲ್ಲಿ ಮಡಕೆ ತುಂಬ ಮೊಸರು, ಬುಟ್ಟಿ ತುಂಬ ಅವಲಕ್ಕಿ ಕಟ್ಟಿಕೊಂಡು ಹೋಗಿ ಮಧ್ಯರಾತ್ರಿ ವರೆಗೆ ಮರಳಿನಲ್ಲಿ ಕುಳಿತು ತಿಂದು ಸಂಭ್ರಮಿಸಿ ಬರುತ್ತಿದ್ದರು. ನದಿಯಲ್ಲಿ ಹರಿಯುವ ಆಳೆತ್ತರದ ನೀರಿನಲ್ಲಿ ಮಕ್ಕಳು ಈಜು ಹೊಡೆಯುತ್ತಿದ್ದರು. ರೈತರು ಎತ್ತಿಗೆ ಸ್ನಾನ ಮಾಡಿಸುತ್ತಿದ್ದರು. ಅದೆಲ್ಲ ಒಂದು ಹಬ್ಬದಂಥ ನೆನಪು. ನದಿಗೆ ಮಹಾಪೂರ ಬಂದಾಗ ಊರು ಒಂದು ದ್ವೀಪವಾಗುತ್ತಿತ್ತು. ಬೇರೆ ಊರುಗಳ ಜತೆಗಿನ ಸಂಪರ್ಕ ಕಡಿದು ಹೋಗುತ್ತಿತ್ತು. ಆದರೂ ಜನರಿಗೆ



ಬೇಸರವಾಗುತ್ತಿರಲಿಲ್ಲ. ತುಂಬಿ ಹರಿಯುವ 'ಗಂಗೆ'ಯನ್ನು ನೋಡಿ ಸಂತೋಷ ಪಡುತ್ತಿದ್ದರು.

ಅತ್ತ ನವಿಲುತೀರ್ಥದ ಬಳಿ ಅಣೆಕಟ್ಟೆ ಕಟ್ಟಿ ನೀರು ಸಂಗ್ರಹಿಸಿದರು. ಇತ್ತ ಕೆಳಭಾಗದಲ್ಲಿ ನೀರು ಹರಿಯುವುದು ನಿಂತುಹೋಯಿತು. ಬತ್ತಿ ಹೋದ ನದಿಯಲ್ಲಿ ಎದ್ದು ಕಂಡ ಮರಳನ್ನು ಮಾರಾಟ ಮಾಡಿ ದುಡ್ಡು ಮಾಡಬಹುದು ಎಂದು ಪುರಸಭೆಗೆ ಹೊಳೆಯಿತು. ಎಲ್ಲ ಮರಳು ಎತ್ತಿ ಮಾರಿಬಿಟ್ಟರು. ನದಿಪಾತ್ರದಲ್ಲಿ ಬರೀ ಹೂಳು ಉಳಿಯಿತು. ಆಪು ಬೆಳೆಯತೊಡಗಿತು. ಆಪನ್ನು ಕತ್ತರಿಸಿ ರೈತರು ತಮ್ಮ ಹೊಲವನ್ನು ನದಿಯ ನಡುಪಾತ್ರದ ವರೆಗೆ ತಂದು ನಿಲ್ಲಿಸಿದರು. ಎಲ್ಲರಿಗೂ ವಿಸ್ತರಿಸುವ ಆಸೆ. ಅಕ್ರಮವಾಗಿಯಾದರೂ ಪರವಾಗಿಲ್ಲ. ಒಂದು ಕಾಲದಲ್ಲಿ ತಮ್ಮ ಹೊಲಕ್ಕೆ ನೀರು ಕೊಟ್ಟ ನದಿಯ ಪಾತ್ರವನ್ನು ನುಂಗಿ ಹಾಕಿದರೂ ಪರವಾಗಿಲ್ಲ ಎಂದುಕೊಂಡರು. ಈಗ ರೈತರಿಗೆ ಹೊಲಕ್ಕೂ ನೀರಿಲ್ಲ. ಜನರಿಗೆ ಕುಡಿಯಲೂ ಇಲ್ಲ. ಆದರೂ ಯಾರೂ ದೊಡ್ಡದಾಗಿ ಹೋರಾಟ ಮಾಡಿದ ನಿದರ್ಶನ ಕಾಣಲಿಲ್ಲ.

ಒಂಬತ್ತು ವರ್ಷಗಳ ಹಿಂದೆ ಪೂರ್ಣಿಮಾ ಗೌರೋಜಿ ಹೈಕೋರ್ಟಿನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದರು. ಅರ್ಜಿ ಜತೆಗೆ ಚರಂಡಿಯಂತೆ ಕಾಣುತ್ತಿದ್ದ ನದಿಯ ಅಂಚಿನಲ್ಲಿ ನಿಂತ ತಮ್ಮ ಚಿತ್ರವನ್ನೂ ಕಳುಹಿಸಿಕೊಟ್ಟಿದ್ದರು. ಆಗಿನ ಮುಖ್ಯ ನ್ಯಾಯಮೂರ್ತಿ ಎನ್.ಕೆ. ಜೈನ್, 'ಏನ್ರಿ ಒಬ್ಬ ಮಹಿಳೆ ಒಂದು ಊರಿನ ಕುಡಿಯುವ ನೀರಿಗಾಗಿ ಹೀಗೆ ಹೋರಾಟ ಮಾಡುತ್ತಿದ್ದಾಳೆ. ಏನಾದರೂ ಮಾಡಿ' ಎಂದು ಸರ್ಕಾರಕ್ಕೆ ತಾಕೀತು ಮಾಡಿದರು. ನದಿಯ ಎರಡೂ ದಂಡೆಯ ಅತಿಕ್ರಮಣವನ್ನು ತೆಗೆಯುವುದಾಗಿ ಮತ್ತು ರಾಮದುರ್ಗ ಹಾಗೂ ಸುತ್ತಮುತ್ತಲಿನ ಊರುಗಳಿಗೆ ಶುದ್ಧ

ಕುಡಿಯುವ ನೀರು ಪೂರೈಸುವುದಾಗಿ ಸರ್ಕಾರ ಭರವಸೆ ಕೊಟ್ಟಿತು. ಹೈಕೋರ್ಟು ಅರ್ಜಿಯನ್ನು ವಜಾ ಮಾಡಿತು. ಆದರೆ, ಅತಿಕ್ರಮಣ ತೆರವು ಮಾಡಿ ಎರಡೂ ದಂಡೆಯಲ್ಲಿ ಕಟ್ಟೆ ಕಟ್ಟಲು ಸರ್ಕಾರ ೫.೫ ಕೋಟಿ ರೂಪಾಯಿ ವೆಚ್ಚದ ಪ್ರಸ್ತಾವವನ್ನೂ ಸಿದ್ಧ ಮಾಡಿತು. ಎರಡು ವರ್ಷಗಳಲ್ಲಿ ಈ ಪ್ರಸ್ತಾವ ೭೫ ಕೋಟಿ ರೂಪಾಯಿಗೆ ಏರಿತು. ಅದಾಗಿ ಮತ್ತೆ ಆರು ವರ್ಷಗಳು ಕಳೆದು ಹೋಗಿವೆ. ಪರಿಷ್ಕೃತ ಪ್ರಸ್ತಾವ ಸಿದ್ಧವಾದಂತೆ ಕಾಣುವುದಿಲ್ಲ; ಕಟ್ಟೆ ಕಟ್ಟುವ ಮಾತು ದೂರವೇ ಉಳಿಯಿತು. ನದಿಯ ಅಂಚಿನ ಅತಿಕ್ರಮಣವನ್ನು ತೆರವು ಮಾಡಲು ಹೊಲಗಳ ಮಾಲೀಕರಿಗೆ ನೋಟಿಸ್ ನಿಡುತ್ತೇವೆ ಎಂದೂ ಸರ್ಕಾರ ಹೈಕೋರ್ಟಿಗೆ ಲಿಖಿತ ಭರವಸೆ ಕೊಟ್ಟಿತ್ತು. ಇದುವರೆಗೆ ತೆರವು ಹೋಗಲಿ ಒಂದು ನೋಟಿಸ್ ಕೂಡ ಜಾರಿಯಾದಂತೆ ಕಾಣುವುದಿಲ್ಲ. ನದಿಯ ಪಾತ್ರವೂ ಬದಲಾಗಲಿಲ್ಲ. ಕುಡಿಯುವ ನೀರಿನ ಸ್ಥಿತಿಯೂ ಸುಧಾರಿಸಲಿಲ್ಲ. ನದಿಯಲ್ಲಿ ನೀರು ಕಡಿಮೆಯಾಯಿತು ಎಂದು ಪುರಸಭೆಯವರು ಊರಿನಲ್ಲಿ ಕಂಡ ಕಂಡಲ್ಲಿ ಕೊಳವೆ ಬಾವಿ ಕೊರೆದರು. ಹೀಗೆ ಕೊರೆದ ೩೭ ಕೊಳವೆ ಬಾವಿಗಳ ಪೈಕಿ ೧೫ ಕೊಳವೆ ಬಾವಿಗಳ ನೀರು ಕುಡಿಯಲು ಯೋಗ್ಯವಾಗಿಲ್ಲ ಎಂದು ಮತ್ತೊಂದು ವರದಿ ಬಂತು. ಜನರು ಹೇಗೆ ಬದುಕುತ್ತಾರೆ ಎಂಬುದೇ ಒಂದೊಂದು ಸಾರಿ ವಿಸ್ಮಯ!



ಹೈಕೋರ್ಟಿಗೆ ಸರ್ಕಾರ ಕೊಟ್ಟ ಭರವಸೆಯನ್ನು ಮತ್ತೆ ನೆನಪಿಸಲು ಪೂರ್ಣಿಮಾ ಬೆಳಗಾವಿ ಜಿಲ್ಲಾಧಿಕಾರಿಗಳ ಕಚೇರಿಯಿಂದ ಬೆಂಗಳೂರಿನ ವಿಧಾನಸೌಧದ ವರೆಗೆ ಅಲೆದುದಕ್ಕೆ ಲೆಕ್ಕವಿಲ್ಲ. ಇಲ್ಲಿ ಹೋದರೆ, ಅಲ್ಲಿಗೆ ಹೋಗಿ, ಅಲ್ಲಿ ಹೋದರೆ ಇಲ್ಲಿಗೆ ಏಕೆ ಬಂದಿರಿ ಅಲ್ಲಿಗೇ ಹೋಗಬೇಕು ಎಂದು ಅಧಿಕಾರಿಗಳು ಇವರನ್ನು ಕಂಬ ಕಂಬ ಸುತ್ತಿಸಿದರೇ ಹೊರತು ಕೆಲಸವೇನೂ ಆಗಲಿಲ್ಲ. ಇವರು ಹೈಕೋರ್ಟಿಗೆ ಅರ್ಜಿ ಸಲ್ಲಿಸಿದಾಗಲೇ 'ಈ ಮಹಿಳೆಗೆ ಎಚ್ಚರಿಕೆ ನೀಡುವಂಥ ದಂಡ ಕಟ್ಟಿ ಅರ್ಜಿ ವಜಾ ಮಾಡಬೇಕು' ಎಂದು ಕೋರಿದ್ದ ಸರ್ಕಾರದಿಂದ ಹೆಚ್ಚೇನೂ ನಿರೀಕ್ಷಿಸುವ ಹಾಗೂ ಇರಲಿಲ್ಲ! ಹೋಗಲಿ, ಬೇರೆ ಊರಿನಿಂದ ನಮ್ಮ ಊರಿಗೆ ಸೊಸೆಯಾಗಿ ಬಂದ ಮಹಿಳೆ ಹೀಗೇಕೆ ಸುತ್ತಬೇಕು ನಾವೂ ಏನಾದರೂ ಆಕೆಗೆ ಸಹಾಯ ಮಾಡಬೇಕು, ನೆರವಿಗೆ ನಿಲ್ಲಬೇಕು ಎಂದು ಊರಿನ ಯಾರಿಗೂ ಅನಿಸಲೂ ಇಲ್ಲ. ಅವರು ಮುಂದೆ ಬರಲೂ ಇಲ್ಲ. 'ಒಬ್ಬ ಹೆಣ್ಣು ಮಗಳು ತಾನೇ? ಆಕೆ ಇನ್ನೇನು ಏನು ಮಾಡಿಯಾಳು' ಎಂದು ಶಾಸಕರು, ಸಂಸದರೂ ತಲೆಕೆಡಿಸಿಕೊಳ್ಳಲೇ ಇಲ್ಲ.

ಈಗ ಪೂರ್ಣಿಮಾ ಮತ್ತೆ ಸರ್ಕಾರದ ವಿರುದ್ಧ ನ್ಯಾಯಾಲಯ ನಿಂದನೆ ಅರ್ಜಿ ಸಲ್ಲಿಸಲು ರಾಜ್ಯಪಾಲರ ಅನುಮತಿ ಕೇಳಿದ್ದಾರೆ. ಸರ್ಕಾರ ನ್ಯಾಯಾಲಯಕ್ಕೆ ಕೊಟ್ಟ ಭರವಸೆಗಳನ್ನಾದರೂ ಈಡೇರಿಸುವಂತೆ ಆದೇಶಿಸಬೇಕು

ಎಂದು ಅರ್ಜಿಯಲ್ಲಿ ಕೋರಿಕೊಳ್ಳಲು ನಿರ್ಧರಿಸಿದ್ದಾರೆ. ರಾಜ್ಯಪಾಲರು ಇನ್ನೂ ಅನುಮತಿ ಕೊಟ್ಟಿಲ್ಲ. ನನ್ನ ಹೋರಾಟಕ್ಕೆ ಊರಿನಲ್ಲಿ ಬೆಂಬಲ ಸಿಕ್ಕಲಿಲ್ಲ. ಸರ್ಕಾರದಿಂದಲೂ ಪ್ರತಿಕ್ರಿಯೆಯಿಲ್ಲ. ಬೆಂಗಳೂರಿನಲ್ಲಿರುವ ಸರ್ಕಾರಕ್ಕೆ ಗೊತ್ತಾಗುವಂತೆ ನೀವು ಬರೆಯಬೇಕು. ಅಂದರೆ ೨೪ ಗಂಟೆಯಲ್ಲಿ ನಮ್ಮ ಊರಿಗೆ ನ್ಯಾಯ ಸಿಗುತ್ತದೆ' ಎಂದು ಪೂರ್ಣಿಮಾ ಗೌರೋಜಿ ನನಗೆ ಪತ್ರ ಬರೆದಿದ್ದಾರೆ. ಅವರಿಗೆ ನನ್ನ ಮೇಲೆ ಇರುವ ಭರವಸೆ ನನಗೇ ಇಲ್ಲ!

೧೫.೦೪.೦೨



## ಇಂಥ ಚುನಾವಣೆ ಸಾಹಿತ್ಯ ಪರಿಷತ್ತಿಗೆ ಬೇಕಿರಲಿಲ್ಲ

ಕನ್ನಡ ಸಾಹಿತ್ಯ ಪರಿಷತ್ತಿಗೆ ಇಂಥ ಚುನಾವಣೆ ಬೇಕಿರಲಿಲ್ಲ. ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯ ರಾಜ್ಯ ಅಧ್ಯಕ್ಷತೆ ಮತ್ತು ಜಿಲ್ಲಾ ಅಧ್ಯಕ್ಷತೆಗೆ ಮೊನ್ನೆ ನಡೆದ ಚುನಾವಣೆ, ಅದಕ್ಕೆ ನಡೆದ ತಯಾರಿ ನೋಡಿದರೆ ಅದು ಯಾವುದೇ ವಿಧಾನಸಭೆ ಚುನಾವಣೆ ಮೀರಿಸುವಂತೆ ಇತ್ತು. ಅಭ್ಯರ್ಥಿಗಳು ಮನಸೋಇಚ್ಛೆ ಹಣ ಖರ್ಚು ಮಾಡಿದರು. ಅಲ್ಲಿ ಜಾತಿ ಇತ್ತು. ರಾಜಕೀಯ ಇತ್ತು. ಪಿತೂರಿ ಇತ್ತು. ಮಸಲತ್ತು ಇತ್ತು. ಅಧಿಕಾರದ ದುರ್ಬಳಕೆ ಇತ್ತು. ಏನು ಇರಲಿಲ್ಲ ಹೇಳಿ? ಇಂಥ ಚುನಾವಣೆ ಅಂಥ ಒಂದು ಸಂಸ್ಥೆಗೆ ಬೇಕಿರಲಿಲ್ಲ. ಚುನಾವಣೆಗಳು ಭ್ರಷ್ಟಾಚಾರದ ಗಂಗೋತ್ರಿ ಎಂದಿದ್ದರು ಜಯಪ್ರಕಾಶ ನಾರಾಯಣ. ಪರಿಷತ್ತಿಗೆ ಈಗ ನಡೆದಿರುವ ಚುನಾವಣೆಯ ವೈಖರಿ ನೋಡಿದರೆ ರಾಜಕೀಯವನ್ನು ಒಂದು 'ಬಂಡವಾಳ' ಎಂದುಕೊಂಡಿರುವ ರಾಜಕಾರಣಿಗಳಿಗೂ ಪರಿಷತ್ತಿಗೆ ಸ್ಪರ್ಧಿಸಿದ ವ್ಯಕ್ತಿಗಳಿಗೂ ಹೆಚ್ಚು ವ್ಯತ್ಯಾಸ ಇಲ್ಲ ಎನಿಸಿತು.

ರಾಜ್ಯ ಅಧ್ಯಕ್ಷತೆಗೆ ಸ್ಪರ್ಧಿಸಿದ್ದ ಒಬ್ಬ ಅಭ್ಯರ್ಥಿ ಮೂರು ಸಾರಿ ತನ್ನ ಮನವಿ ಪತ್ರವನ್ನು ಎಲ್ಲ ಮತದಾರರಿಗೆ ಕಳುಹಿಸಿಕೊಟ್ಟಿದ್ದರು. ಅದಕ್ಕೆ ಅವರು ಮಾಡಿದ ಖರ್ಚು ೧೨ ಲಕ್ಷ ರೂಪಾಯಿ ಮೀರಿತು. ಈ ಚುನಾವಣೆಯಲ್ಲಿ ಸ್ಪರ್ಧಿಸಿದವರು ಯಾರೂ ಭಾರಿ ಶ್ರೀಮಂತರು ಅಥವಾ ವೃತ್ತಿಪರ ರಾಜಕಾರಣಿಗಳು ಅಲ್ಲ. ಎಲ್ಲರ ಹಿನ್ನೆಲೆ ಎಲ್ಲರಿಗೂ ಗೊತ್ತು. ಇಷ್ಟೆಲ್ಲ ಹಣವನ್ನು ಅವರು ಏಕೆ ಖರ್ಚು ಮಾಡುತ್ತಾರೆ? ಯಾರಾದರೂ ಮನೆ ದುಡ್ಡು ಖರ್ಚು ಮಾಡಿ

ಸಮಾಜ ಸೇವೆ ಅಥವಾ ಸಾಹಿತ್ಯ ಸೇವೆ ಮಾಡುತ್ತಾರೆ ಎಂದರೆ ನಂಬಲು ಆಗುತ್ತದೆಯೇ? ಸಾಹಿತ್ಯ ಪರಿಷತ್ತು ಇಷ್ಟೊಂದು 'ಆಕರ್ಷಕ' ಎಂದು ಅನಿಸತೊಡಗಿದ್ದೇ ಒಂದು ಅಚ್ಚರಿ. ಈಗಿನ ಬಿಜೆಪಿ ಸರ್ಕಾರ ಪರಿಷತ್ತಿಗೆ ಕೊಡುತ್ತಿರುವ ಅನುದಾನವನ್ನು ಕೋಟಿಗಟ್ಟಲೆ ಹೆಚ್ಚಿಸಿದ್ದೇ ಅದರ ಆಕರ್ಷಣೆ' ಹೆಚ್ಚಲು ಕಾರಣವಾಯಿತು ಎಂದು ಸಾಮಾನ್ಯ ಜನ ಭಾವಿಸಿದರೆ ಅದು ತಪ್ಪು ಎಂದು ಹೇಳಲು ಆಗದು.

ಒಬ್ಬ ಅಭ್ಯರ್ಥಿ ಪರಿಷತ್ತಿನ ೧.೦೮ ಲಕ್ಷ ಮತದಾರರಿಗೆ ಬರೀ ಒಂದು ಪತ್ರ ಬರೆದರೆ ನಾಲ್ಕು ಲಕ್ಷ ರೂಪಾಯಿಗಿಂತ ಹೆಚ್ಚು ಖರ್ಚು ಆಗುತ್ತದೆ. ಬರೀ ಪತ್ರ ಬರೆದರೆ ಆಗದು ಎಂದು ಇಡೀ ರಾಜ್ಯವನ್ನು ಆತ ಸುತ್ತಬೇಕು. ಅಲ್ಲಿ ಸಭೆ ಮಾಡಬೇಕು. ಕೆಲವರಿಗಾದರೂ ಊಟ ಹಾಕಿಸಬೇಕು. ತನ್ನ ಗೆಲುವಿಗೆ ಸಹಕರಿಸಬೇಕು ಎಂದು ಕೋರಿ ಜಿಲ್ಲಾ ಮಟ್ಟದ ಪ್ರಬಲ ಅಧ್ಯಕ್ಷ ಅಭ್ಯರ್ಥಿಯನ್ನು ಗುರುತಿಸಿ ಅವರಿಗೆ ತಲಾ ೪೦,೦೦೦ದಿಂದ ೫೦,೦೦೦ ರೂಪಾಯಿ ದುಡ್ಡು ಕೊಡಬೇಕು. ಬಹುತೇಕ ಅಭ್ಯರ್ಥಿಗಳು ಹೀಗೆ ಹಣ ಕೊಟ್ಟರು. ಕೆಲವರು ಗುಟ್ಟಾಗಿ ಇಬ್ಬರಿಗೂ ಹಣ ಕೊಟ್ಟು ತನಗೇ ಪ್ರಚಾರ ಮಾಡಬೇಕು ಎಂದು ಹೇಳಿಯೂ ಬಿಟ್ಟರು! ರಾಜ್ಯ ಅಧ್ಯಕ್ಷತೆಗೆ ಸ್ಪರ್ಧಿಸಿದ್ದ ಒಬ್ಬ ಅಭ್ಯರ್ಥಿಗೆ ಸಂಸದರೊಬ್ಬರು ಬೆನ್ನಿಗೆ ನಿಂತರು. ಹಣ ಖರ್ಚು ಮಾಡಿದರು. ತಂತ್ರವನ್ನೂ ಹೆಣೆದರು. ಇನ್ನೊಬ್ಬ ಅಭ್ಯರ್ಥಿಗೆ ಆಡಳಿತ ಪಕ್ಷ ಬೆಂಬಲ ಸೂಚಿಸಿತು. ಜಿಲ್ಲಾ ಮಟ್ಟದಲ್ಲಿ ಸ್ಪರ್ಧಿಸಿದ್ದ ಅಭ್ಯರ್ಥಿಗಳಿಗೆ ಶಾಸಕರು, ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು, ಶಿಕ್ಷಣ ಇಲಾಖೆ ಅಧಿಕಾರಿಗಳು ಸಹಾಯ ಮಾಡಿದರು. ಮಠಾಧೀಶರು ಎಲ್ಲ ಹಂತದಲ್ಲಿ ತಮ್ಮ ಪ್ರಭಾವ ಬೀರಲು ಹಿಂಜರಿಯಲಿಲ್ಲ. ಜಾತಿ ಎಲ್ಲ ಕಡೆಗೆ ಮುಖ್ಯವಾಗಿತ್ತು. ಒಂದು ಜಾತಿಯಲ್ಲಿಯೇ ಒಳಪಂಗಡಗಳವರು ಎದುರಾಳಿಗಳಾಗಿ ಕಾದಾಡಿದರು. ಆಯಾ ಒಳಪಂಗಡಗಳ ಮುಖಂಡರು ತಮ್ಮದೇ ಜಾತಿಯ ಇನ್ನೊಬ್ಬ ಒಳಪಂಗಡದ ಅಭ್ಯರ್ಥಿಯನ್ನು ಹಣಿಯಲು ಏನೇನು ಮಾಡಬೇಕೋ ಅದನ್ನೆಲ್ಲ ಮಾಡಿದರು. ಬಹುಶಃ ಇದೆಲ್ಲ ಬೇಡ ಎಂದೋ ಏನೋ ಮಂಡ್ಯ ಜಿಲೆ ಹೊರತುಪಡಿಸಿ, ಮಹಿಳೆಯರು ಈ ಸ್ಪರ್ಧೆಯಿಂದ ದೂರ ಉಳಿದರು! ಹೆಣ್ಣುಮಕ್ಕಳು ಪ್ರವೇಶಿಸಲು ಹಿಂಜರಿಯುವ ಒಂದು ಸಂಸ್ಥೆಯಲ್ಲಿ ದೊಡ್ಡ ಐಬು ಇದೆ ಎಂದೇ ಅರ್ಥ.

ಹಿಂದೆ ಇದೆಂದೂ ರೂಢಿಯಾಗಿರಲಿಲ್ಲ. ರಾಜ್ಯ ಅಧ್ಯಕ್ಷರ ಚುನಾವಣೆಗಾಗಿ ಮತದಾನ ನಡೆದ ಬೆಂಗಳೂರಿನ ನ್ಯಾಷನಲ್ ಕಾಲೇಜು ಆವರಣದಲ್ಲಿ ಮಾತ್ರವಲ್ಲ ಸುತ್ತಲಿನ ಪರಿಸರದಲ್ಲಿಯೂ ಅಭ್ಯರ್ಥಿಗಳ ಕಟೌಟ್‌ಗಳು ರಾರಾಜಿಸಿದುವು. ಕಳೆದ ಚುನಾವಣೆಯಲ್ಲಿಯೂ ಇಬ್ಬರು ಅಭ್ಯರ್ಥಿಗಳು ಹೀಗೆ ಕಟೌಟ್ ಹಾಕಿಸಿದ್ದರು. ಬಹುಶಃ ಕಟೌಟ್ ಸಂಸ್ಕೃತಿ ಪರಿಷತ್ತಿನ ಅಂಗಳಕ್ಕೆ ಆಗಲೇ ಕಾಲು ಇಟ್ಟಿತು. ಈ ಸಾರಿ ಈ ಪಿಡುಗು ಜಿಲ್ಲಾ ಮಟ್ಟಕ್ಕೂ ಹಬ್ಬಿತು. ರಾಜಕಾರಣಿಗಳೂ ನಾಚುವಂತೆ, ಎರಡೂ ಕೈ ಜೋಡಿಸಿ ನಿಂತ ಅಭ್ಯರ್ಥಿಗಳ ಕಟೌಟ್‌ಗಳು ರಸ್ತೆಗಳ ಉದ್ದಗಲಕ್ಕೆ ಕಾಣಿಸಿಕೊಂಡುವು. ಕೆಲವರು ಅಭ್ಯರ್ಥಿಗಳು ಜಿಲ್ಲಾ ಕೇಂದ್ರದಲ್ಲಿ ಬೈಕುಗಳ ಕ್ಯಾಲಿ ಮಾಡಿದರು. ಮೊದಲು ಬರೀ ಕರಪತ್ರ ಹಂಚಿ ಮತ ಕೇಳುತ್ತಿದ್ದ ಜಿಲ್ಲಾ ಅಧ್ಯಕ್ಷ ಅಭ್ಯರ್ಥಿಗಳು ಈ ಸಾರಿ ಪತ್ರಿಕೆಗಳಿಗೆ ಜಾಹೀರಾತು ಕೊಟ್ಟರು. ಅದು ಸ್ಥಳೀಯ ಪತ್ರಿಕೆಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ರಾಜ್ಯ ಮಟ್ಟದ

ಪತ್ರಿಕೆಗಳಿಗೂ ಜಾಹೀರಾತು ಕೊಟ್ಟರು. ಖರ್ಚಿನ ಚಿಂತೆ ಮಾಡಲಿಲ್ಲ. ಒಬ್ಬ ಮತದಾರರ ಮನೆಗೆ ಒಂದು ಸಾರಿಯಲ್ಲ ನಾಲ್ಕು ಸಾರಿ ಹೋದರು. ಅವರ ಮನೆಗೆ ಹೋಗಿ ಅವರು ಬಾಗಿಲು ತೆಗೆಯುತ್ತಿದ್ದಂತೆಯೇ ಸಾಷ್ಟಾಂಗ ನಮಸ್ಕಾರ ಹಾಕಿ ಕಾಲು ಗಟ್ಟಿಯಾಗಿ ಹಿಡಿದುಕೊಂಡು ನನಗೇ ಮತ ಹಾಕಬೇಕು ಎಂದು ಪಟ್ಟು ಹಿಡಿದರು. ಹೀಗೆ ಮನೆಗಳಲ್ಲಿ ಮಾತ್ರ ಸಾಷ್ಟಾಂಗ ಹಾಕಲಿಲ್ಲ, ರಸ್ತೆಯಲ್ಲಿ ಯಾರಾದರೂ ಮತದಾರರು ಸಿಕ್ಕರೆ ಅವರಿಗೂ ಇದೇ ಭಾಗ್ಯವಿತ್ತು!

ಯಾವ ಭಾಗ್ಯಕ್ಕೆ ಅಭ್ಯರ್ಥಿಗಳು ಇಷ್ಟೆಲ್ಲ ಹೆಣಗಿದರು? ಉತ್ತರ ಸರಳ, ಸ್ಪಷ್ಟ ಕೆಲವರಿಗೆ ಇದು ಊರಿನಲ್ಲಿ ಒಂದು ಪ್ರತಿಷ್ಠೆ, ಇನ್ನು ಕೆಲವರಿಗೆ ಇದು ಅಧಿಕಾರ. ಆದರೆ, ಬಹುತೇಕರಿಗೆ ಹಣ ಮಾಡುವ ಸರಳ ವಿಧಾನ. ಪ್ರತಿಯೊಂದು ಜಿಲ್ಲಾ ಸಮ್ಮೇಳನ ನಡೆಸಲು ಸರ್ಕಾರ ಐದು ಲಕ್ಷ ರೂಪಾಯಿಗಳ ಅನುದಾನ ಕೊಡುತ್ತದೆ. ಒಂದು ಸಾಹಿತ್ಯ ಸಮ್ಮೇಳನ ನಡೆಯುತ್ತದೆ ಎಂದರೆ ಊರಿನಲ್ಲಿ ಶ್ರೀಮಂತರು ದೇಣಿಗೆ ಕೊಡುತ್ತಾರೆ. ರಾಜ್ಯ ಮಟ್ಟದ ಸಮ್ಮೇಳನ ನಡೆಸುವ ಭಾಗ್ಯ ಸಿಕ್ಕರಂತೂ ಜಿಲ್ಲೆಯ ಅಧ್ಯಕ್ಷರ ಅದೃಷ್ಟ ಖುಲಾಯಿಸಿದಂತೆಯೇ. ಕೋಟಿ ಕೋಟಿ ಹಣ ಸಂಗ್ರಹಣೆ ಆಗುತ್ತದೆ. ಲೆಕ್ಕ ಯಾರು ಕೊಡುತ್ತಾರೆ? ಯಾರು ಕೇಳುತ್ತಾರೆ? ಗಂಗಾವತಿಯಲ್ಲಿ ನಡೆದ ೭೬ನೇ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ ಇದುವರೆಗೆ ಹೊರಗೆ ಬಂದಿಲ್ಲ. ಯಾರಾದರೂ ಕೇಳಿದ್ದಾರೆಯೇ? ಇಲ್ಲವಾದರೆ ಹಾಸ್ಟೆಲ್‌ಗಳಿಗೆ ಆಹಾರ ಧಾನ್ಯಗಳನ್ನು ಪೂರೈಕೆ ಮಾಡುವ ಒಬ್ಬ ವ್ಯಕ್ತಿ ಜಿಲ್ಲಾ ಘಟಕದ ಅಧ್ಯಕ್ಷತೆಗೆ ಏಕೆ ಸ್ಪರ್ಧಿಸುತ್ತಿದ್ದರು ಅದೂ ಸಾಹಿತ್ಯಕವಾಗಿ ಮತ್ತು ಸಾಮಾಜಿಕವಾಗಿ ಸಾಕಷ್ಟು ಜಾಗೃತಿ ಇರುವ ಒಂದು ಜಿಲ್ಲೆಯಲ್ಲಿ. ಅವರು ಗೆದ್ದರು ಎಂಬುದು ಇನ್ನೊಂದು ವಿಸ್ಮಯ.

ಜಿಲ್ಲಾ ಸಮ್ಮೇಳನ ಬಿಟ್ಟು ಸಾಹಿತ್ಯ ಪರಿಷತ್ತಿನ ಘಟಕಗಳು ಬೇರೆ ಏನಾದರೂ ಚಟುವಟಿಕೆ ಮಾಡುತ್ತವೆಯೇ? ಯಾರಿಗೂ ನೆನಪು ಇಲ್ಲ. ಸಾಹಿತ್ಯ ಪರಿಷತ್ತಿನ ಕೇಂದ್ರ ಘಟಕದಲ್ಲಿ ಸಾಕಷ್ಟು ದತ್ತಿ ನಿಧಿಗಳು ಇವೆ. ಅದರಲ್ಲಿ ಕೆಲವನ್ನು ಜಿಲ್ಲೆಗೂ ಹಂಚಲಾಗಿದೆ. ಆದರೆ, ಬರುವ ಬಡ್ಡಿ ಸಾಲದು ಎಂದೋ ಇನ್ನೇನೋ ಕಾರಣ ಹೇಳಿಯೋ ಉಪನ್ಯಾಸಗಳ ಏರ್ಪಾಟು ಆಗುವುದೇ ಇಲ್ಲ. ಕೆಲವರು ಜಾಣರು ಒಂದು ಆಮಂತ್ರಣ ಪತ್ರ ಮುದ್ರಿಸಿ ಕೇಂದ್ರ ಕಚೇರಿಗೆ ಕಳುಹಿಸಿ ಬಿಲ್ ಎತ್ತಿ ಬಿಡುತ್ತಾರೆ. ಇನ್ನು ಕೆಲವರು ಆ ಕಷ್ಟವನ್ನೂ ತೆಗೆದುಕೊಳ್ಳುವುದಿಲ್ಲ! ಕೆಲವು ವರ್ಷಗಳ ಹಿಂದೆ ಪರಿಷತ್ತಿನ ಆಗಿನ

ಕಾರ್ಯದರ್ಶಿಗಳು, ನಿಮ್ಮ ಜಿಲ್ಲೆಯಲ್ಲಿ ನಡೆದ ದತ್ತಿ ಉಪನ್ಯಾಸದ ಲೆಕ್ಕಪತ್ರ ಕೊಡಿ' ಎಂದು ಪಟ್ಟು ಹಿಡಿದರು. ಅದಾದ ಕೆಲವೇ ದಿನಗಳಲ್ಲಿ ನಡೆದ ಪರಿಷತ್ತಿನ ಕಾರ್ಯಕಾರಿಣಿ ಸಭೆಯಲ್ಲಿ ಎಲ್ಲ ಜಿಲ್ಲಾ ಅಧ್ಯಕ್ಷರು, 'ಪರಿಷತ್ತಿನ ಅಧ್ಯಕ್ಷರು ನೀವೋ ಅಥವಾ ಕಾರ್ಯದರ್ಶಿಯೋ? ನಮಗೆಲ್ಲ ಲೆಕ್ಕ ಕೇಳಲು ಅವರು ಯಾರು' ಎಂದು ಅಧ್ಯಕ್ಷರನ್ನು ತರಾಟೆಗೆ ತೆಗೆದುಕೊಂಡರು. ಅಧ್ಯಕ್ಷರು, ಕಾರ್ಯದರ್ಶಿಯನ್ನು ಪಕ್ಕಕ್ಕೆ ಕರೆದು ನೀವು ಸುಮ್ಮನೆ ಇದ್ದುಬಿಡಿ ಈ ಘಟಿಂಗರನ್ನು ಎದುರು ಹಾಕಿಕೊಂಡರೆ ನಾನು ನಿಮ್ಮನ್ನೇ ಕೈ ಬಿಡಬೇಕಾಗುತ್ತದೆ' ಎಂದು ಕಿವಿಮಾತು ಹೇಳಿದರು. ಅಲ್ಲಿಗೆ ದತ್ತಿ ಉಪನ್ಯಾಸಗಳ ತಿಥಿ ಆಚರಿಸಿದಂತೆ ಆಯಿತು!



ಸಾಹಿತ್ಯ ಪರಿಷತ್ತು ನೂರನೇ ವರ್ಷಕ್ಕೆ ಕಾಲಿಡುವ ಸಂದರ್ಭದಲ್ಲಿ ಅದರ ಮೂಲ ಉದ್ದೇಶಗಳು ಜೀರ್ಣಗೊಳ್ಳುವ ಪ್ರಕ್ರಿಯೆಯೂ ಆರಂಭವಾಗಿದೆಯೇ ಎಂದು ಭಯವಾಗುತ್ತದೆ. ಪರಿಷತ್ತಿಗೆ ಯಾರು ಸದಸ್ಯರಾಗಬೇಕು? ಯಾರು ಅಧ್ಯಕ್ಷರಾಗಬೇಕು ಎಂಬ ಪ್ರಶ್ನೆಗಳಿಗೆ ಇದುವರೆಗೆ ಉತ್ತರ ಸಿಕ್ಕಿಲ್ಲ. ಎಪ್ಪತ್ತರ ದಶಕದ ಕೊನೆಯಲ್ಲಿ ಪರಿಷತ್ತಿನ ಅಧ್ಯಕ್ಷರಾಗಿ ಸಾಹಿತಿ ಇರಬೇಕೇ? ಅಸಾಹಿತಿ ಇರಬಹುದೇ ಎಂಬ ವಾದ ಹುಟ್ಟಿಕೊಂಡಿತ್ತು. ಹಾ.ಮಾ. ನಾಯಕರು, ಕನಿಷ್ಠ ಒಂದು ಲೇಖನವನ್ನಾದರೂ ಬರೆದವರು ಪರಿಷತ್ತಿನ ಸದಸ್ಯರಾಗಬೇಕು ಎಂದು ಸಲಹೆ ಮಾಡಿದ್ದರು. ಕನ್ನಡ ಓದಲು ಬರೆಯಲು ಬರುವವರು ಸದಸ್ಯರಾಗಬಹುದು ಎಂಬ ನಿಯಮ ಈಗ ಇದೆ. ಆದರೆ, ತಮ್ಮ ಸಹಿ ಹಾಕಲು ಬಾರದವರೂ ಈಗ ಸದಸ್ಯರಾಗಿದ್ದಾರೆ. ಈ ಸಾರಿಯ ಚುನಾವಣೆಯಲ್ಲಿ ಅನೇಕರು ಎಡಗೈ ಹೆಬ್ಬೆಟ್ಟು ಒತ್ತಿ ಮತ ಹಾಕಿದ್ದಾರೆ!

ಪರಿಷತ್ತಿನ ಮತದಾರರ ಪಟ್ಟಿಯಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಮಂದಿ 'ದಿವಂಗತ ಸದಸ್ಯರು ಇದ್ದಾರೆ. ಅವರ ಹೆಸರಿನಲ್ಲಿ ಮತ ಹಾಕಿದ ಘಟನೆಯೂ ತೀರಾ ಈಚಿನ ವರ್ಷಗಳಲ್ಲಿ ನಡೆದಿತ್ತು. ಅವರನ್ನು ಗುರುತು ಹಚ್ಚುವುದು ಹೇಗೆ ಎಂಬ ಚಿಂತೆ ಪರಿಷತ್ತಿನ ಪದಾಧಿಕಾರಿಗಳಿಗೆ ಇದ್ದಂತೆ ಇದೆ. ಆದರೆ, ಪ್ರತಿ ತಿಂಗಳು ಹತ್ತರಿಂದ ಹನ್ನೆರಡು ಸಾವಿರ 'ಕನ್ನಡ ನುಡಿ' ಸಂಚಿಕೆಗಳು ವಾಪಸು ಬರುತ್ತಿವೆ: ಕಾರಣ ಒಂದೋ ಆ ಸದಸ್ಯ ಬದುಕಿಲ್ಲ ಅಥವಾ ಅವರ ವಿಳಾಸ ಬದಲಾಗಿದೆ. ಆ ಸದಸ್ಯ ಏನಾಗಿದ್ದಾರೆ ಎಂದು ತಿಳಿಯುವ ಪ್ರಯತ್ನವನ್ನು ಪರಿಷತ್ತು ಮಾಡಿದಂತೆ ಇಲ್ಲ. 'ಕನ್ನಡ ನುಡಿ' ಸಂಚಿಕೆಯಲ್ಲಿ ಪರಿಷತ್ತಿನ ಕಾರ್ಯಕ್ರಮಗಳ ಸುದ್ದಿ, ಒಂದಿಷ್ಟು ಲೇಖನಗಳು ಬಿಟ್ಟರೆ ಮತ್ತೇನೂ ಇರುವುದಿಲ್ಲ. ಸುದ್ದಿಯೂ ಹಳತಾದುದು. ಅದನ್ನು ಮುದ್ರಿಸಿ ಪ್ರಕಟಿಸುವ ಉದ್ದೇಶವೇನು ಎಂದು ಯಾರಿಗೂ ಗೊತ್ತಿದ್ದಂತೆ ಇಲ್ಲ. ಹೀಗೆ ಉದ್ದೇಶವಿಲ್ಲದ ಅನೇಕ ಕೆಲಸಗಳು ಪರಿಷತ್ತಿನಲ್ಲಿ ನಡೆಯುತ್ತಿರುವುದರಿಂದ ಇದರಲ್ಲಿ ಅಂಥ ವಿಶೇಷವೇನೂ ಇಲ್ಲ! ಹಿಂದೆ 'ಪರಿಷತ್ ಪತ್ರಿಕೆಗೆ ಇದ್ದ ಘನ ಉದ್ದೇಶಗಳು ಈಗ 'ಕನ್ನಡ ನುಡಿಗೆ ಇಲ್ಲ. ಆ ಬಗ್ಗೆ ಯಾರೂ ತಲೆ ಕೆಡಿಸಿಕೊಂಡಂತೆಯೂ ಕಾಣುವುದಿಲ್ಲ. ಪರಿಷತ್ತಿನ ಸುಧಾರಣೆ ಬಗ್ಗೆ ಅನೇಕ ಸಾರಿ ಚರ್ಚೆ ಆಗಿದೆ. ೧೯೮೦ರ ದಶಕದಲ್ಲಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಉತ್ತರ ಕರ್ನಾಟಕದ ಒಬ್ಬ ವಿದ್ವಾಂಸರನ್ನು ಆಯ್ಕೆ ಮಾಡಿದಾಗ ಅವರ 'ಅರ್ಹತೆ' ಪ್ರಶ್ನಿಸಿ ಬೆಂಗಳೂರಿನಲ್ಲಿ

ಪ್ರತಿಸಮ್ಮೇಳನವನ್ನೇ ಹಮ್ಮಿಕೊಳ್ಳಲಾಗಿತ್ತು. ಈಗ ಅಂಥ ಯಾವ ಗಂಭೀರ ಪ್ರತಿಭಟನೆಯೂ ಕಾಣುತ್ತಿಲ್ಲ. ವಾಗ್ವಾದಗಳನ್ನು ಮರೆತು ನಾವು ಎಲ್ಲವನ್ನೂ ಒಪ್ಪಿಕೊಳ್ಳುತ್ತಿರುವಂತೆ ಅನಿಸುತ್ತದೆ. ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಮಾತೃ ಸಂಸ್ಥೆ. ಇದು ಎಷ್ಟು ಸರಳವಾಗಿದ್ದಷ್ಟೂ ಅಷ್ಟು ಒಳ್ಳೆಯದು. ಎಷ್ಟು ಸ್ವಚ್ಛವಾಗಿದ್ದಷ್ಟೂ ಅಷ್ಟು ಒಳ್ಳೆಯದು. ಮನೆಯಲ್ಲಿ ಕುಳಿತು ಗೊಣಗುವ ಸಾಹಿತಿಗಳಿಗೆ ಪರಿಷತ್ತನ್ನು ಮತ್ತೊಮ್ಮೆ ಕಟ್ಟುವ ಅವಕಾಶ ಬಾಗಿಲು ತಟ್ಟುತ್ತಿದೆ. ಅವರಲ್ಲದೆ ಈ ಕೆಲಸವನ್ನು ಬೇರೆ ಯಾರು ಮಾಡಬೇಕು?

*೦೬.೦೫.೧೨*

೬೪ / ನಾಲ್ಕನೇ ಆಯಾಮ - ೫ನೇ ಸಂಪುಟ

**ಊರು ಲೂಟಿಯಾದ ಮೇಲೆ**

**ಕೋಟೆ ಬಾಗಿಲು ಹಾಕಬಾರದು**

ಇನ್ನು ಏಳೆಂಟು ವರ್ಷ ಅಷ್ಟೆ. ಬೆಂಗಳೂರಿನಲ್ಲಿ ಜಲಕ್ಷಾಮ ಬರಲಿದೆ. ಸರ್ಕಾರ ಈಗಲೇ ಎಚ್ಚೆತ್ತುಕೊಳ್ಳದಿದ್ದರೆ ಬೆಂಗಳೂರಿನ ಜನ ಕುಡಿಯುವ ನೀರಿಗಾಗಿ ಹಾಹಾಕಾರ ಮಾಡುತ್ತಾರೆ. ಕುಡಿಯುವ ನೀರಿನ ಅಭಾವದಿಂದ ಸಾಮ್ರಾಜ್ಯಗಳೇ ಪತನಗೊಂಡಿವೆ, ಯುದ್ಧಗಳೇ ಆಗಿವೆ, ಆಗುತ್ತವೆ' ಎಂದು ಸರ್ಕಾರಿ ಜಮೀನಿನ ಭೂಕಬಳಿಕೆ ಕುರಿತು 'ದುರಾಸೆ ಮತ್ತು ಷಾಮೀಲು ಎಂಬ ವರದಿ ಕೊಟ್ಟಿದ್ದ ಸರ್ಕಾರದ ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ D. ಬಾಲಸುಬ್ರಮಣಿಯನ್ ಹೇಳಿ ಬಹಳ ದಿನಗಳೇನೂ ಆಗಿಲ್ಲ. ಕಳೆದ ವರ್ಷದ ಜೂನ್‌ನಲ್ಲಿ ಅವರು ವರದಿ ಕೊಟ್ಟಿದ್ದರು. ಈ ವರ್ಷ ಇನ್ನೂ ಜೂನ್ ಬಂದಿಲ್ಲ. ಆಗಲೇ ಬೆಂಗಳೂರಿನಲ್ಲಿ ಕುಡಿಯುವ ನೀರಿಗಾಗಿ ಹಾಹಾಕಾರ ಆಗಿದೆ. ಯಾವ ಬಡಾವಣೆಯಲ್ಲಿಯೂ ಈ ಸಾರಿ ಸಮರ್ಪಕವಾಗಿ ನೀರು ಪೂರೈಕೆ ಆಗಿಲ್ಲ. ಕಾವೇರಿ ನೀರು ಬಿಟ್ಟರೆ ಕೊಳವೆ ಬಾವಿ ನೀರೇ ಉತ್ತರ ಎನ್ನುವಂತೆ ಆಗಿದೆ. ಆದರೆ, ಕೊಳವೆ ಬಾವಿಯ ಮಟ್ಟ ಪಾತಾಳಕ್ಕೆ ಇಳಿದಿದೆ. ನೀರು ಆಳಕ್ಕೆ ಇಳಿದಷ್ಟೂ ಅದರ ಗುಣಮಟ್ಟ ಕಡಿಮೆ ಆಗುತ್ತದೆ.

ಬಾಲಸುಬ್ರಮಣಿಯನ್ ಅವರ ವರದಿಯನ್ನು ಸರ್ಕಾರದಲ್ಲಿ ಇದ್ದವರು ಓದಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ಅವರು ವರದಿ

ಕೊಡುವುದೇ ಸರ್ಕಾರಕ್ಕೆ ಬೇಡವಾಗಿತ್ತು. ಅವರೇ ವರದಿಯನ್ನು ಮುದ್ರಿಸಿ ಹಂಚದೇ ಇದ್ದರೆ ಅನೇಕ ವಿಚಾರಣಾ ವರದಿಗಳ ಹಾಗೆ ಅದು ಕೂಡ ವಿಧಾನಸೌಧದ ಮೂರನೇ ಮಹಡಿಯ ಯಾವುದೋ ಒಂದು ಕೊಠಡಿಯಲ್ಲಿ ಕೊಳೆಯುತ್ತ ಬಿದ್ದಿರುತ್ತಿತ್ತು. ೧೯೯ ಪುಟಗಳ ತಮ್ಮ ವರದಿಯಲ್ಲಿ ೨೦ ಪುಟಗಳಷ್ಟು ಜಾಗವನ್ನು ಬೆಂಗಳೂರಿನ ಕೆರೆ ಮತ್ತು ಜಲಾಶಯಗಳ ಒತ್ತುವರಿ, ಅತಿಕ್ರಮಣ ಕುರಿತ ಮಾಹಿತಿಗೆ ಬಾಲಸುಬ್ರಮಣಿಯನ್ ಮೀಸಲು ಇಟ್ಟಿದ್ದಾರೆ. ಸರ್ಕಾರಕ್ಕೆ ದೂರದೃಷ್ಟಿ ಎಂಬುದು ಇರುವುದಿಲ್ಲ. ಗಡ್ಡಕ್ಕೆ ಬೆಂಕಿ ಬಿದ್ದಾಗ ಬಾವಿ ತೋಡಲು ಹೋಗುವವರಂತೆಯೇ ಅದರ ವರ್ತನೆ ಇರುತ್ತದೆ. ಈ ಸಾರಿ ಕೂಡ ಕುಡಿಯುವ ನೀರಿನ ಕೊರತೆ ಇರುವ ಪ್ರದೇಶಗಳಿಗೆಲ್ಲ ಭೇಟಿ ನಿಡಿದ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಕೊಟ್ಟ ಆದೇಶ, 'ಕೊಳವೆ ಬಾವಿ ತೋಡಿ' ಎಂದು. ಕೊಳವೆ ಬಾವಿಯಲ್ಲಿ ನೀರು ಬರುತ್ತದೆಯೇ, ಬೇಕಾಬಿಟ್ಟಿ ಕೊಳವೆ ಬಾವಿ ತೋಡಿದರೆ ಏನಾಗುತ್ತದೆ ಎಂಬುದರ ಪರಿವೆಯೇ ಅವರಿಗೆ ಇರಲಿಲ್ಲ.

ಬೆಂಗಳೂರು ನಗರ ಜಿಲ್ಲೆಯಲ್ಲಿ ೯೩೭ ಕೆರೆಗಳು ಇವೆ. ಅಂತಲೇ ಸಾವಿರ ಕೆರೆಗಳ ನಾಡು ಎಂದು ಇದಕ್ಕೆ ಹೆಸರಿತ್ತು. ಕೆಂಪೇಗೌಡರು ೧೫೩೭ರಲ್ಲಿ ಬೆಂಗಳೂರನ್ನು ನಿರ್ಮಿಸುವಾಗ ಈ ಕೆರೆಗಳೇ ಆ ನಾಡಪ್ರಭುವಿನ ದೃಷ್ಟಿಯಲ್ಲಿ ಇದ್ದುವು. ನೂರ್ಕಾಲ ಈ ಊರನ್ನು ಸಾಕುವ ಸಾಮರ್ಥ್ಯ ಈ ಕೆರೆಗಳಿಗೆ ಇದೆ ಎಂದೂ ಅವರು ಕಂಡುಕೊಂಡಿದ್ದರು. ಅಷ್ಟು ಕೆರೆಗಳ ಊರು ಎಷ್ಟು ಬೆಳೆದರೆ ಸಾಕು ಎಂದು ನಾಲ್ಕೂ ಕಡೆ ಅವರು ಗಡಿಗೋಪುರಗಳನ್ನೂ ನಿರ್ಮಿಸಿದ್ದರು. ಆದರೆ, ಈಗ ಆ ೯೩೭ ಕೆರೆಗಳು ಎಲ್ಲಿವೆ ಎಂದು ಹಗಲಿನಲ್ಲಿಯೂ ದೀಪ ಹಚ್ಚಿಕೊಂಡು ಹುಡುಕಲು ಹೋಗಬೇಕು. ಕಾವೇರಿ ನೀರು ಬರುವವರೆಗೆ ಬೆಂಗಳೂರಿನ ಜನರಿಗೆ ಈ ಕೆರೆಗಳೇ ಕುಡಿಯುವ ನೀರಿನ ಮೂಲಗಳಾಗಿದ್ದುವು. ಬೆಂಗಳೂರು ಸಮುದ್ರ ಮಟ್ಟದಿಂದ ೩,೦೦೦ ಅಡಿಗಳಷ್ಟು ಎತ್ತರ ಇರುವುದರಿಂದ ಮತ್ತು ಊರಿನ ಸುತ್ತಲಿನ ಭಾಗ ಇಳಿಜಾರು ಆಗಿರುವುದರಿಂದ ನಗರದಲ್ಲಿ ಬಿದ್ದ ನೀರು ಹರಿದು ಹೋಗುತ್ತದೆ. ಹಾಗಾಗಿ ಬೆಂಗಳೂರಿನ ಅಂತರ್ಜಲ ಮಟ್ಟ ಮೊದಲಿನಿಂದಲೂ ಸಮರ್ಪಕವಾದುದೇನೂ ಅಲ್ಲ.

ಮಳೆ ಕೊಟ್ಟ ನೀರನ್ನು ಸಂಗ್ರಹಿಸಿ ಇಟ್ಟುಕೊಂಡು, ಕಾವೇರಿಯಿಂದ ಪೂರೈಕೆ ಆಗುವ ನೀರನ್ನು ಮತ್ತು ಕೆರೆಗಳ ನೀರನ್ನು ಬಳಸಿಕೊಂಡಿದ್ದರೆ ಬೆಂಗಳೂರಿನಲ್ಲಿ ನೀರಿಗೆ ಹಾಹಾಕಾರ ಆಗಬೇಕಾಗಿಯೇ ಇರಲಿಲ್ಲ. ಆದರೆ, ಒಂದು ನಗರದ

ದಾಹ ರಕ್ಕಸ ಸ್ವರೂಪದ್ದಾಗಿರುತ್ತದೆ. ನಾನು ಬರೀ ಕುಡಿಯುವ ನೀರಿನ ಬಗ್ಗೆ ಮಾತನಾಡುತ್ತಿಲ್ಲ. ಕಳೆದ ಎರಡು ಮೂರು ದಶಕಗಳಲ್ಲಿ ಈ ನಗರ ಬೆಳೆದ ರೀತಿ ದಂಗುಬಡಿಸುವಂತೆ ಇದೆ. ನಿಮಗೆ ಗೊತ್ತಿರುವ ರಸ್ತೆಯಲ್ಲಿ ಒಂದೆರಡು ತಿಂಗಳು ಬಿಟ್ಟು ಹೋದರೆ ಅದು ಗುರುತು ಹಿಡಿಯದಷ್ಟು ಬದಲಾಗಿರುತ್ತದೆ. ಮಡಿವಾಳದಿಂದ ಅಗರ ಮೂಲಕ ವೈಟ್ ಫೀಲ್ಡಿಗೆ ಹೋಗುವ ರಸ್ತೆಯ ಆಜುಬಾಜು ಪ್ರದೇಶದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಆಗಿರುವ ಬದಲಾವಣೆ, ಎದ್ದು ನಿಂತಿರುವ ಬಹುಮಹಡಿ ಕಟ್ಟಡಗಳನ್ನು ನೋಡಿದರೆ ಭಯವಾಗುತ್ತದೆ. ಇದು ಒಂದು ಉದಾಹರಣೆ ಮಾತ್ರ ನೀವು ನಗರದ ಯಾವ ದಿಕ್ಕಿಗೆ ಹೋದರೂ ಇದೇ ರಕ್ಕಸ ಬೆಳವಣಿಗೆ ಬೆಚ್ಚಿಬೀಳಿಸುತ್ತದೆ. ಇಡೀ ಕಾವೇರಿ ನದಿ ನೀರನ್ನು



ಕೇವಲ ಬೆಂಗಳೂರಿಗೆ ಪೂರೈಸಿದರೂ ಸಾಕಾಗುವುದಿಲ್ಲ ಎನ್ನುವಂಥ ವೇಗದಲ್ಲಿ ಬೆಂಗಳೂರು ಬೆಳೆಯುತ್ತಿದೆ. ಆದರೆ, ನದಿಯಲ್ಲಿ ಅದಕ್ಕಾಗಿ ಇರುವ ಪಾಲು ಕೇವಲ ೧೯ ಟಿಎಂಸಿ ಅಡಿ ಮಾತ್ರ ಎಂಬುದು ನಮಗೆ ನೆನಪು ಇರಬೇಕು.

ಅದು ನಮಗೆ ನೆನಪು ಇಲ್ಲ ಎಂದು ಅನಿಸುತ್ತದೆ. ಇದ್ದರೆ ಊರಿನ ಎಲ್ಲ ದಿಕ್ಕಿನಲ್ಲಿ ಇದ್ದ ಕೆರೆಗಳಲ್ಲಿ ಹೂಳು ತುಂಬಲು, ಕೊಳೆ ಬೆಳೆಯಲು ನಾವು ಬಿಡುತ್ತಿರಲಿಲ್ಲ. ಕಟ್ಟಡಗಳ ಮಾಲೀಕರು, ಗುತ್ತಿಗೆದಾರರು ತಮ್ಮ ನಿರ್ಮಾಣ ಕಾಮಗಾರಿಯ ಅವಶೇಷಗಳನ್ನೆಲ್ಲ ಕೆರೆಗಳಲ್ಲಿ ರಾಶಿ ಹಾಕುವಂಥ ಕ್ರಿಮಿನಲ್ ಕೆಲಸ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಕೆರೆ ಅಂಗಳಗಳನ್ನು ಸರ್ಕಾರವು ಬಾಹ್ಯಾಕಾಶ ಇಲಾಖೆ, ಫುಟ್‌ಬಾಲ್ ಕ್ರೀಡಾಂಗಣ, ವೈದ್ಯಕೀಯ ಕಾಲೇಜು, ಬಸ್ ನಿಲ್ದಾಣ ಎಂದೆಲ್ಲ ಹಂಚಲು ಆಗುತ್ತಿರಲಿಲ್ಲ. ಪೊಲೀಸರಿಗೆ ಮನೆ ಕಟ್ಟಲು ಕೊಟ್ಟ ಜಾಗ ಕೂಡ ಕೆರೆಯಂಗಳ ಎಂದ ಮೇಲೆ ಜೀವಜಲಮೂಲಗಳನ್ನು ನಾವು ಎಷ್ಟು ನಿಷ್ಕಾಳಜಿಯಿಂದ ನೋಡಿಕೊಂಡಿದ್ದೇವೆ ಎಂದು ಗೊತ್ತಾಗುತ್ತದೆ. ಹೀಗೆ ಕೆರೆಯಂಗಳ ಕಬಳಿಸುವುದಕ್ಕೆ ನಿರ್ಬಂಧಗಳು ಇರಲಿಲ್ಲ ಎಂದು ಅಲ್ಲ. ಹೈಕೋರ್ಟ್ ಆದೇಶಗಳು ಇದ್ದುವು, ಎನ್. ಲಕ್ಷ್ಮಣರಾಯರಂಥ ಆಡಳಿತಗಾರರು ಕೆರೆಯಂಗಳಗಳನ್ನು ಉಳಿಸಿಕೊಳ್ಳುವ ಪ್ರಾಮುಖ್ಯದ ಬಗ್ಗೆ ೧೯೮೮ರಷ್ಟು ಹಿಂದೆಯೇ ಕೊಟ್ಟ ವರದಿಗಳೂ ನಮ್ಮ ಆಡಳಿತಗಾರರ ಮೇಜಿನ ಮೇಲೆಯೇ ಇದ್ದುವು.

ಲಕ್ಷ್ಮಣರಾಯರು ವರದಿ ಕೊಟ್ಟ ಹತ್ತು ವರ್ಷಗಳ ನಂತರ ೧೯೯೮ರಲ್ಲಿ ಕೆರೆಗಳ ರಕ್ಷಣೆಯ ಹೊಣೆಯನ್ನು ಅರಣ್ಯ ಇಲಾಖೆ ಹೆಗಲಿಗೆ ಹೊರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿತು. ಕೆರೆಗಳ ಒತ್ತುವರಿ ಮಾಡುವವರನ್ನು ಕನಿಷ್ಠ ಒಂದು ವರ್ಷದಿಂದ ಗರಿಷ್ಠ ಮೂರು ವರ್ಷ ಜೈಲಿಗೆ ಕಳುಹಿಸಲೂ ಈ ಆದೇಶದಲ್ಲಿ ಅಧಿಕಾರ ಕೊಡಲಾಗಿತ್ತು. ಅದಾಗಿ ಈಗ ೧೪ ವರ್ಷಗಳು ಕಳೆದು ಹೋಗಿವೆ. ಬೆಂಗಳೂರಿನ ಕೆರೆಗಳು ನಮ್ಮ ಕಣ್ಣ ಮುಂದೆಯೇ ಮರೆಯಾದುವು, ಅಲ್ಲಿ ಬಹುಮಹಡಿ ಕಟ್ಟಡಗಳು ಮೇಲೆ ಎದ್ದುವು. ಆದರೆ, ಯಾರೂ ಜೈಲು ಸೇರಲಿಲ್ಲ! ಬಾಲಸುಬ್ರಮಣಿಯನ್ ಅವರು 'ದುರಾಸೆ ಮತ್ತು ಷಾಮೀಲು' ಎಂದು ಸುಮ್ಮನೆ ಹೇಳಲಿಲ್ಲ. ಲಕ್ಷ್ಮಣರಾಯರು ಆಗ ಬರೀ ಬೆಂಗಳೂರು ನಗರ ವ್ಯಾಪ್ತಿಯ ೧೧೪ ಕೆರೆಗಳ ರಕ್ಷಣೆಯ ಹೊಣೆಯನ್ನು ಅರಣ್ಯ ಇಲಾಖೆಗೆ ವಹಿಸಬೇಕು ಎಂದಿದ್ದರು. ಆದರೆ, ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ

೯೩೭ ಕೆರೆಗಳು ಇವೆ. ಅವೆಲ್ಲ ಈಗ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೇ ಬಂದಿವೆ. ಬಹುತೇಕ ಎಲ್ಲ ಕೆರೆಗಳ ೧,೮೪೮ ಎಕರೆ ಕೆರೆ ಅಂಗಳ ಒತ್ತುವರಿ ಆಗಿದೆ. ಹೀಗೆ ಒತ್ತುವರಿ ಮಾಡಿದವರು ೨,೮೪೮ ಮಂದಿ. ಅವರೆಲ್ಲ ಪ್ರಭಾವಿಗಳು, ರಾಜಕಾರಣಿಗಳು ಎಂದು ಪ್ರತ್ಯೇಕಿಸಿ ಹೇಳಬೇಕಿಲ್ಲ.

ಇಡೀ ದೇಶದಲ್ಲಿ ಕೆರೆ ಅಭಿವೃದ್ಧಿ ಪ್ರಾಧಿಕಾರ ಇರುವ ಏಕೈಕ ರಾಜ್ಯ ಕರ್ನಾಟಕ. ಈ ಪ್ರಾಧಿಕಾರದ ಅಧ್ಯಕ್ಷರಾಗಿರುವವರು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಪ್ರಾಧಿಕಾರದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಸದಸ್ಯರಾಗಿದ್ದಾರೆ. ಆದರೂ ಕೆರೆಗಳ ಕಬಳಿಕೆಯನ್ನು ಅವರೆಲ್ಲ ಮೂಕ ಪ್ರೇಕ್ಷಕರ ಹಾಗೆ ನೋಡುತ್ತ ಸುಮ್ಮನೆ ಕುಳಿತುಬಿಟ್ಟಿದ್ದಾರೆ. ೧೯೯೫ರಷ್ಟು

ಹಿಂದೆಯೇ ರಾಜ್ಯ ಹೈಕೋರ್ಟ್ ಆಗಿನ ನ್ಯಾಯಮೂರ್ತಿ ಈಶ್ವರ್ ಪ್ರಸಾದ್ ಅವರು ಕೆರೆ ಅಂಗಳವನ್ನು ಯಾರಿಗೂ ಹಂಚಿಕೆ ಮಾಡಬಾರದು ಎಂದು ನೀಡಿದ ಆದೇಶ ಈಗಲೂ ಊರ್ಜಿತವಾಗಿದೆ. ಆದರೆ, ಈ ಆದೇಶ ಬಂದ ಕಳೆದ ೧೭ ವರ್ಷಗಳ ಅವಧಿಯಲ್ಲಿ ಎಷ್ಟು ಕೆರೆಗಳು ಮಾಯವಾಗಿವೆ ಎಂಬ ಲೆಕ್ಕ ಸರ್ಕಾರದ ಬಳಿ ಇಲ್ಲವೆಂದಲ್ಲ; ಹಾಗಾದರೆ ಅದಕ್ಕೆ ಯಾರು ಹೊಣೆ?

ಒಂದು ನಗರದ ಬೆಳವಣಿಗೆಯ ಬಕಾಸುರ ಹಸಿವಿಗೆ ಕಡಿವಾಣ ಹಾಕದೇ ಇದ್ದರೆ ಏನಾಗುತ್ತದೆ ಎಂಬುದಕ್ಕೆ ಈಗ ಬೆಂಗಳೂರು ನಗರ ಬೆಳೆಯುತ್ತಿರುವ ರೀತಿಯೇ ಉದಾಹರಣೆ. ಪ್ರತಿವರ್ಷ ಶೇ ೪.೨೧ರ ಪ್ರಮಾಣದಲ್ಲಿ ಬೆಳೆಯುತ್ತಿರುವ ಈ ನಗರದ ಜನಸಂಖ್ಯೆ ೨೦೦೦ರಲ್ಲಿ ೮೭ ಲಕ್ಷ ಇತ್ತು. ಇನ್ನು ಮೂರು ವರ್ಷಗಳಲ್ಲಿ ಅದು ಒಂದು ಕೋಟಿ ಮೀರುತ್ತದೆ. ೨೦೨೦ರಲ್ಲಿ ಅದು ೧.೩೧ ಕೋಟಿಗೆ ಏರುತ್ತದೆ ಎಂಬ ಅಂದಾಜು ಇದೆ. ಪ್ರತಿಯೊಬ್ಬ ವ್ಯಕ್ತಿಗೆ ದಿನವೊಂದಕ್ಕೆ ೧೫೦ ಲೀಟರ್ ನೀರು ಸಿಗಬೇಕು ಎಂಬುದು ಕೇಂದ್ರ ಸರ್ಕಾರದ ಮಾನದಂಡ. ಆದರೆ, ಈಗ ಬೆಂಗಳೂರಿನಲ್ಲಿ ಸಿಗುತ್ತಿರುವುದು ೭೮ ಲೀಟರ್ ಮಾತ್ರ ೨೦೨೦ರ ವೇಳೆಗೆ ಅದು ೬೦ ಲೀಟರ್ ಆಗಬಹುದು ಎಂಬುದು ತಜ್ಞರ ನಿರೀಕ್ಷೆ, ಬೆಂಗಳೂರು ಇರುವುದು ಬಕಾಸುರ ಹಸಿವಿನ ಗುತ್ತಿಗೆದಾರರಿಗೆ ಅಲ್ಲ. ಅವರಿಗೆ ರಕ್ಷಣೆ ಕೊಡುವ ರಾಜಕಾರಣಿಗಳಿಗೂ ಅಲ್ಲ. ಇದು ಇರುವುದು ಇಲ್ಲಿನ ಜನರಿಗೆ ಅವರಿಗೆ ಸಾಕಷ್ಟು ಪ್ರಮಾಣದಲ್ಲಿ ಶುದ್ಧ ನೀರು ಪೂರೈಸುವುದು ಸರ್ಕಾರದ ಕನಿಷ್ಠ ಕರ್ತವ್ಯ. ೨೦೩೦ರ ವೇಳೆಗೆ ಬೆಂಗಳೂರು ನಗರ ಕೊಳೆಯತೊಡಗುತ್ತದೆ ಎಂಬ ಕೆಟ್ಟ ನಿರೀಕ್ಷೆ ಇದೆ. ಊರು ಲೂಟಿಯಾದ ಮೇಲೆ ಕೋಟೆ ಬಾಗಿಲು ಹಾಕಬಾರದು ಅಲ್ಲವೇ?

೧೩.೦೫.೧೨

**ಇಂಥ ಬರಿಗಾಲ ಭಗೀರಥ ಊರಿಗೊಬ್ಬ ಇದ್ದಿದ್ದರೆ...!**

ಆತ ಆಗಿನ್ನೂ ಒಂಬತ್ತನೇ ತರಗತಿ ಹುಡುಗ, ಊರಿಗೆ ೨೫ ದಿನಕ್ಕೆ ಒಮ್ಮೆ ನೀರು ಬರುತ್ತಿತ್ತು. ನಿತ್ಯ ನೀರು ಬಿಡಬೇಕು ಎಂದು ಒತ್ತಾಯಿಸಿ ಊರಿನ ಹಿರಿಯರೆಲ್ಲ ಪಟ್ಟಣದ ನಡುವಿನ ದ್ಯಾಮವ್ವನ ಕಟ್ಟೆಯ ಮೇಲೆ ಸರದಿ ಉಪವಾಸ ಕುಳಿತುಕೊಂಡಿದ್ದರು. ಈ ಹುಡುಗನೂ ಒಂದು ದಿನ ಹೋಗಿ ಕುಳಿತುಕೊಂಡ. ರಾತ್ರಿ ಹೊತ್ತಾದಂತೆ ಉಪವಾಸಕ್ಕೆ ಕುಳಿತವರು ಒಬ್ಬೊಬ್ಬರೇ ಎದ್ದು ಕಟ್ಟೆಯ ಹಿಂದಿನ ಅಂಗಡಿಗೆ ಹೋಗಿ ವಾಪಸು ಬರತೊಡಗಿದರು. ಸ್ವಲ್ಪ ಹೊತ್ತಾದ ನಂತರ ಈ ಹುಡುಗನಿಗೂ ಒಳಗೆ ಕರೆದರು. ಅಲ್ಲಿ ಹೋಗಿ ನೋಡಿದರೆ ಎಲ್ಲರೂ ಬಗೆ ಬಗೆಯ ಭಕ್ಷ್ಯಭೋಜ್ಯಗಳನ್ನು ಇಟ್ಟುಕೊಂಡು ಬಾಯಿತುಂಬ ಮುಕ್ಕುತ್ತಿದ್ದರು. ಸಸ್ಯಾಹಾರಿಗಳಿಗೆ ಬೇರೆ ಊಟ. ಮಾಂಸಾಹಾರಿಗಳಿಗೆ ಬೇರೆ ಬಾಡೂಟ! ಹುಡುಗನಿಗೆ ಮನಸ್ಸು ಒಪ್ಪಲಿಲ್ಲ. ಹೋರಾಟಕ್ಕೆ ಮುಕ್ಕು ಬಂದಿದೆ ಎಂದು ಅನಿಸಿತು. ತಾನು ಊಟ ಮಾಡುವುದಿಲ್ಲ ಎಂದ. "ನಿನಗೆ ತಿಳಿಯುವುದಿಲ್ಲ. ಇನ್ನೂ ಚಿಕ್ಕವ. ಊಟ ಮಾಡು' ಎಂದರು ಹಿರಿಯರು. ಹುಡುಗ ಒಪ್ಪಲಿಲ್ಲ. ಎರಡು ಬಾಳೆ ಹಣ್ಣಾದರೂ ತಿನ್ನು' ಎಂದರು. ಅದಕ್ಕೂ ಆತ ಒಪ್ಪಲಿಲ್ಲ. ಅವಮಾನ ಆದಂತೆ ಆಗಿ ಕಣ್ಣ ಅಂಚಿನಲ್ಲಿ ನೀರು ಬಂದು ನಿಂತವು. ಹುಡುಗ ಅಂದೇ ಅಂದುಕೊಂಡ ಯಾವುದೇ ಹೋರಾಟಕ್ಕೆ ಪ್ರಾಮಾಣಿಕತೆ ಮುಖ್ಯ ಎಂದು. ಇದು ಆಗಿದ್ದು ೧೯೮೫-೮೬ರಲ್ಲಿ. ಊರು ಮುದ್ದೇಬಿಹಾಳ.

ಈಗ ಆ ಹುಡುಗನಿಗೆ ೪೦ ವಯಸ್ಸು. ಅದೇ ನೀರು ಪೂರೈಕೆಗಾಗಿ ಆತ ಕಳೆದ ಎಂಟು ಒಂಬತ್ತು ವರ್ಷಗಳಿಂದ ಹೋರಾಟ ಮಾಡಿದ್ದಾರೆ. ಅವರ ಹೆಸರು ಬಸವರಾಜ ನಂದಿಕೇಶ್ವರಮಠ, ೧೯೮೫-೮೬ರಿಂದ ಊರ ಜನರು ಆಗಾಗ ಪ್ರತಿಭಟನೆ, ಸರದಿ ಉಪವಾಸ ಎಂದೆಲ್ಲ ಹೋರಾಟ ಮಾಡಿದರೂ ಪ್ರಯೋಜನವೇನೂ ಆಗಿರಲಿಲ್ಲ. ಸರ್ಕಾರ ಇಂಥ ಎಷ್ಟು ಹೋರಾಟಗಳನ್ನು ನೋಡಿಲ್ಲ? ೨೦೦೩ರ ಡಿಸೆಂಬರ್‌ನಲ್ಲಿ ಒಂದು ದಿನ ನಂದಿಕೇಶ್ವರಮಠ, ಮತ್ತೆ ಹೋರಾಟ ಮಾಡೋಣ ಎಂದು ಸಿದ್ಧರಾದರು. ಊರಿನ ಜನ, ನೀನೊಬ್ಬ ಹುಚ್ಚ ಸ್ವಾಮಿ' ಎಂದು ಗೇಲಿ ಮಾಡಿದರು. ಇವರು ಎದೆಗುಂದಲಿಲ್ಲ. ಒಂದು ದೊಡ್ಡ ಕರಿಗೌನು ಹೊಲಿಸಿದರು. ಅದನ್ನು ಮೈಮೇಲೆ ಧರಿಸಿದರು. ಅದರ ಮೇಲೆ, 'ಕರ್ನಾಟಕವನ್ನು ಸಿಂಗಾಪುರ ಮಾಡುವ ಮುಖ್ಯಮಂತ್ರಿಗಳೇ ಮುದ್ದೇಬಿಹಾಳವನ್ನು ಮಂಗಾಪುರ ಮಾಡುವಿರಾ?', 'ಶಾಸಕರೇ ಎಲ್ಲಿ ತಲೆಮರೆಸಿಕೊಂಡಿದ್ದೀರಿ?', 'ಬೇಕೇ ಬೇಕು ಕುಡಿಯುವ ನೀರು' ಎಂದೆಲ್ಲ ಬರೆದುಕೊಂಡು ಓಣಿ ಓಣಿ ತಿರುಗಿ ತಾವೇ ಮುದ್ರಿಸಿದ ಐದು ಸಾವಿರ ಕರಪತ್ರಗಳನ್ನು ಹಂಚಿದರು. ಜನರಿಗೆ ಇದು ವಿಶೇಷ ಅನಿಸಿತು. ಈತ ಪ್ರಾಮಾಣಿಕ ಅನಿಸಿತು. ಎಲ್ಲರೂ ಸೇರಿಕೊಂಡು ತಹಶೀಲ್ದಾರ್ ಕಚೇರಿ ಎದುರು ಸತ್ಯಾಗ್ರಹ ಕುಳಿತರು. ಶಾಸಕ ಸಿ.ಎಸ್. ನಾಡಗೌಡರು ಕೆಲವು ದಿನ ಬಿಟ್ಟು ಶಿಬಿರಕ್ಕೆ ಬಂದರು. ಇನ್ನು ೩೫ ದಿನಗಳಲ್ಲಿ ನೀರು ಕೊಡುತ್ತೇವೆ. ಸತ್ಯಾಗ್ರಹ ಕೈ ಬಿಡಿ' ಎಂದರು. ೩೫ ದಿನಗಳಲ್ಲಿ ನೀರು ಪೂರೈಕೆ ಮಾಡುವುದು ಹೇಗೆ ಸಾಧ್ಯವಿಲ್ಲ ಎಂದು ನಂದಿಕೇಶ್ವರಮಠರು ಶಾಸಕರಿಗೇ ಮಾಹಿತಿ ಕೊಟ್ಟರು! ಆದರೂ ೩೫ ದಿನ ಹೋರಾಟ ಮುಂದುವರಿಸುತ್ತೇವೆ. ನೀರು ಬಂದರೆ ವಾಪಸು ತೆಗೆದುಕೊಳ್ಳುತ್ತೇವೆ ಎಂದರು. ಅಂದುಕೊಂಡಂತೆಯೇ ನೀರು ಬರಲಿಲ್ಲ. ಜನರಿಗೆ ಹೋರಾಟ ಮುಂದುವರಿಸುವುದು ವ್ಯರ್ಥ ಅನಿಸತೊಡಗಿತ್ತು. ಆದರೆ ನಂದಿಕೇಶ್ವರಮಠರು ನಿರಾಶರಾಗಲಿಲ್ಲ. 'ತಪಸ್ಸಿಗೆ ಫಲ ಇದ್ದೇ ಇರುತ್ತದೆ. ಇಂದಿನಿಂದ ನಾನು ಚಪ್ಪಲಿ ಧರಿಸುವುದಿಲ್ಲ' ಎಂದು ಶಪಥ ಮಾಡಿದರು. ಅದಾಗಿ ಒಂಬತ್ತು ವರ್ಷಗಳಾಗಿವೆ. ಈಗಲೂ ಅವರು ಚಪ್ಪಲಿ ತೊಟ್ಟುಕೊಂಡಿಲ್ಲ. ಮುದ್ದೇಬಿಹಾಳದ ತಹಶೀಲ್ದಾರ್ ಕಚೇರಿಯಿಂದ ವಿಧಾನಸೌಧದ ಮುಖ್ಯಮಂತ್ರಿ ಕಚೇರಿ ವರೆಗೆ ಅವರು ಎಡತಾಕಿದ್ದಕ್ಕೆ ಲೆಕ್ಕವಿಲ್ಲ. ಆದರೆ, ಎಲ್ಲಿಗೆ ಹೋದರೂ ಬರಿಗಾಲಲ್ಲಿಯೇ ಹೋಗಿದ್ದಾರೆ.

ಈ ಸ್ವಾಮಿಯ ಹಟ ಊರ ಜನರಿಗೆ ಒಂದು ಕಡೆ ಸೋಜಿಗ ಇನ್ನೊಂದು ಕಡೆ ಪ್ರೇರಣೆ ಎನಿಸತೊಡಗಿತು. ೩೫ ದಿನಗಳಾದ ನಂತರ ನಂದಿಕೇಶ್ವರಮಠರು ಊರಿನ ಮುಖ್ಯರಸ್ತೆಯ ಹನುಮಂತ ದೇವರ ಗುಡಿಯಿಂದ ತಹಶೀಲ್ದಾರ್

ಕಚೇರಿ ವರೆಗೆ ಉರುಳು ಸೇವೆ ಮಾಡಿದರು. ಅವರ ಜತೆಗೆ ಊರಿನ ಜನರೂ ಸೇರಿಕೊಂಡರು. ಸರ್ಕಾರ ಇಂಥ ಎಷ್ಟು ಉರುಳು ಸೇವೆಗಳನ್ನು ನೋಡಿಲ್ಲ? ಅದು ಜಪ್ಪಯ್ಯ ಅನ್ನಲಿಲ್ಲ. ಮತ್ತೆ ಕೆಲವು ಕಾಲ ಸರಿದುಹೋಯಿತು. ಒಂದು ದಿನ ತಹಶೀಲ್ದಾರ್ ಕಚೇರಿ ಎದುರು ಒಂದು ಸ್ಟೂಲು ಹಾಕಿ ಅದರ ಮೇಲೆ ನಿಂತು ತಲೆಯ ಮೇಲೆ ಒಂದು ಸೈಜುಗಲ್ಲನ್ನು ಹೊತ್ತುಕೊಂಡರು. ಬೆಳಿಗ್ಗೆ ೧೦ ಗಂಟೆಯಿಂದ ಸಂಜೆ ೫ ಗಂಟೆವರೆಗೆ ಪ್ರತಿಭಟನೆ ನಡೆಯಿತು. ಒಂದು ದಿನವಲ್ಲ, ಐದು ದಿನಗಳ ಕಾಲ ಸತತವಾಗಿ ನಿಂತುಕೊಂಡರು. ಆಗಲೂ ಸರ್ಕಾರ ಎಚ್ಚೆತ್ತುಕೊಳ್ಳಲಿಲ್ಲ. ಜನರು ಜಾಗೃತರಾದರು. ಊರಿನಲ್ಲಿ 'ನಗರಾಭಿವೃದ್ಧಿ ಯುವ ಹೋರಾಟ ವೇದಿಕೆ' ಎಂಬ

ಸಂಘಟನೆ ಹುಟ್ಟಿಕೊಂಡಿತು. ನಂದಿಕೇಶ್ವರಮಠರು ಸಂಚಾಲಕರಾದರು. ಜನರು ಮೂರು ದಿನ ಅಂಗಡಿ ಮುಂಗಟ್ಟು ಬಂದ್ ಮಾಡಿದರು. ಮಾಜಿ ಶಾಸಕಿ ವಿಮಲಾಬಾಯಿ ದೇಶಮುಖರು, ನಂದಿಕೇಶ್ವರಮಠರನ್ನು ಮತ್ತು ಊರಿನ ಮುಖಂಡರನ್ನು ಕರೆದುಕೊಂಡು ಬೆಂಗಳೂರಿಗೆ ಹೋಗಿ ಆಗಿನ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿಯವರನ್ನು ಕಂಡು ವಿಷಯ ತಿಳಿಸಿದರು. ಕುಮಾರಸ್ವಾಮಿಗಳು ಆಗ ನಡೆಯುತ್ತಿದ್ದ ಅಧಿವೇಶನದಲ್ಲಿ ೨.೩೦ ಕೋಟಿ ರೂಪಾಯಿ ಬಿಡುಗಡೆ ಮಾಡುವುದಾಗಿ ಪ್ರಕಟಿಸಿದರು. ಊರಿನ ಹತ್ತಿರದ ಕೃಷ್ಣಾ ನೀರಾವರಿ ಯೋಜನೆಯ ದೊಡ್ಡ ಕಾಲುವೆಯಿಂದ ನೀರು ಪೂರೈಸುವ ಈ ಯೋಜನೆ ತಾತ್ಕಾಲಿಕ ಪರಿಹಾರವಾಗಿತ್ತು. ನಂದಿಕೇಶ್ವರಮಠರ ಹೋರಾಟವನ್ನು ದೂರದಿಂದಲೇ ಗಮನಿಸಿದ್ದ ಕರ್ನಾಟಕ ಪಟ್ಟಣ ನೀರು ಸರಬರಾಜು ಮಂಡಳಿ ೧೩.೭೦ ಕೋಟಿ ರೂಪಾಯಿ ವೆಚ್ಚದ ಬೃಹತ್ ಯೋಜನೆಯೊಂದನ್ನು ಸಿದ್ಧಪಡಿಸಿತ್ತು.

ಸರ್ಕಾರದಲ್ಲಿ ಯಾವ ಕೆಲಸವೂ ಬೇಗ ಆಗುವುದಿಲ್ಲ. ಬರೀ ತಹಶೀಲ್ದಾರ್ ಕಚೇರಿ ಮುಂದೆ ಪ್ರತಿಭಟನೆ ಮಾಡಿದರೆ ಸಾಲದು ಎಂದು ವಿಜಾಪುರದ ಜಿಲ್ಲಾಧಿಕಾರಿ ಕಚೇರಿ ಎದುರು ನಂದಿಕೇಶ್ವರಮಠರು ೧೩ ದಿನಗಳ ಕಾಲ ಸ್ಟೂಲು ಇಟ್ಟುಕೊಂಡು ತಮ್ಮ ತಲೆಯ ಮೇಲೆ ಕಲ್ಲು ಹೊತ್ತುಕೊಂಡು ನಿಂತುಕೊಂಡರು. ಮತ್ತೆ ಬೆಳಿಗ್ಗೆ ೧೦ ಗಂಟೆಯಿಂದ ಸಂಜೆ ೫ ಗಂಟೆ ವರೆಗೆ 'ಪ್ರಜಾವಾಣಿ'ಯಲ್ಲಿ ಮೊದಲ ಪುಟದಲ್ಲಿ ಎಲ್ಲ ಆವೃತ್ತಿಯಲ್ಲಿ ಸುದ್ದಿ ಬಂತು! ಟೀವಿ ವಾಹಿನಿಗಳು ಜಾಗೃತಗೊಂಡವು. ನಂದಿಕೇಶ್ವರಮಠರ ಹೋರಾಟಕ್ಕೆ ಬರೀ ಸರದಿ ಉಪವಾಸ, ರಾಜ್ಯವ್ಯಾಪಿ ಪ್ರಚಾರ ಸಿಕ್ಕುದು ಆಗಲೇ. ಅವರಿಗೆ ಗೊತ್ತಿತ್ತು ಅಂಗಡಿ ಬಂದ್ ಮಾಡಿದರೆ ಆ ಸುದ್ದಿ ಆ ಜಿಲ್ಲೆಯ ಆವೃತ್ತಿಯಲ್ಲಿ ಮಾತ್ರ ಬರುತ್ತದೆ ಎಂದು. ಅಂತಲೇ ಅವರು ತಲೆಯ ಮೇಲೆ ಕಲ್ಲು ಹೊತ್ತುಕೊಂಡು ನಿಂತರು. ಒಂದು ದಿನವಲ್ಲ. ೧೩ ದಿನಗಳ ಕಾಲ. ಸರ್ಕಾರವನ್ನು ಮಾತ್ರವಲ್ಲ ಸುದ್ದಿ ಮಾಧ್ಯಮಗಳನ್ನು ಜಾಗೃತಗೊಳಿಸಲೂ ಎಷ್ಟು ಕಷ್ಟಪಡಬೇಕು? ತಲೆಯ ಮೇಲೆ ಕಲ್ಲು ಹೊತ್ತುಕೊಂಡು ನಿಂತರೆ ಗಮನ ಸೆಳೆಯಬಹುದು ಎಂದು ಅವರಿಗೆ ಏಕೆ ಅನಿಸಿತು? ನಾವು ಚಿಕ್ಕವರಿದ್ದಾಗ ಉತ್ತರ ಕರ್ನಾಟಕದಲ್ಲಿ ಜಂಗಮ ಸ್ವಾಮಿಗಳು ಊರ ಮಧ್ಯದಲ್ಲಿ ಬಂದು ಮುಳ್ಳು ಆವಿಗೆಯ ಮೇಲೆ ನಿಂತುಕೊಳ್ಳುತಿದ್ದರು. ಎಷ್ಟು ಹೊತ್ತಾದರೂ ಕೆಳಗೆ ಇಳಿಯುತ್ತಿರಲಿಲ್ಲ. ಯಾರೋ ಹಿರಿಯರು ಬಂದು ಏನು ಮಾಡಬೇಕು ಎಂದು ಜಂಗಮರನ್ನು ಕೇಳುತ್ತಿದ್ದರು. ತನಗೆ ೨೫ ಪಾವಲಿ (ನಾಲ್ಕಾಣೆ) ಕೊಟ್ಟರೆ ಕೆಳಗೆ ಇಳಿಯುತ್ತೇನೆ ಎಂದು ಅವರು ಹೇಳುತ್ತಿದ್ದರು. ಆ

ಹಿರಿಯರು ಒಂದು ಟವೆಲ್ ತೆಗೆದುಕೊಂಡು ಎಲ್ಲ ಅಂಗಡಿಗಳಿಗೆ ಹೋಗಿ ಒಬ್ಬೊಬ್ಬರ ಬಳಿಯೂ ಒಂದು ನಾಲ್ಕಾಣೆ ಸಂಗ್ರಹಿಸಿ ೨೫ ನಾಲ್ಕಾಣೆ ಮಾಡಿ ಜಂಗಮರಿಗೆ ಕೊಟ್ಟ ನಂತರವೇ ಅವರು ಮುಳ್ಳಿನ ಆವಿಗೆಯಿಂದ ಕೆಳಗೆ ಇಳಿಯುತ್ತಿದ್ದರು. ನಂದಿಕೇಶ್ವರಮಠರು ತಲೆಯ ಮೇಲೆ ಕಲ್ಲು ಹೊತ್ತುಕೊಂಡು ನಿಲ್ಲಲು ಪ್ರೇರಣೆ ಸಿಕ್ಕುದು ಇಲ್ಲಿ. ನಂದಿಕೇಶ್ವರಮಠರೂ ಜಂಗಮರು. ಆದರೆ, ಕಾವಿಧಾರಿ ಅಲ್ಲ!

ನಂದಿಕೇಶ್ವರಮಠರು ಕಲ್ಲು ಹೊತ್ತು ಜಿಲ್ಲಾಧಿಕಾರಿ ಕಚೇರಿ ಮುಂದೆ ನಿಂತಿದ್ದಾಗಲೇ ಮುದ್ದೇಬಿಹಾಳದಲ್ಲಿ ಮತ್ತೆ ಬಂದ್ ಆಚರಿಸಲಾಯಿತು. 'ನಮ್ಮ ಊರಿನ ಯುವಕ ನಮಗಾಗಿ ತಲೆಮೇಲೆ ಕಲ್ಲು ಹೊತ್ತುಕೊಂಡು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ



ಮಾಡುತ್ತಿದ್ದಾನೆ' ಎಂದು ಊರಿನ ಮಂದಿ ಬಸ್ಸು, ಲಾರಿ, ಕಾರು, ಜೀಪು ತೆಗೆದುಕೊಂಡು ಜಿಲ್ಲಾಧಿಕಾರಿ ಕಚೇರಿ ಎದುರು ನೂರಾರು, ಸಾವಿರಾರು ಸಂಖ್ಯೆಯಲ್ಲಿ ಸಾಮೂಹಿಕ ಪ್ರತಿಭಟನೆ ಮಾಡಿದರು. ವಿಜಾಪುರದ ಶಾಲಾ ಕಾಲೇಜುಗಳ ಶಿಕ್ಷಕರು ಈ ಅಪರೂಪದ ಪ್ರತಿಭಟನೆಯನ್ನು ವಿದ್ಯಾರ್ಥಿಗಳಿಗೆ ತೋರಿಸಲು ತಾವೂ ಮಕ್ಕಳನ್ನು ಕರೆದುಕೊಂಡು ಬಂದರು... ೧೩ ದಿನ ನಿಂತು ಪ್ರತಿಭಟಿಸಿದ ನಂದಿಕೇಶ್ವರಮಠರು ಮತ್ತು ಊರಿನ ಜನರೆಲ್ಲ ಸೇರಿಕೊಂಡು ಬೆಂಗಳೂರಿಗೆ ಬಂದರು. ಆಗ ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರನ್ನು ಕಂಡರು. ಅವರಿಗೂ ಮಾಹಿತಿ ಸಿಕ್ಕಿತ್ತು. ಅಮೆರಿಕೆಗೆ ಹೋಗುವ ಧಾವಂತದಲ್ಲಿ ಇದ್ದ ಮುಖ್ಯಮಂತ್ರಿ ೧೩.೭೦ ಕೋಟಿರೂಪಾಯಿ ಮೊತ್ತದ ಯೋಜನೆಗೆ ಅನುಮತಿ ಕೊಟ್ಟರು. ಕೆಲಸಕ್ಕೆ ಚಾಲನೆ ಸಿಕ್ಕಿತು.

ಈ ಮಧ್ಯೆ ಪುರಸಭೆಗೆ ಚುನಾವಣೆ ಬಂತು. ನಂದಿಕೇಶ್ವರಮಠರನ್ನು ಆರನೇ ವಾರ್ಡಿನ ಜನರೆಲ್ಲ ಸೇರಿ ಚುನಾವಣೆಗೆ ನಿಲ್ಲಿಸಿದರು. ಮಠರಿಗೆ ವೈಯಕ್ತಿಕವಾಗಿ ಆರ್‌ಎಸ್‌ಎಸ್ ನಂಟು. ಆದರೆ, ಬಿಜೆಪಿಯಿಂದ ಚುನಾವಣೆಗೆ ನಿಲಲ್ಲಿಲ್ಲ. ತಾನು ಹೋರಾಟ ಮಾಡುವವ, ಯಾವ ಪಕ್ಷದ ನಂಟೂ ಬೇಡ ಎಂದು ಪಕ್ಷೇತರರಾಗಿ ನಿಂತರು. ಒಂದು ಪೈಸೆ ಹಣ ಖರ್ಚು ಮಾಡಲು ಜನರು ಬಿಡಲಿಲ್ಲ. ಇವರ ವಿರುದ್ಧ ನಿಂತಿದ್ದ ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳು ಇಡುಗಂಟು ಕಳೆದುಕೊಂಡರು. ಪುರಸಭೆ ಸದಸ್ಯನಾದರೆ ಅಧಿಕಾರಿಗಳ ಜತೆಗೆ ಮಾತನಾಡಲು ಒಂದಿಷ್ಟು ಅಧಿಕಾರ ಬರುತ್ತದೆ ಎಂದೂ ನಂದಿಕೇಶ್ವರಮಠ ಅಂದುಕೊಂಡರು. ಅವರು ಅಂದುಕೊಂಡ ಹಾಗೆಯೇ ಯಾರಿಗೇ ಇವರು ಫೋನು ಮಾಡಲಿ ಎಲ್ಲರೂ ಸರಿಯಾಗಿ ಪ್ರತಿಕ್ರಿಯೆ ಕೊಡುತ್ತಿದ್ದರು. ಸಾಧ್ಯವಾದಷ್ಟು ಕೆಲಸ ಮಾಡಿಕೊಡುತ್ತಿದ್ದರು. ೧೩.೭೦

ಕೋಟಿ ರೂಪಾಯಿಯ ಬೃಹತ್ ಯೋಜನೆ ಜಾರಿಯಾಗುವಾಗ ಏನು ಅಡಚಣೆಯಾದರೂ ಗುತ್ತಿಗೆದಾರರು ಇವರ ನೆರವನ್ನೇ ಕೇಳುತ್ತಿದ್ದರು. ಒಂದು ಸಾರಿ ಕೆಲಸಗಾರರು ಕೈಕೊಟ್ಟರು. ೫೦ ಮಂದಿ ಕೆಲಸದವರನ್ನು ಇವರೇ ಹುಡುಕಿ ಕೊಟ್ಟರು. ಕಳೆದ ಮಾರ್ಚ್‌ನಲ್ಲಿಯೇ ಯೋಜನೆ ಸಂಪೂರ್ಣವಾಗಿ ಮುಗಿದಿದೆ. ಊರಿಗೆ ನೀರು ಪೂರೈಕೆ ಆಗುತ್ತಿದೆ. ೧೦೪೩ರ ವರೆಗೆ ಚಿಂತೆಯಿಲ್ಲ. ಇಷ್ಟೆಲ್ಲ ಕಷ್ಟಪಟ್ಟ ನಂತರ ಪೂರ್ಣಗೊಂಡ ಯೋಜನೆಯನ್ನು ಅದ್ದೂರಿಯಾಗಿ ಉದ್ಘಾಟನೆ ಮಾಡೋಣ ಎಂದು ಆಗಿನ ಜಿಲ್ಲಾ ಉಸ್ತುವಾರಿ ಸಚಿವ ಮುರುಗೇಶ ನಿರಾಣಿ ಅವರನ್ನು ಕನಿಷ್ಠ ೧೦ ಸಾರಿ ಸಂಪರ್ಕಿಸಿದರು. 'ನೋಡೋಣ', 'ಮಾಡೋಣ' ಎಂದು ಅವರು ಕಾಲ ತಳ್ಳಿದರು. ಈಗ ಅವರ ಉಸ್ತುವಾರಿ ಬದಲಾಗಿ ಎಸ್.ಕೆ. ಬೆಳ್ಳುಬ್ಬಿ ಅವರಿಗೆ ಹೊಣೆ ಸಿಕ್ಕಿದೆ. ಅವರನ್ನೂ ನಂದಿಕೇಶ್ವರಮಠರು ಸಂಪರ್ಕಿಸಿದ್ದಾರೆ.

ಕಳೆದ ಭಾನುವಾರ ಮುದ್ದೇಬಿಹಾಳಕ್ಕೆ ಹೋಗಿದ್ದೆ. ಬೆಂಗಳೂರಿನ ಬಸ್ಸು ಹತ್ತುವಾಗ ಈ 'ಬರಿಗಾಲಿನ ಭಗೀರಥ' ಸಿಕ್ಕಿದ್ದರು. ನೀರು ಪೂರೈಕೆ ಘಟಕ ಉದ್ಘಾಟನೆ ಆದ ನಂತರವೇ ಚಪ್ಪಲಿ ಹಾಕಿಕೊಳ್ಳುತ್ತೇನೆ ಎಂದರು. ಊರಿಗೆ ವಾಪಸು ಬಂದ ನಂತರ ಅವರ ಕಥೆಯನ್ನೆಲ್ಲ ಕೇಳಿದೆ. ಮುದ್ದೇಬಿಹಾಳದ ಜನ ಈಗ ನೀರು ಕುಡಿಯುವುದಕ್ಕಿಂತ ಮುಂಚೆ ಬಸವರಾಜ ನಂದಿಕೇಶ್ವರಮಠರ ಹೆಸರನ್ನು ಹೇಳಬೇಕು. ಇಂಥ ಒಬ್ಬ ನಿಸ್ಪೃಹ,



ಪ್ರಾಮಾಣಿಕ ಹೋರಾಟಗಾರ ಇಲ್ಲದೇ ಇದ್ದರೆ ಆ ಊರಿಗೆ ನೀರು ಬರುತ್ತಿತ್ತು ಎಂದು ಅನಿಸುವುದಿಲ್ಲ. ಕರ್ನಾಟಕದಲ್ಲಿ ಇಂಥ ಮುದ್ದೇಬಿಹಾಳಗಳು ಎಷ್ಟಿವೆ ಗೊತ್ತಿಲ್ಲ. ನಿಮ್ಮ ಹೋರಾಟಕ್ಕೆ ಪ್ರೇರಣೆ ಬೇಕು ಎಂದರೆ ನಂದಿಕೇಶ್ವರಮಠರಿಗೆ ಫೋನ್ ಮಾಡಿರಿ.

೧೧.೦೭೮೧

**ನಮ್ಮ ವೃತ್ತಿಗೆ ಸೇರಿದ ಹುಡುಗ,**

**ಮಾಡಿದ 'ಘನಂದಾರಿ' ಕೆಲಸ!**

ನಾವು ಮಾಧ್ಯಮದವರು ಹೀಗೂ ಮಾಡಬಹುದು ಎಂದು ಅನಿಸಿರಲಿಲ್ಲ. ಗುವಾಹಟಿಯಲ್ಲಿ ನಮ್ಮ ವೃತ್ತಿಗೆ ಸೇರಿದ ಒಬ್ಬ ಹುಡುಗ ಮಾಡಿದ ಕೆಲಸ ನಮಗೆ ಮರ್ಯಾದೆ ತರುವಂಥದು ಅಲ್ಲ. ನಾವು ಏನನ್ನು ವರದಿ ಮಾಡಬಹುದು, ಏನನ್ನು ಮಾಡಬಾರದು ಎಂಬ ಗಡಿರೇಖೆಯನ್ನೇ ಆ ಹುಡುಗ ಅಳಿಸಿ ಹಾಕಿಬಿಟ್ಟ. ಒಬ್ಬ ಹೆಣ್ಣು ಮಗಳನ್ನು ಎಂಟು ಹತ್ತು ಜನ ಧಾಂಡಿಗರು ಸುತ್ತುವರಿದು ಒಬ್ಬೊಬ್ಬರೂ ದುಶ್ಯಾಸನರ ಹಾಗೆ ಆಕೆಯ ಬಟ್ಟೆ ಹರಿದು ಅಸಭ್ಯವಾಗಿ, ನಡುಬೀದಿಯಲ್ಲಿ ನಡೆದುಕೊಳ್ಳುತ್ತಿದ್ದಾಗ ಅದನ್ನು ಚಿತ್ರೀಕರಣ ಮಾಡಿ ವರದಿ ಮಾಡಬೇಕು ಎಂದು ಆತನಿಗೆ ಹೇಗೆ ಅನಿಸಿತು? ಆತ ತಂದುಕೊಟ್ಟ ವಿಡಿಯೊಗ್ರಾಫ್ ಅನ್ನು ಸಾರ್ವಜನಿಕರಿಗೆ ತೋರಿಸಬೇಕು ಎಂದು ಆ ವಾಹಿನಿಯ ಸಂಪಾದಕನಿಗೆ ಹೇಗೆ ಅನಿಸಿತು? ಎಷ್ಟು ಯೋಚನೆ ಮಾಡಿದರೂ ಉತ್ತರ ಸಿಗಲಿಲ್ಲ. ಅದು ಒಂದು ಸ್ಥಳೀಯ ವಾಹಿನಿ ಆಗಿರಬಹುದು. ಆದರೆ, ಅದು ಆ ಊರಿಗೆ ಮಾತ್ರ ಸೀಮಿತವಾದ ಸುದ್ದಿಯಾಗಲಿಲ್ಲ. ಇಡೀ ದೇಶ ಅದನ್ನು ನೋಡಿತು. ಜಗತ್ತಿನಲ್ಲಿಯೂ ಹಲವರು ನೋಡಿರಬಹುದು. ಗುವಾಹಟಿಯ ಪೊಲೀಸರು ಆರಂಭದಲ್ಲಿ ಎಲ್ಲ ಪೊಲೀಸರ ಹಾಗೆ 'ಎಲ್ಲರಿಗೂ ರಕ್ಷಣೆ ಕೊಡಲು

ಆಗುತ್ತದೆಯೇ?', 'ಘಟನೆ ನಡೆದ ಸ್ಥಳಕ್ಕೆ ಹೋಗಲು ನಮ್ಮ ಬಳಿ ಹೆಲಿಕಾಪ್ಟರ್ ಇದೆಯೇ? ಎಂದೆಲ್ಲ ಉಡಾಫೆಯಿಂದ ಮಾತನಾಡಿದರೂ ತಕ್ಷಣ ಎಚ್ಚೆತ್ತುಕೊಂಡು ಆರೋಪಿಗಳನ್ನು ಬಂಧಿಸಿದ್ದಾರೆ. ವರದಿ ಮಾಡಿದ ಯುವಕನೂ ಈಗ ಬಂದಿಯಾಗಿದ್ದಾನೆ. ವಾಹಿನಿಯ ಸಂಪಾದಕ ರಾಜೀನಾಮೆ ಕೊಟ್ಟಿದ್ದಾರೆ. ರಾಜೀನಾಮೆ ಕೊಡುವುದಕ್ಕಿಂತ ಮುಂಚೆ ಈ ಪ್ರಕರಣದ ತನಿಖೆ ನಿಷ್ಪಕ್ಷಪಾತವಾಗಿ ನಡೆಯಲಿಕ್ಕಿಲ್ಲ ಎಂದು ಅವರು ಶಂಕಿಸಿದ್ದಾರೆಯೇ ಹೊರತು, 'ಇಂಥ ವರದಿಯನ್ನು ಪ್ರಸಾರ ಮಾಡುವಾಗ ವಿವೇಕ ನನಗೆ ಕೈ ಕೊಟ್ಟಿತ್ತು ಎಂದು ಪಶ್ಚಾತ್ತಾಪದ ಮಾತು ಆಡಿಲ್ಲ. 'ಇಂಥ ಘಟನೆಯನ್ನು ಚಿತ್ರೀಕರಣ ಮಾಡುವ ಬದಲು ಪೊಲೀಸರಿಗೆ ಮಾಹಿತಿ ಕೊಡಬೇಕಿತ್ತು' ಎಂದು ಆ ಸಂಪಾದಕರು ತನ್ನ ಒಂದು ಮಾದರಿ ವರದಿಗಾರನಿಗೆ ಬುದ್ಧಿ ಹೇಳಬೇಕಿತ್ತು. ಮತ್ತು ಆ ವರದಿಯನ್ನು ಪ್ರಸಾರ ಮಾಡುವ ಕೆಟ್ಟ ಚಪಲವನ್ನು ನಿಯಂತ್ರಿಸಿಕೊಂಡು ಮಾಧ್ಯಮ ವರ್ತನೆಗೆ ಹಾಕಿಕೊಡಬೇಕಿತ್ತು.

ವಿಚಿತ್ರ ಎನ್ನಬೇಕೋ, ವಿಪರ್ಯಾಸ ಎನ್ನಬೇಕೋ ದಿ ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾ (ಇಜಿಐ)ದ ಪ್ರಧಾನ ಕಾರ್ಯದರ್ಶಿ ವಿಜಯ್ ನಾಯಕ್ ಅವರು, 'ಇಂಥ ಘಟನೆಗಳನ್ನು ವರದಿ ಮಾಡುವುದು ಅಗತ್ಯ. ಆದರೆ, ಅದೇ ವೇಳೆಯಲ್ಲಿ ನತದೃಷ್ಟ ಯುವತಿಯನ್ನು ರಕ್ಷಿಸುವ ಪ್ರಯತ್ನವನ್ನೂ ಆತ ಮಾಡಬೇಕಿತ್ತು. ತಕ್ಷಣ ಪೊಲೀಸರಿಗೆ ಮಾಹಿತಿಯನ್ನೂ ಕೊಡಬೇಕಿತ್ತು' ಎಂದು ಪ್ರತಿಕ್ರಿಯಿಸಿದ್ದಾರೆ. ಅವರ ಪ್ರಕಾರ ಈ ಘಟನೆಯನ್ನು ವರದಿ ಮಾಡುವುದು ಅಗತ್ಯ ಎಂಬುದನ್ನು ಒಪ್ಪಿಕೊಳ್ಳೋಣ. ಗುವಾಹಟಿಯಲ್ಲಿ ಪುಂಡರು ಆ ಯುವತಿಯ ಬಟ್ಟೆ ಹರಿದು ಮಾನಭಂಗ ಮಾಡಿದರು. ಅವರಲ್ಲಿ ಕೆಲವರು ಕುಡಿದಿದ್ದರು. ಅವರು ಇನ್ನೂ ಮುಂದುವರಿದು ರಸ್ತೆಯಲ್ಲಿಯೇ ಆಕೆಯ ಮೇಲೆ ಅತ್ಯಾಚಾರ ಮಾಡಿದ್ದರೆ ಅದನ್ನೂ ವರದಿ ಮಾಡಬೇಕು ಎಂದು ನಾಯಕ್ ಅವರು ಬಯಸುತ್ತಾರೆಯೇ? ಈ ಯುವತಿ ಒಬ್ಬ ಅಮಾಯಕ ಮಹಿಳೆ, ಆಕೆಯ ಜಾಗದಲ್ಲಿ ವರದಿಗಾರನ ಅಕ್ಕ, ತಂಗಿ, ಹೆಂಡತಿ ಇದ್ದರೆ ಅವರ ಮೇಲೆ ಪುಂಡರು ದಾಳಿ ಮಾಡಿ ಮಾನಭಂಗಕ್ಕೆ ಯತ್ನಿಸಿದರೆ ಅದನ್ನೂ ವರದಿ ಮಾಡಬೇಕು ಅಲ್ಲವೇ? ಆಗ ಅದು ಮಾಧ್ಯಮದ ಕರ್ತವ್ಯ ಆಗುವುದಿಲ್ಲವೇ? ಇಜಿಐದ ಪ್ರಧಾನ ಕಾರ್ಯದರ್ಶಿಗಳು ಯಾವುದು ಸುದ್ದಿ ಎಂದು ಹೇಗೆ ತೀರ್ಮಾನ ಮಾಡುತ್ತಾರೆ? ಒಂದು ಅಪರಾಧ ಘಟನೆ ನಡೆಯುತ್ತಿದ್ದರೆ ಅದನ್ನು ತಡೆಯದೇ ಇದ್ದರೆ ಅದೂ ಅಪರಾಧವೇ ಆಗುತ್ತದೆ. ಇಲ್ಲಿ ಅಪರಾಧವನ್ನು ತಡೆಯುವುದು ಬಿಡಿ ಈ ಘಟನೆಯಲ್ಲಿ ಅಪರಾಧಕ್ಕೆ ಚಿತಾವಣೆ ಇದೆ. ಅಪರಾಧಕ್ಕೆ ಚಿತಾವಣೆ ಮಾಡುವುದು ಅಪರಾಧದಷ್ಟೇ ಗುರುತರವಾದುದು ಎಂದು ಅವರಿಗೆ ಗೊತ್ತಿಲ್ಲವೇ? ಹೆಂಡತಿ ಆತ್ಮಹತ್ಯೆ ಮಾಡಿಕೊಂಡರೆ, ಆಕೆ ಆತ್ಮಹತ್ಯೆ ಮಾಡಿಕೊಳ್ಳುವಂತೆ ಗಂಡ ಕಿರುಕುಳ ಕೊಟ್ಟಿದ್ದರೆ ಆತನ ಮೇಲೆ ಪೊಲೀಸರು ಮೊಕದ್ದಮೆ ದಾಖಲು ಮಾಡಿಕೊಳ್ಳುತ್ತಾರೆ. ಭಾರತೀಯ ದಂಡ ಸಂಹಿತೆಯಲ್ಲಿ ಇದಕ್ಕೆ ಅವಕಾಶ ಇಲ್ಲದೇ ಇದ್ದರೆ ಗುವಾಹಟಿ ಪೊಲೀಸರು ಆ

ಟೀವಿ ವಾಹಿನಿಯ ವರದಿಗಾರನನ್ನು ಬಂಧಿಸಬೇಕಿರಲಿಲ್ಲ. ಈಗ ಮುಖ್ಯ ಆರೋಪಿ ಮತ್ತು ವರದಿಗಾರ ಪರಿಚಿತರು ಎಂಬ ಮಾಹಿತಿಯೂ ಬಹಿರಂಗವಾಗಿದೆ.



ಕರ್ನಾಟಕದ ಬೀದರ್‌ನಲ್ಲಿ ಇದೇ ಮಾದರಿಯ ಚಿತಾವಣೆ ಪ್ರಕರಣದಲ್ಲಿ ಟೀವಿ ವಾಹಿನಿಯ ವರದಿಗಾರರೊಬ್ಬರನ್ನು ತೀರಾ ಈಚೆಗೆ ಅಲ್ಲಿನ ಪೊಲೀಸರು ಬಂಧಿಸಿ ನಾಲ್ಕು ದಿನ ಜೈಲಿಗೆ ತಳ್ಳಿದ್ದರು. ಗಡಿನಾಡು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಶಾಸಕ ಚಂದ್ರಕಾಂತ ಬೆಲ್ಲದ್ ಅವರ ಮುಖಕ್ಕೆ ಬೀದರ್‌ನ ಕನ್ನಡ ಸಂಘಟನೆಯ ಕೆಲವರು ಕಾರ್ಯಕರ್ತರು ಮಸಿ ಬಳಿದಿದ್ದರು. ಆ ಸಮಯದಲ್ಲಿ ಎರಡು ಟೀವಿ ವಾಹಿನಿಗಳ ವರದಿಗಾರರು ಮಾತ್ರ ಅಲ್ಲಿ ಇದ್ದರು. ಬೆಲ್ಲದ್ ಅವರ ಮುಖಕ್ಕೆ ಮಸಿ ಬಳಿಯುವ ವಿಚಾರ ಅವರಿಗೆ ಗೊತ್ತಿತ್ತು ಮತ್ತು ಒಬ್ಬ ವರದಿಗಾರನಿಗೂ ಕನ್ನಡ ಸಂಘಟನೆಯ ಮುಖಂಡನಿಗೂ ಗೆಳೆತನವಿತ್ತು ಎಂದು ಪೊಲೀಸರು ಪತ್ತೆ ಮಾಡಿದರು. ಘಟನೆ ನಡೆಯುವುದಕ್ಕಿಂತ ಮುಂಚೆ ಅವರಿಬ್ಬರ ನಡುವೆ ನಡೆದ ದೂರವಾಣಿ ಸಂಭಾಷಣೆ ಮಾಹಿತಿಯನ್ನೂ ಅವರು ಕಲೆ ಹಾಕಿದರು. ವಾಹಿನಿ ವರದಿಗಾರನ ಮೇಲೆ ಬೆಲ್ಲದ್ ಅವರ ಮುಖಕ್ಕೆ ಮಸಿ ಬಳಿಯಲು ಚಿತಾವಣೆ ಮಾಡಿದ ಆರೋಪ ಬಂತು. ಪೊಲೀಸರು ಅವನ ಕೈಗೆ ಬೇಡಿ ಹಾಕಿ ನಾಲ್ಕು ದಿನ ಜೈಲಿಗೆ ತಳ್ಳಿದರು. ಅವನಿಗೆ ಜಾಮೀನು ಸಿಗುವುದು ಕಡುಕಷ್ಟವಾಯಿತು. ಆತ ಕೆಲಸ ಮಾಡುವ ಸಂಸ್ಥೆಯಿಂದಲೂ ಆತನಿಗೆ ಅಂಥ ಬೆಂಬಲ ಸಿಗಲಿಲ್ಲ. ಈಗ ಆ ಹುಡುಗ ಆ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿಲ್ಲ. ಈ ಘಟನೆಗೆ ಸಂಬಂಧಿಸಿದಂತೆ 'ಬಿ' ವರದಿ ಹಾಕುವ ಭರವಸೆ ಕೊಟ್ಟಿದ್ದ ಪೊಲೀಸರು ತಮ್ಮ ಮಾತು ಉಳಿಸಿಕೊಂಡಿಲ್ಲ. ಅವರಿಗೂ ಮಾಧ್ಯಮದ ಗೆಳೆಯರಿಗೆ ಬುದ್ಧಿ ಕಲಿಸಬೇಕು ಎಂಬ ವಿಘ್ನ ಸಂತೋಷ ಇರಬಹುದು! ಅದೇ ಬೀದರ್‌ನ ವಾಯುಪಡೆ ಸ್ಥಾವರದಿಂದ ಹಾರಾಟ ಆರಂಭಿಸಿದ 'ಸೂರ್ಯಕಿರಣ' ಯುದ್ಧ ತರಬೇತಿ ವಿಮಾನ ನೆಲಕ್ಕೆ ಅಪ್ಪಳಿಸಿತು ಎಂದು ಬ್ರೇಕಿಂಗ್ ಸುದ್ದಿ ಕೊಟ್ಟ ಇನ್ನೊಬ್ಬ ಹುಡುಗನನ್ನು ವಾಹಿನಿಯ ಮಾಲೀಕರು ಕೆಲಸದಿಂದ ತೆಗೆದು ಹಾಕಿದರು. ಬೀದರ್ ಸ್ಥಾವರದಲ್ಲಿ 'ಸೂರ್ಯಕಿರಣ' ವಿಮಾನಗಳ ನಿಲುಗಡೆ ಈಗ ಇಲ್ಲ ಎಂದೂ ಆತನಿಗೆ ಗೊತ್ತಿರಲಿಲ್ಲ. ಆತನಿಗೆ ಯಾರು ಸುದ್ದಿ ಕೊಟ್ಟರೋ ಏನೋ ಗೊತ್ತಾಗಲೇ ಇಲ್ಲ!

ಕಳೆದ ಮೇ ತಿಂಗಳಲ್ಲಿ ಬೆಳಗಾವಿ ಟೀವಿ ವರದಿಗಾರರು ಇನ್ನೊಂದು ಸಾಹಸ ಮಾಡಿದರು. ನಿಪ್ಪಾಣಿಯಿಂದ ಬೆಳಗಾವಿಗೆ ಬರುತ್ತಿದ್ದ ಮಹಾರಾಷ್ಟ್ರ ರಸ್ತೆ ಸಾರಿಗೆ ಸಂಸ್ಥೆಯ ಒಂದು ಬಸ್ ಅನ್ನು ಸ್ತವನಿಧಿ ಘಟ್ಟದ ಹತ್ತಿರ ಕೆಲವರು ಕನ್ನಡ ಚಳವಳಿಗಾರರು ತಡೆದು ನಿಲ್ಲಿಸಿದರು. ಬಸ್‌ನ ಒಳಗಿನ ಪ್ರಯಾಣಿಕರು ಕೆಳಗೆ ಇಳಿಯಲೂ ಬಿಡದೇ ಬಸ್‌ನತ್ತ ಕಲ್ಲು ತೂರಿದರು. ಸೀಮೆ ಎಣ್ಣೆ ಎರಚಿ ಟೈರ್‌ಗಳಿಗೆ ಬೆಂಕಿ ಹಚ್ಚಲು ಹೊರಟರು. ಹಳದಿ-ಕೆಂಪು ಬಣ್ಣದ ಕನ್ನಡ ಬಾವುಟದ ಬಟ್ಟೆಯನ್ನು ಕೊರಳಿಗೆ ಧರಿಸಿದ್ದ ಕನ್ನಡ ಚಳವಳಿಗಾರರ ಉಗ್ರಪ್ರತಾಪವನ್ನು ನೋಡಿ ಬಸ್‌ನಲ್ಲಿದ್ದ ಪ್ರಯಾಣಿಕರು ಎದ್ದೆವೋ ಬಿದ್ದೆವೊ ಎಂದು ಬಸ್‌ನಿಂದ ಹೊರಗೆ ಓಡಿ ಬಂದರು. ಬಸ್‌ನ ಟೈರಿಗೆ ಹಚ್ಚಿದ ಬೆಂಕಿಯನ್ನು ಆರಿಸಲು ನೀರು ಎರಚುತ್ತಿದ್ದ ಕಂಡಕ್ಟರ್ ಮತ್ತು ಚಾಲಕನನ್ನು ಚಳವಳಿಗಾರರು ಎಳೆದು ಚೆನ್ನಾಗಿ ಥಳಿಸಿದರು. ಟೀವಿ ವಾಹಿನಿಗಳ

ವರದಿಗಾರರು ಅದನ್ನೆಲ್ಲ ಚಿತ್ರಿಸಿಕೊಂಡರು. ತಮ್ಮ ತಮ್ಮ ಕಚೇರಿಗಳಿಗೆ ಕಳಿಸಿ ಕೊಟ್ಟರು. ಇಡೀ ವರದಿ ಯಥಾವತ್ ಪ್ರಸಾರವಾಯಿತು. ಬಸ್‌ನಲ್ಲಿ ಬರೀ ಮರಾಠಿಗರು ಮಾತ್ರ ಇದ್ದರೇ? ಮರಾಠಿಗರು ಮಾತ್ರ ಇದ್ದರೆ ಅವರನ್ನು ಹೀಗೆ ನಾವು

ಸುಟ್ಟು ಹಾಕಬಹುದೇ? ಬರೀ ಹೆದರಿಸಲು ಚಳವಳಿಗಾರರು ಹೀಗೆ ಮಾಡುತ್ತಾರೆಯೇ? ಅವರು ಯಾರನ್ನು ಹೆದರಿಸಲು ಹೀಗೆ ಮಾಡುತ್ತಾರೆ?

ಬೆಳಗಾವಿ ಜಿಲ್ಲೆಯ ಪೊಲೀಸರು ಹನ್ನೊಂದು ಮಂದಿ ಕನ್ನಡ ಚಳವಳಿಗಾರರನ್ನು ಬಂಧಿಸಿ ಬಿಡುಗಡೆ ಮಾಡಿದ್ದಾರೆ. ಒಂದು ವೇಳೆ ಬಸ್ ಸ್ಫೋಟಗೊಂಡು ಅದರಲ್ಲಿ ಕುಳಿತವರು ಸುಟ್ಟು ಕರಕಲಾಗಿದ್ದರೆ ಅದನ್ನೂ ನಮ್ಮ ಗೆಳೆಯರು ಚಿತ್ರೀಕರಿಸಿಕೊಳ್ಳುತ್ತಿದ್ದರೇ? ಇಜಿಐ ಪ್ರಧಾನ ಕಾರ್ಯದರ್ಶಿಗಳು ಹೇಳಿದ ಹಾಗೆ ಅವರು ತಮ್ಮ ಕರ್ತವ್ಯ ಮಾತ್ರ ಮಾಡುತ್ತಿದ್ದಾರೆ ಎಂದು ನಾವೂ ಅಂದುಕೊಳ್ಳಬಹುದೇ? ಕನ್ನಡ ಚಳವಳಿಗಾರರು ಬೆಳಗಾವಿಯಿಂದ ೭೦ ಕಿಲೋಮೀಟರ್ ದೂರದಲ್ಲಿನ ಸ್ತವನಿಧಿಯ ಬಳಿ ಮಹಾರಾಷ್ಟ್ರ ಸಾರಿಗೆ ಸಂಸ್ಥೆಯ ಬಸ್ಸಿಗೆ ಬೆಂಕಿ ಇಡುತ್ತಾರೆ ಎಂದು ಬೆಳಗಾವಿಯಲ್ಲಿನ ಈ ವರದಿಗಾರರಿಗೆ ಹೇಗೆ ಗೊತ್ತಾಯಿತು? ಕನ್ನಡ ಚಳವಳಿಗಾರರು ಈ ವರದಿಗಾರರನ್ನು ಕರೆದುಕೊಂಡು ಹೋಗಿದ್ದರು ಎಂದು ನಂಬಲು ಬೇಕಾದಷ್ಟು ಆಧಾರಗಳು ಇವೆ. ಕನ್ನಡ ಚಳವಳಿಗಾರರದು ಪೂರ್ವ ನಿಯೋಜಿತ ಕೃತ್ಯ ಎನ್ನಬಹುದಾದರೆ ವಾಹಿನಿಗಳ ವರದಿಗಾರರದು ಎಂಥ ಕೃತ್ಯ? ಚಳವಳಿಗಾರರ ಮೇಲೆ ಕೊಲೆಯ ಯತ್ನದ ಆರೋಪ ಹೊರಿಸಬಹುದಾದರೆ ವರದಿಗಾರರ ವಿರುದ್ಧ ಅದಕ್ಕೆ ಚಿತಾವಣೆ ಮಾಡಿದ ಆರೋಪ ಹೊರಿಸಲು ಸಾಧ್ಯವಿಲ್ಲವೇ?

ಇದನ್ನೆಲ್ಲ ಕೇವಲ ವರದಿಗಾರರೇ ನಿರ್ಧರಿಸುತ್ತಾರೆಯೇ? ಇಂಥ ವರದಿಯನ್ನು ಕಳುಹಿಸಿದ ಮೇಲೆ 'ಏನಯ್ಯ, ನೀನೂ ಒಬ್ಬ ಮನುಷ್ಯನೇ? ಒಂದು ಬಸ್‌ನಲ್ಲಿ ಬರುವ ಅಮಾಯಕ ಜನರ ಮೇಲೆ ಹೀಗೆ ದಾಳಿ ಮಾಡಿದ ವರದಿ ಕಳುಹಿಸುತ್ತೀಯಲ್ಲ? ನೀನು ಹೀಗೆ ಮಾಡಬಹುದೇ?' ಎಂದು ಅವನ ಮುಖ್ಯಸ್ಥರು ಆತನ ಕಿವಿ ಹಿಂಡಿದರೆ ಆತ ಮತ್ತೊಮ್ಮೆ ಇಂಥ ವರದಿ ಕಳುಹಿಸಲಾರ. ನಮ್ಮ ವರದಿಗಾರರಿಗೆ ರಕ್ತದ ರುಚಿ ಹತ್ತಿದೆ. ಹಿಂಸೆಯನ್ನು ಅವರು ಆನಂದಿಸುತ್ತಿದ್ದಾರೆ. ಅದನ್ನು ವರದಿ ಮಾಡುವ ಮೂಲಕ ತಮ್ಮ ವಾಹಿನಿಯ ಪ್ರಸಾರವನ್ನು ಹೆಚ್ಚು ಮಾಡಬಹುದು ಎಂದು ಅವರು ನಂಬತೊಡಗಿದ್ದಾರೆ. ಇಲ್ಲವಾದರೆ ಗುವಾಹಟಿಯ ವರದಿಗಾರ ಯುವತಿಯ ಮಾನಭಂಗವನ್ನು ಚಿತ್ರೀಕರಿಸುವ ಕೆಟ್ಟ ಮನಸ್ಥಿತಿಯನ್ನು ತಲುಪುತ್ತಿರಲಿಲ್ಲ.

ಭಾರತದಲ್ಲಿ ಬಿಬಿಸಿಯ ಪ್ರತಿನಿಧಿಯಾಗಿ ಅನೇಕ ವರ್ಷಗಳ ಕೆಲಸ ಮಾಡಿದ ಹೆಸರಾಂತ ಪತ್ರಕರ್ತ ಮಾರ್ಕ್ ಟುಲಿ ಅವರು ಕೆಲವು ವರ್ಷಗಳ ಹಿಂದೆ ಬೆಂಗಳೂರಿನ ಒಂದು ಮಾಧ್ಯಮ ಶಾಲೆಗೆ ಬಂದಿದ್ದಾಗ, 'ಮಾಧ್ಯಮದವರು ತಾವು ಇನ್ನೊಬ್ಬರ ಜೀವನವನ್ನು ವರದಿ ಮಾಡುತ್ತೇವೆ ಎಂದು ತಿಳಿದಿರಬೇಕು' ಎಂದಿದ್ದರು. ಅವರ ಮಾತಿನಲ್ಲಿ ಅಡಗಿದ ಅರ್ಥದ

ವಿಸ್ತಾರ ಬಹಳ ದೊಡ್ಡದು. ಅದು ಗೊತ್ತುಪಡಿಸುವ ನಮ್ಮ ಜವಾಬ್ದಾರಿಯೂ ಅಷ್ಟೇ ದೊಡ್ಡದು. ಗುವಾಹಟಿಯ ವರದಿಗಾರ ಗೌರವ್ ನಿಯೋಗ್‌ಗೆ ಈ ಮಾತು ಗೊತ್ತಿರಲಿಲ್ಲ. ಆತ ಕೆಲಸ ಮಾಡುವ ವಾಹಿನಿಯ ಸಂಪಾದಕರಿಗೂ ಗೊತ್ತಿರಲಿಲ್ಲ. ಬೀದರ್-ಬೆಳಗಾವಿಯ ವರದಿಗಾರರಿಗೂ ಗೊತ್ತಿರಲಿಲ್ಲ. ಅವರು ಕೆಲಸ ಮಾಡುವ ವಾಹಿನಿಗಳ ಸಂಪಾದಕರಿಗೆ ಇದು ಗೊತ್ತಿರಲಿಲ್ಲ ಎಂದು ಹೇಳುವ ಧೈರ್ಯವನ್ನು ನಾನು ಮಾಡಲಾರೆ. ಇಂಥ ವರದಿಗಾರಿಕೆ ತಪ್ಪು ಎಂದು ಭಾವಿಸುವ

ಅನೇಕ ಜನ ಗೆಳೆಯರು ಮಾಧ್ಯಮದಲ್ಲಿಯೇ ಇದ್ದಾರೆ ಎಂದೂ ನನಗೆ ಗೊತ್ತಿದೆ. ಆದರೂ ಇಂಥ ವರದಿಗಳು ಪ್ರಸಾರ ಆಗುತ್ತಿವೆ. ಇನ್ನೂ ನಾವು ಏನೇನನ್ನು ವರದಿ ಮಾಡುತ್ತೇವೆ. ಜನರು ಏನೇನನ್ನು ನೋಡಬೇಕಾಗಿದೆ ಗೊತ್ತಿಲ್ಲ. ಗೌರವ್ ನಿಯೋಗ್ ಬರೀ ತನ್ನ ಗೌರವ ಕಳೆದುಕೊಳ್ಳಲಿಲ್ಲ. ನಮ್ಮ ಗೌರವವನ್ನೂ ಕಳೆದ. ಆತ ಕೇವಲ ಒಬ್ಬ ವ್ಯಕ್ತಿಯಲ್ಲ. ಆತ ಮಾಡಿದ್ದು ಒಂದು ಯ�ಃಕಶ್ಚಿತ್ ಘಟನೆಯಲ್ಲ. ನಮ್ಮಲ್ಲಿ ಅನೇಕರಲ್ಲಿ ಅವನದೇ ಮನಸ್ಥಿತಿ ಇದ್ದಂತಿದೆ. ಜುಲೈ ತಿಂಗಳು ಪೂರ್ತಿ ಪತ್ರಿಕಾ ದಿನಾಚರಣೆ ಎಂದು ಆಚರಿಸುತ್ತೇವೆ. ಇನ್ನು ಎರಡು ದಿನಗಳಲ್ಲಿ ಈ ದಿನಾಚರಣೆ ಮುಗಿಯುತ್ತಿದೆ. ಒಂದಿಷ್ಟು ಆತ್ಮಾವಲೋಕನ ಮಾಡಿಕೊಳ್ಳಬೇಕು ಅನಿಸಿತು. ಅದಕ್ಕೇ..

೨೯-೭-೧೨

**ಕಾಡಿದ ಒಲಿಂಪಿಕ್ಸ್ ಚಿತ್ರಗಳ ಸುತ್ತಮುತ್ತ...**

ಹದಿನೈದು ದಿನಗಳ ಒಲಿಂಪಿಕ್ ಉತ್ಸವದಲ್ಲಿ ಎಷ್ಟೊಂದು ಹ ಚಿತ್ರಗಳು? ಒಂದೇ ಎರಡೇ? ನೂರು ಮತ್ತು ಇನ್ನೂರು ಮೀಟರ್ ಓಟದಲ್ಲಿ ವಿಶ್ವದಾಖಲೆ ನಿರ್ಮಿಸಿದ ಜಮೈಕಾದ ಧಾಂಡಿಗರು, ಈಜುಕೊಳದಲ್ಲಿ ಮಹಿಳೆಯರ ಸಿಂಕ್ರನೈಸ್ ಈಜು ವಿಭಾಗದ ಡ್ಯುಯೆಟ್ಸ್ ಸ್ಪರ್ಧೆಯಲ್ಲಿ ಮೀನಿನಂತೆ ಕಸರತ್ತು ಮಾಡಿದ ರಷ್ಯನ್ನರು, ಜಿಮ್ನಾಸ್ಟಿಕ್‌ನಲ್ಲಿ ಕಂಬಿಗಳ ಮೇಲೆ ಕಲಾತ್ಮಕವಾಗಿ ಮೈ ಮಣಿಸಿದ ಅಮೆರಿಕನ್ನರು. ಪತ್ರಿಕೆಗಳ ಪುಟಗಳನ್ನು ತಿರುವಿ ಹಾಕುತ್ತ ಮನಸ್ಸು ಎಲ್ಲೋ ಗಕ್ಕನೆ ಇಥಿಯೋಪಿಯಾದ ಆಟಗಾರರ ಮೇಲೆ ನೆಟ್ಟು ನಿಂತಿತು. ಗಾಢ ಕಪ್ಪು ಬಣ್ಣ. ಅಷ್ಟೇನೂ ದೃಢವಲ್ಲದ ನೀಳ ಕಾಯ. ಆ ದೇಶದ ಇತಿಹಾಸ ಹುಡುಕುತ್ತ ಹೋದರೆ ದಟ್ಟ ದಾರಿದ್ರ ಅನಕ್ಷರತೆ, ನಿರುದ್ಯೋಗ, ಹಸಿವು... ಒಲಿಂಪಿಕ್ ಪದಕ ಪಟ್ಟಿಯನ್ನು ಹುಡುಕಿದೆ. ಭಾರತಕ್ಕಿಂತ ೫೬ ವರ್ಷಗಳ ನಂತರ ಒಲಿಂಪಿಕ್ ಅಂಗಣಕ್ಕೆ ಇಳಿದ ಇಥಿಯೋಪಿಯ ನಮಗಿಂತ ಮುಂದೆ ಇದೆ!

ಅದು ದೊಡ್ಡ ದೇಶವೇನೂ ಅಲ್ಲ. ಮೂರು ಕೋಟಿ ಜನಸಂಖ್ಯೆ. ೧೧ ಲಕ್ಷ ಚದರ ಕಿಲೋಮೀಟರ್ ಭೂ ಪ್ರದೇಶ. ಅಲ್ಲಿ ನಿತ್ಯ ಬರ. ಕೃಷಿ ಉತ್ಪನ್ನ ನಗಣ್ಯ ತಲಾ ಆದಾಯ ನೂರು ಡಾಲರ್ ಮಾತ್ರ. ಬಹುತೇಕ ಮಕ್ಕಳಿಗೆ ಏಳು ವರ್ಷಗಳ ಶಿಕ್ಷಣ ಮುಗಿಸುವುದೂ ಆಗುವುದಿಲ್ಲ. 'ಅವರಿಗೆಲ್ಲ ಒಂದಿಷ್ಟು ಶಿಕ್ಷಣ ಸಿಗುತ್ತದೆ. ಅಬ್ಬಬ್ಬ ಅಂದರೆ ಅವರಿಗೆಲ್ಲ ಕೊಂಚ ಬರೆಯಲು, ಕೊಂಚ ಓದಲು ಬರುತ್ತದೆ ಅಷ್ಟೇ. ಅಲ್ಲಿ ಶಾಲೆಗಳು ತೀರಾ ಕಡಿಮೆ. ಇರುವ ಶಾಲೆಗಳಲ್ಲಿ ಪುಸ್ತಕಗಳು ಇಲ್ಲ. ಪಠ್ಯ ಸಾಮಗ್ರಿ ಇಲ್ಲ. ಮೇಜು-ಕುರ್ಚಿಗಳು ಇಲ್ಲ. ಯಾವ ಶಾಲೆಯಲ್ಲಿಯೂ ಶೌಚಾಲಯಗಳು ಇಲ್ಲ... ಆದರೂ ಅಲ್ಲಿನ

ಯುವಕ ಯುವತಿಯರು ಒಲಿಂಪಿಕ್ ಕ್ರೀಡಾಕೂಟಗಳಲ್ಲಿ ಓಡುತ್ತಿದ್ದಾರೆ. ಓಡಿ ಚಿನ್ನದ ಪದಕ ಗೆಲ್ಲುತ್ತಿದ್ದಾರೆ. ಬಡವರು ಗುರಿ ಮುಟ್ಟಲು ಬಹುದೂರ ಓಡಬೇಕು. ಇಥಿಯೋಪಿಯದ ಸ್ಪರ್ಧಿಗಳು ದೂರದ ಓಟದಲ್ಲಿಯೇ ಚಿನ್ನ ಗಳಿಸುತ್ತಿದ್ದಾರೆ. ಇದು ಕಾಕತಾಳೀಯ ಇರಲಾರದು. ಹತ್ತು ಸಾವಿರ ಓಟದ ಸ್ಪರ್ಧೆಯಲ್ಲಿ ಅವರು ಐದು ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದಿದ್ದಾರೆ. ಈ ಸಾರಿಯ ಒಲಿಂಪಿಕ್ಸ್‌ನಲ್ಲಿ ಮ್ಯಾರಥಾನ್‌ನಲ್ಲಿ ಚಿನ್ನ ಗೆದ್ದ ಟಿಕಿ ಗೆಲಾನ್ ಕೂಡ ಇಥಿಯೋಪಿಯದವಳೇ.

ಕತ್ತಲೆಯ ಈ ದೇಶದಲ್ಲಿ ಓಟದ ಬೆಳಕು ಕಂಡುದು ೧೯೬೦ರಲ್ಲಿ. ಆ ವರ್ಷ ನಡೆದ ಒಲಿಂಪಿಕ್ಸ್ ಮ್ಯಾರಥಾನ್‌ನಲ್ಲಿ ಚಿನ್ನ ಗೆದ್ದ ಅಬೆಬೆ ಬಿಕಿಲನ ಬದುಕೇ ಬದಲಾಗಿಹೋಯಿತು. ಆತ ಇತರರಿಗೂ ಬೆಳಕಾದ. ಎಲ್ಲರೂ ಅವನ ಹಾಗೇ ಓಡತೊಡಗಿದರು. ಹನ್ನೆರಡು ವರ್ಷಗಳ ಹಿಂದೆ ಸಿಡ್ನಿಯಲ್ಲಿ ನಡೆದ ಒಲಿಂಪಿಕ್ಸ್‌ನಲ್ಲಿ ಇಥಿಯೋಪಿಯ ಸ್ಪರ್ಧಿಗಳು ನಾಲ್ಕು ಚಿನ್ನ ಸೇರಿ ಒಟ್ಟು ಎಂಟು ಪದಕಗಳನ್ನು ಗೆದ್ದಿದ್ದರು. ಇದುವರೆಗೆ ಆ ದೇಶ ಗೆದ್ದ ಒಟ್ಟು ಪದಕಗಳ ಸಂಖ್ಯೆ ೨೦ ಚಿನ್ನವೂ ಸೇರಿ ೪೨. ೧೧೨ ವರ್ಷಗಳಿಂದ ಒಲಿಂಪಿಕ್ಸ್‌ಗೆ ಹೋಗಿ ಬರುತ್ತಿರುವ ಭಾರತ ಗೆದ್ದುದು ಒಂಬತ್ತು ಚಿನ್ನ ಸೇರಿ ೨೪ ಪದಕಗಳು! ಭಾರತ ಅಥ್ಲೆಟಿಕ್ಸ್‌ನಲ್ಲಿ ಚಿನ್ನ ಗೆದ್ದೇ ಇಲ್ಲ. ಗೆಲ್ಲಲು ಇನ್ನೂ ಬಲುದೂರ ಸಾಗಬೇಕೆನಿಸುತ್ತದೆ. ಒಲಿಂಪಿಕ್ಸ್ ಪದಕ ಗೆಲ್ಲುವಿಕೆಯಲ್ಲಿ ಒಂದು 'ಸಾಮಾನ್ಯ ವಿಧಾನ ಇದ್ದಂತೆ ಕಾಣುತ್ತದೆ. ಓಟದಲ್ಲಿ ಆಫ್ರಿಕಾ ಮೂಲದವರು, ಜಿಮ್ನಾಸ್ಟಿಕ್ಸ್‌ನಲ್ಲಿ 'ಮಂಗೋಲಾಯ್' ಮೂಲದವರು, ಭಾರ ಎತ್ತುವ ಸ್ಪರ್ಧೆಗಳಲ್ಲಿ ಇರಾನ್, ಕಜಕಸ್ತಾನದವರು, ಈಜು ಸ್ಪರ್ಧೆಗಳಲ್ಲಿ ಅಮೆರಿಕ, ಆಸ್ಟ್ರೇಲಿಯಾದವರು ಮತ್ತು ರಷ್ಯನ್ನರು ಪದಕ ಗೆಲ್ಲುವುದರಲ್ಲಿ ಈ 'ಸಾಮಾನ್ಯ ವಿಧಾನ ಎದ್ದು ಕಾಣುತ್ತದೆ. ಅಂತಲೇ ಒಲಿಂಪಿಕ್ ಪದಕಕ್ಕೂ ವಂಶವಾಹಿ ಸಾಮರ್ಥ್ಯಕ್ಕೂ ಇರುವ ಸಂಬಂಧ ಕುರಿತು ಬೇಕಾದಷ್ಟು ಅಧ್ಯಯನಗಳೂ ನಡೆದಿವೆ.

ಭಾರತದಲ್ಲಿಯೂ ಬುಡಕಟ್ಟು ಮೂಲದವರು ಇದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಜನಾಂಗದ ಹುಡುಗ-ಹುಡುಗಿಯರನ್ನು ಆಯ್ದು ಭವಿಷ್ಯದ ಕ್ರೀಡಾಪಟುಗಳನ್ನಾಗಿ ರೂಪಿಸಲು ಅದೇ ಜಿಲ್ಲೆಯ ಮಾರ್ಗರೆಟ್ ಆಳ್ವ ಅವರು ಕೇಂದ್ರದಲ್ಲಿ ಕ್ರೀಡಾ ಸಚಿವೆಯಾಗಿದ್ದಾಗ ಪ್ರಯತ್ನ ಮಾಡಿದ್ದರು. ಅದು ಒಂದು ಹಂತದವರೆಗೆ ಮಾತ್ರ ಫಲ ನೀಡಿತು. ನಂತರ ಮತ್ತೆ ಸಾಧಕರ ಪಟ್ಟಿಯಲ್ಲಿ ಸಿದ್ದಿಗಳ ಹೆಸರು ಕಂಡು ಬರಲಿಲ್ಲ. ಭಾರತದ ಈಶಾನ್ಯ ರಾಜ್ಯಗಳಲ್ಲಿ 'ಮಂಗೋಲಾಯ್' ಮೂಲದವರೇ ಇದ್ದಾರೆ. ಜಿಮ್ನಾಸ್ಟಿಕ್‌ನಲ್ಲಿ ಅವರನ್ನು ತರಬೇತು ಮಾಡಬಹುದಿತ್ತು. ಅದೂ ಸಾಧ್ಯವಾದಂತೆ ಕಾಣುವುದಿಲ್ಲ. ಇಥಿಯೋಪಿಯ ದೇಶದ ಕ್ರೀಡಾ ನೀತಿಯನ್ನು ನೋಡಿದೆ. ಅದರಲ್ಲಿ ಅಂಥ ವಿಶೇಷವೇನೂ ಕಾಣಲಿಲ್ಲ. ಅಂತರರಾಷ್ಟ್ರೀಯ ಸ್ಪರ್ಧೆಯಲ್ಲಿ ಗೆದ್ದ ಸ್ಪರ್ಧಿಗೆ ನಗದು ಬಹುಮಾನ ನೀಡುವ ಪ್ರಸ್ತಾಪವೇ

ಅಲ್ಲಿ ಇಲ್ಲ. ಭಾರತದ ಒಬ್ಬ ಸ್ಪರ್ಧಿ ಒಂದು ಕಂಚು ಗೆದ್ದರೂ ಐವತ್ತು ಲಕ್ಷ, ಒಂದು ಕೋಟಿ ರೂಪಾಯಿ ಬಹುಮಾನ ಘೋಷಿಸುವ ರಾಜ್ಯ ಸರ್ಕಾರಗಳು ಇಲ್ಲಿ ಇವೆ. ಆದರೂ ನಾವು ಹಿಂದೆ... ಏಕೆ? ನಮ್ಮಲ್ಲಿ ಛಲದ ಕೊರತೆ ಇದೆಯೇ? ಭಾರತದ ಹಾಕಿ ತಂಡದ ಆಟದಲ್ಲಿ ಆ ಛಲದ ಕೊರತೆ ಇತ್ತೇ? ಬರೀ ಒಲಿಂಪಿಯನ್ ಎಂದು ಕರೆಸಿಕೊಳ್ಳುವುದರಲ್ಲಿಯೇ ಅವರಿಗೆ ತೃಪ್ತಿಯೇ? ಇಲ್ಲವಾದರೆ

ಒಂಬತ್ತು ಸಾರಿ ಚಿನ್ನ ಗೆದ್ದಿದ್ದ ಒಂದು ತಂಡ ಈ ಸಾರಿ ಕೊನೆಯ ಸ್ಥಾನಕ್ಕೆ ಪೈಪೋಟಿ ಮಾಡಬೇಕಿತ್ತೇ? ತಪ್ಪು ಆಟಗಾರರಲ್ಲಿ ಇದೆಯೇ? ಆಯ್ಕೆ ಮಾಡುವವರಲ್ಲಿ ಇದೆಯೇ? ಇಬ್ಬರೂ ಹೊಣೆಯೇ? ಅಥವಾ ವ್ಯವಸ್ಥೆಯಲ್ಲಿಯೇ ಐಬು ಇರಬಹುದೇ? ಏಷ್ಯನ್, ಕಾಮನ್‌ವೆಲ್ತ್ ಕೂಟಗಳ ಆಚೆ ನಮ್ಮ ಪ್ರತಿಭೆ ಎಂದೂ ಬೆಳಗಿಲ್ಲ. ನಮ್ಮ ಸುತ್ತಮುತ್ತಲಿನ ಎಲ್ಲ ದೇಶಗಳಲ್ಲಿಯೂ ಆ ಛಲದ ಕೊರತೆ ಇದೆಯೇ? ಇದೆಲ್ಲದರ ನಡುವೆ ಒಂದಿಷ್ಟು ಪ್ರತಿಭೆಗಳು ಬೆಳಗಿವೆ. ಮೇರಿ ಕೋಮ್, ಸೈನಾ ನೆಹ್ವಾಲ್, ವಿಜಯಕುಮಾರ್, ಗಗನ್ ನಾರಂಗ್... ಆದರೆ, ಇವೆಲ್ಲ ಮಿಂಚಿನಂಥ ಪ್ರತಿಭೆಗಳು, ಅಭಿನವ್ ಬಿಂದ್ರಾ ಹೀಗೆಯೇ ಮಿಂಚಿ ಮರೆಯಾಗಿ ಬಿಟ್ಟರು. ಇವರೆಲ್ಲ ಕಾರ್ಲ್ ಲೂಯಿಸ್, ಉಸೇನ್ ಬೋಲ್ಟ್ ಹಾಗೆ ಧ್ರುವತಾರೆಗಳಂತೆ ಆಕಾಶದಲ್ಲಿ ನೆಟ್ಟಗೆ ನಿಲ್ಲುವಂತೆ ಕಾಣುವುದಿಲ್ಲ. ಪ್ರತಿ ಒಲಿಂಪಿಕ್ ಆಚೆ ಈಚೆ ಹೀಗೆ ಭಾರತದ ಅನೇಕ ಕನಸುಗಳು ಭಗ್ನವಾಗಿವೆ.

ನಮ್ಮ ತಲಾ ಆದಾಯ ಇಥಿಯೋಪಿಯಕ್ಕಿಂತ ಹತ್ತು ಪಟ್ಟು ಹೆಚ್ಚು ಇದೆ. ಇಲ್ಲಿನ ಶಿಕ್ಷಣಕ್ಕೂ, ಸೌಲಭ್ಯಗಳಿಗೂ ಇಥಿಯೋಪಿಯದ ಸೌಲಭ್ಯಗಳಿಗೂ ಅಜಗಜಾಂತರ. ಇಥಿಯೋಪಿಯಕ್ಕಿಂತ ಎಷ್ಟು ಪಟ್ಟು ದೊಡ್ಡದು ಭಾರತ? ವಂಶವಾಹಿ ಪ್ರತಿಭಾವಂತರನ್ನು ಮೀರಿ ನಿಲ್ಲುವ ಪ್ರಯತ್ನ ನಮ್ಮಿಂದ ಆಗಲಿಲ್ಲವೇ? ನಮ್ಮಿಂದ ಸಾಧ್ಯವಿಲ್ಲ ಎಂದು ನಾವು ನಂಬಿ ಕೈ ಸೋತು ಬಿಟ್ಟಿದ್ದೇವೆಯೇ? ಮತ್ತೆ ಒಲಿಂಪಿಕ್ ಚಿತ್ರಗಳು ಕಣ್ಣ ಮುಂದೆ ಹಾಯ್ದು ಹೋದುವು. ೮೦೦ ಮೀಟರ್ಸ್ ಹೀಟ್ಸ್‌ನಲ್ಲಿ ಓಡಿದ ಸೌದಿ ಅರೇಬಿಯಾದ ಸಾರಾ ಅತ್ತರ್ ಮೇಲೆ ಕಣ್ಣು ನಿಂತುಕೊಂಡಿತು. ಆಕೆ, ಹಸಿರು-ಕಪ್ಪು ಬಣ್ಣದ ಟ್ರ್ಯಾಕ್ ಸೂಟ್, ತಲೆ ತುಂಬ ಹಿಜಬ್ ಧರಿಸಿ ಓಡಿ ಇಡೀ ಜಗತ್ತಿನ ಗಮನ ಸೆಳೆದರು. ಅವರು ವಿಜೇತೆಗಿಂತ ४೫ ಸೆಕೆಂಡ್ ಹಿಂದೆ ಇದ್ದರು. ೧೯ರ ಹರಯದ ಈ ತರುಣಿ ತನ್ನ ತಾಯ್ನಾಡು ಸೌದಿ ಅರೇಬಿಯಾವನ್ನು ಒಲಿಂಪಿಕ್‌ನಲ್ಲಿ ಮೊದಲ ಬಾರಿ ಪ್ರತಿನಿಧಿಸಿದವರು. ಆ ದೇಶದ ಪ್ರತಿನಿಧಿಯಾಗಿ ಓಡಿದ ಮೊದಲ ತರುಣಿಯೂ ಈಕೆಯೇ! ಆಕೆ ಹೆಚ್ಚು ಕಡಿಮೆ ಕೊನೆಯವರಾಗಿ ಓಡಿ ಗಮ್ಯ ತಲುಪಿದರೂ ಇಡೀ ಕ್ರೀಡಾಂಗಣ ಎದ್ದು ನಿಂತು ಆಕೆಗೆ ಗೌರವ ಸಲ್ಲಿಸಿತು. ಇಂಥ ಓಟಗಳಲ್ಲಿ ಭಾಗವಹಿಸುವ ವಿದೇಶಿ ಮಹಿಳಾ ಸ್ಪರ್ಧಿಗಳ ವೇಷಭೂಷಣಕ್ಕೂ ಸಾರಾ ಅತ್ತರ್ ವೇಷ ಭೂಷಣಕ್ಕೂ ಇರುವ ಅಂತರ ಎದ್ದು ಕಾಣುವಂಥದು. ಆದರೆ, ಸಾರಾ ಎಲ್ಲಿಯೋ ಎಲ್ಲವನ್ನೂ ಉಲ್ಲಂಘಿಸುವಂತೆ ಕಾಣುತ್ತಿದ್ದರು. ನಮ್ಮಲ್ಲಿ ಸಾರಾಳಂಥ ಉಲ್ಲಂಘಿಸುವ ಗುಣವೂ ಇಲ್ಲ. ಇಥಿಯೋಪಿಯದ ಟಿಕಿ ಗೆಲಾನ್‌ಳಂಥ ಛಲವೂ ಇಲ್ಲ. ೧೧೨ ವರ್ಷಗಳ ಒಲಿಂಪಿಕ್ಸ್ ಸ್ಪರ್ಧೆಯ ಇತಿಹಾಸದಲ್ಲಿ ೧೨೦ ಕೋಟಿ ಜನರ ಸಾಧನೆ, ಅಲ್ಪತೃಪ್ತಿಯ ಒಂದು ವಿಷಾದ ಚರಿತ್ರೆಯಂತೆ

ಕಾಣುತ್ತದೆ. ಇದಕ್ಕೆ ಯಾರು ಕಾರಣ ಎಂದೆಲ್ಲ ಹುಡುಕುವುದೇ, ಒಂದು ವ್ಯರ್ಥ ಕಸರತ್ತು. ಏಕೆಂದರೆ ಪ್ರತಿಸಾರಿ ಒಲಿಂಪಿಕ್ಸ್ ನಡೆದಾಗಲೂ ಇಂಥ ಕಸರತ್ತು ಆಗುತ್ತದೆ. ಯಾರು ತಲೆ ಕೆಡಿಸಿಕೊಳ್ಳುತ್ತಾರೆ?

೧೨.೦೮.೨೦೧೨



**ಬೇರು ಒಣಗಿದ ಮರ ಗಟ್ಟಿಯಾಗಿ ನಿಂತೀತೇ?**

ಇದೆಲ್ಲ ಒಂದು ರೀತಿ ತಮಾಷೆ, ಇನ್ನೊಂದು ರೀತಿ ದುರಂತ, ಮತ್ತೆ ಮತ್ತೆ ಇದನ್ನು ಬರೆಯುವುದು ನನಗೆ ಇಷ್ಟದ ಸಂಗತಿಯಲ್ಲ. ಹೀಗೆ ಬರೆಯುವಂಥ ಸಂದರ್ಭ ಬರಬಾರದು ಎಂದೇ ಅಂದುಕೊಂಡವನು ನಾನು. ಆದರೆ ಮತ್ತೆ ಮತ್ತೆ ನಿರಾಶೆ ಕಾಡುತ್ತಿದೆ. ನಮ್ಮ ಮುಂದಿನ ಪೀಳಿಗೆ ಏಕೆ ಹೀಗೆ ಎಂದು ಚಿಂತೆಯಾಗುತ್ತದೆ. ಮೊನ್ನೆ ಎರಡು ದಿನ ನನ್ನ ಸಂಪಾದಕರು ಮತ್ತು ನನ್ನ ಇಬ್ಬರು ಹಿರಿಯ ಸಹೋದ್ಯೋಗಿಗಳು ಸೇರಿಕೊಂಡು ಐವತ್ತು ಅಭ್ಯರ್ಥಿಗಳ ಸಂದರ್ಶನ ಮಾಡಿದೆವು. ಮುಂದಿನ ಪೀಳಿಗೆ 'ಭಲೆ' ಎಂದು ಅನಿಸಲಿಲ್ಲ. ೬೦೦ ಮಂದಿಯ ಅರ್ಜಿಗಳನ್ನು ಪರಿಷ್ಕರಿಸಿ ೧೫೦ ಮಂದಿಯನ್ನು ಪರೀಕ್ಷೆಗೆ ಕರೆದು ಅದರಲ್ಲಿ ಐವತ್ತು ಮಂದಿಯನ್ನು ಸಂದರ್ಶನಕ್ಕೆ ಆಯ್ಕೆ ಮಾಡುವಾಗಲೇ ಸುಸ್ತು ಹೊಡೆದಿತ್ತು. ಬಹುತೇಕ ಅರ್ಜಿಗಳನ್ನು ನಾನೇ ನೋಡಿದ್ದೆ. ಕಳೆದ ಸಾರಿಯ ಹಾಗೆ ಈ ಸಾರಿಯೂ ಕನ್ನಡದಲ್ಲಿಯೇ ಅರ್ಜಿ ಸಲ್ಲಿಸಬೇಕು ಎಂದು ಸೂಚಿಸಿದರೂ ಅದನ್ನು ಕಳೆದ ಸಾರಿಯ ಹಾಗೆಯೇ ತಾತ್ಸಾರದಿಂದ ಕಂಡು ಇಂಗ್ಲಿಷ್‌ನಲ್ಲಿ ಬೇಕಾದಷ್ಟು ಮಂದಿ ಅರ್ಜಿ ಸಲ್ಲಿಸಿದ್ದರು. ಅವರಿಗೆ ನಾವು ಹೇಳಿದ್ದು ತಿಳಿಯುವುದಿಲ್ಲವೋ ಅಥವಾ ಅಷ್ಟು ವ್ಯವಧಾನವೇ ಇಲ್ಲವೋ ಗೊತ್ತಿಲ್ಲ. ಅವರು ಪರೀಕ್ಷೆಗೆ ಕೂಡುವ ಅವಕಾಶವನ್ನೇ ಕಳೆದುಕೊಂಡರು. ಇನ್ನು ಕೆಲವರು ಅರ್ಧ ಹಾಳೆಯಲ್ಲಿ, ಗಿರ್ಧ ಹಾಳೆಯಲ್ಲಿ ಬೇಕಾಬಿಟ್ಟಿ ಅರ್ಜಿ ಸಲ್ಲಿಸಿದ್ದರು.

ಅವೂ ಕಸದ ಬುಟ್ಟಿಗೆ ಹೋದುವು. ಪರೀಕ್ಷೆಗೆ ಕುಳಿತವರಿಗೆ ಅಂಥ ಕಠಿಣ ಪ್ರಶ್ನೆ ಪತ್ರಿಕೆಯನ್ನೇನೂ ಕೊಟ್ಟಿರಲಿಲ್ಲ. ನಿತ್ಯ ಪತ್ರಿಕೆಗಳನ್ನು ಓದಿಕೊಂಡಿದ್ದರೆ ಸಾಕಿತ್ತು. ಒಂದಿಷ್ಟು ಸಾಮಾನ್ಯ ಜ್ಞಾನ, ಒಂದಿಷ್ಟು ಭಾಷಾ ಜ್ಞಾನ, ಒಂದಿಷ್ಟು ಇಂಗ್ಲಿಷ್ ಭಾಷೆ ಗೊತ್ತಿದ್ದರೂ ಸಾಕಿತ್ತು. ಕಷ್ಟಪಟ್ಟು ಪರೀಕ್ಷೆ ಬರೆದವರನ್ನು ಸಂದರ್ಶನಕ್ಕೆ ಕರೆದಿದ್ದೆವು. ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಪಡೆದವರಲ್ಲದೆ, ಬೇರೆ ಪದವಿ ಪಡೆದವರಿಗೆ ಆದ್ಯತೆ ಕೊಟ್ಟಿದ್ದೆವು. ಎರಡು ದಿನ ಸಂದರ್ಶನ ಮಾಡಿ ಹತ್ತು ಹದಿನೈದು ಜನರನ್ನು ಆಯ್ಕೆ ಮಾಡುವ ವೇಳೆಗೆ ಮತ್ತೆ ಸುಸ್ತು ಹೊಡೆಯಿತು. ಮುಂದಿನ ಪೀಳಿಗೆ ಬಗ್ಗೆ ಭರವಸೆ ಮೂಡಲಿಲ್ಲ.

ಸಂದರ್ಶನಕ್ಕೆ ಬಂದವರಲ್ಲಿ ಬಹುತೇಕರದು ಬಡತನದ ಹಿನ್ನೆಲೆ, ಅವರಲ್ಲಿ ಬಹುತೇಕ ಅಭ್ಯರ್ಥಿಗಳ ತಂದೆ ಬದುಕಿರಲಿಲ್ಲ. ಬದುಕಿದ್ದವರೂ ದೊಡ್ಡ ಹುದ್ದೆಯಲ್ಲಿ ಕೆಲಸ ಮಾಡುತ್ತಿರಲಿಲ್ಲ. ಎಲ್ಲರಿಗೂ ಬಡತನ, ಅಲ್ಪಸ್ವಲ್ಪ ಕೃಷಿ ಜಮೀನು, ಗದ್ದೆ, ಅಥವಾ ಕೂಲಿ ಕೆಲಸ. ಜೀವನದಲ್ಲಿ ಮುಂದೆ ಬಂದವರೆಲ್ಲ ಕಷ್ಟಪಟ್ಟವರೇ, ಬಾಲ್ಯದಲ್ಲಿ ತಂದೆಯನ್ನು ಕಳೆದುಕೊಂಡ ಭಾರತೀಯ ಬಹುಬೇಗ ಜವಾಬ್ದಾರಿ ಕಲಿಯುತ್ತಾನೆ ಎಂಬ

ಮಾತನ್ನು ಎಲ್ಲಿಯೋ ಓದಿದ ನೆನಪು. ಆ ಮಾತು ಸಂದರ್ಶನಕ್ಕೆ ಬಂದ ಬಹುತೇಕ ಅಭ್ಯರ್ಥಿಗಳಿಗೆ ಅನ್ವಯಿಸುವಂತೆ ಕಾಣುತ್ತಿರಲಿಲ್ಲ. ಅವರೆಲ್ಲ ನನಗೆ ದುಂಬಿಗಳಂತೆ ಕಂಡರು. ಎಲ್ಲ ಹೂಗಳ ಮೇಲೆ ಒಂದು ಕ್ಷಣ ಕುಳಿತು ಒಂದಿಷ್ಟು ಮಧು ಹೀರಿ ಹಾರಿ ಹೋಗುತ್ತಿರುವಂತೆ ಭಾಸವಾಯಿತು. ಯಾವ ಒಂದು ವಿಷಯದ ಬಗೆಗೂ ಅವರಿಗೆ ಆಳವಾದ ಜ್ಞಾನ, ತಿಳಿವಳಿಕೆ ಇದ್ದಂತೆ ಕಾಣಲಿಲ್ಲ. ತಿಳಿದುಕೊಳ್ಳಲು ಅವರು ಪ್ರಯತ್ನಿಸುವಂತೆಯೂ ಅನಿಸಲಿಲ್ಲ. ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಪಡೆಯುವವರು, ಪಡೆದವರು ದಿನದಲ್ಲಿ ಕನಿಷ್ಠ ಮೂರು ನಾಲ್ಕು ಗಂಟೆ ಬೇರೆ ಬೇರೆ ಪತ್ರಿಕೆಗಳನ್ನು ಓದುವುದು ಅಗತ್ಯ ಎಂದು ಮನಗಂಡಂತೆಯೂ ಅನಿಸಲಿಲ್ಲ. 'ಶೀರ್ಷಿಕೆಗಳ ಮೇಲೆ ಕಣ್ಣು ಹಾಯಿಸುತ್ತೇವೆ' ಎಂದು ಕೆಲವರು ಹೇಳಿದರೆ, ಇನ್ನು ಕೆಲವರು 'ಮೂರು ಪತ್ರಿಕೆಗಳನ್ನು ೪೫ ನಿಮಿಷಗಳಲ್ಲಿ ಓದಿ ಮುಗಿಸುತ್ತೇವೆ' ಎಂದರು. ಇದರಲ್ಲಿ ಹುಡುಗರು- ಹುಡುಗಿಯರು ಎಂಬ ಭೇದವೇನೂ ಇರಲಿಲ್ಲ. ಇಬ್ಬರೂ ಅಷ್ಟೇ. ಆದರೂ ಅವರು ಪತ್ರಿಕೋದ್ಯಮವನ್ನು ಆಯ್ದುಕೊಂಡು ಪದವಿ ತೆಗೆದುಕೊಳ್ಳುತ್ತಾರೆ. ನಮ್ಮ ಪತ್ರಿಕೆಯಲ್ಲದಿದ್ದರೆ ಇನ್ನೊಂದು ಪತ್ರಿಕೆಯಲ್ಲಿ ಕೆಲಸಕ್ಕೆ ಸೇರುತ್ತಾರೆ. ಅವರ ಬೈಲೈನ್‌ಗಳನ್ನೂ ನಾವು ಓದುತ್ತೇವೆ. ಪತ್ರಿಕೋದ್ಯಮ ಎಂದರೆ ಎಷ್ಟು ಸದರವಾಯಿತಲ್ಲ?

ಪ್ರತಿ ಸಾರಿಯ ಹಾಗೆ ಈ ಸಾರಿಯೂ ಕಿರಿಯರಿಗೆ ಹತ್ತು ಶಬ್ದಗಳನ್ನು ಕೊಟ್ಟು ಸರಿ ತಪ್ಪು ಗುರುತಿಸಲು ಹೇಳಿದ್ದೆವು. ಹಿರಿಯರಿಗೆ ೪೦ ಶಬ್ದ ಕೊಟ್ಟಿದ್ದೆವು. ಅನೇಕರು ಒಂದು ಶಬ್ದವನ್ನೂ ಸರಿಯಾಗಿ ಗುರುತಿಸಲು ಸಫಲರಾಗಿರಲಿಲ್ಲ. ಒಬ್ಬರೂ ಎಲ್ಲ ಪದಗಳನ್ನು ಸರಿಯಾಗಿ ಗುರುತಿಸಿರಲಿಲ್ಲ. ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಮಾಡಿದವರಾದರೂ ಎಲ್ಲ ಪದಗಳನ್ನು ಸರಿಯಾಗಿ ಬರೆಯುತ್ತಾರೆ ಎಂಬ ನಮ್ಮ ನಂಬಿಕೆ ಹುಸಿಯಾಯಿತು. ಜಯಂತ್ಯುತ್ಸವವನ್ನು ಜಯಂತೋತ್ಸವ ಎಂದು ಬರೆದವರೇ ಎಲ್ಲ! ಜಯಂತೋತ್ಸವ 'ವ'ಕಾರಾಗಮ ಸಂಧಿ ಎಂದು ಒಬ್ಬ ಕನ್ನಡ ಎಂ.ಎ. ನನ್ನ ಜತೆ ವಾದವನ್ನೂ ಮಾಡಿದ. ನಿಮ್ಮ ಅಧ್ಯಾಪಕರನ್ನು ಕೇಳಿ ಮತ್ತೆ ತಿಳಿಸಿ ಎಂದೆ! ನಮಗೆಲ್ಲ ನಮ್ಮ ಶಿಕ್ಷಕರು ಕನ್ನಡ,



ಸಂಸ್ಕೃತ ಸಂಧಿಗಳನ್ನು, ಸಮಾಸಗಳನ್ನು ಎಷ್ಟು ಚೆನ್ನಾಗಿ ಹೇಳಿಕೊಟ್ಟರು! ತಪ್ಪುಗಳನ್ನು ತಿದಿದ್ದರು. ಪ್ರೌಢಶಾಲೆಯ ಮಟ್ಟದಲ್ಲಿಯೇ ಭಾಷೆಯ ಮೇಲಿನ ಪ್ರೀತಿ ಗಟ್ಟಿಯಾಗಿ ಬೇರೂರಿ ಬಿಟ್ಟಿತು.

ಭಾಷೆ ಬಿಡಿ ಪತ್ರಕರ್ತರಿಗೆ ಸಾಮಾನ್ಯ ಜ್ಞಾನವಾದರೂ ಗಟ್ಟಿಯಾಗಿ ಇರಬೇಕಲ್ಲವೇ? ಈ ಸಾರಿ ಉದ್ದೇಶಪೂರ್ವಕವಾಗಿಯೇ ರಾಜ್ಯದ ಪೊಲೀಸ್ ಮಹಾನಿರ್ದೇಶಕರು ಯಾರು ಎಂಬ ಪ್ರಶ್ನೆ ಕೇಳಿದ್ದೆವು. ಅನೇಕರು ಬೆಂಗಳೂರು ಪೊಲೀಸ್ ಕಮಿಷನರ್ ಜ್ಯೋತಿ ಪ್ರಕಾಶ್ ಮಿರ್ಜಿ ಅವರ ಹೆಸರನ್ನು ಬರೆದಿದ್ದರು! ಇನ್ನು ಇಬ್ಬರು ಆರ್.ಎಚ್. ಶೇಖರ್ ಎಂದು ಬರೆದಿದ್ದರು! ಇಬ್ಬರೂ ಮಾತನಾಡಿಕೊಂಡು ಬರೆದಿರಬಹುದು! ಈ ಹೆಸರು ಹೇಗೆ ಹೊಳೆಯಿತು ಎಂದು ಅವರಿಗೆ ಕೇಳಿದರೆ ಅವರಲ್ಲಿ ಉತ್ತರ ಇರಲಿಲ್ಲ. ಇಂಥ ಹಾಸ್ಯಾಸ್ಪದ ಉತ್ತರಗಳಿಗೆ ಏನು ಸಮರ್ಥನೆ ಇರಲು ಸಾಧ್ಯ? ಹಿರಿಯರಿಗೆ ಪ್ರಶ್ನೆ ಪತ್ರಿಕೆ ಸಿದ್ಧಪಡಿಸಿದ್ದ ದಿನೇಶ್, ಮಸೂದೆ ಮತ್ತು ಕಾನೂನಿನ ನಡುವಿನ ವ್ಯತ್ಯಾಸ ಏನು ಎಂಬ ಪ್ರಶ್ನೆ ಹಾಕಿದ್ದರು. ನೀವು ನನ್ನನ್ನು ನಂಬಿ, ಹತ್ತು ವರ್ಷಕ್ಕಿಂತ ಹೆಚ್ಚು ಅನುಭವವಿದ್ದ ಒಬ್ಬಿಬ್ಬರು ಅಭ್ಯರ್ಥಿಗಳೂ ಸೇರಿದಂತೆ ಯಾವ ಅಭ್ಯರ್ಥಿಗೂ ಈ ಎರಡರ ನಡುವಿನ ವ್ಯತ್ಯಾಸ ಗೊತ್ತಿರಲಿಲ್ಲ! ಪಶ್ಚಿಮಘಟ್ಟ ಪ್ರದೇಶಕ್ಕೆ ಯುನೆಸ್ಕೊ ಮಾನ್ಯತೆ ವಿವಾದದ ಬಗ್ಗೆ ಆ ಪ್ರದೇಶಕ್ಕೆ ಸೇರಿದವರಿಗೆ ಮಾಹಿತಿ ಇರಲಿಲ್ಲ. ಅವರಿಗೆಲ್ಲ ಮಾನ್ಯತೆ ಕೊಟ್ಟುದು ತಪ್ಪು ಎಂಬ ಇನ್ನೂ ಅಪಾಯಕಾರಿ ಅಭಿಪ್ರಾಯವಿತ್ತು! ಹೈದರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ಕುರಿತ ಮಾಹಿತಿ ಆ ಪ್ರದೇಶಕ್ಕೆ ಸೇರಿದವರಿಗೂ ಇರಲಿಲ್ಲ. ಜನರಿಗೆ ಮಾಹಿತಿ ಕೊಡಬೇಕು. ಅವರನ್ನು ಸಶಕ್ತರನ್ನಾಗಿ ಮಾಡಬೇಕು ಎಂದು ಪತ್ರಿಕೆಗಳಲ್ಲಿ ಇರುವ ನಾವೆಲ್ಲ ಎಷ್ಟು ಕಷ್ಟಪಡುತ್ತೇವೆ, ಅದು ಪತ್ರಿಕೆಗಳಲ್ಲಿ

ಈಗಾಗಲೇ ಕೆಲಸ ಮಾಡುವವರಲ್ಲಿ ಮತ್ತು ಕೆಲಸ ಮಾಡಬೇಕು ಎಂದು ಬಯಸುವವರಲ್ಲಿಯೇ ಆಸಕ್ತಿ ಹುಟ್ಟಿಸಿಲ್ಲ ಎಂದರೆ ಇನ್ನೇನು ಮಾಡುವುದು?

ಒಬ್ಬನೇ ಒಬ್ಬ ಮುಸ್ಲಿಂ ಹುಡುಗ ಸಂದರ್ಶನಕ್ಕೆ ಅರ್ಹತೆ ಪಡೆದಿದ್ದ. ಆತ ದಕ್ಷಿಣ ಕನ್ನಡ ಜಿಲ್ಲೆಯ ಹುಡುಗ, ಹೆಸರಾಂತ ಲೇಖಕ ಬೊಳುವಾರು ಮಹ್ಮದ್ ಕುಂಞ ಅವರ ಪಕ್ಕದ ಊರಿನವ, ಬೊಳುವಾರು ಅವರ ಒಂದು ಕೃತಿಯನ್ನೂ ಆತ ಓದಿರಲಿಲ್ಲ. ಹೋಗಲಿ ಮೊನ್ನೆ ಮೊನ್ನೆಯಷ್ಟೇ ಬಿಡುಗಡೆಯಾದ ಅವರ ೧,೦೮೬ ಪುಟಗಳ ಬೃಹತ್ ಕಾದಂಬರಿ 'ಸ್ವಾತಂತ್ರ್ಯದ ಓಟ'ದ ಹೆಸರೂ ಆ ಹುಡುಗನಿಗೆ ಗೊತ್ತಿರಲಿಲ್ಲ. ಪಾಪ ಎನಿಸಿತು. ತಂದೆ ಕನ್ನಡ ಅಧ್ಯಾಪಕನಾಗಿದ್ದ ಅಭ್ಯರ್ಥಿ ಒಂದೋ ಎರಡೋ ಕನ್ನಡ ಪುಸ್ತಕ ಓದಿದ್ದ. ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಮಂದಿ ಲೇಖಕರು! ಎಲ್ಲರನ್ನೂ ಆ ಜಿಲ್ಲೆಯವರು ಓದಿ ಮುಗಿಸಬೇಕಿತ್ತು. ಇಲ್ಲ. ಒಂದೋ ಎರಡೋ ಪುಸ್ತಕಗಳು ಅಷ್ಟೇ, ದೇವನೂರ ಮಹಾದೇವ ತನ್ನ ಮೆಚ್ಚಿನ ಲೇಖಕ ಎಂದು ಹೇಳಿದ ಒಬ್ಬ ಹಿರಿಯ ಅಭ್ಯರ್ಥಿಗೆ, ಅವರ ಸಂಪಾದಕತ್ವದಲ್ಲಿಯೇ 'ಪ್ರಜಾವಾಣಿ' ಹೊರತಂದ ವಿಶೇಷ ಸಂಚಿಕೆ ಬಗ್ಗೆ ಮಾಹಿತಿ ಇರಲಿಲ್ಲ. ಇನ್ನೊಬ್ಬ ದೇವನೂರ ಅಭಿಮಾನಿ 'ದ್ಯಾವನೂರು' ಕಥಾ ಸಂಕಲನದ ಹೆಸರನ್ನು ಸರಿಯಾಗಿ ಹೇಳಲಿಲ್ಲ. ನಮ್ಮ ಮುಂದೆ ಹಾಜರಾದ ಅಭ್ಯರ್ಥಿಗಳು ದುಂಬಿಗಳ ಸ್ವಭಾವದವರು ಎಂದು ಹೇಳಿದ್ದಕ್ಕೆ ಈ ಎಲ್ಲ ನಿದರ್ಶನಗಳನ್ನು ಕೊಡುತ್ತಿರುವೆ. ಅವರ



ಮನಃಪಟಲದ ಮೇಲೆ ಯಾವುದೂ ಸ್ಥಿರವಾಗಿ ಮೂಡಿ ನಿಲ್ಲುತ್ತಿಲ್ಲ. ಒಂದರಲ್ಲಿಯಾದರೂ ಪ್ರಭುತ್ವ ಸಾಧಿಸಬೇಕು ಎಂದು ಅವರಿಗೆ ಅನಿಸುತ್ತಿಲ್ಲ. ಅಂಥ ಹಟವೂ ಕಾಣುತ್ತಿಲ್ಲ. ನಮಗಿಂತ ಅವರ ಮುಂದೆ ಅವಕಾಶದ ಬಾಗಿಲುಗಳು ಹೆಚ್ಚು ತೆರೆದಿರುವುದು ಇದಕ್ಕೆ ಕಾರಣ ಇರಬಹುದು. ಇಂಟರ್ನ್‌ಶಿಪ್‌ಗೆ ಬಂದಿದ್ದ ಒಂದು ವಿಶ್ವವಿದ್ಯಾಲಯದ ಇಬ್ಬರು ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಹೇಗೆ ಮಾಡಿದ್ದೀರಿ, ಎಷ್ಟು ಅಂಕ ಬರುತ್ತವೆ' ಎಂದು ಅವರಿಗೆ ಕೇಳಿದೆ. ಒಬ್ಬ ೭೫ ಎಂದ. ಇನ್ನೊಬ್ಬ ೬೫ ಎಂದ. ಇಬ್ಬರೂ ೧೦ ದಾಟಲಿಲ್ಲ. ಆದರೆ ಇಬ್ಬರಿಗೂ ಇಂಟರ್ನ್‌ಶಿಪ್ ಮುಗಿಸುವುದಕ್ಕಿಂತ ಮುಂಚೆಯೇ ನೌಕರಿ ಸಿಕ್ಕಿತು. 'ಹೊರಟು ಬಿಡಿ' ಎಂದೆ!

ಒಬ್ಬರೋ ಇಬ್ಬರೋ ಶಿಕ್ಷಕ ನೌಕರಿ ಮಾಡುವವರೂ ಸಂದರ್ಶನಕ್ಕೆ ಬಂದಿದ್ದರು. ಒಬ್ಬರ ಕಾಲರ್ ಹರಿದಿತ್ತು. ತೋಳಿನಲ್ಲಿ ಕೊಳೆ ಕುಳಿತಿತ್ತು. ಆತ ಹೇಗೆ ಶಿಕ್ಷಕ ಆಗುತ್ತಾನೆ ಎಂದು ಅನಿಸಿತು. ನಾವು ಚಿಕ್ಕ ವಿದ್ಯಾರ್ಥಿಗಳಾಗಿದ್ದಾಗ ಹರಿದ ಅಂಗಿ ಹಾಕಿಕೊಂಡು ಶಾಲೆಗೆ ಹೋದರೆ ಅದನ್ನು ಹೊಲಿಸಿಕೊಂಡು ಬನ್ನಿ ಎಂದು ಶಿಕ್ಷಕರು ಹೇಳುತ್ತಿದ್ದರು.

ಶ್ರೀಮಂತ ವಿದ್ಯಾರ್ಥಿಗಳು ಅಂಗಿ ಚಡ್ಡಿ ಇಸ್ತ್ರಿ ಮಾಡಿಕೊಂಡು ಬರುತ್ತಿದ್ದರೆ ನಾವು ಹಿತ್ತಾಳೆಯ ತಂಬಿಗೆಯಲ್ಲಿ ಇದ್ದಲಿನ ಕೆಂಡ ಹಾಕಿ ಅಂಗಿ ಚಡ್ಡಿ ತೀಡಿಕೊಂಡು ಶಾಲೆಗೆ ಹೋಗುತ್ತಿದ್ದೆವು. ಒಂದೊಂದು ಸಾರಿ ರಾತ್ರಿ ಮಲಗುವಾಗ ಅಂಗಿ ಚಡ್ಡಿ ಮಡಚಿ ಅದನ್ನು ದಿಂಬಿನ ಅಡಿ ಇಟ್ಟುಕೊಳ್ಳುತ್ತಿದ್ದೆವು, ಮರುದಿನ ಅದು ತೀಡಿದಂತೆ ಕಾಣಲಿ ಎಂದು! ಈಗೆಲ್ಲ ಎಷ್ಟು ಸೌಲಭ್ಯ ಎಷ್ಟು ಅನುಕೂಲ! ಆಗ ನಮ್ಮ ಮನೆಗಳಲ್ಲಿ ಕರೆಂಟ್ ಕೂಡ ಇರಲಿಲ್ಲ! ಚೆನ್ನಾಗಿ ಕಾಣಬೇಕು ಎನ್ನುವುದು ಒಂದು ಮನಸ್ಥಿತಿ, ಕೆಟ್ಟದಾಗಿ ಕಂಡರೆ ಏನಾಯಿತು ಎನ್ನುವುದು ಇನ್ನೊಂದು ಮನಸ್ಥಿತಿ. ಎರಡರ ನಡುವೆ ಎಷ್ಟೊಂದು ವ್ಯತ್ಯಾಸ! ಹರಿದ ಅಂಗಿ ಹಾಕಿಕೊಂಡು ಬರುವುದು ಮತ್ತು ಅದನ್ನು ಹೊಲಿದುಕೊಂಡು ಬರುವುದರ ನಡುವೆ ಎಷ್ಟೊಂದು ಅಂತರ?

ಸಂದರ್ಶನ ಮಾಡುತ್ತ ಮಾಡುತ್ತ ಮನಸ್ಸು ಕಳವಳಗೊಂಡಿತು. ಮುಂದೆ ಹೇಗೆ ಎಂದು ಚಿಂತೆಯಾಯಿತು. ನಮ್ಮ ನಾಲ್ವರ ಮನಸ್ಸಿನಲ್ಲಿಯೂ ಅದೇ ಪ್ರಶ್ನೆಗಳು ಮತ್ತೆ ಮತ್ತೆ ಎದ್ದು ಕಾಡತೊಡಗಿದುವು. ನಾವು ಸಂದರ್ಶನ ಮಾಡಿದ ದಿನವೇ ಕಾಲೇಜು ಒಂದರಲ್ಲಿ ಹಂಪ, ನಾಗರಾಜಯ್ಯ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ್ದರು. 'ಕನ್ನಡ ಸಾಹಿತ್ಯ ಒಂದು ಅಮೃತದ ಮಡುವು' ಎಂದು ಅವರು ಹೇಳಿದ್ದರು. ಹಂಪನಾ ಅವರಂಥ ಶಿಕ್ಷಕರಿಗೆ, ಅವರಿಗೆ ಕಲಿಸಿದಂಥ ಶಿಕ್ಷಕರಿಗೆ ಅದು ಒಂದು ಅಮೃತದ ಮಡುವು. ನಮ್ಮ ಪೀಳಿಗೆಗೂ ಆ ಮಾತು ನಿಜ. ನಾವೂ ಹುಚ್ಚರ ಹಾಗೆ ಓದಿದವರು. ಈಗಿನ ಪೀಳಿಗೆಗೆ ಓದಬೇಕು ಎಂದು ಏಕೆ ಅನಿಸುತ್ತಿಲ್ಲ? ಹಂಪನಾ ಅವರಿಗೇ ಫೋನ್ ಮಾಡಿದೆ. 'ಹುಡುಗರು/ಹುಡುಗಿಯರು ಏಕೆ ಓದುತ್ತಿಲ್ಲ' ಎಂದು ಕೇಳಿದೆ. ಅವರು ದೀರ್ಘ ವಿವರಣೆ ಕೊಟ್ಟರು. ಕೊನೆಯಲ್ಲಿ, ನಮ್ಮ ಬೇರುಗಳು ಒಣಗುತ್ತಿವೆ' ಎಂದರು. ಎಂಥ ಮಾತು! ಒಣಗಿದ ಬೇರುಗಳನ್ನು ಇಟ್ಟುಕೊಂಡು ಮರ ಗಟ್ಟಿಯಾಗಿ ನಿಲ್ಲಲು ಸಾಧ್ಯವೇ? ನಾವು ಎತ್ತ ಹೊರಟಿದ್ದೇವೆ?

೧೯.೦೮.೨೦೦೨

**ಅಮೆರಿಕದಲ್ಲಿ ಕನ್ನಡ ಸಂಘ ಕಬ್ಬಿ**

**ಟೀಕೆಗೆ ಅಂಜಿದರೆಂತಕ್ಕ**

ಅಮೆರಿಕದ ಕನ್ನಡಿಗರು ಟೀಕೆಗೆ ಇಷ್ಟು ಸೂಕ್ಷ್ಮ ಎಂದು ನಾನು ಅಂದುಕೊಂಡಿರಲಿಲ್ಲ. ಪ್ರಜಾಪ್ರಭುತ್ವ ಬಹಳ ಭದ್ರವಾಗಿ ಇರುವ ದೇಶ ಅದು. ಅಲ್ಲಿ ದ್ವೇಷದ ಭಾಷಣ (ಹೇಟ್ ಸ್ಪೀಚ್)ವನ್ನೂ ಬಹಿರಂಗವಾಗಿ ಮಾಡಬಹುದು. ಅದು ಅಪರಾಧವೇನೂ ಅಲ್ಲ. ದೈಹಿಕ ಹಲ್ಲೆ ಮಾತ್ರ ಮಾಡುವಂತೆ ಇಲ್ಲ. ಆದರೆ, ನ್ಯೂಜೆರ್ಸಿಯಲ್ಲಿ ಎರಡು ವರ್ಷಗಳ ಹಿಂದೆ ನಡೆದ ಅಮೆರಿಕ ಕನ್ನಡ ಕೂಟಗಳ ಆಗರದ 'ಅಕ್ಕ' ಆರನೇ ವಿಶ್ವ ಕನ್ನಡ ಸಮ್ಮೇಳನ ಕುರಿತು ನಮ್ಮ ಪತ್ರಿಕೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಗಿನ ಕಾರ್ಯದರ್ಶಿ ಜಯರಾಮರಾಜೇ ಅರಸು ಅವರು ಬರೆದ ಟೀಕಾತ್ಮಕ ಲೇಖನವನ್ನು ಇಲ್ಲಿನ ಕನ್ನಡಿಗರು ಯಾರೂ ಇನ್ನೂ ಮರೆತಿಲ್ಲ. ಎಲ್ಲಿ ಹೋದರೂ ಅದೇ ಮಾತು. ಈ ಸಾರಿಯ ಏಳನೇ ವಿಶ್ವ ಕನ್ನಡ ಸಮ್ಮೇಳನವನ್ನು ಅಟ್ಲಾಂಟಾದಲ್ಲಿ ಮುಗಿಸಿಕೊಂಡು ನ್ಯೂಜೆರ್ಸಿಯ ಕನ್ನಡತಿ ಉಷಾ ಪ್ರಸನ್ನ ಅವರ ಮನೆಗೆ ಬಂದರೆ ಅವರೂ ಹುರುಳಿಕಾಯಿ ಹೆಚ್ಚುತ್ತ ಅವರು ಹಾಗೆ ಬರೆಯಬಹುದೇ?' ಎಂದು ನನ್ನನ್ನು ಕೇಳಿದರು. ಈ ಸಾರಿಯ ಸಮ್ಮೇಳನದ ಆತಿಥ್ಯ ವಹಿಸಿಕೊಂಡಿದ್ದ ಅಟ್ಲಾಂಟಾದ ನೃಪತುಂಗ ಕನ್ನಡ ಕೂಟದ ಅಧ್ಯಕ್ಷ ಡಾ.ಎಚ್.ಎನ್. ರಾಮಸ್ವಾಮಿ ಸಮಾರೋಪ ಸಮಾರಂಭದ ಮುಕ್ತಾಯ ಹಂತದಲ್ಲಿ 'ನಮ್ಮಿಂದ

ಏನಾದರೂ ತಪ್ಪಾಗಿದ್ದರೆ ದಯವಿಟ್ಟು ಕ್ಷಮಿಸಿ' ಎಂದು ವೇದಿಕೆಯ ಮೇಲೆಯೇ ಸಭೆಗೆ ಸಾಷ್ಟಾಂಗ ನಮಸ್ಕಾರ ಮಾಡಿಬಿಟ್ಟರು. ಅವರಿಗೂ ಬೆಂಗಳೂರಿನಿಂದ ಬಂದ ಅತಿಥಿಗಳು ವಾಪಸು ಹೋಗಿ ಏನಾದರೂ ಬರೆದಾರು, ಅಂದಾರು ಎಂಬ ಭಯ! ಅಮೆರಿಕದ ಮೂಲೆ ಮೂಲೆಗಳಿಂದ ನೂರಾರು ಸಂಖ್ಯೆಯಲ್ಲಿ ಬಂದಿದ್ದ ಕನ್ನಡಿಗರ ಬಗ್ಗೆ ಅವರಿಗೆ ಯಾವ ಆತಂಕವೂ ಇರಲಿಲ್ಲ. ಬೆಂಗಳೂರಿನಿಂದ ಬಂದವರನ್ನು ಅಂಗೈಯಲ್ಲಿ ಎತ್ತಿಕೊಂಡು ಹಿಡಿದಿದ್ದರು. ಅವರಿಗೆ ಏನೂ ಕೊರತೆ ಆಗದಂತೆ ನೋಡಿಕೊಂಡರು. ಸಮ್ಮೇಳನ ಮುಗಿದ ಮರುದಿನ ದುಬಾರಿ ಹೋಟೆಲ್‌ನಿಂದ 'ಬಜೆಟ್' ಹೋಟೆಲ್‌ಗೆ ಬೆಂಗಳೂರಿನ ಅತಿಥಿಗಳನ್ನು ಸ್ಥಳಾಂತರಿಸಲು ರಾಮಸ್ವಾಮಿಯವರೇ ತಮ್ಮ ಕಾರನ್ನು ಆರು ಸಾರಿ ಆ ಹೋಟೆಲ್‌ನಿಂದ ಈ ಹೋಟೆಲ್‌ಗೆ ಓಡಾಡಿಸಿದರು! ಅವರೆಲ್ಲ ಅಟ್ಲಾಂಟಾ ಬಿಡುವವರೆಗೆ ರಾಮಸ್ವಾಮಿ ದಂಪತಿ ನಿದ್ದೆಯನ್ನೇ ಮಾಡಲಿಲ್ಲ. ರಾಮಸ್ವಾಮಿ ಯುವಕರೇನೂ ಅಲ್ಲ. ಅವರಿಗೆ ಈಗ ೭೫. ಅವರ ಹೆಂಡತಿಗೆ ೬೫ ಆಗಿರಬಹುದು. ಗಂಡನ ಜತೆಗೆ ಹೆಂಡತಿಯೂ ಅದೇ ರೀತಿ ಚಿಕ್ಕ ಹುಡುಗಿಯ ಹಾಗೆ ಓಡಾಡಿದರು.

ಜಯರಾಮರಾಜೇ ಅರಸು ಅವರು ಬರೆದ ಲೇಖನ ವೈಯಕ್ತಿಕ ಅನುಭವ ಆಧರಿಸಿದ್ದು. ಅದನ್ನು ನಾವು ಪ್ರಕಟ ಮಾತ್ರ ಮಾಡಿದ್ದೆವು. ಆದರೆ, ಅದರಿಂದ 'ಅಕ್ಕ'ಕ್ಕೆ ಬಹಳ ಒಳ್ಳೆಯದು ಆದಂತೆ ಕಾಣುತ್ತದೆ. ಈ ಸಾರಿಯ ಸಮ್ಮೇಳನಕ್ಕೆ ಸಂಘಟಕರು ಯಾವ ರಾಜಕಾರಣಿಯನ್ನೂ ಕರೆಯಲಿಲ್ಲ. ಸರ್ಕಾರಿ ಅಧಿಕಾರಿಗಳನ್ನೂ ಕರೆಯಲಿಲ್ಲ. ರಾಜಕಾರಣಿಗಳು 'ಬರ'ದ ನೆಪ ಹೇಳಿ ಅಮೆರಿಕಕ್ಕೆ ಬರಲಿಲ್ಲ. ಅವರು ಬರಲಿಲ್ಲ ಎಂದ ಮೇಲೆ ಸರ್ಕಾರಿ ಅಧಿಕಾರಿಗಳೂ ಧೈರ್ಯ ಮಾಡಲಿಲ್ಲ. ಪ್ರತಿ ಸಾರಿ 'ಅಕ್ಕ' ಪ್ರತಿನಿಧಿಗಳು ಸಮ್ಮೇಳನಕ್ಕೆ ಬರುವ ಕಲಾವಿದರ ಖರ್ಚು ವೆಚ್ಚ ವಹಿಸಿಕೊಳ್ಳಲು ಕನ್ನಡ ಸಂಸ್ಕೃತಿ ಇಲಾಖೆಯ ಮೊರೆ ಹೋಗುತ್ತಿದ್ದರು. ಇಲಾಖೆ ಹಣ ಕೊಡುತ್ತಿತ್ತು. ಜತೆಗೆ ತನಗೆ ಬೇಕಾದವರನ್ನು ಕಲಾವಿದರ ಪಟ್ಟಿಯಲ್ಲಿ ಸೇರಿಸುತ್ತಿತ್ತು. ಆ ಪಟ್ಟಿಯಲ್ಲಿ ಸೇರಬೇಕು ಎಂದು ದೊಡ್ಡ ಪೈಪೋಟಿಯೇ ನಡೆಯುತ್ತಿತ್ತು. ಇಲಾಖೆಯಿಂದ ಹಣ ಪಡೆದ ಮೇಲೆ ಅಕ್ಕ ಸಂಘಟನೆ ಸರ್ಕಾರದ ಮರ್ಜಿಗೆ ಸಿಲುಕಿಕೊಳ್ಳುತ್ತಿತ್ತು. ಈ ಸಾರಿಯೂ ಇಲಾಖೆ ೧೦ ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ಆದರೆ, ಒಬ್ಬ ಕಲಾವಿದನನ್ನೂ ತನ್ನ ವತಿಯಿಂದ ಸೇರಿಸಿಕೊಳ್ಳಬೇಕು ಎಂದು ಹೇಳಿದಂತೆ ಇಲ್ಲ. ನಿವೃತ್ತ ಐಎಎಸ್ ಅಧಿಕಾರಿ (ಈಗ ಅವರ ಕಾಫಿ ಪ್ಲಾಂಟರ್, ಹಾಗೆಯೇ ಕರೆಸಿಕೊಳ್ಳಲು ಇಷ್ಟಪಡುತ್ತಾರೆ) ಐ.ಎಂ. ವಿಠಲಮೂರ್ತಿ ಮತ್ತು ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ ಸೇರಿಕೊಂಡು ೩೫ ಜನ ಕಲಾವಿದರ ಒಂದು ಪಟ್ಟಿಯನ್ನು ತಯಾರು ಮಾಡಿ ಅವರಲ್ಲಿ ಕೆಲವರಿಗೆ ಪ್ರಾಯೋಜಕರು ದೊರೆಯುವಂತೆ ನೋಡಿಕೊಂಡರು. ಇನ್ನು ಕೆಲವರು ತಾವೇ ಹಣ ಹಾಕಿಕೊಂಡು ಬಂದರು. 'ಅಕ್ಕ'ದ ಮೇಲೆ ಈ ಹೊರೆ ಬೀಳಲಿಲ್ಲ. ಮೂರು ನಾಲ್ಕು ಮಂದಿ ಅತಿಥಿಗಳ ಖರ್ಚನ್ನು

ಮಾತ್ರ "ಅಕ್ಕ' ನೋಡಿಕೊಂಡಿತು. ಈ ಎಲ್ಲ ಕಲಾವಿದರು ಮೊದಲ ಬಾರಿಗೆ 'ಅಕ್ಕ' ವೇದಿಕೆ ಮೇಲೆ ಕಾಣಿಸಿಕೊಂಡರು. ಇದುವರೆಗೆ ಯಕ್ಷಗಾನ ತಂಡದ ಹೆಸರಿನಲ್ಲಿ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರೋ, ಸದಸ್ಯರೋ 'ಯಕ್ಷಗಾನ' ಕ್ಷೇತ್ರದ ಪ್ರತಿನಿಧಿಯಾಗಿ ಭಾಗವಹಿಸುತ್ತಿದ್ದರು. ಈ ಸಾರಿ ವಿದ್ಯಾ ಕೊಳ್ಳೂರು ನೇತೃತ್ವದ 'ಯಕ್ಷ ಮಂಜೂಷ'



ತಂಡದ ಹತ್ತು ಜನ ಯಕ್ಷಗಾನ ಕಲಾವಿದರು ಭಾಗವಹಿಸಿ ಒಂದು ಪ್ರಸಂಗವನ್ನೇ ಪ್ರಸ್ತುತಪಡಿಸಿದರು. ಕಲಾವಿದರ ಪ್ರಾತಿನಿಧ್ಯದ ದೃಷ್ಟಿಯಿಂದ ಇಂಥ ಅನೇಕ ಮೊದಲುಗಳು ಈ ಸಾರಿಯ ಪಟ್ಟಿಯಲ್ಲಿ ಇದ್ದುವು.

"ಅಕ್ಕ' ವಿಶ್ವ ಕನ್ನಡ ಸಮ್ಮೇಳನ ಉದ್ಘಾಟನೆ ವೇದಿಕೆಯಲ್ಲಿ ಇದೇ ಮೊದಲ ಬಾರಿಗೆ ರಾಜಕಾರಣಿಗಳು ಇರಲಿಲ್ಲ. ಇಲ್ಲವಾದರೆ ಇಡೀ ವೇದಿಕೆ ತುಂಬ ಅವರೇ ತುಂಬಿಕೊಂಡಿರುತ್ತಿದ್ದರು. ಹಾಗೆ ನೋಡಿದರೆ ಕರ್ನಾಟಕದ ರಾಜಕಾರಣದ ಬಗ್ಗೆ, ಅಲ್ಲಿನ ವಿದ್ಯಮಾನಗಳ ಬಗ್ಗೆ ಇಲ್ಲಿನ ಕನ್ನಡಿಗರಿಗೆ ಅಂಥ ಆಸಕ್ತಿಯೇನೂ ಇಲ್ಲ. ಯಾರು ಅಲ್ಲಿನ ಮುಖ್ಯಮಂತ್ರಿ ಎಂದು ಅವರು ಕೇಳಿದರೆ ಅಚ್ಚರಿಯೇನೂ ಇಲ್ಲ. ಅಲ್ಲಿನ ವಿದ್ಯಮಾನಗಳ ಬಿಸಿ ಇವರಿಗೆ ತಟ್ಟುವುದೇ ಇಲ್ಲ. ಆದರೂ ರಾಜಕಾರಣಿಗಳು ಬರುತ್ತಿದ್ದರು. ಇವರು ಅವರನ್ನು ವೇದಿಕೆ ಮೇಲೆ ಕೂಡ್ರಿಸಿ ಮೆರೆಸುತ್ತಿದ್ದರು. 'ಅಕ್ಕ' ಪದಾಧಿಕಾರಿಗಳಲ್ಲಿ ಕೆಲವರಿಗೆ ರಾಜಕೀಯ ನಾಯಕರ ನಂಟು ಬೇಕಾಗಿರಲೂಬಹುದು! ಅಕ್ಕ ಸಮ್ಮೇಳನ ಸಾಹಿತ್ಯ ಸಮ್ಮೇಳನವಲ್ಲ. ಅದು ಅಮೆರಿಕದ ಕನ್ನಡಿಗರ ಒಂದು ಮೇಳ. ಇಲ್ಲಿ ಸಾಹಿತ್ಯದ ಬಗ್ಗೆ, ಕನ್ನಡದ ಬದುಕಿನ ಬಗ್ಗೆ ಚರ್ಚೆ ಆಗುವುದಿಲ್ಲ. ಅದು ಇಲ್ಲಿನ ಕನ್ನಡಿಗರಿಗೆ ಮುಖ್ಯವಲ್ಲ. ಅದೆಲ್ಲ ಇಲ್ಲಿ ನಡೆಯಬೇಕು ಎಂದು ನಾವು ಬಯಸುವುದು ಶುದ್ಧ ಅಸಂಗತ, ಮೂರು ದಿನಗಳ ಕಾಲ, ಅಮೆರಿಕದಲ್ಲಿನ ವಿವಿಧ ಕಡೆಯ ಕನ್ನಡಿಗರು ಒಂದು ಕಡೆ ಸೇರಿ ಸಂತೋಷವಾಗಿ ಕಾಲ ಕಳೆಯುವುದು, ಒಂದಿಷ್ಟು ವ್ಯವಹಾರದ ಬಗ್ಗೆ ಮಾತನಾಡುವುದು, ಗಂಡು ಹೆಣ್ಣಿನ ಕೊಡುಕೊಳ್ಳುವಿಕೆಯ ಬಗ್ಗೆ ಚರ್ಚಿಸುವುದು, ಹಾಡು ಕೇಳುವುದು, ನೃತ್ಯ ನೋಡುವುದು... ಇತ್ಯಾದಿ ಇತ್ಯಾದಿ. ಅವರ ಉದ್ದೇಶ ಸ್ಪಷ್ಟವಾಗಿದೆ. ಈ ಸಾರಿ ಉದ್ಘಾಟನೆ ಸಮಾರಂಭ ಮತ್ತು ಎರಡನೇ ದಿನ ಅಮೆರಿಕದಲ್ಲಿನ ಭಾರತದ ರಾಯಭಾರಿ ನಿರುಪಮಾ ರಾವ್ ಹಾಗೂ ಸುಧಾ ಮೂರ್ತಿ ಅವರು ಭಾಗವಹಿಸಿದ ಕಾರ್ಯಕ್ರಮ ಬಿಟ್ಟರೆ ಯಾವ ಭಾಷಣದ ಕಾರ್ಯಕ್ರಮಗಳೂ ಮುಖ್ಯವೇದಿಕೆಯಲ್ಲಿ ನಡೆಯಲಿಲ್ಲ. ಉದ್ಘಾಟನೆ ಕಾರ್ಯಕ್ರಮದಲ್ಲಿ ನಾಲ್ವರು ಸ್ವಾಮೀಜಿಗಳು ವೇದಿಕೆ ಮೇಲೆ ಇದ್ದರು. ಅದು ಸಾಹಿತ್ಯ ಸಮ್ಮೇಳನವಾಗಿದ್ದರೆ ಇಷ್ಟು ಜನ ಸ್ವಾಮಿಗಳು ವೇದಿಕೆ ಮೇಲೆ ಇರಬೇಕಾದ ಅಗತ್ಯವಿರಲಿಲ್ಲ. ಕನ್ನಡ ಸಮ್ಮೇಳನದಲ್ಲಿಯಾದರೂ ಇಷ್ಟು ಮಂದಿ ಸ್ವಾಮಿಗಳು ವೇದಿಕೆ ಮೇಲೆ ಇರಬೇಕೇ ಎಂಬ ಪ್ರಶ್ನೆಗೆ 'ಅಕ್ಕ' ಸಂಘಟಕರಲ್ಲಿ ಉತ್ತರವಿದ್ದಂತೆ ಇರಲಿಲ್ಲ. ಏನೇನೋ ಒತ್ತಡಗಳು ಇದ್ದುವು ಎಂದು ಮಾತ್ರ ಗೊತ್ತಾಗುತ್ತಿತ್ತು. ಅದು ಬಿಟ್ಟರೆ ಮುಖ್ಯ ವೇದಿಕೆ ಬಳಕೆಯಾದುದು ಕೇವಲ ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ. ಅಂದರೆ ಮನರಂಜನೆಯ ಉದ್ದೇಶವೇ ಮುಖ್ಯವಾಗಿತ್ತು ಎಂದು ಅರ್ಥ. ಮುಖ್ಯ ವೇದಿಕೆಯ ಪಕ್ಕದ ಉಪ ವೇದಿಕೆಗಳಲ್ಲಿ ಚರ್ಚೆ, ಸಂವಾದ ಇತ್ಯಾದಿ ಕಾರ್ಯಕ್ರಮಗಳು ನಡೆಯುತ್ತಿದ್ದವಾದರೂ ಅಲ್ಲಿ ಸಭಿಕರು ಬೆರಳೆಣಿಕೆಯಷ್ಟು ಮಾತ್ರ ಇರುತ್ತಿದ್ದರು. ಸಿನಿಮಾ ನಟರು

'ಅಕ್ಕ' ಸಮ್ಮೇಳನಕ್ಕೆ ಬಂದು ಹಾಡಿ ಕುಣಿಯದಿದ್ದರೆ ಅದು 'ಅಕ್ಕ' ಸಮ್ಮೇಳನವೇ ಅಲ್ಲ. ಈ ಸಾರಿ ಯಾವ ನಟರೂ ಬರಲಿಲ್ಲ. ಅವರು ಬರಲಿಲ್ಲ ಎಂದು ಅಮೆರಿಕದ ಕನ್ನಡಿಗರಿಗೆ ಆರಂಭದಲ್ಲಿ ಬೇಸರ ಇದ್ದಂತೆ ಇತ್ತು. ಈ ಮಾತನ್ನು ನನಗೆ ಸಂಘಟಕರು ಮೊದಲ ದಿನವೇ ಹೇಳಿದರು.



'ಅಕ್ಕ' ವಿಶ್ವ ಕನ್ನಡ ಸಮ್ಮೇಳನದ ಸಂಘಟನೆ ಕುರಿತಂತೆ ಅಮೆರಿಕ ಕನ್ನಡ ಕೂಟಗಳ ಆಗರದ ಪದಾಧಿಕಾರಿಗಳಲ್ಲಿ ಅನೇಕ ಗೊಂದಲಗಳು ಇರುವಂತೆ ಕಾಣುತ್ತದೆ. ಅವುಗಳನ್ನು ಕಾಲಾಂತರದಲ್ಲಿ ಅವರು ನಿವಾರಿಸಿಕೊಳ್ಳಬಹುದು ಎಂದೂ ಕಾಣುತ್ತದೆ. ಸರ್ಕಾರದಿಂದ ಹಣ ತೆಗೆದುಕೊಳ್ಳದೇ ಸಮ್ಮೇಳನ ಸಂಘಟಿಸಲು ಸಾಧ್ಯ ಎಂದು ಈ ಸಾರಿ ಅವರಿಗೆ ಗೊತ್ತಾಗಿದೆ. ಹಣ ತೆಗೆದುಕೊಳ್ಳದೇ ಇರುವುದರಿಂದ ಅನೇಕ ಒತ್ತಡಗಳಿಂದ ಪಾರಾಗಲು ಸಾಧ್ಯ, ಅತ್ಯುತ್ತಮ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಲು ಸಾಧ್ಯ ಎಂದೂ ಅವರಿಗೆ ಗೊತ್ತಾಗಿರಬಹುದು. ಅಷ್ಟಾದರೆ ಬೇಕಾದಷ್ಟು ಆದಂತೆ! 'ಅಕ್ಕ' ವೇದಿಕೆಯಲ್ಲಿ ಕಾಣಿಸಿಕೊಳ್ಳಲು ನಮ್ಮ ಕಲಾವಿದರು ಎಷ್ಟು ಹಾತೊರೆಯುತ್ತಾರೆ ಎಂಬುದನ್ನು ನಾನು ಈ ಸಾರಿ ಕಣ್ಣಾರೆ ಕಂಡಿದ್ದೇನೆ. ಆದಾಗ್ಯೂ, ಈ ಸಾರಿ ಆಯ್ಕೆಯಾದ ಕಲಾವಿದರ ಪಟ್ಟಿಯಲ್ಲಿ ಒಂದೆರಡು ಹೆಸರುಗಳು ಮಾತ್ರ ಅನುಮಾನಾಸ್ಪದವಾಗಿದ್ದುದನ್ನು ಬಿಟ್ಟರೆ ಉಳಿದವರೆಲ್ಲ ಪ್ರತಿಭಾವಂತರೇ ಆಗಿದ್ದರು. ಮತ್ತು ಅವರ ಹಾಡುಗಾರಿಕೆಗೆ, ನೃತ್ಯಕ್ಕೆ, ನಾಟಕಕ್ಕೆ ಪ್ರೇಕ್ಷಕರಿಂದ ಸಿಕ್ಕ ಅದ್ಭುತ ಪ್ರತಿಕ್ರಿಯೆಯೇ ಅದಕ್ಕೆ ನಿದರ್ಶನವೂ ಆಗಿತ್ತು. ಬರೀ ಹಾಡು, ಕುಣಿತದಿಂದ ಮನರಂಜನೆ ಮಾತ್ರ ಸಿಗುತ್ತದೆ. ಕೆಲವು ಕಲಾವಿದರಿಗೆ 'ಸಂಪರ್ಕ'ದ ಕೊಂಡಿಗಳು ಸಿಕ್ಕು ಡಾಲರ್ ಗಳಿಸಲು ಅನುಕೂಲವೂ ಆಗಬಹುದು. 'ಅಕ್ಕ' ಸಮ್ಮೇಳನ ಮುಗಿದ ನಂತರ ಒಬ್ಬಿಬ್ಬರನ್ನು ಬಿಟ್ಟು ಬಹುತೇಕ ಕಲಾವಿದರು ಅಮೆರಿಕ ಪ್ರವಾಸವನ್ನು ಮುಂದುವರಿಸಿದ್ದು ಇದೇ ಕಾರಣಕ್ಕಾಗಿ. 'ಅಕ್ಕ' ವೇದಿಕೆ ಅಮೆರಿಕದಲ್ಲಿ ಇದೆ. ಮತ್ತು ಇಲ್ಲಿ ಕಲೆಗೆ ಡಾಲರ್‌ನಲ್ಲಿ ಬೆಲೆ ಸಿಗುತ್ತದೆ! ಇವು ಎರಡರ ಮಹತ್ವ ಎಷ್ಟು ಎಂದು ಹೇಳುವುದು ಅನಗತ್ಯ!

ಈ ದೃಷ್ಟಿಯಿಂದ 'ಅಕ್ಕ' ಸಮ್ಮೇಳನದಲ್ಲಿ ಈ ಸಾರಿ ಯಾವುದೇ ಕುಂದು ಕೊರತೆ ಇರಲಿಲ್ಲ. ವ್ಯವಸ್ಥೆ ಅಚ್ಚುಕಟ್ಟಾಗಿತ್ತು. ಅಚ್ಚುಕಟ್ಟಾಗಿತ್ತು. ಕರ್ನಾಟಕದ 'ದೇಸಿ' ಊಟಕ್ಕೆ ಯಾವ ತೊಂದರೆಯೂ ಇರಲಿಲ್ಲ. ಬೆಳಿಗ್ಗೆಯಿಂದ ರಾತ್ರಿ ವರೆಗೆ ಮೂರೂ ಹೊತ್ತು ಬೇಕಾದಷ್ಟು ತಿನ್ನಬಹುದಿತ್ತು. ಅಮೆರಿಕಾ ದೇಶ ಎಷ್ಟು ದೊಡ್ಡದು ಎಂದರೆ ಈ ದೇಶದಲ್ಲಿ ಪೂರ್ವದಿಂದ ಪಶ್ಚಿಮದ ವರೆಗೆ ಒಂದು ದಿನದಲ್ಲಿ ಮೂರು ಹೊತ್ತುಗಳೇ ಇರುತ್ತವೆ. ಅಷ್ಟು ವಿಶಾಲ ದೇಶದ ಕನ್ನಡಿಗರು ಪ್ರತಿ 'ಅಕ್ಕ' ಸಮ್ಮೇಳನದಲ್ಲಿ ಮೂರು ದಿನಗಳ ಕಾಲ ಸಂತೋಷದಿಂದ ಒಂದು ಕಡೆ ಸೇರುತ್ತಾರೆ. ಚೆನ್ನಾಗಿ ಬಟ್ಟೆ ಉಟ್ಟುಕೊಂಡು, ಉಂಡು ತಿಂದು ಕಾಲ ಕಳೆಯುತ್ತಾರೆ. ಇಂಥ ಸಂತೋಷಕ್ಕಾಗಿಯೇ ಅವರು ಪ್ರತಿ 'ಅಕ್ಕ ಸಮ್ಮೇಳನಕ್ಕಾಗಿ ಕಾಯುತ್ತಾರೆ. ಈ ಅಮೆರಿಕದ ಕನ್ನಡಿಗರಿಗೆ ಸಮ್ಮೇಳನದ ಸಂಘಟಕರ ಬಗ್ಗೆ ಯಾವ ಅಸಮಾಧಾನವೂ ಇದ್ದಂತೆ ಕಾಣಲಿಲ್ಲ. ಬೆಂಗಳೂರಿನಿಂದ ಬಂದವರಿಗೂ ಯಾವ ಬೇಸರವೂ ಆಗಿರಲಿಲ್ಲ. ಕಲಾವಿದರಂತೂ ಖುಷಿಯಾಗಿಯೇ ಇದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಕನ್ನಡ ನಾಡು, ನುಡಿಯ, ಬದುಕಿನ ಅಭ್ಯುದಯ

ಗಮನದಲ್ಲಿ ಇಟ್ಟುಕೊಂಡು ನಡೆಯುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಿಂದಲೇ ಅಂಥ ಅದ್ಭುತ ರೂಪಾಂತರವೇನೂ ಆಗದೇ ಇರುವಾಗ, ಅದನ್ನೇ ಅನೇಕರು 'ಒಂದು ಜಾತ್ರೆ' ಎಂದು ಮೂಗು ಮುರಿಯುವಾಗ 'ಅಕ್ಕ' ಸಮ್ಮೇಳನದ ಬಗ್ಗೆ ಹೆಚ್ಚಿನ ನಿರೀಕ್ಷೆ ಇಟ್ಟುಕೊಳ್ಳುವುದು ಅನಗತ್ಯ. ಈ ಸಾರಿ ಐದೂವರೆ ಕೋಟಿ ರೂಪಾಯಿ



ಖರ್ಚು ಮಾಡಿ, ೨೧ ಲಕ್ಷ ರೂಪಾಯಿ ಸಾಲವನ್ನೂ ತಲೆ ಮೇಲೆ ಹೊತ್ತುಕೊಂಡಿರುವ "ಅಕ್ಕ' ಸಂಘಟಕರು ಸರ್ಕಾರದಿಂದ ಮುಂದೆಯೂ ಹಣ ತೆಗೆದುಕೊಳ್ಳದೇ ಇದ್ದರೆ ಕರ್ನಾಟಕದ ಕನ್ನಡಿಗರು ಇಂಥ ಅಪೇಕ್ಷೆಗಳನ್ನು ಮುಂದೆಯೂ ಇಟ್ಟುಕೊಳ್ಳುವುದಿಲ್ಲ! ಅವರು ಅಲ್ಲಿ ಸಂತೋಷವಾಗಿ, ಒಂದಿಷ್ಟು ಕನ್ನಡ ಮಾತನಾಡುತ್ತ ಸುಖವಾಗಿ ಇದ್ದರೆ ಸಾಕು.

೯-೯-೨೦೧೨

**ಗುರುವಿನ ಋಣ ತೀರಿಸಿದವರು**

**ಯಾರಾದರೂ ಉಂಟೇ?**

ಅನಿತಾ ಮೇರಿ ಅವರ ಜತೆಗೆ ಮಾತನಾಡುವವರೆಗೆ ಜನ ಹೀಗೂ ಇರಬಹುದು ಎಂದು ನನಗೆ ಅನಿಸಿರಲಿಲ್ಲ. ಒಬ್ಬ ಶಿಕ್ಷಕಿ ಏನೆಲ್ಲ ಮಾಡಬಹುದು ಎಂದೂ ಗೊತ್ತಿರಲಿಲ್ಲ. ಇದೆಲ್ಲ ಅಜೀಬು ಸಮಾಚಾರ! ಅವರು ಭದ್ರಾವತಿಯ ಹಳೆನಗರದ ಬಾಲಕರ ಸರ್ಕಾರಿ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕಿ. ಅಲ್ಲಿಗೆ ವರ್ಗವಾಗಿ ಬಂದು ಸುಮಾರು ಒಂದು ವರ್ಷವಾಗಿದೆ. ಶಾಲೆಯಲ್ಲಿ ಮಕ್ಕಳು ಕಡುಬಡವರು, ಶಾಲೆಯ ಪರಿಸರವೇ ಹಾಗೆ ಇದೆ. ಸುತ್ತಮುತ್ತ ಎಲ್ಲ ಬಡವರೇ. ಅವರ ಮಕ್ಕಳೇ ಶಾಲೆಗೆ ಬರುವವರು. ಮಕ್ಕಳಿಗೆ ಸರ್ಕಾರ ಕೊಡುವ ಸಮವಸ್ತ್ರದ ಬಟ್ಟೆಯಲ್ಲಿ ಅಂಗಿ ಚೆಡ್ಡಿ ಹೊಲಿಸಿಕೊಡಲೂ ಅವರ ಬಳಿ ದುಡ್ಡು ಇಲ್ಲ. ಮಕ್ಕಳು ಹಾಗೆಯೇ ಹರಕಲು ಅಂಗಿ ಚೆಡ್ಡಿ ಹಾಕಿಕೊಂಡೇ ಶಾಲೆಗೆ ಬರುತ್ತಿದ್ದುವು. ಶಾಲೆಯ ಹಾಜರಿ ಸಂಖ್ಯೆ ದಿನೇ ದಿನೇ ಕಡಿಮೆ ಆಗುತ್ತಿತ್ತು. ಅನಿತಾ ಮೇರಿ, ಇನ್ನೊಬ್ಬ ಶಿಕ್ಷಕಿ ವಿನೋದಮ್ಮ ಸೇರಿಕೊಂಡು ದಾನಿಗಳನ್ನು ಕಂಡರು. 'ಮಕ್ಕಳಿಗೆ ಸರ್ಕಾರ ಬಟ್ಟೆ ಕೊಡುತ್ತದೆ. ಆದರೆ ಅದರಲ್ಲಿ ಸಮವಸ್ತ್ರ ಹೊಲಿಸಿಕೊಳ್ಳಲು ಅವರಿಗೆ ಆರ್ಥಿಕ ಶಕ್ತಿ ಇಲ್ಲ. ನೀವು ಹಣ ಕೊಟ್ಟರೆ ಅವರು ಹೊಲಿಸಿಕೊಳ್ಳುತ್ತಾರೆ' ಎಂದರು. ಅವರಿಗೆ ಬೆಂಬಲವಾಗಿ ಇತರ ಶಿಕ್ಷಕರು, ಶಾಲೆಯ ಅಭಿವೃದ್ಧಿ ಸಮಿತಿ ಅಧ್ಯಕ್ಷ ಪ್ರಕಾಶ್ ಶೇಟ್

ನಿಂತರು. ದಾನಿಗಳು ಉದಾರವಾಗಿ ಮಕ್ಕಳ ಸಮವಸ್ತ್ರದ ಹೊಲಿಗೆ ಕೂಲಿ ಮಾತ್ರವಲ್ಲ, ಹೂ, ಟೈಗಳನ್ನೂ ಕೊಟ್ಟರು. ಮಕ್ಕಳು ಠಾಕು ಠೀಕಾಗಿ ಶಾಲೆಗೆ ಬರತೊಡಗಿದರು. ಹಾಜರಾತಿ ಕಡಿಮೆ ಇದೆ ಎಂದು ಸರ್ಕಾರ ಮುಚ್ಚಿಬಿಡಬಹುದಾಗಿದ್ದ ಒಂದರಿಂದ ಏಳನೇ ತರಗತಿ ವರೆಗಿನ ಈ ಶಾಲೆ ಈ ಇಬ್ಬರು ಶಿಕ್ಷಕರಿಯರಿಂದಾಗಿ ಉಳಿದುಕೊಂಡಿದೆ. ಮಕ್ಕಳು, ಅನಿತಾ ಮೇರಿ ಅವರಿಗೆ 'ಟೀಚ' ಎನ್ನುವ ಬದಲು ಗುಟ್ಟಾಗಿ 'ಅಮ್ಮ' ಎಂದು ಕರೆಯತೊಡಗಿದರು.

ನಾನು ಹೇಳಲು ಹೊರಟ ಕಥೆ ಇದಲ್ಲ. ಆ ಶಾಲೆಯ ಒಂದನೇ ತರಗತಿಯಲ್ಲಿ ಹರಿಪ್ರಸಾದ್ (೬) ಎಂಬ ಬಾಲಕ ಓದುತ್ತಿದ್ದಾನೆ. ಆತನಿಗೆ ಆಗಾಗ ಎದೆ ನೋವು ಬರುತ್ತಿತ್ತು. ಮೊನ್ನೆ ಆಗಸ್ಟ್ ೧೩ರಂದು ಆತ ಶಾಲೆಯಲ್ಲಿಯೇ ನೋವಿನಿಂದ ತೀವ್ರವಾಗಿ ಒದ್ದಾಡಿದ. ಅನಿತಾ ಮೇರಿ ಆತನ ಪಾಲಕರ ಜತೆಗೆ ಮಗುವಿನ ಸಮಸ್ಯೆಯೇನು ಎಂದು ವಿಚಾರಿಸಿದರು. 'ಮಗುವಿಗೆ ಹುಟ್ಟಿನಿಂದಲೇ ಹೃದಯದ ಕಾಯಿಲೆ. ಎಷ್ಟು ಖರ್ಚು ಬರುತ್ತದೆ ಎಂದು ವಿಚಾರಿಸಲೂ ನಮಗೆ ಧೈರ್ಯವಿಲ್ಲ. ಕಾಡುವ ಬಡತನ. ಮೊದಲು ಇದ್ದ ಅನುಕೂಲಸ್ಥಿತಿ ಏನೋ ಆಗಿ ಈಗ ದುರ್ದೆಸೆ ಕಾಡುತ್ತಿದೆ. ಬದುಕಿದಷ್ಟು ದಿನ ಓದಲಿ ಎಂದು ಶಾಲೆಗೆ ಕಳುಹಿಸುತ್ತಿದ್ದೇವೆ' ಎಂದರು ತಂದೆ ತಾಯಿ, 'ಸರ್ಕಾರ ಎಷ್ಟೊಂದು ಯೋಜನೆ ರೂಪಿಸುತ್ತದೆ. ಅದರ ಬಗ್ಗೆ ಜನರಿಗೆ ತಿಳಿವಳಿಕೆ ಇಲ್ಲದೇ ಇದ್ದರೆ ಅದು ಹೇಗೆ ವ್ಯರ್ಥವಾಗಿ ಬಿಡಬಹುದು' ಎಂದು ಅನಿತಾ ಅವರಿಗೆ ಅನಿಸಿತು. ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ ಎಲ್ಲ ಮಕ್ಕಳಿಗೆ ಸರ್ಕಾರ 'ಸುವರ್ಣ ಆರೋಗ್ಯ ಚೇತನ' ಕಾರ್ಡು ಕೊಡುತ್ತದೆ. ಈ ಕಾರ್ಡು ಇದ್ದರೆ ಮಗುವಿಗೆ ಎಂಥ ಕಾಯಿಲೆ ಇದ್ದರೂ ಅದರ ವೆಚ್ಚವನ್ನು ಸರ್ಕಾರವೇ ಭರಿಸುತ್ತದೆ. ಉಚಿತವಾಗಿ ಮಗುವಿಗೆ ಚಿಕಿತ್ಸೆ ಸಿಗುತ್ತದೆ. ಅನಿತಾ ಮೇರಿ ಅವರು ಹರಿಪ್ರಸಾದ್ ಅಂಥ ಒಂದು ಕಾರ್ಡು ಮಾಡಿಸಿದರು. ತಾಲ್ಲೂಕು ಆರೋಗ್ಯ ಅಧಿಕಾರಿ, ವಲಯ ಶಿಕ್ಷಣ ಅಧಿಕಾರಿ, ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆ, ಜಿಲ್ಲಾ ಆರೋಗ್ಯ ಅಧಿಕಾರಿ ಬಳಿ ಮಗುವನ್ನು ಕರೆದುಕೊಂಡು ಹೋದರು. ಎಲ್ಲರೂ ಮಗುವಿಗೆ ಹೃದಯದ ಶಸ್ತ್ರ ಚಿಕಿತ್ಸೆ ಆಗಬೇಕಿದೆ ಎಂದು ವರದಿ ಕೊಟ್ಟರು.

ಮಗುವನ್ನು ಬೆಂಗಳೂರಿಗೆ ಕರೆದುಕೊಂಡು ಬರಲು ಪ್ರಯಾಣ ವೆಚ್ಚ ಭರಿಸಲೂ ತಂದೆ ತಾಯಿ ಬಳಿ ಹಣವಿರಲಿಲ್ಲ. ಅನಿತಾ ಅವರೇ ಅದನ್ನೂ ಜೋಡಿಸಿಕೊಂಡು ಮಗು ಮತ್ತು ಪಾಲಕರನ್ನು ಕರೆದುಕೊಂಡು ಜಯದೇವ ಹೃದ್ರೋಗ ಚಿಕಿತ್ಸಾ ಕೇಂದ್ರಕ್ಕೆ ಬಂದರು. ಡಾ. ಗಿರಿಧರ್, ಮಗುವಿನ ಆರೋಗ್ಯ ತಪಾಸಣೆ ಮಾಡಿದರು. 'ನಾಲ್ಕು ದಿನ ಬಿಟ್ಟು ಬನ್ನಿ. ಆ ವೇಳೆಗೆ ಸುವರ್ಣ ಆರೋಗ್ಯ ಚೇತನ ಯೋಜನೆ ಅಡಿಯಲ್ಲಿ ಮಗುವಿನ ಶಸ್ತ್ರ ಚಿಕಿತ್ಸೆಯ ವೆಚ್ಚ ಆಸ್ಪತ್ರೆಗೆ

ಜಮಾ ಆಗಿರುತ್ತದೆ. ಶಸ್ತ್ರ ಚಿಕಿತ್ಸೆ ಮಾಡೋಣ' ಎಂದರು. ಅನಿತಾ ಮೇರಿಯೂ ಹೃದ್ರೋಗಿ. ಅವರಿಗೂ ಡಾ. ಗಿರಿಧರ್ ಅವರೇ ಚಿಕಿತ್ಸೆ ಮಾಡಿದ್ದರು. ನಾಲ್ಕು ದಿನ ಬಿಟ್ಟು ಮತ್ತೆ ಬೆಂಗಳೂರಿಗೆ ಬಂದರು. ಹಣ ಜಮಾ ಆಗಿತ್ತು. ಶಸ್ತ್ರ ಚಿಕಿತ್ಸೆಗೆ ಎಲ್ಲ ಸಜ್ಜಾಯಿತು. 'ನಾಲ್ಕು ಬಾಟಲು ರಕ್ತ ಬೇಕು' ಎಂದರು ವೈದ್ಯರು. ಎಲ್ಲಿ ತರುವುದು? ಅನಿತಾ ಮೇರಿ 'ಜಸ್ಟ್ ಡಯಲ್'ಗೆ ಫೋನ್ ಮಾಡಿದರು. ಕರ್ನಾಟಕ ವಿದ್ಯಾರ್ಥಿ ಕೂಟದ ಹರ್ಷ ಅವರ ನಂಬರ್ ಸಿಕ್ಕಿತು. ಅತ್ತ ತಂದೆ ತಾಯಿಯೂ ರಕ್ತ ತರಲು ಹೆಣಗುತ್ತಿದ್ದರು.

ಸುದೈವವೋ ದುರ್ದೈವವೋ ಇಬ್ಬರೂ ಒಬ್ಬರನ್ನೇ ಸಂಪರ್ಕಿಸಿದ್ದರು. ನಾಲ್ಕು ಬಾಟಲಿ ಬದಲು ಎರಡು ಬಾಟಲು ರಕ್ತ ಸಿಕ್ಕಿತು. ಇನ್ನೂ ಎರಡು ಬಾಟಲು ಇಲ್ಲ ಎಂದು ಶಸ್ತ್ರ ಚಿಕಿತ್ಸೆ ಮುಂದಕ್ಕೆ ಹೋಯಿತು. ಅನಿತಾ ಮೇರಿ ಮತ್ತೆ ಹರ್ಷ ಅವರಿಗೆ ಕರೆ ಮಾಡಿದರು. ಹರ್ಷ ಅವರು ಇನ್ನೂ ಎರಡು ಬಾಟಲು ರಕ್ತ ಕೊಡಿಸಿದರು. ಎಬಿ ಪಾಸಿಟಿವ್ ರಕ್ತ ಬೇಕಾಗಿತ್ತು. ಈ ಹರ್ಷ ಕಾಲೇಜೊಂದರಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದಾರೆ. ಅವರು ರಕ್ತ ಕೊಡುವ ನಾಲ್ಕು ಸಾವಿರ ಜನರ ತಂಡ ಕಟ್ಟಿದ್ದಾರೆ. ಅವರ ಬಗೆಗೂ ಬರೆಯುತ್ತೇನೆ. ಸೆಪ್ಟೆಂಬರ್ ೬ ರಂದು ಶಿಕ್ಷಕರ ದಿನದ ಮರುದಿನ ಮಗುವಿನ ಶಸ್ತ್ರ ಚಿಕಿತ್ಸೆ ಆಯಿತು. ಅನಿತಾ ಮೇರಿ ಆಸ್ಪತ್ರೆಯ ಶಸ್ತ್ರ ಚಿಕಿತ್ಸೆ ಕೊಠಡಿ ಆಚೆ ಏಸುವಿನ ಪ್ರಾರ್ಥನೆ ಮಾಡುತ್ತ ನಿಂತುಕೊಂಡಿದ್ದರು.

ಅತ್ತ ಹರಿಪ್ರಸಾದ್ ಶಸ್ತ್ರ ಚಿಕಿತ್ಸೆ ನಡೆಯುತ್ತಿದ್ದಾಗ ಇತ್ತ ಬಾಗಲಕೋಟೆ ಜಿಲ್ಲೆಯಿಂದ ತನ್ನ ಮಗುವನ್ನು ಇದೇ ರೀತಿ ಹೃದ್ರೋಗ ಚಿಕಿತ್ಸೆಗೆ ಕರೆದುಕೊಂಡು ಬಂದಿದ್ದ ತಾಯಿ ಮತ್ತು ಮಗು ಹಳಸಿ ಹೋಗಿದ್ದ ಅನ್ನ ತಿನ್ನುತ್ತಿದ್ದರು. ಅವರ ಬಳಿ ಚಿಲ್ಲರೆ ಬಿಡಿಗಾಸು ಮಾತ್ರ ಇದ್ದುವು. ಒಂದೇ ಒಂದು ನೋಟು ಅವರ ಬಳಿ ಇರಲಿಲ್ಲ. ಆ ಮಗುವಿಗೆ ಸುವರ್ಣ ಆರೋಗ್ಯ ಚೇತನ ಕಾರ್ಡು ಇತ್ತು. ಆದರೆ ತಾಲ್ಲೂಕು, ಜಿಲ್ಲಾ ಆರೋಗ್ಯ ಅಧಿಕಾರಿಗಳ ಶಿಫಾರಸು ಪತ್ರ ಇರಲಿಲ್ಲ. ಅಂಥ ಶಿಫಾರಸು ಪತ್ರ ತರುವವರೆಗೆ ಶಸ್ತ್ರಚಿಕಿತ್ಸೆ ಮಾಡುವುದಿಲ್ಲ. ಸರ್ಕಾರದಿಂದ ಆಸ್ಪತ್ರೆಗೆ ಹಣವೂ ಜಮೆಯೂ ಆಗುವುದಿಲ್ಲ. ಅದನ್ನು ತೆಗೆದುಕೊಂಡು ಬರಬೇಕು ಎಂದು ಆ ತಾಯಿಗೆ ಗೊತ್ತಿರಲಿಲ್ಲ. ಹೇಳುವ ಶಿಕ್ಷಕರೂ ಇರಲಿಲ್ಲ. ಮಗುವಿಗೆ ಚಿಕಿತ್ಸೆ ಆಗಬೇಕಾದರೆ ಏನೇನು ಮಾಡಬೇಕು ಎಂದು ಅನಿತಾ ಅವರೇ ಆ ತಾಯಿಗೆ ಹೇಳಿದರು. ನನಗ ಇದೆಲ್ಲ ಗೊತ್ತಿರಲಿಲ್ಲ.' ಎಂದು ಆ ತಾಯಿ ಮತ್ತೆ ಬಾಗಲಕೋಟೆಯ ಬಸ್ಸು ಹತ್ತಿದರು. ಒಂದು ಹೊತ್ತಿನ ಊಟಕ್ಕೂ ಪರದಾಡುವ ಆ ತಾಯಿ ಮತ್ತೆ ಬೆಂಗಳೂರಿಗೆ ಮಗುವನ್ನು ಕರೆದುಕೊಂಡು ಬರಲು ಜೀವವನ್ನು ಒತ್ತೆ ಇಡಬೇಕು. ಬದುಕು ಎಷ್ಟು ದುರ್ಭರ? ಎಷ್ಟೆಷ್ಟು ರೀತಿ ನಮ್ಮನ್ನು ಪರೀಕ್ಷೆ ಮಾಡುತ್ತದೆ?...

ಅನಿತಾ ಮೇರಿ ಮೊನ್ನೆ ಶುಕ್ರವಾರ ಮತ್ತೆ ಬೆಂಗಳೂರಿಗೆ ಬಂದಿದ್ದರು. ನಸುಕಿನ ೪.೩೦ಕ್ಕೆ ಶಿವಮೊಗ್ಗಕ್ಕೆ ಬಂದು ಇಂಟರ್‌ಸಿಟಿ ಹತ್ತಿ, ಮಗು ಹರಿಪ್ರಸಾದ್‌ನನ್ನು ಕರೆದುಕೊಂಡು ಮತ್ತೆ ಊರಿಗೆ ಹೋದರು. ಆತನ ಪಾಲಕರೂ ಅನಿತಾ ಜತೆಗಿದ್ದರು. ಒಬ್ಬ ಶಿಕ್ಷಕಿ ತನ್ನ ವಿದ್ಯಾರ್ಥಿಗಾಗಿ ಹೀಗೆಲ್ಲ ಏಕೆ ಮಾಡುತ್ತಾರೆ? ತನ್ನ ವಿದ್ಯಾರ್ಥಿಯನ್ನು ತನ್ನ ಮಕ್ಕಳಿಗಿಂತ ಹೆಚ್ಚು ಏಕೆ ಪ್ರೀತಿಸುತ್ತಾರೆ? ಅಷ್ಟೊಂದು ಪ್ರೀತಿಯನ್ನು ಆ ವಿದ್ಯಾರ್ಥಿ ಹೇಗೆ ಮರಳಿಸುತ್ತಾನೆ? ಹರಿಪ್ರಸಾದ್ ಬದುಕಿ

ಉಳಿದಿದ್ದಾನೆ. ಆತ ಮುಂದೆ ದೊಡ್ಡ ಮನುಷ್ಯ ಆಗಬಹುದು. ಊರಿಗೆ ಹೊರಟು ನಿಂತ ಅವನ ಜತೆ ಮಾತನಾಡಿದೆ. 'ನಮಸ್ತೇ ಸರ್' ಎಂದ. 'ಚೆನ್ನಾಗಿ ಓದು' ಎಂದೆ. 'ಫಸ್ಟ್ ಬರ್ತೇನೆ ಸರ್' ಎಂದ. ತಕ್ಷಣ ಫೋನ್ ತೆಗೆದುಕೊಂಡ ಅನಿತಾ, 'ಅವನು ಜಾಣ ಇದ್ದಾನೆ ಸರ್" ಎಂದರು. ಜೀವ ಉಳಿಸಿದ ಈ ಶಿಕ್ಷಕಿಗೆ ಆತ ಏನು ಕೊಡಲು ಸಾಧ್ಯ? ಅನಿತಾ ಅವರ ಋಣವನ್ನು ಹರಿಪ್ರಸಾದ್ ಹೇಗೆ ತೀರಿಸಬಲ್ಲ? ಇದು ಬರೀ ಹರಿಪ್ರಸಾದ್ ವಿಚಾರ ಮಾತ್ರ ಅಲ್ಲ. ಎಲ್ಲ ವಿದ್ಯಾರ್ಥಿಗಳ ವಿಚಾರ.

ಈ ಅಂಕಣ ಬರೆಯುತ್ತಿದ್ದಾಗ ನನ್ನ ಊರು ಮುದ್ದೇಬಿಹಾಳದಿಂದ, ನನಗೆ ಕಾಲೇಜಿನಲ್ಲಿ ಮೇಷ್ಟರಾಗಿದ್ದ ಪ್ರೊ.ಬಿ.ಎಂ. ಹಿರೇಮಠ ಕರೆ ಮಾಡಿದರು. ನಿಮ್ಮ ಗುರು ಸಿ.ಎಸ್. ಹಿರೇಮಠರು ತೀರಿಕೊಂಡರು' ಎಂದರು. ಸಿ.ಎಸ್. ಹಿರೇಮಠರಿಗೆ ೮೯ ವರ್ಷ ವಯಸ್ಸಾಗಿತ್ತು. ಗರಿ ಗರಿಯಾದ ಬಿಳಿ ಧೋತ್ರ, ಬಿಳಿ ಅಂಗಿ, ಮೇಲೊಂದು ಕರಿ ಕೋಟು ಧರಿಸಿಯೇ ಶಾಲೆಗೆ ಬರುತ್ತಿದ್ದ ಹಿರೇಮಠರು ನಮಗೆ ಹೈಸ್ಕೂಲಿನಲ್ಲಿ ಕನ್ನಡ ಮತ್ತು ಸಂಸ್ಕೃತ ಹೇಳಿಕೊಟ್ಟಿದ್ದರು. ಅವರದು ಪರಿಶುಭ್ರ ವ್ಯಕ್ತಿತ್ವ ಅಪರೂಪದ ಶಿಷ್ಯವಾತ್ಸಲ್ಯ ಕನ್ನಡ ಪ್ರೀತಿಯ ಬೇರುಗಳನ್ನು ನನ್ನ ಮನಸ್ಸಿನಲ್ಲಿ ಆಳವಾಗಿ ನೆಟ್ಟು ಅದು ಹೆಮ್ಮರವಾಗಿ ಬೆಳೆಯುವಂತೆ ಮಾಡಿದವರು ಹಿರೇಮಠರು. ಅವರು ಅದನ್ನು ನಮಗೆ ತಿಳಿಯದಂತೆ ಮಾಡಿದರು. ಗುರು ಯಾವಾಗಲೂ ಮಾಡುವುದು ಹೀಗೆಯೇ! ನನ್ನ ಸಹಪಾಠಿಗಳಲ್ಲಿ ನಾನು ಮಾತ್ರ ಕನ್ನಡದ ಕೈ ಹಿಡಿದು ಮುಂದೆ ನಡೆದೆ. ಉಳಿದವರೆಲ್ಲ ವೈದ್ಯರೋ, ಎಂಜಿನಿಯರುಗಳೋ, ವ್ಯಾಪಾರಿಗಳೋ ಆದರು. ಹಿರೇಮಠರ ಋಣವನ್ನು ನಾನು ಹೇಗೆ ತೀರಿಸಬಲ್ಲೆ? ಎರಡು ಹನಿ ಕಣ್ಣೀರು ಬಿಟ್ಟು ಅವರಿಗೆ ಈಗ ಇನ್ನೇನು ಕೊಡಲು ಸಾಧ್ಯ?

೧೯೦೬.೨೦೧೨

**ಹೊಸಕಿ ಹೋದ ಪರ್ಯಾಯದ ಕನಸುಗಳು**

ಹಿರಿಯ ಪತ್ರಕರ್ತ ಕುಲದೀಪ ನಯ್ಯರ್ ಅವರ 'ಒಂದು ಜೀವನ ಸಾಲದು' ಆತ್ಮಕಥೆಯ ಅಧ್ಯಾಯಗಳನ್ನು ಓದುತ್ತಿದ್ದಂತೆ ನೆನಪುಗಳು ನುಗ್ಗಿ ಬರತೊಡಗಿದುವು. ೧೯೭೭ನೇ ಸಾಲು. ತುರ್ತು ಪರಿಸ್ಥಿತಿ ನಂತರ ಲೋಕಸಭೆಗೆ ಚುನಾವಣೆ ಘೋಷಣೆ ಆಗಿತ್ತು. ನಾನಾಗ ಎಂ.ಎ. ಮೊದಲ ವರ್ಷದ ವಿದ್ಯಾರ್ಥಿ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಶಾಲ್ಮಲಾ ವಿದ್ಯಾರ್ಥಿ ನಿಲಯದಲ್ಲಿ ವಾಸವಾಗಿದ್ದೆ. ನಮ್ಮ ವಿದ್ಯಾರ್ಥಿ ನಿಲಯದ ಪಕ್ಕದ ಕೊಳ್ಳದಲ್ಲಿ ನಡೆದು ಹೋದರೆ ಹೊಲ ಗದ್ದೆಗಳು ಸಿಗುತ್ತಿದ್ದುವು. 'ಲೋಕಸಭೆ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ಸಿಗೆ ಮತ ಹಾಕಬಾರದು, ವಿರೋಧ ಪಕ್ಷದ ಅಭ್ಯರ್ಥಿಗೆ ಹಾಕಬೇಕು' ಎಂದು ನಾವು ಕೆಲವು ವಿದ್ಯಾರ್ಥಿಗಳು ಹೊಲ ಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದ ರೈತರ ಮುಂದೆ ಪ್ರಚಾರ ಮಾಡಿದ್ದೆವು. ನಮ್ಮ ಮನಸ್ಸಿನಲ್ಲಿ ಆಗ ಪತ್ರಿಕೆಗಳಲ್ಲಿ ವರದಿ ಆಗುತ್ತಿದ್ದ ತುರ್ತುಪರಿಸ್ಥಿತಿಯ ಅತಿರೇಕಗಳು ಜ್ವಲಂತವಾಗಿ ಇದ್ದುವು. ನನ್ನ ಮನಸ್ಸನ್ನು ಸ್ನೇಹಲತಾ ರೆಡ್ಡಿ ಅವರಂಥ ಒಬ್ಬ ಕೋಮಲ ಹೆಣ್ಣು ಮಗಳ ಸಾವು ತೀವ್ರವಾಗಿ ಕಾಡಿತ್ತು. ಭೂಗತರಾಗಿದ್ದ ಸಮಾಜವಾದಿ ಜಾರ್ಜ್ ಫರ್ನಾಂಡಿಸ್ ಅವರ ಪತ್ತೆಗಾಗಿ ಈ ಹೆಣ್ಣು ಮಗಳನ್ನು ದೇವರಾಜ ಅರಸು ಸರ್ಕಾರ ಜೈಲಿಗೆ ತಳ್ಳಿತ್ತು. ಆಸ್ತಮಾ ಪೀಡಿತರಾಗಿದ್ದ ಸ್ನೇಹಲತಾ ಜೈಲಿನಿಂದ ಬಿಡುಗಡೆಯಾದ ಕೂಡಲೇ ಸತ್ತು ಹೋದರು. ಜಾರ್ಜ್

ಅವರ ಸೋದರ ಲಾರೆನ್ಸ್ ಫರ್ನಾಂಡಿಸ್ ಅವರಿಗೆ ಕೊಟ್ಟ 'ಥರ್ಡ್ ಡಿಗ್ರಿ' ಹಿಂಸೆಯೂ ನಮ್ಮ ವಾರಿಗೆಯವರನ್ನು ತೀವ್ರವಾಗಿ ಅಸ್ವಸ್ಥಗೊಳಿಸಿತ್ತು. 'ಇಂದಿರಾ ಸರ್ಕಾರ ಹೋಗಬೇಕು. ಪ್ರಜಾಪ್ರಭುತ್ವ, ಅಭಿವ್ಯಕ್ತಿ ಸ್ವಾತಂತ್ರ್ಯದಲ್ಲಿ ನಂಬಿಗೆ ಇರುವ ಒಂದು ಸರ್ಕಾರ ಅಧಿಕಾರಕ್ಕೆ ಬರಬೇಕು' ಎಂದು ನನ್ನಂಥ ಯುವಕರು ಬಯಸುತ್ತಿದ್ದರು. ಧಾರವಾಡದ ಕಡಪ ಮೈದಾನದಲ್ಲಿ ಸಿ.ಎಂ. ಇಬ್ರಾಹಿಂ ಬೆಂಕಿಯುಗುಳುವಂಥ ಭಾಷಣ ಮಾಡುತ್ತಿದ್ದರು. ವಿರೋಧ ಪಕ್ಷಗಳ ನಾಯಕರ ಇಂಥ ಭಾಷಣಕ್ಕೆ ನಾವು ತಪ್ಪದೇ ಹಾಜರಾಗುತ್ತಿದ್ದೆವು. ಅದೆಲ್ಲ ವ್ಯವಸ್ಥೆಯ, ಪ್ರಭುತ್ವದ ವಿರುದ್ಧ ಒಂದು ವಯೋಸಹಜವಾದ ಪ್ರತಿಕ್ರಿಯೆಯಾಗಿತ್ತು. ಆ ಚುನಾವಣೆಯಲ್ಲಿ ಇಡೀ ಉತ್ತರ ಭಾರತದಲ್ಲಿ ಇಂದಿರಾ ಗಾಂಧಿ ನೇತೃತ್ವದ ಕಾಂಗ್ರೆಸ್ ಪಕ್ಷ ದೂಳಿಪಟ ಆಯಿತು. ಸ್ವತಃ ಇಂದಿರಾ ಅವರೇ ರಾಯ್‌ಬರೇಲಿ ಕ್ಷೇತ್ರದಲ್ಲಿ ರಾಜ್ ನಾರಾಯಣ್ ಅವರಂಥ ಒಬ್ಬ ಸಾಧಾರಣ ಅಭ್ಯರ್ಥಿ ಎದುರು ಸೋತು ಬಿಟ್ಟರು. ಆದರೆ, ಕರ್ನಾಟಕದಲ್ಲಿ ಮಾತ್ರವಲ್ಲ ಇಡೀ ದಕ್ಷಿಣ ಭಾರತದಲ್ಲಿ ವಿರೋಧ ಪಕ್ಷಗಳಿಗೆ ಮುಖಭಂಗವಾಗಿತ್ತು. ನಾವೂ ಪೆಚ್ಚಾದೆವು!

ದೇಶದಲ್ಲಿ ಭದ್ರವಾಗಿ ನೆಲೆಯೂರಿದ್ದ ಜವಾಹರಲಾಲ್ ನೆಹರೂ ಮತ್ತು ಇಂದಿರಾ ಗಾಂಧಿ 'ಪ್ರತಿಮೆ'ಗೆ ಮೊದಲ ಬಾರಿ ಭಂಗ ಬಂದ ಘಟನೆಯದು. ಇಂದಿರಾ ಸರ್ಕಾರದ ಭ್ರಷ್ಟಾಚಾರ, ದಮನ ನೀತಿ ವಿರುದ್ಧ ಜಯಪ್ರಕಾಶ್ ನಾರಾಯಣ್ ನೇತೃತ್ವದಲ್ಲಿ ನಡೆದ ಹೋರಾಟ, ಅವರ ಕರೆಯಂತೆ ಹಲವು ವಿರೋಧ ಪಕ್ಷಗಳು ಒಂದಾಗಿ ಚುನಾವಣೆ ಎದುರಿಸಿದ್ದು, ತುರ್ತುಸ್ಥಿತಿಯ ಅತಿರೇಕಗಳು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಸ್ವಾತಂತ್ರ್ಯದ ಪ್ರೀತಿ ಇಂದಿರಾ ನೇತೃತ್ವದ ಪಕ್ಷವನ್ನು ಸೋಲಿಸಲು ಕಾರಣವಾದುವು. ಲೋಕಸಭೆಗೆ ಹೊಸದಾಗಿ ಆಯ್ಕೆಯಾದ ಜನತಾ ಪಕ್ಷದ ಸಂಸದರು ಮಹಾತ್ಮ ಗಾಂಧಿ ಅವರ ರಾಜ್‌ಘಾಟ್ ಸಮಾಧಿ ಎದುರು ನಿಂತು ಪ್ರಾಮಾಣಿಕತೆ, ಪಾರದರ್ಶಕತೆ ಮತ್ತು ಸಮಗ್ರತೆಯ ಪ್ರಮಾಣ ವಚನ ಸ್ವೀಕರಿಸಿದರು. ನಂತರ, ಕೇವಲ ಮೂರು ವರ್ಷಗಳಲ್ಲಿ ಜನತಾ ಸರ್ಕಾರದ ಮಹಲು ಕುಸಿದು ಬಿತ್ತು. ಕಾಂಗ್ರೆಸ್ಸಿಗೆ ಪರ್ಯಾಯದ ಕನಸು ಕಂಡಿದ್ದ ಜನರ ಕನಸೂ ಗಾಳಿಗೋಪುರವಾಯಿತು. ಕುಲದೀಪ್ ನಯ್ಯರ್ ಹೇಳುತ್ತಾರೆ : 'ಉನ್ನತ ಸ್ಥಾನಗಳಲ್ಲಿದ್ದ ನಾಯಕರ ದುರಾಸೆ ಮತ್ತು ದುರಹಂಕಾರ ಜನತಾ ಪಕ್ಷವನ್ನು ವಿಚ್ಛಿದ್ರಗೊಳಿಸಿತು.' (ಪುಟ೩೫೭)

ನಯ್ಯರ್ ಮತ್ತೆ ಹೇಳುತ್ತಾರೆ : 'ಜನತಾ ಪಕ್ಷದ ಕಾರ್ಯವೈಖರಿ ಕಾಂಗ್ರೆಸ್ ಪಕ್ಷಕ್ಕಿಂತ ಭಿನ್ನವಾಗಿರಲಿಲ್ಲ. ಸಂಜಯ ಗಾಂಧಿ ಬದಲು ಮೊರಾರ್ಜಿ ದೇಸಾಯಿ (ಪ್ರಧಾನಿ) ಅವರ ಮಗ ಕಾಂತಿ ದೇಸಾಯಿ ಇದ್ದರು. ಅವರೂ ಅಷ್ಟೇ

ನಿರ್ದಯಿಯಾಗಿದ್ದರು, ಅವರಲ್ಲೂ ಪ್ರಾಮಾಣಿಕತೆ ಕೊರತೆ ಇತ್ತು...' (ಪುಟ ೩೫೭) ಅಂದರೆ ಅಧಿಕಾರ ಸೂತ್ರ ಹಿಡಿದ ವ್ಯಕ್ತಿಗಳು ಬದಲಾಗುತ್ತಾರೆ. ಆದರೆ, ವ್ಯವಸ್ಥೆ ಬದಲಾಗುವುದಿಲ್ಲ. ನಯ್ಯರ್ ಅವರು ಇಂದಿರಾ ಅವರ ವಿರುದ್ಧ ಬರೆದು ಜೈಲಿಗೆ ಹೋದವರು. ಆದರೆ, ತಮ್ಮ ಸರ್ಕಾರದ ಆಡಳಿತ ವೈಖರಿಯನ್ನು ಟೀಕಿಸಿದ ನಯ್ಯರ್ ವಿರುದ್ಧ ಮೊರಾರ್ಜಿ ಕೂಡ ಇಂದಿರಾ ಅವರ ಭಾಷೆಯಲ್ಲಿಯೇ ಮಾತನಾಡುತ್ತಾರೆ : 'ನಿನ್ನ ಬರಹಗಳ ಮೇಲೆ (ನಿನ್ನ ವಿರುದ್ಧ) ಕ್ರಮ ಕೈಗೊಳ್ಳಬಹುದು ಮತ್ತು ನಿನ್ನನ್ನು ಜೈಲಿಗೆ ಕಳಿಸಬಹುದು' (ಅದೇ ಪುಟ), ಅಂದರೆ

ವ್ಯಕ್ತಿಗಳು ಬದಲಾದರೂ ಪ್ರಭುತ್ವದ ಭಾಷೆ ಬದಲಾಗುವುದಿಲ್ಲ. ಪ್ರಭುತ್ವದಲ್ಲಿ ಇದ್ದವರು ಟೀಕೆಯನ್ನು ಸಹಿಸುವುದಿಲ್ಲ. ಇನ್ನೂ ದುರಂತ ಎಂದರೆ ಜನತಾ ಸರ್ಕಾರವನ್ನು ಕೇಂದ್ರದಲ್ಲಿ ಅಧಿಕಾರಕ್ಕೆ ತಂದ, ಮೊರಾರ್ಜಿಯವರನ್ನು ಪ್ರಧಾನಿ ಹುದ್ದೆಗೆ ಶಿಫಾರಸು ಮಾಡಿದ ಜಯಪ್ರಕಾಶ್ ನಾರಾಯಣ್ ಅವರ ಬಗ್ಗೆ ಅದೇ ಮೊರಾರ್ಜಿ ಹೇಳುವ ಮಾತು : 'ಏನು, ಜೆ.ಪಿ. ತಮ್ಮನ್ನು ಏನಂತ ತಿಳಿದುಕೊಂಡುಬಿಟ್ಟಿದ್ದಾರೆ? ಅವರೇನು ಗಾಂಧಿಯೇ? ನಾನು ಗಾಂಧಿ ಅವರನ್ನೇ ಭೇಟಿ ಮಾಡಲು ಹೋಗಿರಲಿಲ್ಲ ಗೊತ್ತಾ?' (ಪುಟ ೩೬೪) ಅಧಿಕಾರದಲ್ಲಿ ಇದ್ದವರ ಮದ, ದುರಹಂಕಾರ, ಉದ್ಧಟತನದ ಬಗ್ಗೆ ಈ ಮಾತಿಗಿಂತ ಇನ್ನೇನು ನಿದರ್ಶನ ಬೇಕು?

ಮೊರಾರ್ಜಿ ಇಂಥ ತಮ್ಮ ಕೆಟ್ಟ ಹಟ ಮತ್ತು ದುರಹಂಕಾರದಿಂದ ಸರ್ಕಾರವನ್ನು, ಜನರ ಆಶೋತ್ತರಗಳನ್ನು ನಾಶ ಮಾಡಿದರೆ, ಪ್ರಧಾನಿಯಾಗಬೇಕು ಎಂದು ಹಾತೊರೆಯುತ್ತಿದ್ದ ಚರಣಸಿಂಗ್ ತಮ್ಮ ಆತ್ಮಾಭಿಮಾನವನ್ನೇ ಕಾಂಗ್ರೆಸ್ಸಿನ ಪದತಲದಲ್ಲಿ ಇಟ್ಟರು. ಸಿಂಗ್ ಅವರನ್ನು ಪ್ರಧಾನಿ ಮಾಡಲು ಇಂದಿರಾ ಅವರನ್ನು ಸೋಲಿಸಿದ್ದ ರಾಜ್‌ನಾರಾಯಣ್ ಅವರು ಸಂಜಯ ಗಾಂಧಿ ಮನೆ ಬಾಗಿಲು ತಟ್ಟಿದರು (ಪುಟ ೩೭೦). ಇಂಥ ಅವಿವೇಕಿ ನಾಯಕರೆಲ್ಲ ಸೇರಿಕೊಂಡು ಜನರು ಕೊಟ್ಟ ಅಧಿಕಾರವನ್ನು ಕಳೆದುಕೊಂಡರು. ಜನರು ಮತ್ತೆ ಕೇವಲ ಮೂರು ವರ್ಷಗಳಲ್ಲಿ ಇಂದಿರಾ ಸರ್ಕಾರವನ್ನು ಅಧಿಕಾರಕ್ಕೆ ತಂದರು. ಭಾರತದಂಥ ದಾಸ್ಯ ಮನೋಭಾವದ, ಅಶಿಸ್ತಿನ, ಅನಕ್ಷರರು ಜಾಸ್ತಿ ಇರುವ ದೇಶಕ್ಕೆ ಬ್ರಿಟಿಷರ ಆಡಳಿತ, ತುರ್ತುಸ್ಥಿತಿಯೇ ಸರಿ ಎನ್ನುವಂಥ ಅಭಿಪ್ರಾಯ ಮತ್ತೆ ಸಾಮಾನ್ಯ ಜನರಲ್ಲಿ ಮೂಡಿತು. ಇಂದಿರಾ ಅವರ ತಪ್ಪುಗಳನ್ನೆಲ್ಲ ಜನ ಕ್ಷಮಿಸಿಬಿಟ್ಟರು. ಆದರೆ, ಇಂದಿರಾ ಸರ್ಕಾರದ ಸರ್ವಾಧಿಕಾರವನ್ನು ವಿರೋಧಿಸಿ ಕುಲದೀಪ್ ನಯ್ಯರ್ ಜೈಲು ಸೇರಿದ್ದರು. ನೊಣ ಬಿದ್ದಿದ್ದ ಸಾರನ್ನು ಉಂಡಿದ್ದರು. ಸ್ನೇಹಲತಾ ರೆಡ್ಡಿ ಅವರಂಥವರು ಜೀವವನ್ನೇ ಕೊಟ್ಟಿದ್ದರು. ಲಾರೆನ್ಸ್ ಫರ್ನಾಂಡಿಸ್ ಶಾಶ್ವತವಾಗಿ ಅಂಗವಿಕಲರಾಗಿದ್ದರು. ಅದು ಯಾವ ನಾಯಕರಿಗೂ ನೆನಪು ಇರಲಿಲ್ಲ.

ಕಾಂಗ್ರೆಸ್ಸಿಗೆ ಪರ್ಯಾಯ ಹುಡುಕಲು ಕರ್ನಾಟಕದಲ್ಲಿಯೂ ಮತ್ತೆ ಮತ್ತೆ ಪ್ರಯತ್ನಗಳು ನಡೆದಿವೆ. ನಾಯಕರ ದುರಹಂಕಾರ, ಆಗೆಲ್ಲ ಮತ್ತೆ ಮತ್ತೆ ಸ್ವಪ್ರತಿಷ್ಠೆಯಿಂದಾಗಿ ಸರ್ಕಾರ ಜನಪರವಾಗಿ, ಸಮರ್ಥವಾಗಿ ಆಡಳಿತ ನಡೆಸಲು ಆಗಿಲ್ಲ. ೧೯೮೩ರಲ್ಲಿ ಕರ್ನಾಟಕದಲ್ಲಿ ಮೊದಲ ಬಾರಿಗೆ ಕಾಂಗ್ರೆಸ್ಸೇತರ ಸರ್ಕಾರ ಅಧಿಕಾರಕ್ಕೆ ಬಂತು. ಮೊದಲ ೧೮ ತಿಂಗಳು ಆಗಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಅತ್ಯಂತ ಚಾಣಾಕ್ಷ ರೀತಿಯಿಂದ ಆಡಳಿತ ಮಾಡಿದರು.

ಸ್ವಂತ ಬಹುಮತವಿಲ್ಲದ ಒಂದು ಸರ್ಕಾರದಲ್ಲಿ ಸಮತೋಲ ಸಾಧಿಸುವ ರೀತಿ ಹೇಗೆ ಎಂದು ಅವರು ತೋರಿಸಿಕೊಟ್ಟರು. ಆದರೆ, ೧೯೮೫ರಲ್ಲಿ ಪೂರ್ಣ ಬಹುಮತ ಪಡೆದು ಅಧಿಕಾರಕ್ಕೆ ಬಂದ ಅವರ ಸರ್ಕಾರದ ವಿರುದ್ಧವೂ ಭ್ರಷ್ಟಾಚಾರದ ಆರೋಪಗಳು ಬಂದುವು. ಹೆಗಡೆಯವರು ತಮ್ಮ ಸರ್ಕಾರದ ಭ್ರಷ್ಟಾಚಾರ, ಹಗರಣಗಳನ್ನು ಮುಚ್ಚಿಕೊಳ್ಳಲು 'ಅಧಿಕಾರದಲ್ಲಿ ಇದ್ದಾಗ ನೀವೇನು ಮಾಡಿದ್ದಿರಿ' ಎಂದು ಕಾಂಗ್ರೆಸ್ಸಿಗರನ್ನು ಕೇಳತೊಡಗಿದರು. ಅವರು ಮಾಡಿದ್ದನ್ನೇ ಇವರೂ

ಮಾಡುವುದಾದರೆ ಜನರು ತಮ್ಮನ್ನು ಏಕೆ ಆರಿಸಬೇಕಿತ್ತು ಎಂಬುದು ಅವರಿಗೆ ಮರೆತು ಹೋಗಿತ್ತು!

ಹೆಗಡೆ ಮತ್ತು ದೇವೇಗೌಡರ ನಡುವೆ ಮತ್ತೆ ಮತ್ತೆ ಪ್ರತಿಷ್ಠೆಯ ತಾಕಲಾಟಗಳು ನಡೆದುವು. ಅದರಿಂದ ಅಂತಿಮವಾಗಿ ಹೆಗಡೆ ರಾಜೀನಾಮೆ ಕೊಡುವಂತೆ ಆಯಿತು. ಅವರ ನಂತರ ಮುಖ್ಯಮಂತ್ರಿಯಾಗಿದ್ದ ಎಸ್.ಆರ್. ಬೊಮ್ಮಾಯಿ ಸರ್ಕಾರವನ್ನು ದೇವೇಗೌಡರೇ ಉರುಳಿಸಿದರು ಎಂಬ ಆರೋಪ ಕೇಳಿ ಬಂತು. ೧೯೯೪ರಲ್ಲಿ ಮತ್ತೆ ಜನತಾದಳ ಸರ್ಕಾರ ಅಧಿಕಾರಕ್ಕೆ ಬಂತು. ದೇವೇಗೌಡರು ಮುಖ್ಯಮಂತ್ರಿ ಆಗುವುದಕ್ಕಿಂತ ಮುಂಚೆ ಹೆಗಡೆಯವರನ್ನು ವಿಧಾನಸೌಧದಲ್ಲಿಯೇ ಅಟ್ಟಾಡಿಸಿಕೊಂಡು ಹೊಡೆಯುವ ಯತ್ನ ನಡೆಯಿತು. ಆದರೆ, ದೇವೇಗೌಡರು ಮುಖ್ಯಮಂತ್ರಿಯಾಗಿ ಉತ್ತಮ ಆಡಳಿತ ನೀಡಿದರು. ಅವರು ಪ್ರಧಾನಿಯಾದ ಮೇಲೆ ಅವರ ಮತ್ತು ಹೆಗಡೆ ನಡುವೆ ಮತ್ತೆ ಪ್ರತಿಷ್ಠೆಯ ಹೋರಾಟ ನಡೆಯಿತು. ಅದು ಜೆ.ಎಚ್. ಪಟೇಲರು ಮುಖ್ಯಮಂತ್ರಿಯಾದ ನಂತರವೂ ಮುಂದುವರಿಯಿತು. ೨೦೦೮ರಲ್ಲಿ ಜನರು ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತಂದರು. ಈಗ ಬಿಜೆಪಿಯಲ್ಲಿ ಎಷ್ಟು ಗುಂಪುಗಳು ಇವೆ. ಎಷ್ಟು ಹಗರಣಗಳು ನಡೆದಿವೆ ಎಂದು ಲೆಕ್ಕವಿಟ್ಟವರು ಯಾರು? ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಕೆ.ಎಸ್. ಈಶ್ವರಪ್ಪ, ಡಿ.ವಿ. ಸದಾನಂದಗೌಡ ಹೇಗೆ ಜಗಳ ಮಾಡಿದರು, ಮಾಡುತ್ತಿದ್ದಾರೆ, ಪರಸ್ಪರರ ಕಾಲನ್ನು ಹೇಗೆಲ್ಲ ಎಳೆಯುತ್ತಿದ್ದಾರೆ ಎಂಬುದೆಲ್ಲ ತೀರಾ ಈಚಿನ ಇತಿಹಾಸ.

ಭಾರತದ ಜನರು ಮೊದಲ ಬಾರಿಗೆ ಪರ್ಯಾಯಕ್ಕೆ ನಡೆಸಿದ ಹುಡುಕಾಟ ವಿಫಲವಾದ ಕುರಿತು ನಯ್ಯರ್ ಬರೆಯುತ್ತಾರೆ : 'ಜನತಾ ಪಕ್ಷದ ಪ್ರಯೋಗ ವಿಫಲವಾಯಿತು. ಯಾರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಅಧಿಕಾರ ಹಿಡಿದರೋ ಅವರಿಗೆ ಜೆ.ಪಿ. ಬೋಧನೆಗಳಲ್ಲಿ ಯಾವ ನಂಬಿಕೆಯೂ ಇರಲಿಲ್ಲ. ಸಮಾಜದ ಕೆಳಸ್ತರದಲ್ಲಿ ಇರುವವರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಬದ್ಧತೆಯೂ ಇರಲಿಲ್ಲ. ಇಂದಿರಾ ಗಾಂಧಿ ಅವರನ್ನು ಕಿತ್ತು ಹಾಕಿದ್ದು ಇವರಿಗೆ ಅಧಿಕಾರ ಪಡೆಯಲು ಮತ್ತು ಹಣ ಮಾಡಲು ಸಿಕ್ಕ ಒಂದು ಅವಕಾಶ ಆಗಿತ್ತಷ್ಟೆ. ಅದು ಕೈಗೂಡಿದ ಕೂಡಲೇ ಅವರು ಮೌಲ್ಯಯುತ ರಾಜಕಾರಣದ ಮತ್ತು ಸ್ವಚ್ಛ ರಾಜಕೀಯದ ಮಾತುಗಳನ್ನು ಗಾಳಿಗೆ ತೂರಿದರು. ಅಲ್ಲದೆ ಪರಿವರ್ತನೆಗೆ ಅಗತ್ಯವಾದ ಕ್ರಾಂತಿಯತ್ತ ಜನತೆಯನ್ನು ಕರೆದೊಯ್ಯುವ ಯಾವ ಶಕ್ತಿಯೂ ಅವರಲ್ಲಿ ಇರಲಿಲ್ಲ. ರಾಷ್ಟ್ರಕ್ಕೆ ಭ್ರಮನಿರಸನವಾಯಿತು. ಬದಲಾವಣೆ ಎಂದರೆ ಬರೀ ಆಳುವವರ ಬದಲಾವಣೆ ಎಂದು ಅವರು ಕಲ್ಪಿಸಿಕೊಂಡಿರಲಿಲ್ಲ. ಖಾಲಿಯಾದ ಕುರ್ಚಿಗಳಲ್ಲಿ ಹೊಸ ಜನ ಕುಳಿತಿದ್ದರು. ಆದರೆ, ರಾಜಕಾರಣದಲ್ಲಾಗಲೀ, ನೀತಿಗಳಲ್ಲಾಗಲೀ, ಯಾವುದೇ ಬದಲಾವಣೆ ಕಾಣಲಿಲ್ಲ'

(ಪುಟ ೩೭೪), ಈ ಮಾತುಗಳು ಮೊದಲ ಬಾರಿಗೆ ಪರ್ಯಾಯಕ್ಕೆ ನಡೆಸಿದ ಹುಡುಕಾಟಕ್ಕೆ ಮಾತ್ರ ಅನ್ವಯಿಸುವುದಿಲ್ಲ. ಎಲ್ಲ ಪರ್ಯಾಯಗಳಿಗೂ ಅನ್ವಯಿಸುತ್ತವೆ ಎಂಬುದಕ್ಕೆ ಕರ್ನಾಟಕದ ವಿಫಲ ಪ್ರಯೋಗಗಳೇ ಸಾಕ್ಷ್ಯ ಒದಗಿಸುತ್ತವೆ.

ಜನರ ಪರ್ಯಾಯದ ಹುಡುಕಾಟದಲ್ಲಿ ಯುವಕನೊಬ್ಬ ನಾಯಕನಾಗಿ ಹೊರಹೊಮ್ಮಿ ಬಂದಿದ್ದರೆ ಆತನಲ್ಲಿ ಒಂದಿಷ್ಟು ಆದರ್ಶಗಳು, ಕನಸುಗಳು

ಇರುತ್ತಿದ್ದುವೇನೋ? ಆದರೆ, ಭಾರತದಲ್ಲಿ ೬೦ ದಾಟಿದ ೭೦ರ ಹೊಸ್ತಿಲಲ್ಲಿ ಇರುವ ವಯೋವೃದ್ಧರೇ ನಾಯಕತ್ವದ ಮುಂಚೂಣಿಯಲ್ಲಿ ಇದ್ದಾರೆ. ಅವರಲ್ಲಿ ಕೋಪ, ಪ್ರತಿಷ್ಠೆ, ಅಹಂಕಾರ ಬಿಟ್ಟು ಮತ್ತೇನೂ ಇರುವುದಿಲ್ಲ. ಹೀಗಾಗಿ ಜನರು ಪರ್ಯಾಯಕ್ಕಾಗಿ ಹುಡುಕಾಟ ಮಾಡಿದಾಗಲೆಲ್ಲ ಅವರಿಗೆ ನಿರಾಶೆಯೇ ಸಿಕ್ಕಿದೆ. ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಯಾವ ಟೀಕೆಯನ್ನೂ ಸಹಿಸುವಂತೆ ಕಾಣುತ್ತಿಲ್ಲ. ಬಹಿರಂಗ ಸಭೆಯಲ್ಲಿ ಯಾರಾದರೂ ಅವರಿಗೆ ಪ್ರಶ್ನೆ ಕೇಳಿದರೆ ಅವರನ್ನು 'ಮಾವೋವಾದಿ' ಎಂದು ಹೆಸರಿಸಿ ನೇರವಾಗಿ ಜೈಲಿಗೆ ಕಳಿಸುವ ಆಕೆ ಸರ್ವಾಧಿಕಾರಿಯಂತೆ ಗೋಚರಿಸುತ್ತಿದ್ದಾರೆ. ಉತ್ತರ ಪ್ರದೇಶದಲ್ಲಿ ಜನರು ಅಖಿಲೇಶ್ ಎಂಬ ಯುವಕನ ಕೈಗೆ ಅಧಿಕಾರ ಕೊಟ್ಟಿದ್ದರೂ ಅವರ ತಂದೆ ವೃದ್ಧ ಮುಲಾಯಂ ಸಿಂಗ್ ಅವರೇ ಅದರ ಸೂತ್ರವನ್ನು ಹಿಡಿದಂತೆ ಭಾಸವಾಗುತ್ತದೆ. ಜನರ ಕನಸುಗಳು, ಭರವಸೆಗಳು ಹೀಗೆ ಮತ್ತೆ ಮತ್ತೆ ಭಗ್ನವಾಗುತ್ತ ಇದ್ದರೆ ಅದು ಹತಾಶೆಗೆ ದಾರಿ ಮಾಡಿಕೊಡುತ್ತದೆಯೇ? ಅಥವಾ ನಿರಂಕುಶ ಪ್ರಭುತ್ವಕ್ಕೇ?..

ಈ ಅಂಕಣವನ್ನು ಹೀಗೆ ಆತಂಕದಿಂದ ಮುಗಿಸುವುದು ನನಗೆ ಇಷ್ಟವಿಲ್ಲ. ನವಕರ್ನಾಟಕ ಪ್ರಕಾಶನ ಪ್ರಕಟ ಮಾಡಿರುವ ೫೯೦ ಪುಟಗಳ ಈ ಬೃಹತ್ ಪುಸ್ತಕವನ್ನು (ಬೆಲೆ ರೂ.೪೫೦) ನನ್ನ ಸಹೋದ್ಯೋಗಿ ಆರ್. ಪೂರ್ಣಿಮಾ ಅನುವಾದ ಮಾಡಿದ್ದಾರೆ. ಈ ಪುಸ್ತಕದ ಸಮಗ್ರ ವಿಮರ್ಶೆಯೂ ನಮ್ಮ ಪತ್ರಿಕೆಯಲ್ಲಿಯೇ ಪ್ರಕಟವಾಗಲಿದೆ. ಕಳೆದ ಏಳು ದಶಕಗಳ ರಾಜಕೀಯ ಇತಿಹಾಸಕ್ಕೆ ಒಂದು ಮುಖಾಮುಖಿಯಂತೆ ಇರುವ ಈ ಆತ್ಮಕಥೆಯನ್ನು ತಮ್ಮ ವಾರಿಗೆಯ ನನ್ನಂಥ ಎಲ್ಲ ಗೆಳೆಯರು ಹೆಮ್ಮೆಯಿಂದ ಬೀಗುವಂತೆ ಅವರು ಅನುವಾದ ಮಾಡಿದ್ದಾರೆ. ಅವರಿಗೆ ಎಲ್ಲ ಗೆಳೆಯರ ಪರವಾಗಿ ಅಭಿನಂದನೆಗಳು.

೧೩೦೯.೨೦೧೨

**ಕರ್ಜಗಿ ಕಥೆ ಎಂದರೆ ಒಂದು ಹಣತೆ, ಒಂದು ದೀಪ!**

ನಿಮ್ಮ ಅಂಕಣಕ್ಕೆ ಏನು ಹೆಸರು ಇಡುತ್ತೀರಿ ಎಂದೆ. ಅವರು ಒಂದು ಕ್ಷಣವೂ ಯೋಚನೆ ಮಾಡಲಿಲ್ಲ. 'ಕರುಣಾಳು ಬಾ ಬೆಳಕೆ' ಎಂದರು. ಸುತ್ತಲೂ ಆವರಿಸಿದ ಕತ್ತಲೆ ಓಡಿಸಲು ಒಂದು ದೀಪ, ಒಂದು ಹಣತೆ ಸಾಕು. ತಾವೇ ಅಂಥ ಒಂದು ಹಣತೆ ಆಗಬೇಕು ಎಂದುಕೊಂಡವರು ಗುರುರಾಜ ಕರ್ಜಗಿ, ಅವರು 'ಪ್ರಜಾವಾಣಿ'ಯಲ್ಲಿ ವಾರದಲ್ಲಿ ಐದು ದಿನ ಕಥೆ ಬರೆಯುತ್ತಿದ್ದಾರೆ. ಬರೆಯುತ್ತಿದ್ದು ನಾಲ್ಕು ವರ್ಷ ಆಗಿಹೋಯಿತು. ಒಂದೊಂದು ಕಥೆಯೂ ಒಂದೊಂದು ಹಣತೆ, ಅಂಥ ಸಾವಿರ ಹಣತೆಗಳನ್ನು ಕರ್ಜಗಿ ಈಗ ಹಚ್ಚಿದ್ದಾರೆ. ಪತ್ರಿಕೋದ್ಯಮದ ಇತಿಹಾಸದಲ್ಲಿ ಇದು ಒಂದು ದಾಖಲೆ. ಹೀಗೆ ಒಬ್ಬ ಲೇಖಕ ಒಂದು ಸಾವಿರ ಕಥೆಗಳನ್ನು ಸ್ವಂತವಾಗಿ ಬರೆದ ಮತ್ತೊಂದು ಉದಾಹರಣೆ ಕನ್ನಡ ಪತ್ರಿಕೋದ್ಯಮದ ಇತಿಹಾಸದಲ್ಲಿಯಂತೂ ಇರಲಾರದು ಎಂದುಕೊಂಡಿದ್ದೇನೆ.

ಕರ್ಜಗಿ ಮೂಲತಃ ಒಬ್ಬ ಶ್ರೇಷ್ಠ ಅಧ್ಯಾಪಕ. ಓದಿದ್ದು ರಸಾಯನಶಾಸ್ತ್ರ. ಕಲಿಸಿದ್ದೂ ಅದನ್ನೇ. ಮೂರು ವರ್ಷದ ಮಗುವಾಗಿದ್ದಾಗಿನಿಂದ ಅಜ್ಜನ ಎದೆಯ ಮೇಲೆ ಮಲಗಿ ಕಥೆ ಕೇಳಿದ ನೆನಪು ಇನ್ನೂ ಎದೆಯೊಳಗೆ ನೆಟ್ಟು ಬೇರೂರಿ

ನಿಂತುಬಿಟ್ಟಿದೆ. ಅವರೊಳಗೆ ಇಂಥ ಒಬ್ಬ ಕಥೆಗಾರ ಇದ್ದಾನೆ ಎಂದು ಅವರಿಗೇ ಗೊತ್ತಿತ್ತೋ ಇಲ್ಲವೋ ತಿಳಿಯದು. 'ಪ್ರಜಾವಾಣಿ'ಯ ಒಂದು ಕರೆ ಅವರ ಒಳಗಿನ ಕಥೆಗಾರನನ್ನು ಹೊರಗೆ ತಂದಿತು. ಸಾವಿರ ದಿನಗಳ ಕಾಲ ಕಥೆ ಹೇಳುವುದು ಸುಲಭವಲ್ಲ. ಕರ್ಜಗಿ ಅವರ ಹಾಗೆ ದಿನಕ್ಕೆ ಒಂದು ಊರಿನಲ್ಲಿ ಇರುವವರಿಗೆ ಅದು ಇನ್ನೂ ಕಷ್ಟ ೨೧ನೇ ವಯಸ್ಸಿಗೆ ನೌಕರಿ ಸೇರಿ ೪೮ನೇ ವಯಸ್ಸಿಗೆ ಸ್ವಯಂ ನಿವೃತ್ತಿ ಪಡೆದು ಇಡೀ ಉತ್ತರ ಕರ್ನಾಟಕದ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಪರಿವರ್ತನೆ ತರುವ ಹೊಣೆಯನ್ನು ತಮ್ಮ ಹೆಗಲ ಮೇಲೆ ಹೊತ್ತುಕೊಂಡಿರುವ ಕರ್ಜಗಿ ಎಂದೂ ತಡಮಾಡಿ ನಮಗೆ ಕಥೆ ಕಳಿಸಲಿಲ್ಲ. ಯಾವಾಗಲೂ, 'ನಿಮ್ಮ ಕಥೆ ನಮ್ಮ ಸಂಗ್ರಹದಲ್ಲಿ ಇಲ್ಲ' ಎಂದು ಅವರಿಗೆ ನಾವು ಹೇಳಲಿಲ್ಲ. ಅವರ ಆಪ್ತ ಸಿಬ್ಬಂದಿ ಶ್ರೀಪ್ರಭಾ ಮುಂಗಡವಾಗಿಯೇ ಕಳಿಸಿದ ಕಥೆ ನನ್ನ ಮೇಲ್ ಬುಟ್ಟಿಯಲ್ಲಿ ಬಂದು ಬೀಳುತ್ತಿತ್ತು. ಕರ್ಜಗಿ ಅಂಥ ಶಿಸ್ತಿನ, ಅಚ್ಚುಕಟ್ಟಿನ ಮನುಷ್ಯ.

ನಮಗೆ ಕಳಿಸುವುದಕ್ಕಾಗಿ ಅವರು ವಿಮಾನದಲ್ಲಿ ಕಥೆ ಬರೆದರು. ವಿಮಾನ ಎರಡು ಗಂಟೆ ತಡ ಎಂದರೆ ಸಂತೋಷ ಪಟ್ಟರು. ರೈಲಿನಲ್ಲಿ ಕಥೆ ಬರೆದರು. ಈಚೆಗೆ ಕಾರಿನ ಮುಂದಿನ ಸೀಟಿನಲ್ಲಿ ಕುಳಿತೂ ಕಥೆ ಬರೆಯುವುದನ್ನು ಕಲಿತರು. ಅವರ ಜತೆ ಮಾತನಾಡುತ್ತ ಕುಳಿತಿದ್ದೆ. ನನಗೆ ಅವರ ಅನುಭವಗಳನ್ನು ಕೇಳಬೇಕಿತ್ತು. ಒಬ್ಬ ಕಥೆಗಾರನಿಗೆ ಓದುಗರು ಹೇಗೆ ಪ್ರತಿಕ್ರಿಯಿಸಿದ್ದಾರೆ ಎಂದು ತಿಳಿಯಬೇಕಿತ್ತು. ಅದೂ ಒಂದು ಕಥೆ! ಪ್ರತಿದಿನ ರಾತ್ರಿ ಹತ್ತು ಗಂಟೆಗೆ ಒಬ್ಬ ಹುಡುಗಿ ಚಾಮರಾಜನಗರ ಜಿಲ್ಲೆಯ ಮೂಗೂರಿನಿಂದ ಕರ್ಜಗಿ ಅವರ ಮನೆಗೆ ಫೋನ್ ಮಾಡುತ್ತಾಳೆ. ಆಕೆ ಅಂಗವಿಕಲೆ, ಅಂದಿನ ಕಥೆ ಕುರಿತು ಕರ್ಜಗಿ ಅವರ ಜತೆ ಚರ್ಚೆ ಮಾಡುತ್ತಾಳೆ. ಹತ್ತು ಗಂಟೆಗೆ ಫೋನ್ ಬಾರಿಸಿತು ಎಂದರೆ ಆಕೆಯದೇ ಎಂದು ಗ್ಯಾರಂಟಿ. ಒಂದು ದಿನ ರಾತ್ರಿ ೧೧ ಗಂಟೆಗೆ ಒಂದು ಫೋನ್ ಬಂತು. ಆಚೆ ಕಡೆ ಗಂಭೀರ ಧ್ವನಿ, ಕೊಂಚ ಗದ್ಗದಿತವಾದಂತೆಯೂ ಇತ್ತು. ಅವರು ಸುಪ್ರೀಂಕೋರ್ಟಿನ ನ್ಯಾಯಮೂರ್ತಿ, ಕನ್ನಡಿಗರು. 'ಕರ್ಜಗಿಯವರೇ ಇಂದಿನ ನಿಮ್ಮ ಕಥೆ ಓದಿದೆ. ಕಲಿಯುವುದು ಎಷ್ಟಿದೆ ಎಂದುಕೊಂಡೆ. ಹತ್ತಿಪ್ಪತ್ತು ವರ್ಷಗಳ ಹಿಂದೆ ಈ ಕಥೆ ಓದಿದ್ದರೆ ನಾನು ಇನ್ನೂ ಒಳ್ಳೆಯ ವಕೀಲನಾಗಬಹುದಿತ್ತು' ಎಂದರು ಅವರು. ಅವರು ವಕೀಲರ ಕೋಟಾದಲ್ಲಿ ನ್ಯಾಯಮೂರ್ತಿಯಾದವರು.

ಲಿಬಿಯಾದಲ್ಲಿ ಅಶಾಂತಿಯುಂಟಾದಾಗ ಕೆಲವರನ್ನು ಒಂದು ಉಗ್ರಾಣದಲ್ಲಿ ಕೂಡಿ ಹಾಕಿ ರಕ್ಷಣೆ ಕೊಟ್ಟಿದ್ದರು. ಅವರಿಗೆ ಬದುಕಿ ಬರುವ ಭರವಸೆಯೇನೂ ಇರಲಿಲ್ಲ. ಅವರೆಲ್ಲ ಸುರಕ್ಷಿತವಾಗಿ ದೆಹಲಿಗೆ ಬಂದು ತಲುಪಿದ ನಂತರ ನೇಗಿ ಎಂಬ ಕನ್ನಡಿಗರೊಬ್ಬರು ಅಲ್ಲಿಂದಲೇ ಕರ್ಜಗಿ ಅವರಿಗೆ ಫೋನ್ ಮಾಡಿದರು. 'ಕರ್ಜಗಿಯವರೇ ಎಂಟು ದಿನಗಳ ಕಾಲ

'ಕರುಣಾಳು ಬಾ ಬೆಳಕೆ' ಪುಸ್ತಕ ಕತ್ತಲೆಯ ಉಗ್ರಾಣದಲ್ಲಿ ನನ್ನ ಮುಂದಿನ ಹಣತೆಯಾಗಿತ್ತು. ನನ್ನಲ್ಲಿ ಬದುಕುವ ಬೆಳಕನ್ನು ಮೂಡಿಸಿತು' ಎಂದರು. 'ತಾಯಿಯ ಋಣ' ಎಂಬ ಅವರ ಕಥೆಗೆ ಸಿಕ್ಕ ಪ್ರತಿಕ್ರಿಯೆಯಂತೂ ಅಭೂತಪೂರ್ವವಾಗಿತ್ತು. ಇಂಗ್ಲೆಂಡಿನಲ್ಲಿ ನೆಲೆಸಿರುವ ಒಬ್ಬ ಯುವಕ ಇನ್ನು ಮುಂದೆ



ನನ್ನ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ' ಎಂದು ಹೇಳಿ ಫೋನ್ ಇಟ್ಟ. ಕಥೆಗೆ ಒಂದು ಕಥೆ. ಅದಕ್ಕೆ ಕೊನೆ ಎಂಬುದು ಇರುವುದಿಲ್ಲ.

"ನಮ್ಮ ಜೀವನವೇ ಒಂದು ಕಥೆ, ನಿತ್ಯ ನೂರು ಕಥೆಗಳು ನಡೆಯುತ್ತವೆ. ಅವುಗಳನ್ನು ನಾವು ಬರೀ ಘಟನೆ ಎಂದು ನೋಡಿದರೆ ಅದು ಘಟನೆಯಾಗಿರುತ್ತದೆ. ಸಾಕ್ಷಿಪ್ರಜ್ಞೆಯಿಂದ ನೋಡಿದರೆ ಅಲ್ಲಿ ಒಂದು ಕಥೆ ಇರುತ್ತದೆ. ನನ್ನ ಅಜ್ಜ ಗೋಪಾಲಾಚಾರ್ ನನಗೆ ಹೀಗೆ ಜೀವನದಲ್ಲಿನ ಕಥೆ ನೋಡಲು ಕಲಿಸಿದ. ವಾಲ್ಮೀಕಿ ಬರೆದ ರಾಮಾಯಣವನ್ನು, ವ್ಯಾಸ ಬರೆದ ಮಹಾಭಾರತವನ್ನು ನೀನು ನಿನ್ನ ದೃಷ್ಟಿಯಲ್ಲಿ ನೋಡು ಎಂದು ನನಗೆ ಹೇಳಿಕೊಟ್ಟ. ಈಗ ನಾನು ಕಥೆ ಬರೆಯುವುದಕ್ಕೆ ಅಜ್ಜನೇ ಪ್ರೇರಣೆ, ಸುತ್ತ ನಡೆಯುವ ಘಟನೆಯಲ್ಲಿ ಇರುವ ಕಥೆಯನ್ನು ಹುಡುಕುತ್ತೇನೆ. ಅದನ್ನೇ ಬರೆಯುತ್ತೇನೆ' ಕರ್ಜಗಿ ಹೇಳುತ್ತಿದ್ದರು. ಅವರ ಭಂಡಾರದಲ್ಲಿ ಇಷ್ಟೊಂದು ವೈವಿಧ್ಯಮಯ ಕಥೆಗಳು ಹೇಗೆ ಇರಬಹುದು ಎಂಬ ಕುತೂಹಲ ನನಗೆ, 'ನಾನು ಅದೃಷ್ಟವಂತ, ಚಿಕ್ಕವನಿದ್ದಾಗ ಧಾರವಾಡದಲ್ಲಿ ಬೇಂದ್ರೆ, ಬಸವರಾಜ ರಾಜಗುರು ಅವರಂಥವರ ಒಡನಾಟ ಸಿಕ್ಕಿತು. ಬೆಂಗಳೂರಿಗೆ ಬಂದ ಮೇಲೆ ರಾಜರತ್ನಂ ಪರಿಚಯವಾದರು. ಅವರನ್ನು ಸದಾ ವಿರೋಧಿಸುತ್ತಿದ್ದ ಬೀಚಿ ಅವರ ಜತೆಗೂ ನನಗೆ ಅಷ್ಟೇ ನಿಕಟ ಒಡನಾಟವಿತ್ತು. ಡಿ.ವಿ.ಜಿ., ಮಾಸ್ತಿ ಅವರ ಪರಿಚಯವೂ ಅಷ್ಟೇ ಗಾಢವಾಗಿತ್ತು. ಇದಕ್ಕಿಂತ ಇನ್ನೇನು ಭಾಗ್ಯ ಬೇಕು?

'ರಾಜರತ್ನಂ ನನಗೆ ಪಾಲಿ ಕಲಿಸಿದರು. ಜಾತಕ ಕಥೆಗಳನ್ನು ಓದಲು ಹೇಳಿದರು. ವಿವಿಧ ಧರ್ಮಗಳನ್ನು ಅಧ್ಯಯನ ಮಾಡಿದೆ. ಮೌಲ್ವಿಯೊಬ್ಬರ ಬಳಿ ಕುಳಿತು ಆರು ತಿಂಗಳು 'ಕುರ್ ಆನ್' ಕಲಿತೆ. ನನಗೆ ಈಗಲೂ ಭಗವದ್ಗೀತೆಯಷ್ಟೇ ಬೈಬಲ್ ಕೂಡ ಇಷ್ಟವಾದ ಗ್ರಂಥ. ನನ್ನ ಹೃದಯ ಶುದ್ಧವಾಗುತ್ತ ಹೋದ ಬಗೆ ಇದು. ನನ್ನ ಕಥೆಗಳಲ್ಲಿ ಮಾರ್ದವತೆ ಇದ್ದರೆ ಅದಕ್ಕೆ ಇವರೆಲ್ಲ ಕಾರಣ. ಇದೆಲ್ಲ ಕಾರಣ, ದೇವರ ಹತ್ತಿರ ಒಂದು ದಿನ ಹೋದಾಗ, ನನ್ನ ಹೃದಯದಲ್ಲಿ ಒಂದಿಷ್ಟೂ ಅಳುಕು ಇಲ್ಲ ಎಂದು ಹೇಳುವಂತೆ ನಾನು ಆಗಬೇಕು ಎಂಬುದು ನನ್ನ ಆಸೆ. ಹೀಗೆ ಎಲ್ಲರಿಗೂ ಅನಿಸಬೇಕು. ನನ್ನ ಎಲ್ಲ ಕಥೆಗಳ ಉದ್ದೇಶ ಇದು' ಕರ್ಜಗಿ ಮುಂದುವರಿಸಿದ್ದರು. ಅವರು ಒಳ್ಳೆಯ ಮಾತುಗಾರ ಕೂಡ.

'ಪತ್ರಿಕೆಗಳಲ್ಲಿ ಶೇಕಡ ತೊಂಬತ್ತು ಭಾಗ ನಕಾರಾತ್ಮಕ ಸುದ್ದಿಯೇ ಇರುತ್ತದೆ. ಜನರು ಬೇಸತ್ತು ಹೋಗಿದ್ದಾರೆ. ಜೀವನದಲ್ಲಿ ಒಂದಿಷ್ಟು ಒಳ್ಳೆಯದೂ ಇರಬೇಕು ಎಂದು ಅವರು ಬಯಸುತ್ತಾರೆ. ಮೂಲತಃ ಮನುಷ್ಯ ಒಳ್ಳೆಯವನು. ಆದರೆ, ಕಾಲದ ಮಹಿಮೆ. ಈಗ ಎಲ್ಲರೂ ಹಣದ ಹಿಂದೆ, ಯಶಸ್ಸಿನ ಹಿಂದೆ ಬಿದ್ದಿದ್ದಾರೆ. ಇಲ್ಲವಾದರೆ 'ಹಣ ಮಾಡುವುದು

ಹೇಗೆ' ಎಂಬ ಪುಸ್ತಕಗಳು ಅಷ್ಟು ದೊಡ್ಡ ಸಂಖ್ಯೆಯಲ್ಲಿ ಮಾರಾಟ ಆಗುತ್ತಿರಲಿಲ್ಲ. ನಾವು ಚಿಕ್ಕವರಿದ್ದಾಗ ಮನೆಯಲ್ಲಿ ಎಷ್ಟು ಮಲಗುವ ಕೋಣೆ ಇವೆ ಎಂದು ಯಾರೂ ಹೇಳುತ್ತಿರಲಿಲ್ಲ, ಕೇಳುತ್ತಿರಲಿಲ್ಲ. ಈಗ ಎಷ್ಟು ಬೆಡ್‌ರೂಂ ಮನೆ ಎಂದು ಕೇಳುತ್ತಾರೆ. ಬೆಡ್ ರೂಂಗಳು ಎಷ್ಟು ಹೆಚ್ಚು ಇರುತ್ತವೆಯೋ ಅಷ್ಟು ಆತ ಶ್ರೀಮಂತ, ನಾವೆಲ್ಲ ಮನೆಯ ಪಡಸಾಲೆಯಲ್ಲಿಯೇ ಮಲಗಿ ಅಲ್ಲವೇ ದೊಡ್ಡವರಾದುದು? ಈಗ ಅವ್ವ ಅಪ್ಪನೇ ಹೊರಗಿನವರು! ಭಾರತ ಇಡೀ ಜಗತ್ತಿಗೆ ಕೊಟ್ಟ ಅತಿದೊಡ್ಡ ಕೊಡುಗೆ ಎಂದರೆ ಕುಟುಂಬ

ವ್ಯವಸ್ಥೆ, ಈಗ ಅದೇ ಕರಗಿ ಹೋಗುತ್ತಿದೆ. ಆದರೆ, ಎಲ್ಲ ಮನುಷ್ಯರಲ್ಲಿ ಎಲ್ಲಿಯೋ ಒಂದು ದೈವತ್ವದ ಅಂಶ ಇದ್ದೇ ಇರುತ್ತದೆ. ಅದಕ್ಕೆ ಈಗ ಮುಸುಕು ಕವಿದಿದೆ. 'ಕರುಣಾಳು ಬಾ ಬೆಳಕೆ' ಕಥೆಗಳು ಆ ಮುಸುಕನ್ನು ಕೊಂಚವಾದರೂ ತೆರೆಯುವಂತೆ ಕಾಣುತ್ತದೆ. ಅದಕ್ಕೇ ಅದು ಅಷ್ಟು ಜನಪ್ರಿಯ ಆಗಿರಬಹುದು. ನಿಮಗೆ ಗೊತ್ತೇ? ಕೇವಲ ಮೂರು ವರ್ಷಗಳಲ್ಲಿ `ಕರುಣಾಳು ಬಾ ಬೆಳಕೆ' ಕಥೆಗಳ ಮೂರು ಸಂಪುಟಗಳ ಒಂದು ಲಕ್ಷ ಪ್ರತಿಗಳು ಮಾರಾಟವಾಗಿವೆ. ಮೊದಲ ಸಂಪುಟ ಹತ್ತು ಮುದ್ರಣ ಕಂಡಿದೆ. ಎರಡು ಮತ್ತು ಮೂರನೇ ಸಂಪುಟ ತಲಾ ಏಳು ಮುದ್ರಣ ಕಂಡಿವೆ. ಕರ್ಜಗಿ ಅವರ ಮಾತಿನಲ್ಲಿ ಉಮೇದು ಎದ್ದು ಕಾಣುತ್ತಿತ್ತು.

ಕರ್ಜಗಿ ಅವರಿಗೆ ದೀಪ ಎಂದರೆ ಇಷ್ಟ, ಜಮಖಂಡಿಯಲ್ಲಿ ಅವರು ಕಲಿಯುತ್ತಿದ್ದಾಗ ಅವರಿಗೆ ರೂಬೆನ್ ಎಂಬ ಒಬ್ಬ ಶಿಕ್ಷಕ ಇದ್ದರು. ಅವರು, 'ಕರುಣಾಳು ಬಾ ಬೆಳಕೆ' ಕವಿತೆಯನ್ನು ಮೂಲದಲ್ಲಿ ಮತ್ತು ಕನ್ನಡದಲ್ಲಿ ಕೂಡಿಯೇ ಪಾಠ ಮಾಡಿದ್ದರು. ಎಳೆಯ ಮನಸ್ಸಿನ ಮೇಲೆ ಆ ಕವಿತೆ ಮೂಡಿಸಿದ ಬೆಳಕು ಇನ್ನೂ ಕರ್ಜಗಿ ಅವರ ಮನಸ್ಸಿನಲ್ಲಿ ನಂದಾದೀಪದಂತೆ ಉರಿಯುತ್ತಿದೆ. 'ದೊಡ್ಡವರ ಬಗ್ಗೆ ಆಸೆ ಬಿಟ್ಟು ಬಿಡೋಣ; ಮಕ್ಕಳ ಬಗ್ಗೆ ಆಸೆ ಇಟ್ಟುಕೊಳ್ಳೋಣ. ಮಕ್ಕಳಲ್ಲಿ ಮುಗ್ಧತೆ ಇದೆ. ಅದರಿಂದ ಕಲಿಯುವುದು ತುಂಬ ಇದೆ. ದೊಡ್ಡವರಲ್ಲಿನ ಅಹಂಕಾರದಿಂದ ಕಲಿಯುವುದು ಏನು ಇರುತ್ತದೆ? ಸಾಹಿತ್ಯಕ್ಕೆ ಇರುವ ಶಕ್ತಿ ಏನು ಗೊತ್ತೇ? ಅದು ದೊಡ್ಡವರಲ್ಲಿನ ಅಹಂಕಾರವನ್ನು ಮುರಿಯುತ್ತದೆ. ಮಕ್ಕಳಲ್ಲಿ ಇರುವಂಥ ಮನಸ್ಸನ್ನು ಅರಳಿಸುತ್ತದೆ. ಬುದ್ಧಿ ಮತ್ತು ಹೃದಯದ ನಡುವಿನ ವ್ಯತ್ಯಾಸವೂ ದೊಡ್ಡದು. ಬುದ್ಧಿಗೆ ಸುಸ್ತಾಗುತ್ತದೆ. ಹೃದಯಕ್ಕೆ ಆಗುವುದಿಲ್ಲ. ಕಥೆಗಳು ಹೃದಯದ ಜತೆಗೆ ಮಾತನಾಡುತ್ತವೆ. ಹಾಗಾಗಿ ಎಷ್ಟು ಕಥೆ ಕೇಳಿದರೂ ಬೇಸರ ಅನಿಸುವುದಿಲ್ಲ.

"ಪ್ರಜಾವಾಣಿ'ಯಲ್ಲಿ ಬಂದ ಎಲ್ಲ ಕಥೆಗಳನ್ನು ಕತ್ತರಿಸಿ ನೋಟ್ ಪುಸ್ತಕಕ್ಕೆ ನೋಟ್‌ಪುಸ್ತಕಕ್ಕೆ ಅಂಟಿಸಿಕೊಂಡು ಬಂದು ನನಗೇ ತೋರಿಸುವಾಗ, ಎಂದಾದರೂ ಒಂದು ದಿನ ಕಥೆ ಪ್ರಕಟವಾಗದೇ ಇದ್ದಾಗ ಏಕೆ ಬಂದಿಲ್ಲ ಎಂದು ಯಾವುದೋ ದೂರದ ಊರಿನಿಂದ ವಿಚಾರಿಸುವಾಗ, ರೈಲಿನಲ್ಲಿ, ಬಸ್ಸಿನಲ್ಲಿ ಭೇಟಿಯಾದವರು ನನ್ನ ಕಥೆಯನ್ನು ತಮ್ಮ ಬದುಕಿನ ಕಥೆ ಎನ್ನುವಂತೆ ನನಗೇ ಹೇಳುವಾಗ ಅದೆಲ್ಲ ಹೃದಯದ ಮಾತು ಅನಿಸುತ್ತದೆ. ಮನುಷ್ಯನಿಗೆ ಇದಕ್ಕಿಂತ ಇನ್ನೇನು ಕೃತಾರ್ಥತೆ ಬೇಕು? ಅಷ್ಟೊಂದು ಓದುಗರ ಜತೆಗೆ ಕೊಂಡಿ ಕಲ್ಪಿಸಿದ 'ಪ್ರಜಾವಾಣಿ'ಗೆ ಹೇಗೆ ಕೃತಜ್ಞತೆ

ಹೇಳಲಿ?' ಕರ್ಜಗಿ ಕೇಳುತ್ತಿದ್ದರು. ಅವರು ಮತ್ತಷ್ಟು, ಇನ್ನಷ್ಟು ಕಥೆ ಹೇಳುವ ಮೂಲಕ ಕೃತಜ್ಞತೆ ಹೇಳಬಹುದೋ ಏನೋ?!

೭-೧೦-೨೦೧೨



## ಕಾಂತಾವರ ಹಚ್ಚಿದ ಕನ್ನಡದ ನಂದಾದೀಪ

ಅದೊಂದು ಚಿಕ್ಕ ಕುಗ್ರಾಮ. ಅಲ್ಲೊಂದು ಆಯುರ್ವೇದ ವೈದ್ಯಾಧಿಕಾರಿ ಹುದ್ದೆಗೆ ಸಂದರ್ಶನ, ೨೯ ಮಂದಿ ಅಭ್ಯರ್ಥಿಗಳು ಬಂದಿದ್ದರು. ತಾಲ್ಲೂಕು ಬೋರ್ಡಿನ ಸದಸ್ಯರು ಸಂದರ್ಶನಕ್ಕೆ ಕುಳಿತಿದ್ದರು. ಅವರಲ್ಲಿ ಒಬ್ಬ ಅಭ್ಯರ್ಥಿಯ ಕಥೆ ಕೇಳಿ ಉಳಿದ ೨೮ ಮಂದಿಯನ್ನು ಬಿಟ್ಟು ಆತನನ್ನೇ ಆಯ್ಕೆ ಮಾಡಿದರು. ಆತನಿಗೆ ಆಗ ೨೧ ವರ್ಷ. ತಂದೆ ತಾಯಿ ಇರಲಿಲ್ಲ. ಸೋದರ ಮಾವನ ಮನೆಯಲ್ಲಿ ಇದ್ದು ಓದಿದ್ದ. ಮಠದಲ್ಲಿ ಉಚಿತ ಊಟ ಸಿಗುತ್ತದೆ ಎಂದು ಉಡುಪಿಯ ಎಸ್.ಡಿ.ಎಂ. (ಈಗಿನ) ಆಯುರ್ವೇದ ಕಾಲೇಜಿನಲ್ಲಿ ಕಲಿತು ಪದವಿ ಗಳಿಸಿದ್ದ. ಅಂದು ಆಯ್ಕೆಯಾಗಿದ್ದು ಆ ಯುವಕನ ಅದೃಷ್ಟ ಎನ್ನಬೇಕೋ ಊರಿನ ಅದೃಷ್ಟ ಎನ್ನಬೇಕೋ ಗೊತ್ತಿಲ್ಲ. ಎರಡೂ ಇರಬಹುದು. ಆಯ್ಕೆಯಾದ ಯುವಕನ ಹೆಸರು ಡಾ.ನಾ. ಮೊಗಸಾಲೆ, ಆತನನ್ನು ಆಯ್ಕೆ ಮಾಡಿದ ಊರಿನ ಹೆಸರು ಕಾಂತಾವರ, ಕರ್ನಾಟಕದ ಮೂಲೆ ಮೂಲೆಯಲ್ಲಿ ಈ ಎರಡೂ ಹೆಸರು ಈಗ ಜನಜನಿತ. ಯೋಗಾಯೋಗ ಎಂದರೆ ಇದೇ ಇರಬೇಕು.

ಮೊಗಸಾಲೆಯವರು ಕಾಂತಾವರದಲ್ಲಿ ಕೆಲಸಕ್ಕೆ ಸೇರಿದ್ದು ೧೯೬೫ರ ನವೆಂಬರ್ ೧ ರಂದು. ರಾಜ್ಯೋತ್ಸವದ ದಿನ. ಅದೂ ಒಂದು ಯೋಗಾಯೋಗ, ಕನ್ನಡಕ್ಕೆ ಇಂಥ ಅನೇಕ ಭಾಗ್ಯಗಳು

ಒದಗಿ ಬಂದಿವೆ. ಮೊನ್ನೆ ಕಾಂತಾವರಕ್ಕೆ ಹೋಗಿ ಬಂದ ಮೇಲೆ ಮೊಗಸಾಲೆ ಆ ಊರಿನಲ್ಲಿ ಕೆಲಸಕ್ಕೆ ಸೇರಿದ್ದು ಕನ್ನಡದ ಅಂಥ ಇನ್ನೊಂದು ಭಾಗ್ಯ ಎಂದು ನನಗೆ ಅನಿಸಿತು. ಮೂಡುಬಿದರೆ ಕಾರ್ಕಳ ನಡುವಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೆಳುವಾಯಿ ಎಂಬ ಪುಟ್ಟಪೇಟೆಯಲ್ಲಿ ಇಳಿದು ದೂರದ ಪಡುಬಿದ್ರೆಗೆ ಬೆಳಣ್ಣು ಮೂಲಕ ಹಾದು ಹೋಗುವ ರಸ್ತೆಯಲ್ಲಿ ಐದು ಕಿಲೋಮೀಟರ್ ಮುಂದೆ ಬಂದರೆ ಮೊದಲು ಬಯಲು, ನಂತರ ಏರು, ಮತ್ತೆ ಕಾಡು. ಹಸಿರು ಹೊದ್ದು ನಿಂತ ಮುಖ್ಯ ರಸ್ತೆಯಿಂದ ತೀರಾ ಆಳವಾದ ಕಂದಕದಲ್ಲಿ ಇದೆ ಎನ್ನುವಂಥ ಕಾಂತಾವರದ ಮುಖ್ಯರಸ್ತೆಯಲ್ಲಿ ಪುರಾತನವಾದ ವಿಶಾಲ ಕಾಂತೇಶ್ವರ ದೇವಸ್ಥಾನ ಇದೆ. ದೇವಸ್ಥಾನದ ರಥಬೀದಿಯಲ್ಲಿಯೇ ಕರ್ನಾಟಕದಾದ್ಯಂತ ಹೆಸರು ಮಾಡಿದ ಕಾಂತಾವರ ಕನ್ನಡ ಸಂಘದ ಭವ್ಯ ಕಟ್ಟಡ ಇದೆ.

ಬಾಗಿಲಲ್ಲೇ ಕಾಯುತ್ತ ನಿಂತಿದ್ದ ಮೊಗಸಾಲೆಯವರು ಒಳಗೆ ಕರೆದುಕೊಂಡು ಹೋಗಿ ಕಳೆದ ಮೂವತ್ತೈದು ವರ್ಷಗಳಲ್ಲಿ ಕನ್ನಡ ಸಂಘ ನಡೆದು ಬಂದ ದಾರಿಯನ್ನು ಹೇಳುತ್ತ ಇದ್ದರೆ ಒಬ್ಬ ಮನುಷ್ಯ ಏನೆಲ್ಲ ಮಾಡಬಹುದು ಎನಿಸಿತು. ಒಂದು ಸಂಘ ಹೇಗೆಲ್ಲ ಬೆಳೆಯಬಹುದು ಎಂದೂ ಅನಿಸಿತು. ಮೊಗಸಾಲೆ ಶುದ್ಧ ಕನ್ನಡ ಜಾಯಮಾನದ ಮನುಷ್ಯ. ಅವರು ಕಾಂತಾವರಕ್ಕೆ ಬಂದಾಗ ಆ ಊರಿನ ಜನಸಂಖ್ಯೆ ಎರಡು ಸಾವಿರ ಇತ್ತು. ಅದರಲ್ಲಿ ಓದುಬಲ್ಲವರ ಸಂಖ್ಯೆ ಇನ್ನೂ ಕಡಿಮೆ. ಮೊಗಸಾಲೆಯವರ ಒಳಗೆ ಒಬ್ಬ ಲೇಖಕ ಇದ್ದ. ಆತನನ್ನು ಉದ್ದೀಪಿಸಲು ಸುತ್ತಲೂ ಅದ್ಭುತವಾದ ಪರಿಸರವಿತ್ತು. ಆದರೆ, ಯಾರ ಒಡನಾಟವೂ ಇರಲಿಲ್ಲ. ಹತ್ತು ವರ್ಷ ಹಾಗೂ ಹೀಗೂ ಕಳೆದರು. ಇನ್ನು ಆಗದು ಎನಿಸಿತು. ಊರಿನಲ್ಲಿ ಒಂದು ಪುಟ್ಟ ಕನ್ನಡ ಸಂಘ ಕಟ್ಟಬೇಕು ಎಂದುಕೊಂಡರು. ಪಕ್ಕದ ಬೇಲಾಡಿ, ಬೆಳುವಾಯಿ, ಬೋಳ, ಕೆದಿಂಜೆ (ನಂದಳಿಕೆ) (ಈ ಊರ ಹೆಸರುಗಳು ಎಷ್ಟು ಚೆಂದ!) ಗ್ರಾಮಗಳ ಶಾಲೆಗಳ ಜತೆಗೆ ಮನೆ ಮನೆಗೂ ಭೇಟಿ ನೀಡಿ ಸಾಹಿತ್ಯ ಚಟುವಟಿಕೆ ಆರಂಭಿಸಿದರು (೧೯೭೬ ಮೇ ೧೬), ಕು.ಶಿ. ಹರಿದಾಸಭಟ್ಟರು ಉಡುಪಿ ಪರಿಸರದಲ್ಲಿ ಮಾಡಿದ ಕೆಲಸ ಮೊಗಸಾಲೆಯವರಿಗೆ ಒಂದು ಮಾದರಿಯಾಗಿ ಇತ್ತು.

ಬೇಲಾಡಿ ಶಾಲೆಯಲ್ಲಿ ಕನ್ನಡ ಸಂಘದ ಉದ್ಘಾಟನೆಗೆ ಇಟ್ಟ ಪುಟ್ಟ ದೀಪ ಬೆಳಗಿದವರು ಡಾ.ಎಸ್.ವಿ. ಪರಮೇಶ್ವರಭಟ್ಟರು. ಅಂದು ಹಚ್ಚಿದ ದೀಪ ಇಂದಿನ ವರೆಗೂ ನಂದಾದೀಪದಂತೆ ಬೆಳಗುತ್ತಲಿದೆ. ಕಾಂತಾವರಕ್ಕೆ ಕನ್ನಡ ನಾಡಿನ ದಶದಿಕ್ಕುಗಳಿಂದ ಲೇಖಕರು, ಕಲಾವಿದರು ಬಂದು ಹೋಗಿದ್ದಾರೆ. ಆರಂಭದಲ್ಲಿ ಎರಡು ತಿಂಗಳಿಗೆ ಒಮ್ಮೆಯಂತೆ

ಸಾಹಿತ್ಯಾರಾಧನೆಯ ಕಾರ್ಯಕ್ರಮಗಳು ನಡೆಯುತ್ತಿದ್ದುವು. ಸಾಹಿತಿ, ಕಲಾವಿದರಿಗೆ ಸನ್ಮಾನ ನಡೆಯುತ್ತಿತ್ತು. 'ಕನ್ನಡವಾಣಿ' ಮತ್ತು 'ಪ್ರಸ್ತುತ' ಎಂಬ ಎರಡು ಅನಿಯತಕಾಲಿಕೆಗಳು ಪ್ರಕಟವಾಗುತ್ತಿದ್ದುವು. ಕನ್ನಡ ಸಂಘಕ್ಕೆ ಆಶ್ರಯ ನೀಡಿದ ಊರುಗಳಲ್ಲಿ ಮುದ್ದಣನ ನಂದಳಿಕೆ (ಕೆದಿಂಜೆ)ಯೂ ಸೇರಿತ್ತು. ಮನೋರಮೆಯ ಸರಸ ಸಲ್ಲಾಪದ ಪಾಠ ಬಿಟ್ಟರೆ ಮುದ್ದಣ ಎಲ್ಲರಿಗೂ ಮರೆತೇ ಹೋಗಿದ್ದ. ಅವನ ಹೆಸರನ್ನು ನೆನಪಿನಲ್ಲಿ ಇಡಲು 'ಮುದ್ದಣ ಕಾವ್ಯ ಪ್ರಶಸ್ತಿ ಸ್ಪರ್ಧೆ'ಯನ್ನು ಸಂಘ ತಾನು ಆರಂಭವಾದ ಒಂದೇ ವರ್ಷದಲ್ಲಿ ಶುರು ಮಾಡಿತು. ಪ್ರಕಟಿತ ಅಥವಾ ಅಪ್ರಕಟಿತ ಕವನಗಳ ಹಸ್ತಪ್ರತಿಗಳನ್ನು ಸ್ಪರ್ಧೆಗೆ ಆಹ್ವಾನಿಸಿ ಅದನ್ನು ಪುಸ್ತಕ ರೂಪದಲ್ಲಿ ತರಲು ಧನಸಹಾಯ ಮಾಡುವುದು ಈ ಸ್ಪರ್ಧೆಯ ಉದ್ದೇಶ. ಈ ಸ್ಪರ್ಧೆಯಲ್ಲಿ ಮೊದಲು ಗೆದ್ದವರು ಬಾಗಲಕೋಟೆ ಜಿಲ್ಲೆಯ ಆನಂದ ಝುಂಜರವಾಡ. ಅಂದಿನಿಂದ ಇಂದಿನವರೆಗೆ ಸ್ಪರ್ಧೆ ನಡೆದುಕೊಂಡು ಬಂದಿದೆ. ಆರಂಭದಲ್ಲಿ ಕೇವಲ ೧೦೦ ರೂಪಾಯಿ ಇದ್ದ ಧನ ಸಹಾಯ ಈಗ ಹತ್ತು ಸಾವಿರ ರೂಪಾಯಿಗೆ ಏರಿದೆ. ಈ ಎಲ್ಲ ಮೊತ್ತವನ್ನು ಹರಿಕೃಷ್ಣ ಪುನರೂರರು ಈಗ ಭರಿಸುತ್ತಿದ್ದಾರೆ. ಪ್ರಶಸ್ತಿ ಆರಂಭವಾದ ಹೊಸದರಲ್ಲಿ ಹಾ.ಮಾ. ನಾಯಕರು, 'ಕಾವ್ಯಲೋಕಕ್ಕೆ ಈ ಪ್ರಶಸ್ತಿ ಒಂದು ಪಾಸ್‌ಪೋರ್ಟ್ ಇದ್ದಂತೆ' ಎಂದು ಬಣ್ಣಿಸಿದ್ದರು. ಈ ಪ್ರಶಸ್ತಿ ಪಡೆದವರ ಪಟ್ಟಿ ನೋಡಿದರೆ ಅವರ ಮಾತು ಎಷ್ಟು ನಿಜವಲ್ಲವೇ ಎಂದು ಅನಿಸುತ್ತದೆ.

ಸಾರ್ವಜನಿಕರ ಹಣವನ್ನು ಹೇಗೆ ನಿಯತ್ತಿನಿಂದ ಬಳಸಬೇಕು ಎಂಬುದಕ್ಕೆ ಕಾಂತಾವರ ಕನ್ನಡ ಸಂಘ ಒಂದು ದೊಡ್ಡ ಮಾದರಿ. ಸಂಘದ ಚೊಚ್ಚಲ ವಾರ್ಷಿಕೋತ್ಸವದ ಸಂಭ್ರಮಕ್ಕಾಗಿ ಹೊರತಂದ ನೆನಪಿನ ಸಂಚಿಕೆ 'ಕನ್ನಡ ವಾಣಿ'ಗಾಗಿ ಸಂಗ್ರಹಿಸಿದ ಜಾಹೀರಾತು ಮೊತ್ತದ ಉಳಿಕೆಯಲ್ಲಿ 'ದಕ್ಷಿಣ ಕನ್ನಡ ಕಾವ್ಯ' ಎಂಬ ಒಂದು ಬೃಹತ್ ಸಂಪುಟವನ್ನು ಸಂಘ ಪ್ರಕಟ ಮಾಡಿತು. ಸಂಘದ ಬೆಳ್ಳಿಹಬ್ಬದ ಸಮಯದಲ್ಲಿ "ದಕ್ಷಿಣ ಕನ್ನಡ ಜಿಲ್ಲೆಯ ಶತಮಾನದ ಕಾವ್ಯ' ಎಂಬ ಇನ್ನೊಂದು ಸಂಕಲನವೂ ಪ್ರಕಟವಾಯಿತು. ಇಂಥ ಒಂದು ದಾಖಲೆಯ ಕೆಲಸ ಯಾವ ಜಿಲ್ಲೆಯಲ್ಲಿಯೂ ನಡೆದಿಲ್ಲ ಎಂಬುದು ಕಾಂತಾವರ ಕನ್ನಡ ಸಂಘದ ಹೆಗ್ಗಳಿಕೆ.

ಸಂಘಕ್ಕೆ ಬೆಳ್ಳಿಹಬ್ಬದ ವಯಸ್ಸಾದರೂ ಅದಕ್ಕೆ ಒಂದು ಸ್ವಂತ ಕಟ್ಟಡವೆಂದು ಇರಲಿಲ್ಲ. ಬೇಲಾಡಿಯ ಶಾಲೆಯೇ ಅದಕ್ಕೆ ವೇದಿಕೆಯಾಗಿತ್ತು. ಊರಿನಲ್ಲಿ ಒಂದು ಕನ್ನಡ ಭವನ ಕಟ್ಟಬೇಕು ಎಂದು ಮೊಗಸಾಲೆಯವರು ಮತ್ತು ಸಂಘದ ಪದಾಧಿಕಾರಿಗಳು ಯೊಚನೆ ಮಾಡುತ್ತಿದ್ದಾಗ ಕಾಂತಾವರ ಪರಿಸರದಲ್ಲಿಯೇ ಹುಟ್ಟಿದ, ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಿದ ಕೆ.ಬಿ. ಜಿನರಾಜ ಹೆಗಡೆಯವರ ಜನ್ಮ ಶತಮಾನೋತ್ಸವ ಬಂತು. ಜಿನರಾಜ ಹೆಗಡೆಯವರು ಎಲ್ಲರಿಗೂ ಮರೆತು ಹೋಗಿದ್ದರು. ಮೊಗಸಾಲೆಯವರು, ಮೂಡುಬಿದರೆ ಶಾಸಕ ಅಭಯಚಂದ್ರ ಜೈನ್ ಅವರನ್ನು ಕರೆದುಕೊಂಡು ಆಗಿನ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಬಳಿಗೆ ಹೋದರು. ಕನ್ನಡ ಸಂಘ ಕಟ್ಟಲು ೨೫ ಲಕ್ಷ ರೂಪಾಯಿ ಕೊಡಿ ಎಂದರು. ಕೃಷ್ಣ ದೂಸರಾ ಮಾತನಾಡದೆ ೧೨ ಲಕ್ಷ ರೂಪಾಯಿ ಮಂಜೂರು ಮಾಡಿದರು. ಅವರು ಯಾವಾಗಲೋ ಜಿನರಾಜ ಹೆಗಡೆ ಮತ್ತು ಕೋಟ ರಾಮಕೃಷ್ಣ ಕಾರಂತ ಅವರ ಕೈ ಕೆಳಗೆ ವಕೀಲಿ ಮಾಡಿದ್ದರು! ಉಳಿದ ೧೩ ಲಕ್ಷ

ರೂಪಾಯಿಗಳನ್ನು ಕನ್ನಡ ಸಂಘ, ದಾನಿಗಳಿಂದ ಸಂಗ್ರಹಿಸಿತು. ಕಾಂತಾವರ ಬಾರಾಡಿ ಬೀಡು ಜಿನರಾಜ ಹೆಗಡೆಯವರ ಮನೆ(ಬೀಡಿನ)ಯ ಹಾಗೆಯೇ ಈಗಿನ ಕನ್ನಡ ಭವನವನ್ನು ನಿರ್ಮಿಸಲಾಗಿದೆ. ಭವನದಲ್ಲಿ ೧೫೦ ಜನ ಕುಳಿತುಕೊಳ್ಳಬಹುದಾದ ಪಂಪ ಮಹಾಕವಿ ಸಭಾಭವನ, ಅತಿಥಿಗಳ ವಿಶ್ರಾಂತಿ ಕೊಠಡಿ, ವಿಶಾಲವಾದ ಎರಡು ಚಾವಡಿ, ನಾಲ್ಕು ಸೂತ್ರದ ಮನೆಯೊಳಗಿರುವಂಥ `ತೊಟ್ಟಿ', ಸಾರ್ವಜನಿಕ ಗ್ರಂಥಾಲಯ, ಕನ್ನಡ ಸಂಘದ ಕಚೇರಿ, ಒಳಗೆ ಪ್ರವೇಶ ಮಾಡಿದರೆ ಎದುರುಗೊಳ್ಳುವ ಜಿನರಾಜ ಹೆಗಡೆಯವರ ಸುಂದರ



ಪ್ರತಿಮೆ ಎಲ್ಲವೂ ಇವೆ. ಬೇರೆ ಯಾವ ಜಿಲ್ಲಾ ಕೇಂದ್ರದಲ್ಲೂ ಕನ್ನಡ ಸಂಘಕ್ಕೆ ಇಂಥ ಒಂದು ಕಟ್ಟಡದ ಭಾಗ್ಯ ಇದ್ದಂತೆ ಕಾಣುವುದಿಲ್ಲ.

ಸಂಘಕ್ಕೆ ಮೂವತ್ತು ವರ್ಷ ತುಂಬಿದಾಗ'ನಾಡಿಗೆ ನಮಸ್ಕಾರ' ಎಂಬ ಮಾಲಿಕೆಯೊಂದನ್ನು ಸಂಘ ಕೈಗೆತ್ತಿಕೊಂಡಿತು. ನಾಡಿಗೆ ನಾಡೇ ಬೆರಗಾಗುವಂತೆ ಸಾಧನೆ ಮಾಡಿದ ಸಾಧಕರನ್ನು ಪರಿಚಯಿಸಲು ಕನಿಷ್ಠ ೫೨ ಪುಟಗಳ ಒಂದು ಪುಟ್ಟ ಪುಸ್ತಕ ಪ್ರಕಟಿಸಲು ಸಂಘ ಮುಂದಾಯಿತು. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ೭೫ ಸಾಧಕರನ್ನು ಪರಿಚಯಿಸುವ ಪುಸ್ತಕಗಳು ಈಗಾಗಲೇ ಪ್ರಕಟಗೊಂಡಿವೆ. ಪುಸ್ತಕಗಳು ಎಷ್ಟು ಅಂದವಾಗಿವೆ, ಉಪಯುಕ್ತವಾಗಿವೆ ಮತ್ತು ಜನಪ್ರಿಯವಾಗಿವೆ ಎಂಬುದನ್ನು ಅವುಗಳನ್ನು ನೋಡಿಯೇ ಮನಗಾಣಬೇಕು. 'ನಾಡಿಗೆ ನಮಸ್ಕಾರ'ದ ಮುಂದುವರಿಕೆಯಾಗಿ 'ನುಡಿ ನಮನ' ಎಂಬ ತಿಂಗಳ ಕಾಯಕ್ರಮವೂ ಸಂಘದ ಆವರಣದಲ್ಲಿ ನಡೆಯುತ್ತಿದೆ. ತಿಂಗಳ ಒಂದು ಭಾನುವಾರ ಒಬ್ಬ ಅತಿಥಿ ಅಲ್ಲಿಗೆ ಬರುತ್ತಾರೆ. 'ನಾಡಿಗೆ ನಮಸ್ಕಾರ' ಸರಣಿಯಲ್ಲಿ ಪ್ರಕಟವಾದ ಒಂದು ಪುಸ್ತಕದ ಪರಿಚಯ, ಆ ಅತಿಥಿಯ ಸನ್ಮಾನ, ಉಪನ್ಯಾಸ, ಜತೆಗೆ ತುಳು ನಾಡಿನ ತಿಂಡಿಯ ಸಮಾರಾಧನೆ. ಈ ಕಾರ್ಯಕ್ರಮಕ್ಕೆ ಹಣದ ಕೊರತೆಯೆಂದು ತಿಳಿದು ಮೂಡುಬಿದರೆಯ ಪಡಿವಾಳ್ ಹೋಟೆಲಿನ ಮಾಲೀಕ ಸಿ.ಕೆ. ಪಡಿವಾಳರು ವರ್ಷಕ್ಕೆ ಒಂದು ಲಕ್ಷ ರೂಪಾಯಿಯಂತೆ ದಾನ ಘೋಷಿಸಿದರು. ತಮ್ಮ ಹೋಟೆಲ್‌ನಿಂದ ತಿಂಡಿಯ ಉಚಿತ ಸರಬರಾಜನ್ನೂ ಮಾಡಿದರು. ಈಗಲೂ ಮಾಡುತ್ತಿದ್ದಾರೆ. ಒಳ್ಳೆಯ ಉದ್ದೇಶದಿಂದ ಒಂದು ಕೆಲಸವನ್ನು ಮಾಡುತ್ತ ಇದ್ದರೆ ಅದಕ್ಕೆ ವಿಘ್ನಗಳೇ ಇರುವುದಿಲ್ಲ. ಅವು ಇದ್ದರೂ ಸುಲಭವಾಗಿ ನಿವಾರಣೆ ಆಗುತ್ತವೆ ಎಂದು ಅನಿಸುತ್ತದೆ. ಸಂಘಕ್ಕೆ ತೀರಾ ಈಚೆಗೆ ಬಂದಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಗಿನ ಆಯುಕ್ತ ಮನು ಬಳಿಗಾರ್, 'ಇಷ್ಟು ಪುಟ್ಟ ಊರಿನಲ್ಲಿ ಇಷ್ಟೆಲ್ಲ ಕೆಲಸ ಮಾಡುತ್ತಿದ್ದೀರೇ, ನಿಮಗೆ ವಾರ್ಷಿಕ ಕೊಡುತ್ತಿದ್ದ ಒಂದು ಲಕ್ಷ ರೂಪಾಯಿ ಅನುದಾನವನ್ನು ಒಂದೂವರೆ ಲಕ್ಷಕ್ಕೆ ಏರಿಸಿದ್ದೇನೆ' ಎಂದು ಅಲ್ಲಿಯೇ ಪ್ರಕಟಿಸಿದರು. ಮತ್ತು ತಾವು ಹುದ್ದೆ ಬಿಟ್ಟುಕೊಡುವುದಕ್ಕಿಂತ ಮುಂಚೆ ಆದೇಶವನ್ನೂ ಹೊರಡಿಸಿದರು. (ಈ ಸಂಗತಿಯನ್ನು ನೀವು ಬರೆಯಬೇಕು ಎಂದು ಮೊಗಸಾಲೆ ನನಗೆ ಒತ್ತಾಯಿಸಿದರು).

ಸ್ವರ್ಣಕಮಲ ಪ್ರಶಸ್ತಿ ಪುರಸ್ಕೃತರಾದ ಸದಾನಂದ ಸುವರ್ಣ ಅವರು ರಾಷ್ಟ್ರಮಟ್ಟದ ಪ್ರಶಸ್ತಿ ಪಡೆಯಲು ಅರ್ಹರಿದ್ದೂ ಅಂಥ ಪ್ರಶಸ್ತಿಯಿಂದ ವಂಚಿತರಾದ ರಂಗಕರ್ಮಿಗಳಿಗೆ 'ಸದಾನಂದ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನ'ದ ಹೆಸರಿನಲ್ಲಿ ವಾರ್ಷಿಕ ಹತ್ತು ಸಾವಿರ ರೂಪಾಯಿಗಳ ಗೌರವ ಸಂಭಾವನೆ ಕೊಡುವ ಹೊಣೆಯನ್ನೂ ಕಾಂತಾವರ ಸಂಘದ ಹೆಗಲಿಗೇ ಹಾಕಿದ್ದಾರೆ. ಹಣವನ್ನು ಸುವರ್ಣ ಕೊಡುತ್ತಾರೆ. ನಾ. ಮೊಗಸಾಲೆಯವರು ಕಾಂತಾವರಕ್ಕೆ ಬಂದು ಕೆಲಸಕ್ಕೆ ಸೇರಿದಾಗ ಅವರಿಗೆ ೯೫ ರೂಪಾಯಿ ಸಂಬಳವಿತ್ತು. ಅವರು ನಿವೃತ್ತರಾಗುವಾಗ ಆ ಸಂಬಳವೇನೂ ಭಾರಿ ಹೆಚ್ಚಿರಲಿಲ್ಲ. ಆದರೆ, ಅವರ ಮೂವರು ಗಂಡು ಮಕ್ಕಳು ಕನ್ನಡ ಮಾಧ್ಯಮ ಶಾಲೆಯಲ್ಲಿ ಓದಿದ್ದರೂ (ಓದಿದ್ದರಿಂದಲೇ) ಬಹಳ ಬುದ್ಧಿವಂತರಾದರು. ಇಬ್ಬರು ವಿದೇಶಕ್ಕೆ ಹೋಗಿ ನೆಲೆಸಿದರು. ತಮ್ಮ ತಂದೆ ಕಾಂತಾವರಕ್ಕೆ ಬಂದುದು ರಾಜ್ಯೋತ್ಸವದ ದಿನ. ಅದರ ನೆನಪಿಗೆ ನಾ. ಮೊಗಸಾಲೆ



ಪ್ರತಿಷ್ಠಾನದ ವತಿಯಿಂದ ಇಬ್ಬರಿಗೆ ತಲಾ ಐದು ಸಾವಿರ ರೂಪಾಯಿಗಳ 'ಕಾಂತಾವರ ಪುರಸ್ಕಾರ' ಕೊಡಲು ಹಣ ಇಟ್ಟರು. ಸಾಹಿತ್ಯ ಮತ್ತು ಲಲಿತ ಕಲಾ ಕ್ಷೇತ್ರದ ತಲಾ ಒಬ್ಬರಿಗೆ ಈ ಪ್ರಶಸ್ತಿ. ಕಾಂತಾವರ ಕನ್ನಡ ಸಂಘ ಮತ್ತು ಮೊಗಸಾಲೆ ಮಾಡಿದ ಕೆಲಸಗಳ ಪಟ್ಟಿಯನ್ನು ಕೊಡುತ್ತ ಹೋಗುವುದು ನನಗೆ ಇಷ್ಟವಿಲ್ಲ. ಪಾಟೀಲ ಪುಟ್ಟಪ್ಪನವರು ಈ ಸಂಘಕ್ಕೆ ಭೇಟಿ ನೀಡಿದ ಸಮಯದಲ್ಲಿ, ಕನ್ನಡ ಕಟ್ಟುವುದು ಹೇಗೆ ಎಂಬುದಕ್ಕೆ ಈ ಸಂಘ ಒಂದು ಮಾದರಿ' ಎಂದಿದ್ದರು. ಚೆನ್ನವೀರ ಕಣವಿಯವರಿಗೆ ಅದು 'ಅಯಸ್ಕಾಂತಾವರ'ವಾಗಿ ಕಂಡಿತ್ತು. ಕಾಂತಾವರಕ್ಕೆ ಹೋದರೆ ಯಾರಿಗೆ ನಮಸ್ಕಾರ ಮಾಡಬೇಕು ಎಂದು ಗೊತ್ತಾಗುವುದಿಲ್ಲ. ಬಹುಶಃ ಮೊಗಸಾಲೆಯವರನ್ನು ಆಯುರ್ವೇದ ವೈದ್ಯ ಹುದ್ದೆಗೆ ನೇಮಕ ಮಾಡಿದವರಿಗೆ ಈ ನಮಸ್ಕಾರ ಸಲ್ಲಬೇಕು ಅನಿಸುತ್ತದೆ.

೧೪.೧೦.೨೦೦೨

**ಕೃಪಣತೆಯಲ್ಲಿ ಕನ್ನಡಿಗರನ್ನು**

**ಮೀರಿಸುವವರು ಯಾರಿದ್ದಾರೆ?**

ಅದು ಒಂದು ಕನ್ನಡದ ನಡುಗಡ್ಡೆ, ಕರ್ನಾಟಕದ ಜತೆಗೆ ಸಂಪರ್ಕ ಕಳೆದುಕೊಂಡು ಐದು ದಶಕಗಳೇ ಕಳೆದು ಹೋಗಿವೆ. ಆದರೂ ಅಲ್ಲಿನ ಜನ ಕನ್ನಡದ ಜಪ ಮಾಡುತ್ತಿದ್ದಾರೆ. ಮನೆಯಲ್ಲಿ ಎಲ್ಲರೂ ಕನ್ನಡವನ್ನೇ ಮಾತನಾಡುತ್ತಾರೆ. ಕನ್ನಡದ ಶಾಲೆಗಳಿಗೆ ಮಕ್ಕಳನ್ನು ಕಳುಹಿಸುತ್ತಾರೆ. ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ, ಸಾಂಸ್ಕೃತಿಕ ರಾಜಧಾನಿಗಳು ಎನ್ನುವಂಥ ಮೈಸೂರು, ಮೈಸೂರು, ಧಾರವಾಡಗಳಲ್ಲಿ ಯಾರಾದರೂ ತಮ್ಮ ಮಕ್ಕಳನ್ನು ಕನ್ನಡ ಮಾಧ್ಯಮ ಶಾಲೆಗಳಿಗೆ ಕಳುಹಿಸಲು ಇಷ್ಟು ಹಾತೊರೆಯುತ್ತಾರೋ ಇಲ್ಲವೋ ಗೊತ್ತಿಲ್ಲ. ಆದರೆ, ಆಂಧ್ರಪ್ರದೇಶದ ಕರ್ನೂಲು, ಮೆಹಬೂಬ್‌ನಗರ, ಮೇಡಕ್, ಅನಂತಪುರ, ಕರೀಂನಗರ ಜಿಲ್ಲೆಗಳ ಅನೇಕ ಗ್ರಾಮಗಳಲ್ಲಿ ಇನ್ನೂ ಕನ್ನಡ ಮಾಧ್ಯಮ ಶಾಲೆಗಳು ಇವೆ. ಕರ್ನೂಲು ಜಿಲ್ಲೆಯೊಂದರಲ್ಲಿಯೇ ಹನ್ನೊಂದು ಸಾವಿರ ಮಕ್ಕಳು ಕನ್ನಡ ಶಾಲೆಗಳಲ್ಲಿ ಓದುತ್ತಿದ್ದಾರೆ. ಈ ಜಿಲ್ಲೆಗಳ ಮಕ್ಕಳು ಕರ್ನಾಟಕದ ಘನ ಸರ್ಕಾರದಿಂದ ಬೇರೆ ಏನನ್ನೂ ಕೇಳುತ್ತಿಲ್ಲ. ಕನ್ನಡ ಭಾಷೆಯ ಪಠ್ಯಪುಸ್ತಕ ಪೂರೈಸಿರಿ ಎಂದು ಮಾತ್ರ ಕೇಳುತ್ತಿದ್ದಾರೆ. ಆದರೆ, ಸರ್ಕಾರಕ್ಕೆ ಕಣ್ಣು, ಕಿವಿ ಇರುವುದಿಲ್ಲ. ಹೃದಯವಂತೂ ಎಂದೋ ನಾಪತ್ತೆಯಾಗಿ ಬಿಟ್ಟಿರುತ್ತದೆ. ಕಳೆದ ಎರಡು ದಶಕಗಳಿಗೂ ಹೆಚ್ಚು

ಅವಧಿಯಿಂದ ಈ ಮಕ್ಕಳ ಮೊರೆ ಯಾರ ಹೃದಯಕ್ಕೂ ತಾಗಿಲ್ಲ. ಕಿವಿಗೆ ಬಿದ್ದರೂ ಅದು ಕೇಳಿಸಿಕೊಂಡಿಲ್ಲ. ಕಣ್ಣಿಗೆ ಕಂಡರೂ ಕಾಣದಂತೆ ನಟಿಸಿದೆ.

ರಾಜ್ಯಗಳ ಪುನರ್‌ವಿಗಂಡಣೆ ಆಗುವಾಗ ಆದವಾನಿ, ರಾಯದುರ್ಗ, ಆಲೂರು ಮುಂತಾದ ತಾಲ್ಲೂಕುಗಳು ಆಂಧ್ರಕ್ಕೆ ಸೇರಿಕೊಂಡುವು. ಬಳ್ಳಾರಿಯನ್ನು ಕರ್ನಾಟಕದಲ್ಲಿ ಉಳಿಸಿಕೊಳ್ಳಬೇಕಾಗಿದ್ದ ಹಿತಾಸಕ್ತಿಗಳು ಈ ಅಚ್ಚಗನ್ನಡ ಪ್ರದೇಶಗಳನ್ನು ಆಂಧ್ರಕ್ಕೆ ಧಾರೆ ಎರೆದುವು. ದೈಹಿಕವಾಗಿ ಮಾತ್ರ ಆಂಧ್ರಕ್ಕೆ ಸೇರ್ಪಡೆಯಾದ ಈ ಹಳ್ಳಿಗಳ ಜನರು ಮಾನಸಿಕವಾಗಿ ಕರ್ನಾಟಕದಲ್ಲಿಯೇ ಇದ್ದಾರೆ. ಆ ಊರುಗಳ ಹೆಸರುಗಳೇ ಹಾಗಿವೆ; ಎಮ್ಮಿಗನೂರು, ತೋವಿ, ಕೋಗಿಲತೋಟ, ಹೊಳಲಗುಂದ, ಸಂತಕುಲ್ಲೂರು, ಸಮ್ಮತಗೇರಿ, ನಾಗನಾಥನಹಳ್ಳಿ... ಇಲ್ಲಿ ಕನ್ನಡದ ಮನಸ್ಸಲ್ಲದೇ ಬೇರೆ ಮನಸ್ಸು ಇರಲು ಸಾಧ್ಯವಿಲ್ಲ. ಇಂಥ ಹಳ್ಳಿಗಳಲ್ಲಿ ಒಂದರಿಂದ ಹತ್ತನೇ ತರಗತಿ ವರೆಗೆ ಓದುವ ಸುಮಾರು ಇಪ್ಪತ್ತು ಸಾವಿರ ಮಕ್ಕಳು ಇದ್ದಾರೆ. ಅವರಿಗೆ ಬೇರೆ ಮಾನವಿಕ ವಿಷಯಗಳ ಪಠ್ಯಪುಸ್ತಕಗಳನ್ನು ಆಂಧ್ರ ಸರ್ಕಾರವೇ ತನ್ನ ಪಠ್ಯ ಕ್ರಮಕ್ಕೆ ತಕ್ಕಂತೆ ತಯಾರಿಸಿ, ಕನ್ನಡಕ್ಕೆ ಅನುವಾದಿಸಿ ಪೂರೈಸುತ್ತಿದೆ. ಆದರೆ, ಕನ್ನಡ ಪಠ್ಯ ಕನ್ನಡ ಭಾಷೆ, ಸಂಸ್ಕೃತಿ, ಸಾಹಿತ್ಯಕ್ಕೆ ವಿಶಿಷ್ಟವಾದ ರೀತಿಯಲ್ಲಿಯೇ ಇರಲಿ ಎಂದು ಕರ್ನಾಟಕದಿಂದಲೇ ತರಿಸಿಕೊಳ್ಳಲು ಸಮ್ಮತಿಸಿದೆ.

ಕನ್ನಡದ ಈ ಪಠ್ಯಪುಸ್ತಕಗಳು ಮಾರಾಟಕ್ಕೆ ಲಭ್ಯ ಇರುವವರೆಗೆ ಆಂಧ್ರದ ಕನ್ನಡ ಮಕ್ಕಳಿಗೆ ಯಾವುದೇ ತೊಂದರೆ ಇರಲಿಲ್ಲ. ಅವರು ಬಳ್ಳಾರಿಗೆ ಬಂದು ಪುಸ್ತಕಗಳನ್ನು ಖರೀದಿಸಿ ಓದುತ್ತಿದ್ದರು. ಪರೀಕ್ಷೆ ಬರೆಯುತ್ತಿದ್ದರು. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಕರ್ನಾಟಕ ಸರ್ಕಾರ ತನ್ನ ಶಾಲಾ ಮಕ್ಕಳಿಗೆ ಉಚಿತ ಪಠ್ಯಪುಸ್ತಕ ಕೊಡುವ ತೀರ್ಮಾನ ಮಾಡಿತು. ಅಲ್ಲಿಗೆ ಆಂಧ್ರಪ್ರದೇಶದ ಕನ್ನಡದ ಮಕ್ಕಳ ಸಂಕಟ ಶುರುವಾಯಿತು. ಅವರಿಗೆ ಅದುವರೆಗೆ ಮಾರುಕಟ್ಟೆಯಲ್ಲಿ ಸುಲಭವಾಗಿ ಸಿಗುತ್ತಿದ್ದ ಪಠ್ಯಪುಸ್ತಕ ಸಿಗದಂತೆ ಆಯಿತು. ಕರ್ನಾಟಕ ಸರ್ಕಾರ ಆ ಇಪ್ಪತ್ತು ಸಾವಿರ ಮಕ್ಕಳಿಗೆ ಉಚಿತವಾಗಿ ಪಠ್ಯಪುಸ್ತಕ ಪೂರೈಸಬಹುದಿತ್ತು. ಆದರೆ, ಯಾರು ಕೊಕ್ಕೆ ಹಾಕಿದರೋ ಏನೋ ಇದುವರೆಗೆ ಅಲ್ಲಿನ ಮಕ್ಕಳಿಗೆ ಕನ್ನಡ ಪುಸ್ತಕ ಪೂರೈಕೆ ಆಗುತ್ತಿಲ್ಲ. ಒಂದು ಸರ್ಕಾರ ತನ್ನ ಅಧಿಕೃತ ಭಾಷೆಯ ಬಗೆಗೇ, ಅದನ್ನು ಮಾತನಾಡುವ ಜನರ ಬಗೆಗೇ ಎಷ್ಟು ಕ್ರೂರ ಆಗಬಹುದು ಎಂಬುದಕ್ಕೆ ಇದಕ್ಕಿಂತ ಇನ್ನೊಂದು ಕೆಟ್ಟ ನಿದರ್ಶನ ಇರಲಾರದು.

ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಆಲೂರು ತಾಲ್ಲೂಕಿನ ಹೊಳಲಗುಂದ ಗ್ರಾಮದ ಶ್ರೀಧರಗಡ್ಡೆ ಸಿದ್ದಬಸಪ್ಪ ಅವರಂಥ ಕನ್ನಡ ಪ್ರೇಮಿಗಳು ಕಳೆದ ಇಪ್ಪತ್ತು ವರ್ಷಗಳಿಂದ ಬಳ್ಳಾರಿಗೆ ಬಂದ ಎಲ್ಲ ಶಿಕ್ಷಣ ಸಚಿವರಿಗೆ ಒಂದು ಮನವಿ ಕೊಟ್ಟಿದ್ದಾರೆ. ಅಲ್ಲಿನ ಪತ್ರಕರ್ತರಿಗೆ ಪ್ರತಿ ನವೆಂಬರ್ ಒಂದರಂದು ಒಂದು ಸುದೀರ್ಘ ಪತ್ರ ಬರೆದಿದ್ದಾರೆ. ಅದರಲ್ಲಿ ಅವರ ಕೋರಿಕೆ ಒಂದೇ: ನಮ್ಮ ಮಕ್ಕಳಿಗೆ ಕನ್ನಡ ಭಾಷೆಯ ಪಠ್ಯಪುಸ್ತಕ ಪೂರೈಸಿ' ಎಂದು. "ನಿಮಗೆ ಉಚಿತವಾಗಿ ಪೂರೈಸಲು ಸಾಧ್ಯವಿಲ್ಲ ಎನ್ನುವುದಾದರೆ ಮಾರಾಟಕ್ಕೆ ಇಡಿ, ನಾವು ಖರೀದಿ ಮಾಡುತ್ತೇವೆ' ಎಂದೂ ಅವರು ಮನವಿ ಮಾಡಿಕೊಂಡಿದ್ದಾರೆ. ಕರ್ನಾಟಕ ಸರ್ಕಾರ ಇದುವರೆಗೆ ಉತ್ತರ ಕೊಟ್ಟಿಲ್ಲ.

ಸಿದ್ದಬಸಪ್ಪ ಅವರದು 'ಹಾಗೇ ಸುಮ್ಮನೆ' ಅನ್ನುವಂಥ ಕನ್ನಡ ಅಭಿಮಾನವೇನೂ ಅಲ್ಲ. 'ಹೊಟ್ಟೆ ಪಾಡಿನ' ಅಭಿಮಾನವಂತೂ ಅಲ್ಲವೇ ಅಲ್ಲ. ಅವರು ಬಳ್ಳಾರಿಯ ಒಂದು ಅಂಗಡಿಯಲ್ಲಿ ದುಡಿಯುತ್ತಾರೆ. ವಯಸ್ಸು ೫೭ ದಾಟಿದೆ. ದಿನಕ್ಕೆ ೭೦೦ ರೂಪಾಯಿ ಸಂಬಳ. ಅದರಲ್ಲಿ ೪೦೦ ರೂಪಾಯಿಗಳನ್ನು ಕುಟುಂಬ ಸಾಗಿಸಲು ಹೆಂಡತಿಗೆ ಕೊಡುತ್ತಾರೆ. ಉಳಿದ ೩೦೦ ರೂಪಾಯಿಗಳನ್ನು ಕೂಡಿಸಿ ತಿಂಗಳಾಂತ್ಯ ಎಂಟು ಒಂಬತ್ತು ಸಾವಿರ ರೂಪಾಯಿ ಮಾಡಿ ಕನ್ನಡ ಶಾಲೆಯ ಮಕ್ಕಳಿಗೆ ಭೂಪಟ, ಪಾಟಿ ಚೀಲ, ಕಂಪಾಸು, ನೋಟು ಪುಸ್ತಕ ಎಂದೆಲ್ಲ ಕೊಡುತ್ತಾರೆ. ಮೊದಲು ಕರ್ನಾಟಕದ ಶಾಲೆಗಳ ಮಕ್ಕಳಿಗೇ ಕೊಡುತ್ತಿದ್ದರು. ಕರ್ನೂಲು ಜಿಲ್ಲೆಯ ಕನ್ನಡಿಗರು 'ನಿನಗೇನು ಬುದ್ಧಿ ಇದೆಯೇ!' ಎಂದ ಮೇಲೆ ಆಂಧ್ರದ ಶಾಲೆಗಳಿಗೆ ಕೊಡುತ್ತಿದ್ದಾರೆ. ಈ ಕೈಂಕರ್ಯ ಕಳೆದ ಇಪ್ಪತ್ತು ಇಪ್ಪತ್ತೈದು ವರ್ಷಗಳಿಂದ ನಡೆದುಕೊಂಡು ಬಂದಿದೆ. ಇದನ್ನೆಲ್ಲ ಅವರು ಯಾವತ್ತೂ ಪ್ರಚಾರಕ್ಕಾಗಿ ಮಾಡಲಿಲ್ಲ. ಚಿತ್ರ ಸಮೇತ ಸುದ್ದಿ ತಂದು ಹಾಕಿ ಎಂದು ಯಾವ ವರದಿಗಾರರಿಗೂ ಎಂದೂ ತಲೆತಿನ್ನಲಿಲ್ಲ! ಶ್ರೀಧರಗಡ್ಡೆ ಸಿದ್ದಬಸಪ್ಪ ರಾಜ್ಯೋತ್ಸವ ಪ್ರಶಸ್ತಿಗಾಗಿ ಖಂಡಿತ ಈ ಕೆಲಸ ಮಾಡುತ್ತಿಲ್ಲ. ಪ್ರಶಸ್ತಿಗಾಗಿ ಸರ್ಕಾರಕ್ಕೆ ಬಂದ ಮೂರು ಸಾವಿರ ಅರ್ಜಿಗಳಲ್ಲಿ ಅವರ ಹೆಸರು ಇಲ್ಲ!

ಕರ್ನಾಟಕ ಸರ್ಕಾರ ಕನ್ನಡ ಭಾಷೆಯ ಪಠ್ಯಪುಸ್ತಕ ಕೊಡುತ್ತಿಲ್ಲ ಎಂದು ಆಂಧ್ರದ ಕನ್ನಡ ಮಕ್ಕಳು, ಪಾಲಕರು ಸುಮ್ಮನೆ ಕುಳಿತಿಲ್ಲ. ಕರ್ನಾಟಕದ ಶಾಲೆಗಳಿಗೆ ಹೋಗಿ ಒಂದೋ ಎರಡೋ ಪುಸ್ತಕಗಳನ್ನು ಪಡೆದುಕೊಂಡು ತಮ್ಮ ಮಕ್ಕಳಿಗೆ ಕೊಟ್ಟಿದ್ದಾರೆ. ಅದನ್ನೇ ಮಕ್ಕಳು ನಕಲು ಮಾಡಿಕೊಂಡೋ, ನೋಟು ಪುಸ್ತಕದಲ್ಲಿ ಬರೆದುಕೊಂಡೋ ಕನ್ನಡದ ಅ,ಆ,ಇ,ಈ ಓದುತ್ತಿವೆ. ಕರ್ನಾಟಕದಲ್ಲಿ ಹಂಚಿಕೆಯಾಗದೆ ಉಳಿದ ಕೆಲವು ಪುಸ್ತಕಗಳನ್ನು ಅಧಿಕಾರಿಗಳೂ ಕೊಟ್ಟಿದ್ದಾರೆ. ಆದರೆ, ಇದೆಲ್ಲ ಅನಧಿಕೃತ ಸಂಬಂಧ.

ಕನ್ನಡದ ಪ್ರಖ್ಯಾತ ಲೇಖಕ ಕುಂ. ವೀರಭದ್ರಪ್ಪ ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಒಂದವಾಗಿಲಿ ಮತ್ತು ಗೂಳ್ಯಂ ಊರುಗಳಲ್ಲಿ ಕನ್ನಡ ಮೇಷ್ಟರಾಗಿ ದುಡಿದು ನಿವೃತ್ತರಾದವರು. ಅವರಿಗೆ ಅಲ್ಲಿನ ಕನ್ನಡ ಮಕ್ಕಳ ಸ್ಥಿತಿಗತಿ ಕುರಿತು ಕೇಳಿದೆ. ಎಚ್.ಜಿ. ಗೋವಿಂದೇಗೌಡರು ಶಿಕ್ಷಣ ಸಚಿವರಾಗಿದ್ದ ಕಾಲದಿಂದ ತಾವು ವಿಧಾನಸೌಧಕ್ಕೆ ಚಪ್ಪಲಿ ಸವೆಸಿದ ದೀರ್ಘ ಕಥೆಯನ್ನು ಕುಂ.ವೀ ಹೇಳತೊಡಗಿದರು: 'ಆಂಧ್ರಪ್ರದೇಶದಲ್ಲಿನ ಪಾಲಕರಿಗೆ ಕನ್ನಡ ಪ್ರೇಮ ಎಷ್ಟು ತೀವ್ರವಾಗಿದೆ ಎಂದರೆ ಅಲ್ಲಿನ ಮಕ್ಕಳನ್ನು ತೆಲುಗು ತರಗತಿಗೆ ಸೇರಿಸಿದರೆ ಪಾಲಕರು ಶಾಲೆಗೆ ಬಂದು ಶಿಕ್ಷಕರ ಜತೆಗೆ

ಜಗಳ ತೆಗೆಯುತ್ತಾರೆ. ಕಷ್ಟವೋ ಸುಖವೋ ನಮ್ಮ ಮಕ್ಕಳು ಕನ್ನಡದಲ್ಲಿಯೇ ಓದಲಿ ಎನ್ನುತ್ತಾರೆ. ಸರ್ಕಾರ ಅವರಿಗೆ ಏನೂ ಮಾಡಬೇಕಿಲ್ಲ. ಕನ್ನಡ ಪಠ್ಯಪುಸ್ತಕಗಳನ್ನು ಪೂರೈಸಿದರೆ ಸಾಕು. ಮಾರಾಟ ಮಾಡಿದರೂ ಪಾಲಕರು ಅವನ್ನು ಕೊಂಡುಕೊಳ್ಳುತ್ತಾರೆ. ಆದರೆ, ಎಂ.ಪಿ. ಪ್ರಕಾಶ್ ಅವರಂಥ ಬಳ್ಳಾರಿ ಜಿಲ್ಲೆಯವರೇ ಆಗಿದ್ದ ಸೂಕ್ಷ್ಮ ಮನಸ್ಸಿನ ರಾಜಕಾರಣಿಯಿಂದಲೂ ಈ ಸಮಸ್ಯೆಯನ್ನು ಬಗೆಹರಿಸಲು ಆಗಲಿಲ್ಲ. ಇನ್ನೇನು ಮಾಡುವುದು? ಕನ್ನಡ ಅಭಿವೃದ್ಧಿ ಪ್ರಾಧಿಕಾರಗಳು, ಯಾರೇ ಅಧ್ಯಕ್ಷರಾಗಿರಲಿ, ಗಂಜಿ ಕೇಂದ್ರಗಳ ಹಾಗೆ ಕೆಲಸ ಮಾಡುತ್ತಿವೆ. ಸರ್ಕಾರಕ್ಕೆ ಒಂದು ವರದಿ ಕೊಡುತ್ತವೆ. ಅವುಗಳ ಕೆಲಸ ಅಲ್ಲಿಗೆ ಮುಗಿಯಿತು. ಗಡಿನಾಡಿನ

ಮಕ್ಕಳಿಗೆ ಕನ್ನಡ ಪಠ್ಯಪುಸ್ತಕ ಪೂರೈಸದ ಸರ್ಕಾರದ ನಿಲುವು ಪ್ರತಿಭಟಿಸಿ ಪ್ರಾಧಿಕಾರದ ಯಾವ ಒಬ್ಬ ಸದಸ್ಯರಾದರೂ ರಾಜೀನಾಮೆ ಕೊಟ್ಟುದು ನಿಮಗೆ ನೆನಪಿದೆಯೇ? ಸರ್ಕಾರ ಬರೀ ಪಠ್ಯಪುಸ್ತಕ ಏಕೆ? ಪ್ರೌಢಶಾಲೆಯ ಮಕ್ಕಳಿಗೆ ಕರ್ನಾಟಕದ ಎಲ್ಲ ಮಕ್ಕಳಿಗೆ ಕೊಡುವ ಹಾಗೆ ಒಂದು ಸೈಕಲ್‌ನ್ನೂ ಕೊಡಬಹುದು ಅಲ್ಲವೇ? ಇವರೂ ಕನ್ನಡದ ಮಕ್ಕಳೇ ಅಲ್ಲವೇ? ಯಾವ ರೀತಿಯಲ್ಲಿ ಇವರಲ್ಲಿ ಕನ್ನಡತನದ ಕೊರತೆ ಇದೆ??

ಗಡಿನಾಡಿನ ಆಂಧ್ರದ ಈ ಮಕ್ಕಳು ಉನ್ನತ ಅಭ್ಯಾಸಕ್ಕೆ ಕರ್ನಾಟಕಕ್ಕೆ ಬಂದರೆ ಇನ್ನಾವುದೇ ಹೊರ ರಾಜ್ಯದ, ಹೊರ ದೇಶದ ಕನ್ನಡೇತರ ವಿದ್ಯಾರ್ಥಿಯನ್ನು ಪರಿಗಣಿಸಿದ ಹಾಗೆಯೇ ಇವರನ್ನೂ ಇಲ್ಲಿನ ಶಿಕ್ಷಣ ಸಂಸ್ಥೆಗಳು ಪರಿಗಣಿಸುತ್ತವೆ. ಆದರೆ, ಕನ್ನಡದ ಬಹುತೇಕ ಎಲ್ಲ ಮಕ್ಕಳ ಹಾಗೆಯೇ ಇವರೂ ಸ್ಥಿತಿವಂತರೇನೂ ಅಲ್ಲ. ದುಬಾರಿ ಶಿಕ್ಷಣ ಶುಲ್ಕ ಕೊಡಲು ಇವರಿಗೆ ಆಗುವುದಿಲ್ಲ. ನಿವೃತ್ತರಾಗಿ ಕರ್ನಾಟಕದ ಕೊಟ್ಟೂರಿನಲ್ಲಿ ಬಂದು ನೆಲೆಸಿರುವ ಕುಂ.ವೀ. ಅವರಿಗೆ ಫೋನ್ ಮಾಡುತ್ತಾರೆ. 'ಅನ್ಯಾಯ ಸರಿಪಡಿಸಿ' ಎಂದು ಕೋರುತ್ತಾರೆ. 'ನನಗೂ ವಯಸ್ಸಾಯಿತು. ಇನ್ನೂ ಎಷ್ಟು ದಿನ ಮುಂಚಿನ ಹಾಗೆ ಜಗಳ ಮಾಡುತ್ತ ಇರಲಿ.' ಕುಂ.ವೀ. ಕೇಳಿದರು.

ಕನ್ನಡಿಗರ ಭಾಷಾ ಅಭಿಮಾನದ ಮುಂದೆ ಯಾವಾಗಲೂ ಒಂದು ಪ್ರಶ್ನಾರ್ಥಕ ಚಿಹ್ನೆ ಇದ್ದೇ ಇದೆ. ಮುಂಬೈನಲ್ಲಿನ ತಮಿಳು ಶಾಲೆಗಳನ್ನು ಅಲ್ಲಿನ ಸರ್ಕಾರ ಮುಚ್ಚಲು ಹೊರಟಾಗ ತಮಿಳುನಾಡಿನ ಆಗಿನ ಮುಖ್ಯಮಂತ್ರಿ ಎಂ. ಕರುಣಾನಿಧಿಯವರು ಆ ಶಾಲೆಗಳನ್ನು ಉಳಿಸಿಕೊಳ್ಳಲು ತಗಲುವ ಎಲ್ಲ ವೆಚ್ಚವನ್ನು ತಮ್ಮ ಸರ್ಕಾರ ಭರಿಸುತ್ತದೆ ಎಂದು ಹೇಳಿ ಆ ಶಾಲೆಗಳನ್ನು ಉಳಿಸಿಕೊಂಡರು. ಒಡಿಶಾ ರಾಜ್ಯದಲ್ಲಿನ ತೆಲುಗು ಶಾಲೆಗಳಿಗೆ ಇದೇ ಗತಿ ಬಂದಾಗ ಆಂಧ್ರಪ್ರದೇಶ ಸರ್ಕಾರ ಇದೇ ಮಾತು ಹೇಳಿ ಅಲ್ಲಿನ ತೆಲುಗು ಶಾಲೆ ಉಳಿಸಿಕೊಂಡಿತು. ಆಂಧ್ರಪ್ರದೇಶದ ರಾಜ್ಯ ಸರ್ಕಾರದ ಬಗ್ಗೆ ಅಲ್ಲಿನ ಕನ್ನಡದ ಮಕ್ಕಳಿಗೆ ಯಾವ ಆಕ್ಷೇಪವೂ ಇಲ್ಲ. ಹಾಗೆ ನೋಡಿದರೆ ಕರ್ನಾಟಕಕ್ಕೇ ಬೇಡವಾದ ಕನ್ನಡ ಮಾಧ್ಯಮ ಶಾಲೆಗಳನ್ನು ಅಲ್ಲಿನ ಸರ್ಕಾರ ಒಂದೊಂದಾಗಿ ಮುಚ್ಚಿಕೊಂಡು ಬರಬಹುದಿತ್ತು. ಅದರ ಔದಾರ್ಯ ದೊಡ್ಡದು.. ಕೃಪಣತೆಯಲ್ಲಿ ಕನ್ನಡಿಗರನ್ನು ಮೀರಿಸುವವರು ಯಾರಿದ್ದಾರೆ?

**ಹಾಗಾದರೆ ಬೆಂಗಳೂರು ಯಾರಿಗೂ ಬೇಡವೇ?**

ಸುದ್ದಿಆಗಬೇಕು. ಕೆಟ್ಟ ಕಾರಣಕ್ಕೆ ಆಗಬಾರದು. ಬೆಂಗಳೂರು ಈಗ ಒಳ್ಳೆಯ ಕಾರಣಕ್ಕೆ ಸುದ್ದಿಯಲ್ಲಿ ಇಲ್ಲ. ಅಮೆರಿಕೆಯ 'ಇಂಟರ್‌ನ್ಯಾಷನಲ್ ಹೆರಾಲ್ಡ್ ಟ್ರಿಬ್ಯೂನ್‌ನಂಥ ಪತ್ರಿಕೆ'ಗೂ ಬೆಂಗಳೂರಿನ ಕಸದ ನಾತ ಬಡಿದಿದೆ. ಭಾರತದ ಸಿಲಿಕಾನ್ ವ್ಯಾಲಿ ಎಂದು ಹೆಸರು ಮಾಡಿದ ನಗರಕ್ಕೆ ಇದು ಖಂಡಿತ ಒಳ್ಳೆಯ ಸುದ್ದಿ ಅಲ್ಲ. ಅಮೆರಿಕೆಯ ಪತ್ರಿಕೆ ಒಂದು ದಿನ ಸುದ್ದಿ ಬರೆದು ಸುಮ್ಮನಾಗಬಹುದು. ಮುಖ್ಯಮಂತ್ರಿಗಳೂ 'ಬೆಂಗಳೂರು ದೊಡ್ಡ ನಗರ, ಸುದ್ದಿ ಆಗುವುದು ಖರೆ' ಎಂದು ಹೇಳಿ ಸುಮ್ಮನಾಗಬಹುದು. ಆದರೆ, ಸಾಮಾನ್ಯ ಜನರ ಪಾಡು ಏನು? ಈಗಲೂ ಬಹುತೇಕ ಬಡಾವಣೆಗಳಲ್ಲಿ ಕಸದ ಗುಡ್ಡೆಗಳು ಬಿದ್ದಿವೆ. ನಿತ್ಯ ವಿಲೇವಾರಿ ಆಗುತ್ತಿದ್ದ ಕಸ ಈಗ ಆಗುತ್ತಿಲ್ಲ. ವಾರಗಟ್ಟಲೆ ಬಿದ್ದ ಕಸವನ್ನು ಲೋಡುಗಟ್ಟಲೆ ಸಾಗಿಸಿದ ಮೇಲೆ ಇಡೀ ಪ್ರದೇಶವನ್ನು ದುರ್ನಾತ ಆವರಿಸುತ್ತಿದೆ. ಜನರು ಬಾಯಿ ಮುಚ್ಚಿಕೊಂಡು ಕಷ್ಟ ಅನುಭವಿಸುತ್ತಿದ್ದಾರೆ. ಮೂಗು ಮುಚ್ಚಿಕೊಂಡು ದಿನ ಕಳೆಯುತ್ತಿದ್ದಾರೆ.

ಇದು ಅಷ್ಟು ಸುಲಭವಿದ್ದಂತೆ ಕಾಣುವುದಿಲ್ಲ. ಅದಕ್ಕೇ ಪರಿಹಾರವೂ ಸುಲಭವಾಗಿ ಸಿಗುತ್ತಿಲ್ಲ. ಇಲ್ಲಿ ಅಡ್ಡಾದಿಡ್ಡಿ ಬೆಳೆದ ನಗರದ ಕಾರಣ ಇದೆ. ಭೂಮಿಯ ಬೆಲೆ ಏಕಾಏಕಿ ಗಗನಕ್ಕೆ ಏರಿದ ಕಾರಣ ಇದೆ. ಆಸೆಬುರುಕ ಗುತ್ತಿಗೆದಾರರು ಇದ್ದಾರೆ. ಅವರ ಹಣದ ಮೇಲೆ ಬದುಕುತ್ತಿರುವ ಜಿಗಣೆಯಂಥ ರಾಜಕಾರಣಿಗಳು ಇದ್ದಾರೆ. ಯಾವುದಕ್ಕೂ ತಲೆ ಕೆಡಿಸಿಕೊಳ್ಳದ ಅಧಿಕಾರಿಗಳು ಇದ್ದಾರೆ. ತನ್ನ

ಕರ್ತವ್ಯವೇನು ಎಂದು ತಿಳಿಯದ ಸರ್ಕಾರ ಇದೆ. ಎಲ್ಲವನ್ನೂ ಸಹಿಸಿಕೊಂಡು ತೆಪ್ಪಗಿರುವ ಬೆಂಗಳೂರಿನ ಜನ ಇದ್ದಾರೆ... ಇದು ಒಂದು ವಿಷವರ್ತುಲ. ಈ ವರ್ತುಲವನ್ನು ಎಲ್ಲಿ ಕತ್ತರಿಸಲು ಹೋದರೂ ವ್ಯತಿರಿಕ್ತ ಪರಿಣಾಮಗಳು ಆಗುತ್ತವೆಯೇ ಹೊರತು ಪರಿಹಾರ ಸಿಗುವಂತೆ ಕಾಣುವುದಿಲ್ಲ. ಹೈಕೋರ್ಟಿನ ಚಾಟಿ ಏಟು ಕೂಡ ತಕ್ಷಣಕ್ಕೆ ಫಲ ಕೊಟ್ಟಿಲ್ಲ. ಕೊಟ್ಟಿದ್ದರೆ ಕಳೆದ ಗುರುವಾರವೇ ಹೊಸ ಗುತ್ತಿಗೆ ವ್ಯವಸ್ಥೆ ಅಸ್ತಿತ್ವಕ್ಕೆ ಬರಬೇಕಿತ್ತು. ಬರಲಿಲ್ಲ.

೧೯೯೦ರ ದಶಕದ ಉತ್ತರಾರ್ಧದಲ್ಲಿ ಬೆಂಗಳೂರು ಇಡೀ ವಿಶ್ವದ ಗಮನ ಸೆಳೆಯಿತು. ಐ.ಟಿ. ಮತ್ತು ಬಿ.ಟಿ. 'ಹಬ್' ಎಂದು ಖ್ಯಾತವಾಯಿತು. ದೇಶದ ವಿವಿಧ ಕಡೆಯಿಂದ ಜನರು ಇಲ್ಲಿಗೆ ಬಂದು ವಾಸ ಮಾಡತೊಡಗಿದರು. ಗಗನಚುಂಬಿ ಕಟ್ಟಡಗಳು ಭೂಮಿಯಿಂದ ಉದ್ಭವ ಮೂರ್ತಿಯ ಹಾಗೆ ಎಲ್ಲ ಕಡೆ ಧುತ್ ಎಂದು ಮೇಲೆ ಏಳತೊಡಗಿದುವು. ಕೇವಲ ನೂರು ವಾರ್ಡ್ ವ್ಯಾಪ್ತಿ ಇದ್ದ ಬೆಂಗಳೂರು ದುಪ್ಪಟ್ಟು ದೊಡ್ಡದಾಯಿತು. ವಾರ್ಡ್‌ಗಳ ಸಂಖ್ಯೆ ೧೯೮ಕ್ಕೆ ಏರಿತು. ಜನಸಂಖ್ಯೆ ಕೋಟಿ ಹತ್ತಿರ ಆಯಿತು. ಜನಸಂಖ್ಯೆ ಹೆಚ್ಚಿದಂತೆ ಮಾಲ್‌ಗಳು ಬರತೊಡಗಿದುವು. ಪ್ಲಾಸ್ಟಿಕ್ ಬಳಕೆ ಇನ್ನಿಲ್ಲದಂತೆ ಹೆಚ್ಚಿತು. ಬೆಂಗಳೂರು ಮೇಲಿನ ಧಕ್ಕಡಿ ನಿತ್ಯವೂ ಹೆಚ್ಚುತ್ತ ಹೋಯಿತು. ಕಸ ವಿಲೇವಾರಿ ಮಾಡುತ್ತಿದ್ದ ಜಾಗದ ಸುತ್ತಲು ಬೆಳವಣಿಗೆಗೆ ಇದ್ದ ಒಂದು ಕಿಲೋಮೀಟರ್ ವ್ಯಾಪ್ತಿ ನಿಷೇಧವನ್ನು (ಬಫರ್ ರೋನ್) ೨೦-೨೦ ತಿಂಗಳ ಸರ್ಕಾರವಿದ್ದಾಗ ಅರ್ಧ ಕಿಲೋಮೀಟರ್‌ಗೆ ಇಳಿಸಲಾಯಿತು. ಆ ವೇಳೆಗಾಗಲೇ ಬೆಂಗಳೂರು ಸುತ್ತಲಿನ ಭೂಮಿಗೆ ಚಿನ್ನದ ಬೆಲೆ ಬಂದಿತ್ತು. ರಾಜಕಾರಣಿಗಳು ಈ ಭೂಮಿಯ ಮೇಲೆ ಕಣ್ಣು ಹಾಕಿದ್ದರು. ಅಥವಾ ಭೂಮಿಯ ಒಡೆಯರು ರಾಜಕಾರಣಿಗಳ ಆಶ್ರಯ ಬಯಸಿದ್ದರು.

ಬೆಂಗಳೂರಿನ ಕಸವನ್ನು ಒಯ್ದು ಸುರಿಯಲು ಮಂಡೂರಿನಲ್ಲಿ ಖರೀದಿ ಮಾಡಿದ್ದ ನೂರು ಎಕರೆ ಜಮೀನು ಯಾವುದಕ್ಕೂ ಸಾಲದಾಯಿತು. ವಿಚಿತ್ರ. ಮುಂಬೈನಂಥ ಮಹಾನಗರ ಬಿಡಿ ಸೇಲಂನಂಥ ಚಿಕ್ಕ ಊರಿನಲ್ಲಿ ಕಸ ವಿಂಗಡಣೆ ಮಾಡಲು, ಸಂಸ್ಕರಿಸಲು, ಗೊಬ್ಬರ ಮಾಡಲು ಒಂದು ಘಟಕ ಇರಬಹುದಾದರೆ ಬೆಂಗಳೂರಿನಂಥ ಅಂತರರಾಷ್ಟ್ರೀಯ ಗಮನ ಸೆಳೆಯುವ ಊರಿನಲ್ಲಿ ಅದಕ್ಕೆ ವ್ಯವಸ್ಥೆ ಇರಲಿಲ್ಲ. ಎರಡು ಘಟಕಗಳಿಗೆ ಅನುಮತಿ ಕೊಟ್ಟಿದ್ದರೂ ಅವು ಸರಿಯಾಗಿ ಕೆಲಸ ಮಾಡಲಿಲ್ಲ. ಮಾಡಿಸಬೇಕಾದ ಅಗತ್ಯ ಸರ್ಕಾರಕ್ಕಾಗಲೀ, ಪುರಪಿತೃಗಳಿಗಾಗಲೀ ಕಾಣಲಿಲ್ಲ. ನೂರು ವಾರ್ಡ್ ಇದ್ದ ಬೆಂಗಳೂರಿನಲ್ಲಿ ಪ್ರತಿದಿನ ೮೦೦ ಟನ್‌ನಿಂದ ೧,೦೦೦ ಟನ್ ಕಸ ಉತ್ಪಾದನೆ ಆಗುತ್ತಿತ್ತು. 'ಆ ಕಸವನ್ನು ಬಳಿಯುತ್ತಿದ್ದ ಪೌರಕಾರ್ಮಿಕರು ಸರಿಯಾಗಿ ಕೆಲಸ ಮಾಡುವುದಿಲ್ಲ. ಬೇಕೆಂದಾಗ ಮುಷ್ಕರ ಮಾಡುತ್ತಾರೆ' ಎಂದು ಆ ಕೆಲಸವನ್ನು

ಹೊರಗುತ್ತಿಗೆಗೆ ಕೊಡಲಾಯಿತು. ಬಾಣಲೆಯಿಂದ ಬೆಂಕಿಗೆ ಬಿದ್ದಂತೆ ಆಯಿತು. ಪೌರಕಾರ್ಮಿಕರು ಬಡಪಾಯಿಗಳು. ಅವರು ಎಲ್ಲ ಸರ್ಕಾರಿ ನೌಕರರ ಹಾಗೆ ಮೈಗಳ್ಳರಾಗಿದ್ದರು; ಒಂದಿಷ್ಟು ಸಂಬಳ ಜಾಸ್ತಿ ಕೇಳುತ್ತಿದ್ದರು. ಆದರೆ, ಗುತ್ತಿಗೆದಾರರು, ಬೆಂಗಳೂರು ನಗರದ ಸಚಿವರು ಮತ್ತು ಪಾಲಿಕೆಯ ಸದಸ್ಯರ ಮೇಲೆ ಸವಾರಿ ಮಾಡುವಷ್ಟು ಶಕ್ತರು. ಮೂವತ್ತು ಕೋಟಿ ರೂಪಾಯಿ ಇದ್ದ ಕಸ ವಿಲೇವಾರಿ ಗುತ್ತಿಗೆ ಮೊತ್ತ ತೊಂಬತ್ತು ಕೋಟಿಗೆ ಏರಿಸಿದ್ದಕ್ಕೆ ಗುತ್ತಿಗೆ ಅವಧಿ ಮುಗಿದು ಎರಡು ಮೂರು

ವರ್ಷಗಳು ಆದರೂ ಅವರನ್ನು ಬದಲಿಸುವ ಶಕ್ತಿಯನ್ನು ಪಾಲಿಕೆ ತೋರಿಸದೇ ಇರುವುದಕ್ಕೆ ಗುತ್ತಿಗೆ ಮೊತ್ತ ದೊಡ್ಡದು ಇದ್ದುದೇ ಕಾರಣ.

ಗುತ್ತಿಗೆ ಕೊಡುವಾಗ, 'ಕಸ ವಿಲೇವಾರಿ ಜತೆಗೆ ಜನರಿಗೆ ಕಸ ವಿಂಗಡಣೆಯ ಕುರಿತು ಜಾಗೃತಿ ಮೂಡಿಸಬೇಕು. ನಿಧಾನವಾಗಿ ಕಸ ವಿಂಗಡಣೆ ರೂಢಿ ಆಗಬೇಕು' ಎಂಬ ಷರತ್ತುಗಳನ್ನೂ ವಿಧಿಸಲಾಗಿತ್ತು. ಆದರೆ, ಹಾಗೆ ಮಾಡಿದ್ದರೆ ಸಾಗಣೆ ಮಾಡಬೇಕಿದ್ದ ಕಸದ ಪ್ರಮಾಣ ಭಾರಿ ಪ್ರಮಾಣದಲ್ಲಿ ಕಡಿಮೆ ಆಗಿ ಬಿಡುತ್ತಿತ್ತು. ಅದು ಗುತ್ತಿಗೆದಾರರ ಹಿತಕ್ಕೆ ಧಕ್ಕೆ ತರುತ್ತಿತ್ತು. ಈಗ ಇದ್ದಕ್ಕಿದ್ದಂತೆ ಪಾಲಿಕೆ ಆಯುಕ್ತರು ಕಸ ವಿಂಗಡಣೆ ಮಾಡಿ ಸಾಗಿಸುವ ನಿರ್ಧಾರ ತೆಗೆದುಕೊಂಡರು. ಆದರೆ, ಮನೆಯ ಕಸವನ್ನು ರಸ್ತೆಗೆ ತಳ್ಳಿ, ಯಾವುದೋ ಮೂಲೆಯಲ್ಲಿ ಹಾಕಿ ತಮ್ಮ ಮನೆಯನ್ನು ಸ್ವಚ್ಛವಾಗಿ ಇಟ್ಟುಕೊಂಡಿದ್ದ ಬೆಂಗಳೂರು ಜನರಿಗೆ ಅದು ಕಷ್ಟ ಎನಿಸಿತು. ಒಳ್ಳೆಯ ರೂಢಿಗಳನ್ನು ತರುವುದು ಯಾವಾಗಲೂ ಬಹುಕಷ್ಟ, ಅತ್ತ ಮಂಡೂರಿನ ಜನರನ್ನು ಆಯಾ ಪ್ರದೇಶದ ರಾಜಕಾರಣಿಗಳು ಎತ್ತಿಕಟ್ಟಿದರು. ಅಲ್ಲಿನ ಜನರಿಗೂ ಕಸದ ಜತೆಗೆ ಬದುಕು ಮಾಡುವುದು ಅಸಹನೀಯವಾಗಿತ್ತು. ಯಾವ ದೊಡ್ಡ ಊರಿನ ಜನರೂ ಹೀಗೆ ನಡೆದುಕೊಳ್ಳಬಾರದು. ತಮ್ಮ ಮನೆಯ ಕಸವನ್ನು ಇನ್ನೊಬ್ಬರ ಮನೆಯ ಬಾಗಿಲಿಗೆ ಹೋಗಿ ಹಾಕುವುದು ಅತ್ಯಂತ ಅನಾಗರಿಕ ವರ್ತನೆ. ಮಂಡೂರಿನಲ್ಲಿ. ಮಾವಳ್ಳಿಪುರದಲ್ಲಿ ಇರುವವರೂ ನಮ್ಮ ಹಾಗೆಯೇ ಸಾರ್ವಜನಿಕರು, ಅವರೇನು ಆದಿಮಾನವರಲ್ಲ ಎಂದು ಬೆಂಗಳೂರಿನ ಜನ ಅಂದುಕೊಳ್ಳಲಿಲ್ಲ. ಬೆಂಗಳೂರಿನ ಪುರಪಿತೃಗಳು, ಇಡೀ ಕರ್ನಾಟಕದ ಪುರಪಿತೃ ಆದ ಸರ್ಕಾರವೂ ಅಂದುಕೊಳ್ಳಲಿಲ್ಲ.

ಕಸದ ಗುಣವೇ ಹಾಗೆ. ಅದು ರೋಗವನ್ನು ತರುತ್ತದೆಯೇ ಹೊರತು ಆರೋಗ್ಯವನ್ನು ಅಲ್ಲ. ಮಾವಳ್ಳಿಪುರ ಮತ್ತು ಮಂಡೂರಿನ ಜನ ಪ್ರತಿಭಟನೆ ಮಾಡುತ್ತಾರೆ ಎಂದು ಚಿಂತಾಮಣಿ ಹತ್ತಿರ ಹೋಗಿ ಕಸ ಹಾಕಿದರೆ ಅಲ್ಲಿನ ಜನ ಏಕೆ ಸುಮ್ಮನಿರುತ್ತಾರೆ? ಇತ್ತ ಹೊಸೂರು, ಅತ್ತ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಇನ್ನೊಂದು ಕಡೆ ನೈಸ್ ರಸ್ತೆ, ಬೆಂಗಳೂರಿನ ಕಸವನ್ನು ಇನ್ನು ಎಲ್ಲಿಯೂ ಹಾಕಲು ಸಾಧ್ಯವಿಲ್ಲ. ಈಗ ಇರುವ ದಾರಿ ಒಂದೇ ಎಂದರೆ ಬೀಳುವ ಕಸವನ್ನು ಬೇಗ ಸಾಗಿಸಬೇಕು ಮತ್ತು ಅದನ್ನು ಗೊಬ್ಬರವಾಗಿ, ವಿದ್ಯುತ್ ಆಗಿ ಪರಿವರ್ತಿಸಲು ತುರ್ತು ಕ್ರಮ ತೆಗೆದುಕೊಳ್ಳಬೇಕು. ಅಂಥ ಕ್ರಮ ತೆಗೆದುಕೊಳ್ಳುತ್ತೇವೆ; ನಿಮ್ಮ ಊರಿನ ಸುತ್ತ ಕಸ ಬೀಳುವುದಿಲ್ಲ' ಎಂದು ಪಾಲಿಕೆ ಮತ್ತು ಸರ್ಕಾರಗಳು ಕಸ ಒಯ್ದು ಸುರಿಯುವ ಊರಿನ ಜನರಿಗೆ ಭರವಸೆ ಕೊಡಬೇಕು. ಆ ಭರವಸೆ ಅವರಲ್ಲಿ ನಂಬಿಕೆ

ಹುಟ್ಟಿಸಬೇಕು. ಮೂಲ ಬೆಂಗಳೂರಿನ ಪ್ರದೇಶಗಳನ್ನು ಬಿಟ್ಟು ಬಡಾವಣೆಗಳಲ್ಲಿ ಕೂಡ ಇದೇ ರೀತಿಯಲ್ಲಿ ಕಸ ಸಂಸ್ಕರಿಸುವ ವ್ಯವಸ್ಥೆ ಆಗಬೇಕು.

ಇದೆಲ್ಲ ಆಗಬೇಕು ನಿಜ. ಆದರೆ, ಆಗುಮಾಡುವ ಸರ್ಕಾರಕ್ಕೆ ಮನಸ್ಸು ಇದ್ದಂತೆ ಇಲ್ಲ. ಬೆಂಗಳೂರು ನಗರವನ್ನು ಇಷ್ಟು ತಾತ್ಸಾರವಾಗಿ, ಕಾಲುಕಸದ ಹಾಗೆ ಕಂಡ ಸರ್ಕಾರ ಮತ್ತೊಂದು ಇದುವರೆಗೆ ಬಂದಿಲ್ಲ. ಬೆಂಗಳೂರಿನ ಜನರು ಎಷ್ಟೊಂದು ಕನಸು ಕಟ್ಟಿಕೊಂಡಿದ್ದರು. ಈ ಸರ್ಕಾರದಲ್ಲಿ ಬೆಂಗಳೂರು ಬಲ್ಲ ಸಚಿವರು ಇದ್ದರು, ಪುರಪಿತೃಗಳು ಇದ್ದರು. ಬೆಂಗಳೂರಿನಲ್ಲಿ ಹುಟ್ಟಿ ಬೆಳೆದು, ಪುರಪಿತೃಗಳಾಗಿ ಸಚಿವರಾದವರೂ ಇದ್ದರು. ಇಡೀ ರಾಜ್ಯದ ಆರೋಗ್ಯದ ಹೊಣೆ ಹೊತ್ತ ಸಚಿವರೂ ಬೆಂಗಳೂರಿನಿಂದಲೇ



ಆಯ್ಕೆಯಾಗಿದ್ದರು. ಬೆಂಗಳೂರನ್ನು ಪ್ರತಿನಿಧಿಸುವ ಐವರು ಸಚಿವರಲ್ಲಿ ಒಬ್ಬ ಮಹಿಳೆಯೂ ಇದ್ದರು. ಆದರೆ, ಯಾರಿಗೂ ಬೆಂಗಳೂರಿನ ಬಗ್ಗೆ ಪ್ರೀತಿ ಇದ್ದಂತೆ ಕಾಣಲಿಲ್ಲ, ಹೃದಯ ಇದ್ದಂತೆ ತೋರಲಿಲ್ಲ. ಬೆಂಗಳೂರಿನ ಜನ ಹೀಗೆ ತಮ್ಮ ಮನೆಯ ಮುಂದೆ, ಬಡಾವಣೆಯಲ್ಲಿ ಕಸದ ಗುಡ್ಡೆಯ ಮಧ್ಯೆ ಬದುಕುವುದು ನರಕಸದೃಶ ಎಂದು ಅವರಿಗೆ ಅನಿಸಲಿಲ್ಲ. ಅದೆಲ್ಲ ಅವರ ಕೈ ಮೀರಿ ಹೋದ ಸನ್ನಿವೇಶವಾಗಿತ್ತೇ? ಅಥವಾ ಅವರಿಗೆ ಪ್ರತಿಷ್ಠೆ ಅಡ್ಡಬಂತೇ? ಅವರಿಗೂ ಅಧಿಕಾರ ತರುವ ಅಹಂಕಾರ, ಅಸಡ್ಡೆ ಇತ್ತೇ? ಗೊತ್ತಾಗಲಿಲ್ಲ. ಯಾರೂ ಬಾಯಿಯೇ ಬಿಡಲಿಲ್ಲವಾದ್ದರಿಂದ ಅವರ ಮನಸ್ಸಿನಲ್ಲಿ ಏನಿದೆ ಎಂದೂ ಗೊತ್ತಾಗಲಿಲ್ಲ!

ರಾಮಕಷ್ಣ ಹೆಗಡೆ ಅಥವಾ ಎಸ್.ಎಂ. ಕೃಷ್ಣ ಮುಖ್ಯಮಂತ್ರಿ ಆಗಿದ್ದರೆ ಹೀಗೆ ಆಗುತ್ತಿರಲಿಲ್ಲ ಎಂದು ಅನಿಸಿತು. ಅವರಿಬ್ಬರೂ ಸೂಕ್ಷ್ಮ ಮನಸ್ಸಿನ ಮುಖ್ಯಮಂತ್ರಿಗಳಾಗಿದ್ದರು. ಅವರಿಗೆ ಬೆಂಗಳೂರಿನ ಬಗ್ಗೆ ನೈಜ ಕಾಳಜಿ ಇತ್ತು. ಬೆಂಗಳೂರಿಗೆ ಕೆಟ್ಟ ಹೆಸರು ಬಂದರೆ ಸರ್ಕಾರಕ್ಕೆ ಕೆಟ್ಟ ಹೆಸರು ಬಂದಂತೆ ಎಂದೂ ಅವರಿಗೆ ತಿಳಿದಿತ್ತು. ಆಡಳಿತ ಎಂದರೆ ಜನರಿಗೆ ಒಳಿತು ಮಾಡುವುದು ಎಂದು ಅವರಿಗೆ ಗೊತ್ತಿತ್ತು. ಈಗಿನ ಸರ್ಕಾರಕ್ಕೂ ಈ ಸೂಕ್ಷ್ಮ ತಿಳಿದಿರಬೇಕಿತ್ತು. ಬೆಂಗಳೂರು ಮಹಾನಗರ ಪಾಲಿಕೆಯೂ ಬಿಜೆಪಿ ಆಡಳಿತದಲ್ಲಿಯೇ ಇದೆ ಎಂದು ಅವರಿಗೆ ಗೊತ್ತಿರಬೇಕಿತ್ತು. ಬೆಂಗಳೂರಿನ ಕಸವನ್ನೇ ಸರಿಯಾಗಿ ತೆಗೆಯದ ಸರ್ಕಾರ ನಮ್ಮ ಊರಿನ ಕಸವನ್ನು ಇನ್ನೇನು ತೆಗೆಯುತ್ತದೆ ಎಂದು ಇತರ ಊರುಗಳ ಜನ ಅಂದುಕೊಂಡಾರು ಎಂದಾದರೂ ಸರ್ಕಾರಕ್ಕೆ ಅಳುಕು ಇರಬೇಕಿತ್ತು.

ಸರ್ಕಾರ ಮತ್ತು ಪಾಲಿಕೆಗಳೆರಡೂ ತಮ್ಮ ಕರ್ತವ್ಯದಲ್ಲಿ ವಿಫಲವಾಗಿರುವಾಗ ಅವುಗಳ ವಿರುದ್ಧ ಧ್ವನಿ ಎತ್ತುವ ಕೆಲಸವನ್ನು ಸಾರ್ವಜನಿಕರಾದರೂ ಮಾಡಬೇಕಿತ್ತು. ಅಣ್ಣಾ ಹಜಾರೆ ಚಳವಳಿಯಲ್ಲಿ ಮುಖಕ್ಕೆ ಬಣ್ಣ ಬಳಿದುಕೊಂಡು ಸ್ವಾತಂತ್ರ್ಯ ಉದ್ಯಾನಕ್ಕೆ ಸಾವಿರ ಸಂಖ್ಯೆಯಲ್ಲಿ ಬಂದಿಳಿದ ಐ.ಟಿ. ಉದ್ಯೋಗಿಗಳಿಗೆ ಬೆಂಗಳೂರಿನ ಕಸ ಒಂದು ಸಮಸ್ಯೆ ಎನಿಸಲಿಲ್ಲ. ಅವರು 'ಗೇಟೆಡ್ ಕಮ್ಯುನಿಟಿ' ಆಗಿರುವುದರಿಂದ ಅವರಿಗೆ ಅದು ಸಮಸ್ಯೆ ಆಗಲಿಲ್ಲವೇ? ಅಥವಾ ಅಪಾರ್ಟ್‌ಮೆಂಟ್ ಎಂಬ 'ಆಕಾಶದಲ್ಲಿ ಬದುಕುವ ಜೀವಿಗಳು ಆದುದರಿಂದ ಸಮಸ್ಯೆ ಎನಿಸಲಿಲ್ಲವೇ? ಐ.ಟಿ., ಬಿ.ಟಿ. ಉದ್ಯೋಗಿಗಳನ್ನು ಪಾಲಿಸುವ ನಾರಾಯಣಮೂರ್ತಿಗಳು, ಅಜೀಂ ಪ್ರೇಮ್ ಜೀಗಳು, ಕಿರಣ್ ಮಜುಂದಾರ್ ಷಾಗಳೂ ದಿವ್ಯ ಮೌನ ತಾಳಿದ್ದಾರೆ. ಅವರು ಒಂದು ಗುಡುಗು ಹಾಕಿದ್ದರೆ ಇಡೀ ದೇಶದ ತುಂಬ ಸುದ್ದಿ ಆಗುತ್ತಿತ್ತು. ಮತ್ತೆ ಮತ್ತೆ ಗುಡುಗು ಹಾಕಿದ್ದರಂತೂ ಸರ್ಕಾರ ಗಾಢ ನಿದ್ದೆಯಿಂದ ಎಚ್ಚೆತ್ತುಕೊಳ್ಳುತ್ತಿತ್ತು... ಇಲ್ಲಿ ಎಷ್ಟೊಂದು ಮಂದಿ ಸಾಹಿತಿಗಳು, ಕಲಾವಿದರು ಇದ್ದಾರಲ್ಲ...? ಏಕೋ ಏನೋ ಎಲ್ಲರೂ ಮೌನ ತಾಳಿದರು. ಹಾಗಾದರೆ ಬೆಂಗಳೂರು ಯಾರಿಗೂ ಬೇಡವೇ? ಎಂಥ ದುರ್ದೈವ!

೧೮.೧೧.೨೦೧೨

**ಕಲ್ಲು ಮನಸ್ಸು ಕರಗುವ ಸಮಯ...**

ಅದು ಒಂದು ತೀವ್ರ ಭಾವುಕ ಕ್ಷಣ. ಹಾಗೆ ಆಗುವುದು ವಿರಳ. ಮನಸ್ಸೆಲ್ಲ ಅಲ್ಲೋಲ ಕಲ್ಲೋಲ. ೩೭ರ ಹರಯದ ರಘು ದೀಕ್ಷಿತ್ ಕಪ್ಪನೆಯ ಟೀ ಷರಟು, ಒಂದು ವಿಚಿತ್ರ ಪಂಚೆ ಉಟ್ಟುಕೊಂಡು ಕೈಯಲ್ಲಿ ಗಿಟಾರ್ ಹಿಡಿದು ಹಾಡುತ್ತಿದ್ದರೆ ನನ್ನ ಹಿರಿತನದ ಅಹಂಕಾರವೆಲ್ಲ ಜರನೆ ಇಳಿದುಹೋಯಿತು. ಆ ಯುವಕ ಮೂರು ಸಾವಿರಕ್ಕೂ ಹೆಚ್ಚು ಸಭಿಕರ ಜತೆ ಸಂವಹನ ಮಾಡಿದ ರೀತಿ ನನಗೆ ದೊಡ್ಡ ಪಾಠ ಕಲಿಸಿತು.

ಅದು ಅಟ್ಲಾಂಟಾ ನಗರ. ಭಾರತದಿಂದ ಎಷ್ಟೋ ಸಾವಿರ ಮೈಲಿ ದೂರ ಬಂದು ನೆಲೆಸಿದ ಕನ್ನಡಿಗರು ಹಮ್ಮಿಕೊಂಡಿದ್ದ ಏಳನೇ ವೇದಿಕೆ ವಿಶ್ವ ಕನ್ನಡ ಸಮ್ಮೇಳನ. ಮುಖ್ಯ 'ಅಮೋಘವರ್ಷ'ದ ಮೇಲೆ ರಘು ಬಂದಾಗ ರಾತ್ರಿ ಒಂಬತ್ತು ಗಂಟೆ ಆಗಿ ಹೋಗಿತ್ತು. ಅವರು ಹಾಡು ಮುಗಿಸಿದಾಗ ಮರುದಿನ ಪ್ರವೇಶ ಮಾಡುತ್ತಿತ್ತು. ಆತ ಆ ದಿನದ ಕೊನೆಯ ಹಾಡುಗಾರ. ಯುವಕರು 'ವೇದಿಕೆ ಮೇಲೆ' ಬರಲು ಕಾಯಬೇಕಾಗುತ್ತದೆಯೇ?... ಕನ್ನಡದ ಹಾಡುಗಳನ್ನೇ ಗಿಟಾರ್ ಹಿಡಿದುಕೊಂಡು ಹಾಡಿದ ರಘು ಬರೀ ಯುವಕ-ಯುವತಿಯರು ಮಾತ್ರವಲ್ಲ ೭೦ ದಾಟಿದ ಮುದುಕರ ಮೈ ಮನಸ್ಸಿನಲ್ಲಿಯೂ ನವ ಚೈತನ್ಯ ತುಂಬಿದ. ಎಲ್ಲರೂ ಒಬ್ಬೊಬ್ಬರಾಗಿ ವೇದಿಕೆ ಮುಂದೆ ಬಂದು ನಿಂತು

ಕುಣಿಯತೊಡಗಿದರು. ಎಲ್ಲರ ಸಂಕೋಚ ಹೊರಟು ಹೋಗಿತ್ತು. ಒಂದೊಂದು ಹಾಡು ಮುಗಿದ ಮೇಲೂ 'ಹೋ' ಎಂದು ಕೂಗುತ್ತಿದ್ದರು. ಹಾಡುಗಾರಿಕೆ ಮುಗಿಯುವ ವೇಳೆಗೆ ಸಭಾಂಗಣದಲ್ಲಿ ಇದ್ದ ಜನರೆಲ್ಲ ವೇದಿಕೆ ಮುಂದೆ ಬಂದು ನಿಂತಿದ್ದರು. ನಮ್ಮಂಥ ಕೆಲವರು ಸಂಕೋಚದ ಮುದ್ದೆಗಳು ಮಾತ್ರ ಮುಂದಿನ ಸೀಟಿನಲ್ಲಿ ಕುಳಿತಿದ್ದೆವು. ಉಳಿದವರೆಲ್ಲ ಕುಣಿಯುತ್ತಿದ್ದರು.

ನಮ್ಮೊಳಗಿನ ಒಬ್ಬ ಭಾವುಕನನ್ನು ಅವರು ಹೊರಗೆ ಎಳೆದು ತಂದಿದ್ದರು. ಮೊಬೈಲ್ ಎಂದರೆ ನಮ್ಮಂಥವರಿಗೆ ಮೈ ಉರಿದರೆ ಅದನ್ನೇ ಹಿಡಿದುಕೊಂಡು ಕುಣಿಯಿರಿ ಎಂದು ರಘು ಹೇಳುತ್ತಿದ್ದರು. ಆತ ಬೇರೆಯ ರೀತಿಯಲ್ಲಿಯೇ ಸಂವಹನ ಮಾಡುತ್ತಿದ್ದಾರೆ ಎಂದು ಅನಿಸಿತು. 'ಎಲಾ ಇವ' ಮೊಬೈಲ್ ಬಿಡಿ ಎಂದು ಯುವಕರಿಗೆ ಹೇಳುವುದರಲ್ಲಿ ಅರ್ಥವೇ ಇಲ್ಲ ಅಂದುಕೊಂಡೆ. ಅದನ್ನು ಇಟ್ಟುಕೊಂಡೇ ಕುಣಿಯಿರಿ, ಜೀವನ ಆನಂದಿಸಿ' ಎಂದು ರಘು ಹೇಳುತ್ತಿರಬಹುದೇ ಎಂದು ಅನಿಸಿತು. ಯುವಕರು ನಮಗೆ ಅರ್ಥವಾಗುತ್ತಿಲ್ಲವೇ? ಅವರ ಜತೆಗೆ ಸಂವಹನ ಮಾಡಲೂ ನಮಗೆ ಬರುತ್ತಿಲ್ಲವೇ ಎಂದೂ ಏಕೋ ಅನಿಸಿತು. ಮರುದಿನ ರಘು ಮತ್ತು ನಾನು ಜತೆಗೇ ತಿಂಡಿ ತಿನ್ನುತ್ತಿದ್ದೆವು. ನಿನ್ನೆ ವೇದಿಕೆ ಮೇಲೆ ಅವರ ಕೈ ಕುಲುಕಲು ಸಾಧ್ಯವಾಗದ ಎಲ್ಲರೂ ಬಂದು ಅವರ ಮೇಲೆ ಮುಗಿಬಿದ್ದರು. ಒಬ್ಬೊಬ್ಬರೂ ನಿನ್ನೆಯ ಪರ್‌ಫಾರ್ಮನ್ಸ್ ಬಗ್ಗೆ ಹೇಳುತ್ತಿದ್ದವರೇ; 'ವೆಲ್ ಡನ್ ರಘು' ಎಂದು.

ರಘು ಮೈಸೂರಿನ ಹುಡುಗ, ಓದಿದ್ದು ಎಂ.ಎಸ್ಸಿ, ಮೈಕ್ರೋ ಬಯಾಲಜಿ. ಎಂಟನೇ ವಯಸ್ಸಿನಿಂದ ೧೩ನೇ ವಯಸ್ಸಿನವರೆಗೆ ಭರತ ನಾಟ್ಯ ಕಲಿತರು. ಪಾಶ್ಚಾತ್ಯ ಎಂಬುದು ಏನಿದ್ದರೂ ತಂದೆ ತಾಯಿಗೆ ಕಡು ವಿರೋಧ, ತಂದೆ ಬದುಕಿ ಇರುವವರೆಗೆ ಮಗ ಜೀನ್ಸ್ ಪ್ಯಾಂಟ್ ಹಾಕಿಕೊಂಡಿರಲಿಲ್ಲ! ಈಗ ಅದೇ ಮಗ ಪಾಶ್ಚಾತ್ಯ ವಾದ್ಯ ಹಿಡಿದುಕೊಂಡು ದೇಶ-ವಿದೇಶ ಸುತ್ತುತ್ತಿದ್ದಾನೆ. ಕನ್ನಡದ ಹಾಡು ಹೇಳಿಕೊಂಡು ಜೀವನ ಮಾಡುತ್ತಿದ್ದಾನೆ. ಇಂಥ ಆಕಸ್ಮಿಕಗಳು ಈ ಯುವಕನ ಜೀವನದಲ್ಲಿ ಬೇಕಾದಷ್ಟು ಆಗಿವೆ. ಅವರು ಗಿಟಾರ್ ಕಲಿತುದು ಕೂಡ ಒಂದು ಆಕಸ್ಮಿಕ. ಮೈಸೂರಿನ ಯುವರಾಜ ಕಾಲೇಜಿನಲ್ಲಿ ಪಿಯುಸಿ ಓದುತ್ತಿದ್ದಾಗ ಸಹಪಾಠಿಯೊಬ್ಬ ಗಿಟಾರ್ ನುಡಿಸುತ್ತಿದ್ದ. "ಗಿಟಾರ್ ನುಡಿಸುವುದು ಹೆಂಗಸರು ಭರತ ನಾಟ್ಯ ಮಾಡಿದ ಹಾಗಲ್ಲ' ಎಂದೇನೋ ಆತ ಕಿಚಾಯಿಸಿದ. ಒಂದು ತಿಂಗಳಲ್ಲಿ ಕಲಿತು ತೋರಿಸುತ್ತೇನೆ' ಎಂದು ಸವಾಲು ಹಾಕಿದ ರಘು ಮೈಸೂರು ಹೊರವಲಯದ ಬೋಗಾದಿಯ ಕ್ರೈಸ್ತ ಸೆಮಿನರಿಗೆ ಹೋಗಿ ಗಿಟಾರ್ ಮತ್ತು ಗಿಟಾರ್ ಪಾಠದ ಒಂದು ಪುಸ್ತಕ ಕೊಂಡು ತಂದು ಒಂದು ತಿಂಗಳಲ್ಲಿ ಹಾಡು ನುಡಿಸಲು ಕಲಿತರು. 'ನಾನು ಗಿಟಾರ್ ಕಲಿತಿದ್ದೇನೆ. ನೀನು ಗಂಡಸಾದರೆ ನನ್ನ ಹಾಗೆ ಭರತ ನಾಟ್ಯ ಮಾಡು' ಎಂದು ಇವರು

ಕಿಚಾಯಿಸಿದರು! ಅದೆಲ್ಲ ಹುಡುಗಾಟ. ಆಗ ಹಾಗೆ ಅಂಟಿಕೊಂಡ ಗಿಟಾರ್ ಈಗ ಅವರ ಜೀವನದ ಸಾಥಿ. ಗಿಟಾರ್ ಕಲಿಯುತ್ತಲೇ ತಮ್ಮೊಳಗೆ ಒಬ್ಬ ಹಾಡುಗಾರ ಇದ್ದಾನೆ ಎಂದೂ ಅವರಿಗೆ ಗೊತ್ತಾಯಿತು. ಅಂದಿನಿಂದ ಇಂದಿನವರೆಗೆ ಇವರು ಹೇಳಿದ ಹಾಗೆ ಗಿಟಾರ್ ಕೇಳುತ್ತದೆಯೋ ಗಿಟಾರ್ ಹೇಳಿದ ಹಾಗೆ



ಇವರು ಕೇಳುತ್ತಾರೋ ಗೊತ್ತಿಲ್ಲ. ಅವರೇ ಹಾಡುವ ಒಂದು ಹಾಡಿನ ಹಾಗೆ 'ಹರ್ ಸಾಸ್‌ಮೇ, ಹರ್ ಧಡಕನ್ ಮೇ...'

ಹಾಡು ನಮ್ಮ ಉಸಿರಿನಲ್ಲಿ ಉಸಿರಾಗಿ, ಎದೆ ಬಡಿತದಲ್ಲಿ ಬಡಿತವಾಗಿ ಮನಸ್ಸನ್ನು ಕಲಕುವುದು ಹೀಗೆ. ಅದು ಹಾಡುಗಾರನನ್ನು ಅಲ್ಲಾಡಿಸಿದ ಹಾಗೆಯೇ ಕೇಳುಗನನ್ನೂ ಅಲ್ಲಾಡಿಸುತ್ತದೆ. ಅಟ್ಲಾಂಟಾದ ಮೇರಿಯಟ್ ಹೋಟೆಲ್‌ನಲ್ಲಿ ಚಿಕ್ಕ ಗುಂಪಿನ ನಡುವೆ ಕುಳಿತು ಅರ್ಚನಾ ಉಡುಪ ಹಾಡು ಹೇಳುತ್ತಿದ್ದಾಗ ಬೆಳಗಿನ ನಾಲ್ಕೂವರೆ! ಶುರುವಾಗಿದ್ದು ಯಾವಾಗಲೋ? ಅರ್ಚನಾ ಅವರು 'ಕರುಣಾಳು ಬಾ ಬೆಳಕೆ' ಹಾಡು ಹೇಳಿ ಮುಗಿಸಿದಾಗ ನನ್ನ ಎದುರು ಕುಳಿತಿದ್ದ ಟಿ.ಎನ್. ಸೀತಾರಾಮ್ ಕಣ್ಣು ಒರೆಸಿಕೊಳ್ಳುತ್ತಿದ್ದರು. ಒತ್ತರಿಸಿ ಬರುತ್ತಿದ್ದ ದುಃಖವನ್ನು ನಿಯಂತ್ರಿಸಲು ಹೆಣಗುತ್ತಿದ್ದರು. ಹಾಡು ನಮ್ಮನ್ನು ಕುಣಿಸುತ್ತದೆ. ಕರಗಿಸುತ್ತದೆ. ಏಕೆ? ನಮ್ಮ ಆಳದ ಸಂತೋಷ, ಸುಖಗಳು ಖುಷಿಯ ಕುಣಿತದಲ್ಲಿ ಅಭಿವ್ಯಕ್ತಿ ಪಡೆದರೆ ದುಃಖಗಳು, ತಲ್ಲಣಗಳು ಕಣ್ಣೀರಾಗಿ ಹರಿಯುತ್ತವೆ. ಎರಡಕ್ಕೂ ತಕ್ಷಣದ ಕಾರಣಗಳು ಇರುವುದಿಲ್ಲ. ಎಲ್ಲೋ ಯಾವುದೋ ಆಳದ ನಗು, ಅಳು ಎದ್ದು ಬಂದು ಗುದ್ದುತ್ತವೆ.

ಭಾರತಕ್ಕೆ ಮರಳಿ ಬಂದು ಎರಡು ದಿನಗಳಾಗಿತ್ತು. ರಾತ್ರಿ, ದೂರದರ್ಶನದ 'ಭಾರತ್ ಕಿ ಶಾನ್' ಗಾಯನ ಸ್ಪರ್ಧೆ ನೋಡುತ್ತಿದ್ದೆ. ಅಂಧ ಯುವಕ ರಘುವೀರ್ ಶರಣ್ 'ತೀಸರೀ ಕಸಂ' ಚಿತ್ರದ 'ಸಜನ್ ಝುಟ್ ಮತ್ ಬೋಲೊ, ಖುದಾ ಕೆ ಪಾಸ್ ಜಾನಾ ಹೈ' ಹಾಡನ್ನು ಮನಸ್ಸು ತುಂಬಿ ಹಾಡುತ್ತಿದ್ದರು. ತೀರ್ಪುಗಾರರಾಗಿ ಕುಳಿತಿದ್ದ ಪಾಪ್ ಗಾಯಕಿ ಉಷಾ ಉತುಪ್ ಕೆನ್ನೆಯ ಮೇಲೆ ನೀರು ಧಾರಾಕಾರವಾಗಿ ಹರಿಯುತ್ತಿತ್ತು. ಆಕೆ ಅಳ್ಳೆದೆಯ ಹೆಣ್ಣು ಮಗಳಲ್ಲ. ಕುಣಿಯುತ್ತ ಹಾಡು ಹೇಳಿದರೆ ಇಡೀ ಸಭೆಯನ್ನು ಕುಣಿಸುವಂಥ ದಡೂತಿ ಹೆಣ್ಣು ಮಗಳು. ಆದರೆ, 'ಸಜನ್ ಝೂಟ್ ಮತ್ ಬೋಲೊ...' ಹಾಡು ಕೇಳುತ್ತ ಕರಗಿ ಹೋಗಿದ್ದರು. ಮಾತನಾಡಲು ಅವರಲ್ಲಿ ಶಬ್ದಗಳು ಇರಲಿಲ್ಲ. ನಿರೂಪಕ ಕರೆದರೂ ಅವರು ವೇದಿಕೆ ಮೇಲೆ ಬರಲಿಲ್ಲ. ತಮ್ಮ ಮುಂದೆ ಇದ್ದ ಐದೂ ಬಟನ್‌ಗಳನ್ನು ಒತ್ತಿ ರಘುವೀರ್‌ಗೆ ಸಂಪೂರ್ಣ ಐದು ಅಂಕ ಕೊಟ್ಟರು. ಅದಕ್ಕಿಂತ ಹೆಚ್ಚು ಹೇಳುವ ಶಕ್ತಿ ಅವರಲ್ಲಿ ಇರಲಿಲ್ಲ. ಮೈಸೂರಿನ ರಘು ದೀಕ್ಷಿತ್ ಉತ್ತರ ಭಾರತದ ಯಾವುದೋ ಊರಿನ ರಘುವೀರ್ ಶರಣ್ ಅವರ ಹಾಡುಗಾರಿಕೆ ನಡುವೆ ಅಂತರವೇನೂ ಇರಲಿಲ್ಲ. ದೀಕ್ಷಿತ್ ಕನ್ನಡದಲ್ಲಿ ಹಾಡಿದ್ದರೆ ರಘು ಹಿಂದಿಯಲ್ಲಿ ಹಾಡಿದ್ದರು. ಪರಿಣಾಮ ಒಂದೇ ಆಗಿತ್ತು.

ಸುಪರ್ಣಾ ವೆಂಕಟೇಶ್ ಭರತ ನಾಟ್ಯ ಪ್ರವೀಣೆ, ಬೆಂಗಳೂರು ವಿಶ್ವ ವಿದ್ಯಾಲಯದಲ್ಲಿ ನೃತ್ಯಶಾಸ್ತ್ರ ಕಲಿಸುತ್ತಾರೆ. ಒಮ್ಮೆ ಹಂಪಿಯ ಉತ್ಸವದಲ್ಲಿ ಅವರು ಮತ್ತು ಸಹನೃತ್ಯಪಟು ಎಂ.ಬಿ. ನಾಗರಾಜ್ ಶಿವ-ಪಾರ್ವತಿಯ ನೃತ್ಯ

ನಡೆಸಿಕೊಟ್ಟರು. ಮರುದಿನ ಹಂಪಿಯ ರಸ್ತೆಯಲ್ಲಿ ಸುಪರ್ಣಾ ಮತ್ತು ನಾಗರಾಜ್ ಹೊರಟಿದ್ದರು. ಎದುರಿಗೆ ಒಬ್ಬ ವಯೋವೃದ್ಧ ವ್ಯಕ್ತಿ ಬಂದರು. ತಮ್ಮ ಕೊರಳಲ್ಲಿನ ಬೆಳ್ಳಿಖಚಿತ ರುದ್ರಾಕ್ಷಿ ಸರವನ್ನು ನಾಗರಾಜ್ ಕೊರಳಿಗೆ ಹಾಕಿ ಕಾಲು ಮುಟ್ಟಿ ನಮಸ್ಕರಿಸಿದರು. ನಾಗರಾಜ್ ವಯಸ್ಸಿನಲ್ಲಿ ಚಿಕ್ಕವರು. ತಕ್ಷಣ ಹಿಂದೆ ಸರಿದು ನೀವು ಹಿರಿಯರು ನನಗೆ ನಮಸ್ಕಾರ ಮಾಡಬಾರದು' ಎಂದರು. ಆ ಹಿರಿಯ,

"ಲೋ ಮೂಢ ನಿನಗೆ ಅಲ್ಲವೋ ನಾನು ನಮಸ್ಕಾರ ಮಾಡಿದ್ದು. ನಿನ್ನ ಒಳಗಿನ ಶಿವನಿಗೆ ಎಂದು ಹೇಳಿ ಹೊರಟುಹೋದರು. ಚಿತ್ರದುರ್ಗದಲ್ಲಿ ಇಂಥದೇ ಪಾರ್ವತಿಯ ನೃತ್ಯ ಮಾಡಿ ಕೆಳಗೆ ಇಳಿದು ಬಂದ ಸುಪರ್ಣಾ ಅವರಿಗೆ ಕೆಲವರು ಹೆಂಗಳೆಯರು ಪಾದ ತೊಳೆದು, ಅರಿಶಿನ-ಕುಂಕುಮ ಹಚ್ಚಿ ಆರತಿ ಮಾಡಿದರು. ಹಣವನ್ನು ಕಾಣಿಕೆಯಾಗಿ ಪಾದದ ಬಳಿ ಇಟ್ಟರು. ಸುಪರ್ಣಾ ಎಷ್ಟು ಬೇಡ ಎಂದರೂ ಕೇಳಲಿಲ್ಲ. ಅವರೂ ಸುಪರ್ಣಾ ಅವರಿಗೆ ಆರತಿ ಮಾಡಿರಲಿಲ್ಲ; ಅವರ ಒಳಗಿನ ಪಾರ್ವತಿಗೆ ಮಾಡಿದ್ದರು. ಸಂಗೀತ, ಸಾಹಿತ್ಯ, ನೃತ್ಯ ನಮ್ಮನ್ನು ಕಲಕುವ ರೀತಿ ಇದೇ ಆಗಿರಬೇಕೇ? ನಮ್ಮೊಳಗಿನ ಕಲ್ಲು ಮನುಷ್ಯನನ್ನು ಅದು ಹೀಗೆ ಕರಗಿಸುತ್ತಿರಬಹುದೇ?

೦೬.೧೨.೨೦೧೨

**ಮನೆಯನ್ನೇ ಗೆಲ್ಲದವರು ಮಾರು ಗೆಲ್ಲುತ್ತಾರೆಯೇ?**

ಮಾಡುವ ಕೆಲಸಕ್ಕೆ ಒಂದು 'ಕೇಂದ್ರ ಗಮನ' ಇರದೇ ಇದ್ದರೆ ಹೀಗೆಯೇ ಎಂಬುದು ಆಗುತ್ತದೆ. ಒಂದು ಸಂಸ್ಥೆಗೆ, ಅದರ ಮುಖ್ಯಸ್ಥರಿಗೆ ಇಂಥ 'ಕೇಂದ್ರ ಗಮನ' ಎಂಬುದು ಇರಬೇಕಾಗುತ್ತದೆ. ಅದು ಇಲ್ಲದೇ ಇದ್ದರೆ ಮಾಡಬೇಕಾದ ಕೆಲಸ ಬಿಟ್ಟು ಇನ್ನು ಏನೇನೋ ಮಾಡುತ್ತ ಇರುತ್ತೇವೆ. ಮೊನ್ನೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಅವರು ನವದೆಹಲಿಗೆ ಸಾಹಿತಿಗಳ, 'ಸಮಾಜ ಸೇವಕರ ನಿಯೋಗ ತೆಗೆದುಕೊಂಡು ಹೋಗಿ ಬಂದ ಮೇಲೆ ಪ್ರಾಧಿಕಾರ ತನ್ನ ಕೇಂದ್ರ ಗಮನ'ವನ್ನು ಕಳೆದುಕೊಂಡಿದೆ ಎಂದು ಮತ್ತೆ ಅನಿಸಿತು. ಪ್ರಾಧಿಕಾರದ ವತಿಯಿಂದ ಇಂಥ ನಿಯೋಗ ದೆಹಲಿಗೆ ಹೋಗುತ್ತಿರುವುದು ಇದೇ ಮೊದಲೇನೂ ಇಲ್ಲ. ಬಹುಶಃ ಇದು ಮೂರನೇ ನಿಯೋಗ. ಈ ಸಾರಿ ಅದು ದೆಹಲಿಯಲ್ಲಿ ತಂಗಿದ್ದು ಒಂಬತ್ತು ದಿನ. ಪ್ರಧಾನಿಯವರನ್ನೂ ಸೇರಿ, ಕೇಂದ್ರದ ಹಲವು ಸಚಿವರನ್ನು, ಸಂಸದರನ್ನು ನಿಯೋಗ ಭೇಟಿ ಮಾಡಿತು. ನಿಯೋಗದಲ್ಲಿ ಇದ್ದ ಒಬ್ಬ ಸದಸ್ಯರ ಪ್ರಕಾರ ಕೇಂದ್ರ ಕಾರ್ಮಿಕ ಸಚಿವ ಮಲ್ಲಿಕಾರ್ಜುನ ಖರ್ಗೆ ಅವರ ಜತೆಗಿನ ಭೇಟಿ ಹೆಚ್ಚು 'ಫಲಪ್ರದ' ಎನಿಸಿತು. ಖರ್ಗೆ ಅವರನ್ನು ದೆಹಲಿಗೆ ಹೋಗಿಯೇ ಭೇಟಿ ಮಾಡಬೇಕೇ?! ಕಲಿಕೆಯ ಮಾಧ್ಯಮ ಕುರಿತು ಪ್ರಧಾನಿ ಜತೆಗಿನ ಮಾತು ಮಾತೃಭಾಷೆ ಶಿಕ್ಷಣದ ಪರವಾಗಿಯೇನೂ ಇರಲಿಲ್ಲ.

ಚಂದ್ರು ಅವರ ನಿಯೋಗ ದೆಹಲಿಗೆ ಹೋಗಿದ್ದು, ರಾಷ್ಟ್ರೀಯ ಶಿಕ್ಷಣ ನೀತಿ, ರಾಷ್ಟ್ರೀಯ ಉದ್ಯೋಗ ನೀತಿ ಮತ್ತು ರಾಷ್ಟ್ರೀಯ ಜಲನೀತಿಯನ್ನು ಜಾರಿಗೆ ತರುವಂತೆ ಪ್ರಧಾನಿಯವರಿಗೆ ಆಗ್ರಹಿಸಲು. ೧೯೯೪ರಲ್ಲಿ ವೀರಪ್ಪ ಮೊಯ್ಲಿಯವರು ಮುಖ್ಯಮಂತ್ರಿ ಆಗಿದ್ದಾಗ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಒಂದು ಅಧಿನಿಯಮ ರೂಪಿಸಲಾಯಿತು. ಅದರಲ್ಲಿ ಪ್ರಾಧಿಕಾರ ಏನು ಕೆಲಸ ಮಾಡಬೇಕು ಎಂದು ನಿರ್ದೇಶಿಸಲಾಗಿತ್ತು. ಚಂದ್ರು ಅವರು ನಿಯೋಗ ತೆಗೆದುಕೊಂಡು ಹೋಗಿದ್ದ ಯಾವ ವಿಷಯವೂ ಅದರಲ್ಲಿ ಇಲ್ಲ! ಪ್ರಾಧಿಕಾರ ಮುಖ್ಯವಾಗಿ ಮಾಡಬೇಕಾದ ಕೆಲಸ ಆಡಳಿತದಲ್ಲಿ ಕನ್ನಡದ ಅನುಷ್ಠಾನ, ಸರೋಜಿನಿ ಮಹಿಷಿ ವರದಿಯ ಒಪ್ಪಿತ ಅಂಶಗಳ ಜಾರಿ, ಕನ್ನಡ ಅಭಿವೃದ್ಧಿಗೆ ಸಂಬಂಧಿಸಿದ ಮಾಹಿತಿಗಳ ಪ್ರಕಟಣೆ, ಕನ್ನಡ ಬಳಸದ ಅಧಿಕಾರಿಗಳು ಮತ್ತು ನೌಕರರ ವಿರುದ್ಧ ಕ್ರಮ ಜರುಗಿಸುವ ಅವಕಾಶ ಹಾಗೂ ಕನ್ನಡದ ಬಗ್ಗೆ ಕಾಲ ಕಾಲಕ್ಕೆ ಸರ್ಕಾರಕ್ಕೆ ಸಲಹೆ ನೀಡುವುದು. ಇಲ್ಲಿ ಎಲ್ಲಿಯೂ ಆಗಾಗ ದೆಹಲಿಗೆ ನಿಯೋಗ ತೆಗೆದುಕೊಂಡು ಹೋಗುವ ಪ್ರಸ್ತಾಪ ಇಲ್ಲ!

ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿ ಆಗಿದ್ದಾಗ ಕನ್ನಡ ಮತ್ತು ಗಡಿನಾಡು ಕಾವಲು ಸಮಿತಿಯನ್ನು ರಚಿಸಿದ್ದರು. ಅದಕ್ಕೆ ಮೊದಲು ಜ್ಞಾನದೇವ ದೊಡ್ಡಮೇಟಿ ಮತ್ತು ನಂತರ ಸಿದ್ದರಾಮಯ್ಯ ಅವರು ಅಧ್ಯಕ್ಷರಾಗಿದ್ದರೂ ಅದು ಹೆಚ್ಚು ಸುದ್ದಿ ಮಾಡಿದ್ದು ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪ ಅಧ್ಯಕ್ಷರಾಗಿದ್ದಾಗ, ಪುಟ್ಟಪ್ಪ ಗಟ್ಟಿ ಮನುಷ್ಯ. ಹೆಗಡೆಯವರು ಪುಟ್ಟಪ್ಪನವರಿಗೆ ಎಲ್ಲ ಸ್ವಾತಂತ್ರ್ಯ ಕೊಟ್ಟಿದ್ದರು. ಹಾಗೆ ನೋಡಿದರೆ ಪುಟ್ಟಪ್ಪ ಅವರಿಗೆ ಹಲ್ಲಿಲ್ಲದ ಒಂದು ಸಂಸ್ಥೆಯ ಅಧ್ಯಕ್ಷತೆ ಸಿಕ್ಕಿತ್ತು. ಆದರೆ, ಒಬ್ಬ ಮನುಷ್ಯನಲ್ಲಿ ಗಟ್ಟಿಗತನ ಇದ್ದರೆ ಏನೆಲ್ಲ ಮಾಡಬಹುದು ಎಂಬುದಕ್ಕೆ ಅವರು ಅಧ್ಯಕ್ಷರಾಗಿ ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರಲು ಕೊಟ್ಟ ಒತ್ತು ಒಂದು ನಿದರ್ಶನ. ಪುಟ್ಟಪ್ಪ ಯಾವುದಾದರೂ ಕಚೇರಿಗೆ ಭೇಟಿ ನೀಡುತ್ತಾರೆ ಎಂದರೆ ಅಧಿಕಾರಿಗಳ ಚಲ್ಲಣ ಒದ್ದೆಯಾಗುತ್ತಿತ್ತು. ಪುಟ್ಟಪ್ಪನಂಥ ಒಬ್ಬ ವ್ಯಕ್ತಿ ಮಹಾರಾಷ್ಟ್ರದಲ್ಲಿಯೂ ಇರಬೇಕು ಎಂದು ಅಲ್ಲಿನ ಪತ್ರಿಕೆಗಳು ಬರೆದುದು ಆಗಿನ ಕನ್ನಡ ಮತ್ತು ಗಡಿನಾಡು ಕಾವಲು ಸಮಿತಿ ಒತ್ತಿದ ಮುದ್ರೆ ಎಂಥದು ಎಂಬುದಕ್ಕೆ ಒಂದು ಉದಾಹರಣೆ.

ಅದೇ ಛಾಪು ಮುಂದೆ ಯಾರೇ ಅಧ್ಯಕ್ಷರಾದರೂ ಉಳಿಯಿತು. ಚಂದ್ರಶೇಖರ ಪಾಟೀಲರು ಅಧ್ಯಕ್ಷರಾಗಿದ್ದಾಗ ಕೂಡ ಅನೇಕ ಸರ್ಕಾರಿ ಕಚೇರಿಗಳಿಗೆ ಭೇಟಿ ನೀಡಿ ಅಲ್ಲಿ ಇದ್ದ ಇಂಗ್ಲಿಷ್ ಬೆರಳಚ್ಚು ಯಂತ್ರಗಳನ್ನು ಮತ್ತು ಮೊಹರುಗಳನ್ನು ವಶಪಡಿಸಿಕೊಂಡು ಹೋಗುತ್ತಿದ್ದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಎಲ್ಲ ಸರ್ಕಾರಗಳು ಎಷ್ಟು

ಮಹತ್ವ ಕೊಟ್ಟಿದ್ದವು ಮತ್ತು ಈಗಲೂ ಕೊಟ್ಟಿವೆ ಎಂದರೆ ಪಾಟೀಲರು ಅಧ್ಯಕ್ಷರಾಗಿದ್ದಾಗ ಅವರಿಗೆ ಸಂಪುಟ ದರ್ಜೆಯ ಸ್ಥಾನಮಾನ ನೀಡಲಾಗಿತ್ತು. ಆದರೆ, ಆಗಿನ ಕನ್ನಡ ಸಂಸ್ಕೃತಿ ಖಾತೆಯ ಸಚಿವರು ರಾಜ್ಯ ದರ್ಜೆ ಸಚಿವರಾಗಿದ್ದರು. ಈಗಲೂ ಪ್ರಾಧಿಕಾರದ ಅಧ್ಯಕ್ಷರಿಗೆ ಸಂಪುಟ ದರ್ಜೆಯ ಸ್ಥಾನಮಾನವೇ ಇದೆ. ಇದರ ಹಿಂದಿನ ಆಶಯ ಮುಖ್ಯವಾಗಿ ಜನರ ಭಾಷೆಯಲ್ಲಿಯೇ ಆಡಳಿತ ನಡೆಯಬೇಕು ಮತ್ತು ಅದಕ್ಕೆ ಪೂರಕವಾದ ವ್ಯವಸ್ಥೆಯನ್ನು ಪ್ರಾಧಿಕಾರ ಮಾಡಬೇಕು ಎನ್ನುವುದೇ ಆಗಿತ್ತು. ಪ್ರಾಧಿಕಾರದ ಕೆಲಸಗಳಿಗೆ ಸುದ್ದಿ

ಮಾಧ್ಯಮಗಳಲ್ಲಿ ಸಿಕ್ಕ ಪ್ರಚಾರ ಕೂಡ ಈ ಆಶಯಕ್ಕೆ ಪೂರಕವಾಗಿಯೇ ಇತ್ತು. ರಾಜ್ಯದಲ್ಲಿ ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗುವವರೆಗೆ ಪ್ರಾಧಿಕಾರಕ್ಕೆ ಸರ್ಕಾರ ಕೊಡುತ್ತಿದ್ದ ಅನುದಾನ ವಾರ್ಷಿಕ ಕೇವಲ ಐದು ಲಕ್ಷ ರೂಪಾಯಿ ಮಾತ್ರ ಆಗಿತ್ತು. ಸಣ್ಣಪುಟ್ಟ ಕೆಲಸಗಳಿಗಾಗಿ ಈ ಹಣವನ್ನು ಖರ್ಚು ಮಾಡಬಹುದಿತ್ತು. ಸಂಬಳ, ಸಾರಿಗೆಯ ಖರ್ಚು ವೆಚ್ಚಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯೇ ನೋಡಿಕೊಳ್ಳುತ್ತಿತ್ತು.

ಯಡಿಯೂರಪ್ಪ ಮುಖ್ಯಮಂತ್ರಿ ಆಗುತ್ತಿದ್ದಂತೆಯೇ ಪ್ರಾಧಿಕಾರದ ಅದೃಷ್ಟ ಖುಲಾಯಿಸಿತು. ಕಳೆದ ನಾಲ್ಕು ಮುಂಗಡಪತ್ರಗಳಲ್ಲಿ ಪ್ರಾಧಿಕಾರಕ್ಕೆ ವಾರ್ಷಿಕ ಐದು ಕೋಟಿ ರೂಪಾಯಿಗಳ ಹಾಗೆ ಅನುದಾನ ಸಿಕ್ಕಿದೆ. ಒಂದು ವರ್ಷ ಆರು ಕೋಟಿ ರೂಪಾಯಿ ಅನುದಾನ ಸಿಕ್ಕಿತ್ತು. ಪ್ರಾಧಿಕಾರ ಈಗ ದಿಕ್ಕು ತಪ್ಪಿದವರಂತೆ ವರ್ತಿಸುತ್ತಿರುವುದಕ್ಕೆ ಅನುದಾನ ಹೀಗೆ ಏಕಾಏಕಿ ಐದು ನೂರು ಪಟ್ಟು ಹೆಚ್ಚಾಗಿದ್ದು ಕಾರಣ ಎನಿಸುತ್ತದೆ. ಸಿಕ್ಕ ಅನುದಾನವನ್ನು ಖರ್ಚು ಮಾಡಬೇಕು. ಮಾಡಲು ಸೂಕ್ತ ದಾರಿಗಳು ಇರಲಿಲ್ಲ. ಕಳೆದ ನಾಲ್ಕು ವರ್ಷಗಳಲ್ಲಿ ಪ್ರಾಧಿಕಾರದ ಅಧ್ಯಕ್ಷರು ಸರ್ಕಾರದ ಕಚೇರಿಗಳಿಗೆ ಹೋಗಿ ಆಡಳಿತದಲ್ಲಿ ಕನ್ನಡ ಎಷ್ಟರ ಮಟ್ಟಿಗೆ ಜಾರಿಯಾಗಿದೆ ಎಂದು ತಪಾಸಣೆ ಮಾಡಿದ್ದು, ಜಾರಿ ಮಾಡದ ಅಧಿಕಾರಿಗಳ ವಿರುದ್ಧ ಸರ್ಕಾರಕ್ಕೆ ಶಿಫಾರಸು ಮಾಡಿ ಸುದ್ದಿ ಆಗಿದ್ದು ಯಾರಿಗೂ ನೆನಪಿಲ್ಲ. ಬರಗೂರು ರಾಮಚಂದ್ರಪ್ಪ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾಗ ಮೊದಲ ಬಾರಿಗೆ ೧೮ ಜನ ಐಎಎಸ್ ಅಧಿಕಾರಿಗಳಿಗೆ ನೋಟಿಸ್ ನೀಡಿದ್ದರು. ಅವರೆಲ್ಲ ಪ್ರಾಧಿಕಾರಕ್ಕೆ ಸಮಜಾಯಿಷಿಯನ್ನೂ ಕೊಟ್ಟಿದ್ದರು. ಹಾಗೆ ನೋಡಿದರೆ ಕನ್ನಡವನ್ನು ಜಾರಿಗೆ ತರದ ಅಧಿಕಾರಿಗಳ ವಿರುದ್ಧ ಏನು ಶಿಸ್ತುಕ್ರಮ ತೆಗೆದುಕೊಳ್ಳಬಹುದು ಎಂಬುದರ ಬಗ್ಗೆ ಸರ್ಕಾರವು ಬರಗೂರರು ಅಧ್ಯಕ್ಷರಾಗಿದ್ದ ಕಾಲದಲ್ಲಿಯೇ ವಿವರಣೆ ನೀಡಿತ್ತು. ಅಲ್ಲಿಯವರೆಗೆ 'ಕ್ರಮಕ್ಕೆ ಶಿಫಾರಸು ಮಾಡುವುದು' ಎಂಬ ಮಗುಂ ವಾಕ್ಯ ಮಾತ್ರ ನಿಯಮದಲ್ಲಿ ಇತ್ತು. ಕನ್ನಡವನ್ನು ಆಡಳಿತದಲ್ಲಿ ಸರಿಯಾಗಿ ಜಾರಿಗೆ ತರದೇ ಇದ್ದರೆ ತನ್ನ ವಿರುದ್ಧ ಕ್ರಮಕ್ಕೆ ಕನಿಷ್ಠ ಶಿಫಾರಸು ಹೋಗಬಹುದು ಎಂಬ ಹೆದರಿಕೆ ಕೂಡ ಈಗ ಅಧಿಕಾರಿಗಳಲ್ಲಿ ಇದ್ದಂತೆ ಕಾಣುವುದಿಲ್ಲ.

ಅವರ ಅದೃಷ್ಟಕ್ಕೆ ಪ್ರಾಧಿಕಾರದ ಗಮನ ಗಡಿನಾಡನಲ್ಲಿ ಜನಪದ ಸಮ್ಮೇಳನ ನಡೆಸುವ ಕಡೆಗೆ, ಶಾಸ್ತ್ರೀಯ ಭಾಷೆಯಾಗಿ ಕನ್ನಡ ಕುರಿತು ವಿಚಾರ ಸಂಕಿರಣ ನಡೆಸುವ ಕಡೆಗೆ, ಕನ್ನಡ ನುಡಿ ತೇರು ಎಂದು ಯಾತ್ರೆ ನಡೆಸುವ ಕಡೆಗೆ ಮತ್ತು ಇದನ್ನೆಲ್ಲ ಮೀರಿ ದೆಹಲಿಗೆ ಸಾಹಿತಿಗಳ, 'ಸಮಾಜ ಸೇವಕ'ರ ನಿಯೋಗ ತೆಗೆದುಕೊಂಡು ಹೋಗುವುದರ ಕಡೆಗೆ ಹರಿದಿದೆ. ಆಡಳಿತದಲ್ಲಿ ಕನ್ನಡ ಎಷ್ಟರ ಮಟ್ಟಿಗೆ ಜಾರಿಯಾಗಿದೆ ಎಂದು ನೋಡಲು ಅದೇ ಕೆಲಸಕ್ಕೆ ರಚಿತವಾದ

ಪ್ರಾಧಿಕಾರಕ್ಕೆ ವ್ಯವಧಾನ ಇಲ್ಲ ಎನ್ನುವುದಾದರೆ ಅಧಿಕಾರಿಗಳಿಗೆ ಏಕೆ ಶ್ರದ್ಧೆ ಇರುತ್ತದೆ? ಮೊನ್ನೆ ನಾನು ಪ್ರಾದೇಶಿಕ ಸಾರಿಗೆ ಕಚೇರಿಗೆ ಹೋಗಿದ್ದೆ. ನನ್ನ ಡ್ರೈವಿಂಗ್ ಲೈಸೆನ್ಸ್ ಕಳೆದು ಹೋಗಿತ್ತು. ಪೊಲೀಸ್ ಠಾಣೆಗೆ ದೂರು ಕೊಟ್ಟು ಅವರು ಕೊಟ್ಟ ರಸೀತಿಯನ್ನು ಲಗತ್ತಿಸಿ ಸಂಬಂಧಪಟ್ಟ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಬಳಿ ಅರ್ಜಿ ಹಿಡಿದುಕೊಂಡು ಹೋದೆ. ಅವರು, 'ಲೈಸೆನ್ಸ್ ಕಳೆದುಕೊಂಡು ಬಿಟ್ಟಿರೇ' ಎಂದು ಜಬರಿಸುವಂತೆ ಕೇಳಿ 'ಗೆಟ್ ಅಫಿಡೆವಿಟ್' ಎಂದು



ಇಂಗ್ಲಿಷ್‌ನಲ್ಲಿ ಬರೆದು ಅರ್ಜಿಯನ್ನು ವಾಪಸು ಕೊಟ್ಟರು. ಅವರು ಇನ್ನಷ್ಟು ಮೆಲುದನಿಯಲ್ಲಿ ಮಾತನಾಡಬಹುದಿತ್ತಲ್ಲ ಎಂದು ನಾನು ಅಂದುಕೊಳ್ಳಲಿಲ್ಲ. ಏಕೆಂದರೆ ಅಧಿಕಾರಿಗಳು ಜಬರಿಸಿಯೇ, ಮುಖ ಗಂಟು ಹಾಕಿಕೊಂಡೇ ಅಲ್ಲವೆ ಮಾತನಾಡಬೇಕಾದುದು? ಆದರೆ, 'ಪ್ರಮಾಣಪತ್ರ ಸಲ್ಲಿಸಿ' ಎಂದು ಕನ್ನಡದಲ್ಲಿ ಸುಲಭವಾಗಿ ಬರೆಯಬಹುದಿತ್ತಲ್ಲ ಎಂದು ಅಂದುಕೊಂಡೆ. ಯಾರಿಗೆ ಹೇಳುವುದು? ಎರಡು ಶಬ್ದಗಳನ್ನು ಕನ್ನಡದಲ್ಲಿ ಬರೆಯುವುದಕ್ಕೂ ಅಧಿಕಾರಿಗಳಿಗೆ ಮನಸ್ಸು ಇಲ್ಲದೇ ಇರುವಾಗ ಆಡಳಿತದಲ್ಲಿ ಕನ್ನಡ ಶೇ ೬೦ರಷ್ಟು, ೬೫ರಷ್ಟು ಜಾರಿಗೆ ಬಂದಿದೆ ಎಂದು ಹೇಳುವುದರಲ್ಲಿ ಏನು ಅರ್ಥವಿದೆ?

ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುವುದು ಒಂದು ಬಗೆ. ಆ ಕನ್ನಡ ಅರ್ಥವಾಗುವಂತೆ ಇರುವುದು ಇನ್ನೊಂದು ಬಗೆ. ಹಾಗೆ ಅರ್ಥವಾಗುವಂಥ ಕನ್ನಡದಲ್ಲಿ ಜಾರಿಗೆ ನಮ್ಮ ಆಡಳಿತ ಬಂದಿದೆಯೇ? ಸರ್ಕಾರದ ಕನ್ನಡವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಮೂಲ ಇಂಗ್ಲಿಷ್ ಪ್ರತಿಯನ್ನು ನೋಡಬೇಕಾಗುತ್ತದೆ! ಹಾಗಾದರೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಏನು ಮಾಡುತ್ತಿದೆ? ಸರ್ಕಾರದ ಆಡಳಿತ ಬಹುತೇಕ ಕಂಪ್ಯೂಟರ್‌ಮಯವಾಗಿದೆ. ಅನೇಕ ಕಚೇರಿಗಳು ಕಾಗದ ರಹಿತ ಕಚೇರಿಗಳು ಆಗುತ್ತಿವೆ. ಈಗ ಅಲ್ಲದಿದ್ದರೂ ಇನ್ನು ಕೆಲವು ವರ್ಷಗಳಲ್ಲಿ ಅದು ಸಂಪುರ್ಣವಾಗಿ ಸಾಧ್ಯವಾಗುತ್ತದೆ. ಹಾಗಾದರೆ ಅದಕ್ಕೆ ಅಗತ್ಯವಾದ ತಂತ್ರಾಂಶ ಸಿದ್ಧವಾಗಿದೆಯೇ? ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡ ತಂತ್ರಾಂಶ ಅಭಿವೃದ್ಧಿಗೆ ಒಂದು ಸಮಿತಿ ರಚಿಸಿತ್ತು. ಆ ಸಮಿತಿ ತನ್ನ ವರದಿಯನ್ನೂ ಕೊಟ್ಟಿದೆ. ಇದು ಸರ್ಕಾರಿ ಆಡಳಿತದಲ್ಲಿ ಬಳಕೆ ಮಾಡಲೂ ಉಪಯುಕ್ತವಾದ ಒಂದು ತಂತ್ರಾಂಶ. ಆದರೆ, ಅದನ್ನು ಅನುಷ್ಠಾನದಲ್ಲಿ ತರಲು ಇನ್ನೂ ಯಾವ ಪ್ರಯತ್ನವೂ ನಡೆದಂತೆ ಕಾಣುವುದಿಲ್ಲ. ಒಳ್ಳೆಯ ಕೆಲಸಕ್ಕೆ ನೂರೆಂಟು ಅಡಚಣೆ. ಅದನ್ನು ಜಾರಿಗೆ ತರುವಂತೆ ಚಂದ್ರಶೇಖರ ಕಂಬಾರರು ಮಾತ್ರ ಅವಕಾಶ ಸಿಕ್ಕಾಗಲೆಲ್ಲ ದನಿ ಎತ್ತುತ್ತಿದ್ದಾರೆ. ಅವರದು ಒಂಟಿದನಿ.

ಅಧಿಕಾರ ಎಂಬುದು ಒಂದು ಅವಕಾಶ. ಒಂದು ಸುಸಂಧಿ, ರಂಗಭೂಮಿಯ ನಟರಾಗಿ ಪ್ರಖ್ಯಾತರಾದ 'ಮುಖ್ಯಮಂತ್ರಿ' ಚಂದ್ರು ಅವರಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಎರಡನೇ ಅವಧಿಗೆ ಕೆಲಸ ಮಾಡುವ ಭಾಗ್ಯ ಸಿಕ್ಕಿದೆ. ಆದರೆ, ಅವರು ಪ್ರಾಧಿಕಾರದ ಮೂಲ ಉದ್ದೇಶಗಳನ್ನೇ ಮರೆತಂತೆ ಕಾಣುತ್ತದೆ. ಇಲ್ಲವಾದರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ವಿವಿಧ ಅಕಾಡೆಮಿಗಳು ಮಾಡುವ ಕೆಲಸವನ್ನು ಪ್ರಾಧಿಕಾರವೂ ಮಾಡುತ್ತಿರಲಿಲ್ಲ.

ರಾಷ್ಟ್ರೀಯ ಜಲನೀತಿಯನ್ನು ರೂಪಿಸಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಪ್ರಧಾನಿಗೆ ಮನವಿ ಕೊಡುವುದಂತೂ ಅತಿರೇಕ ಎನ್ನುವಂಥ ಕೆಲಸ. ನಿಜ, ಕನ್ನಡ ಎಂದರೆ ನಾಡು, ನುಡಿ, ನೀರು ಎಲ್ಲದಕ್ಕೂ ಸಂಬಂಧಪಟ್ಟುದು. ಆದರೆ, ಪ್ರಾಧಿಕಾರಕ್ಕೆ ಏನು ಕೆಲಸ ಮಾಡಬೇಕು ಎಂದು ಸರ್ಕಾರ ಗೊತ್ತುಪಡಿಸಿದೆಯಲ್ಲ? ಕರ್ನಾಟಕದ ಮುಖ್ಯಮಂತ್ರಿಗಳಿಗೆ, ಜಲಸಂಪನ್ಮೂಲ ಸಚಿವರಿಗೆ ಹೊಳೆಯದ್ದನ್ನು ಅಥವಾ ಅವರು ಮಾಡಲಾಗದ್ದನ್ನು ತಾನು ಮಾಡುತ್ತಿದ್ದೇನೆ ಎಂದು 'ಮುಖ್ಯಮಂತ್ರಿ' ಚಂದ್ರು ಹೇಳಲು ಹೊರಟಿದ್ದಾರೆಯೇ? ಅವರಿಗೆ ಆ ಉದ್ದೇಶ ಇದೆಯೋ ಇಲ್ಲವೋ ಗೊತ್ತಿಲ್ಲ.

-

ಆದರೆ, ಅವರ ಕ್ರಿಯೆ ಅಂಥ ಒಂದು ಅರ್ಥವನ್ನು ಧ್ವನಿಸುತ್ತದೆ. ಅವರು ಮತ್ತೆ ಮತ್ತೆ ವಿದೇಶ ಪ್ರವಾಸ ಮಾಡುತ್ತಿರುವುದು, ಅಲ್ಲಿನ ಕನ್ನಡ ಸಂಘ ಸಂಸ್ಥೆಗಳಿಗೆ ಕೊಡುಗೈ ದಾನಶೂರತನ ತೋರಿಸುತ್ತಿರುವುದು ಇಂಥದೇ ಇನ್ನೊಂದು ಅತಿರೇಕದ ಕೆಲಸ. ಮನೆಗೆದ್ದು ಮಾರು ಗೆಲ್ಲಬೇಕು ಎಂಬ ಮಾತು ಇದೆ. 'ಮುಖ್ಯಮಂತ್ರಿ' ಚಂದ್ರು ಇನ್ನೂ ತಮ್ಮ ಮನೆಯನ್ನೇ ಗೆದ್ದಿಲ್ಲ. ಮಾರು ಹೇಗೆ ಗೆಲ್ಲುತ್ತಾರೆ?

೧೨೦೧.೨೦೦೧

**ಆ ಪ್ರೀತಿಯನ್ನು ಇನ್ನೆಲ್ಲಿ ಹುಡುಕಲಿ?**

ವಾರದಿಂದ ಮನಸ್ಸು ವಿಲ ವಿಲ ಒದ್ದಾಡುತ್ತಿದೆ. ತಪ್ಪು ಮಾಡಿದೆ ರಾತ್ರಿಯಾಯಿತು ಎಂದೋ, ಇದು ನಿತ್ಯದ ಗೋಳು ಎಂದೋ ಎಂದು ಅನಿಸತೊಡಗಿದೆ. ಎಂದೋ, ಮಲಗೋಣ ತಾತ್ಸಾರ ಮಾಡದೇ ಕೆಲವು ಮೆಟ್ಟಿಲು ಕೆಳಗೆ ಇಳಿದು ಬರಬೇಕಿತ್ತು. ಬರಲಿಲ್ಲ. ಬಂದಿದ್ದರೆ ಒಂದು ಮೂಕಪ್ರಾಣಿಯ ಜೀವ ಉಳಿಯುತ್ತಿತ್ತು.

ಎಷ್ಟು ದಿನಗಳಿಂದ ನಾಯಿ ನಮ್ಮ ಫ್ಲಾಟಿನಲ್ಲಿ ಇತ್ತು ನೆನಪಿಲ್ಲ. ಹತ್ತು ವರ್ಷವೇ ಆಗಿರಬೇಕು. ಬಿಳಿ ಬಣ್ಣದ ನಾಯಿ. ಯಾರೂ ಸಾಕಿದ್ದಲ್ಲ. ಹೇಗೋ ಏನೋ, ಗೇಟು-ಪಾಟು ಏನೂ ಇರದ ನಮ್ಮ ಫ್ಲಾಟಿನಲ್ಲಿ ಬಂದು ಸೇರಿಕೊಂಡಿತ್ತು. ಸಿಕ್ಕವರು ಒಂದಿಷ್ಟು ಹಾಲು, ಅನ್ನ, ಬ್ರೆಡ್ಡು ಎಂದು ಹಾಕುತ್ತಿದ್ದರು. ತಿಂದು ಒಂದು ಮೂಲೆಯಲ್ಲಿ ಬಿದ್ದಿರುತ್ತಿತ್ತು. ಅದನ್ನು ತಬ್ಬಿ, ಎತ್ತಿಕೊಂಡು ಆಡಿಸುವವರು ಯಾರೂ ಇರಲಿಲ್ಲ. ಸಾಕಿದ ಪಮೇರಿಯನ್ ನಾಯಿಗಳ ಹಾಗೆ ಅದು ಮುದ್ದು ಮುದ್ದೂ ಆಗಿರಲಿಲ್ಲ. ಅದರ ಮೈ ನೀರು ಕಂಡು ಎಷ್ಟು ವರ್ಷವಾಗಿತ್ತೋ ಏನೋ?

ಹೊಟ್ಟೆ ಹಸಿದಾಗ ಯಾರದಾದರು ಮನೆ ಬಾಗಿಲು ಕಾಯುತ್ತಿತ್ತು. ಯಾರು ತನಗೆ ಯಾವಾಗ ಊಟ ಕೊಡುತ್ತಾರೆ ಎಂದು ಅದಕ್ಕೆ ಗೊತ್ತಿತ್ತು; ಅಥವಾ ಕೊಟ್ಟಾರು ಎಂದು ನಿರುಕಿಸುತ್ತಿತ್ತು. ಅವರು ಬಾಗಿಲು ತೆಗೆದು ಹೊರಗೆ ಬಂದರೆ ಅವರ

ಬಾಗಿಲ ಮುಂದೆ ಹೋಗಿ ನಿಂತುಕೊಳ್ಳುತ್ತಿತ್ತು. ಅವರು ಏನಾದರೂ ಹಾಕಿದರೆ ತಿನ್ನುತ್ತಿತ್ತು. ಹಾಕದಿದ್ದರೆ ಮತ್ತೆ ಬಂದು ಒಂದು ಮೂಲೆಯಲ್ಲಿ ಮಲಗುತ್ತಿತ್ತು. ಚಳಿ, ಮಳೆ, ಬೇಸಿಗೆ ಯಾವ ಕಾಲವಾದರೂ ಅಷ್ಟೇ. ಅದಕ್ಕೆ ಒಂದು ಗೂಡು ಎಂದು ಇರಲಿಲ್ಲ. ಕೆಳಗೆ ಹಾಸಿಗೆ ಇರಲಿಲ್ಲ. ಮೇಲೆ ಹೊದಿಕೆ ಇರಲಿಲ್ಲ. ಒಂದೊಂದು ಸಾರಿ ನಾವು ಮನೆ ಮುಂದೆ ಒಗೆದು ಒಣಗು ಹಾಕಿದ ಬಟ್ಟೆಗಳನ್ನೇ ಎಳೆದುಕೊಂಡು ಮಲಗಿಬಿಡುತ್ತಿತ್ತು!

ನನ್ನ ಜತೆಗೆ ಈಚೆಗೆ ಸ್ನೇಹ ಬೆಳೆಸಿಕೊಂಡಿತ್ತು. ಬೆಳಿಗ್ಗೆ ನಾನು ವಾಕಿಂಗ್ ಹೋಗಿ ಬರುವ ವೇಳೆಗೆ ಫ್ಲಾಟ್ ಮುಂಭಾಗದಲ್ಲಿ ಕಾಯುತ್ತಿತ್ತು. ಮುಂದಿನ ಎರಡೂ ಕಾಲನ್ನು ಉದ್ದ ಮಾಡಿ ಪ್ರೀತಿ ತೋರಿಸುತ್ತಿತ್ತು. ಬಾಲ ಅಲ್ಲಾಡಿಸುತ್ತ ಹತ್ತಿರ ಬರುತ್ತಿತ್ತು. ಐದಾರು ಪೇಪರ್ ಓದುವ ಧಾವಂತದಲ್ಲಿ ಅದರ ಪ್ರೀತಿ ಧಿಕ್ಕರಿಸಿ ಮನೆ ಒಳಗೆ ಹೊರಟು ಹೋಗುತ್ತಿದ್ದೆ. ಎರಡು ಮಹಡಿಯ ನಲವತ್ತು ಮೆಟ್ಟಿಲು ಹತ್ತುವವರೆಗೆ, ಕಾಲು ತೊಡಕು ಹಾಕುವವರಂತೆ ನನ್ನ ನೇವರಿಕೆ ಬಯಸಿ ಜತೆಜತೆಗೇ ಓಡಿ ಓಡಿ ಬರುತ್ತಿತ್ತು. ನಾನು ಅದರ ಮೈದಡವಲಿಲ್ಲ ಎಂದು ತಲೆ ತಗ್ಗಿಸಿ ನಿಂತುಕೊಳ್ಳುತ್ತಿತ್ತು. ಯಾವಾಗಲೋ ಒಂದು ಭಾನುವಾರ ವೇಳೆ ಇದ್ದರೆ, ಹೊರಗಿನ ಕಟ್ಟೆಯ ಮೇಲೆ ನಾನು ಕುಳಿತರೆ ಸಾಕು ನನ್ನ ಕಾಲ ನಡುವೆ ಬಂದು ಮೂತಿ ತೂರಿಸಿ ನಿಂತುಕೊಳ್ಳುತ್ತಿತ್ತು. ಇಡೀ ದೇಹವನ್ನು ಮೂಸುತ್ತಿತ್ತು. ಅದೇನು ಅಷ್ಟು ಸ್ವಚ್ಛವಾದ ನಾಯಿಯಲ್ಲ. ಯಾರೂ ಸಾಕದ ನಾಯಿಗೆ ಯಾರು ಸ್ನಾನ ಮಾಡಿಸಬೇಕು? ಅದರ ಮೈಯಲ್ಲಿ ಚಿಕ್ಕಾಡು ಇದ್ದಾವು ಎಂಬ ಭಯವೂ ನನಗೆ ಇತ್ತು. ಆದರೂ ಅದರ ಮೈಮೇಲೆ ಕೈಯಾಡಿಸಿ ನಾನೂ ಪ್ರೀತಿ ತೋರಿಸುತ್ತಿದ್ದೆ. ಒಳಗೆ ಬಂದು ಸಾಬೂನು ಹಚ್ಚಿ ಕೈ ತೊಳೆದುಕೊಳ್ಳುತ್ತಿದ್ದೆ.

ರಾತ್ರಿ ನಾನು ಮನೆಗೆ ಬಂದು ತಲುಪುವಾಗ ಯಾವುದಾದರೂ ಬೀದಿ ನಾಯಿ ಬೊಗಳುತ್ತ ಬಂದರೆ ನಮ್ಮ ನಾಯಿ ಧಾವಿಸಿ ಕೆಳಗೆ ಬಂದು ಅವುಗಳನ್ನೆಲ್ಲ ಓಡಿಸಲು ಮುಂದಾಗುತ್ತಿತ್ತು. ಇದೇನು ಅಂಥ ಧೈರ್ಯಸ್ಥ ನಾಯಿಯಲ್ಲ. ಒಂದಿಷ್ಟು ದೂರ ಹೋದಂತೆ ಮಾಡಿ ಮತ್ತೆ ಬಂದು ನನ್ನ ಹಿಂದೆ ರಕ್ಷಣೆ ಪಡೆಯುತ್ತಿತ್ತು. ಬಾಕಿ ಬೀದಿ ನಾಯಿಗಳಿಗೆ ಅದೇ ಸಿಟ್ಟು ಎಂದು ಕಾಣುತ್ತದೆ. ಅವೆಲ್ಲ ಹಗಲು ರಾತ್ರಿ ಬೀದಿ ಭಿಕಾರಿಗಳ ಹಾಗೆ ಸುತ್ತುತ್ತಿದ್ದಾಗ ಈ ನಾಯಿಗೆ ಮಾತ್ರ ಏನು ರಕ್ಷಣೆ ಎಂದು ಅವುಗಳಿಗೆ ಕೋಪ ಇದ್ದಂತೆ ಇತ್ತು. ಅವಕಾಶಕ್ಕಾಗಿ ಕಾಯುತ್ತಿದ್ದವೋ ಏನೋ?

ಫ್ಲಾಟು ನಿರ್ಮಾಣವಾಗಿ ಮೂವತ್ತು ವರ್ಷಗಳಾದ ಮೇಲೆ ಆಚೆ ಈಚೆ ಎರಡೂ ಕಡೆ ಮೊನ್ನೆ ಕಬ್ಬಿಣದ ಗೇಟು ಹಾಕಿಸಿದೆವು. ಆ ಕೆಲಸ ಮಾಡಿಸಲು ಫ್ಲಾಟಿನಲ್ಲಿ ಮಾಲೀಕರಾಗಿ ವಾಸವಾಗಿದ್ದ ನಮ್ಮಲ್ಲೇನೂ ಒಗ್ಗಟ್ಟು ಇರಲಿಲ್ಲ.

ಹನ್ನೊಂದು ಮನೆಗಳು ಹನ್ನೊಂದು ಮುಖ! ಬಾಡಿಗೆಗೆ ಬಂದ ಪುಣ್ಯಾತ್ಮರೊಬ್ಬರು ಆಸಕ್ತಿ ವಹಿಸಿ ಗೇಟು ಹಾಕಿಸಿದರು. ನಮ್ಮ ನಾಯಿಗೆ ಮತ್ತಷ್ಟು ರಕ್ಷಣೆ ಸಿಕ್ಕಿತು. ಅದು ಹೊರಗೆ ಹೋಗುತ್ತಲೇ ಇರಲಿಲ್ಲ. ಅದಕ್ಕೂ ಪ್ರಾಣಭೀತಿ ಇತ್ತೇ? ಹೊರಗೆ ಸಾವು ಹೊಂಚು ಹಾಕುವುದು ಅದಕ್ಕೆ ತಿಳಿದಿತ್ತೇ? ಗೊತ್ತಿಲ್ಲ.

ಮೊನ್ನೆ ರಾತ್ರಿ ಕಚೇರಿ ಕೆಲಸ ಮುಗಿಸಿಕೊಂಡು ಮನೆಗೆ ಹೋದೆ. ಗೇಟಿನ ಒಳಗೇ ಕಾಯುತ್ತ ನಿಂತಿತ್ತು. ಮತ್ತೆ ಮೂಸಿ ನೋಡಿತು. ಬಾಲ ಅಲ್ಲಾಡಿಸಿತು. ಎಲ್ಲ ನಲವತ್ತು



ಮೆಟ್ಟಿಲು ನನ್ನ ಜತೆಗೇ ಏರಿಕೊಂಡು ಬಂತು. “ಲೇಟಾಯ್ತಪ್ಪ, ನಾಳೆ ಸಿಸ್ತೀನಿ' ಎಂದು ಹೇಳಿ ಮನೆ ಒಳಗೆ ಹೋದೆ. ಕಣ್ಣ ತುಂಬ ಪ್ರೀತಿ ತುಂಬಿಕೊಂಡು ನಿಂತಿದ್ದ ನಾಯಿ ಕೆಳಗೆ ಹೊರಟುಹೋಯಿತು. ಅದು ನಮ್ಮ ಕೊನೆಯ ಭೇಟಿ ಆಗುತ್ತದೆ ಎಂದು ನಾನು ಅಂದುಕೊಂಡಿರಲಿಲ್ಲ. ಮತ್ತೆ ಅರ್ಧ ಗಂಟೆ ತಡವಾಗಿ ಇನ್ನೊಂದು ಮನೆಯವರು ಗೇಟು ತೆಗೆದುಕೊಂಡು ಒಳಗೆ ಬಂದರು. ಆಗ ಏನಾಯಿತೋ ಗೊತ್ತಿಲ್ಲ. ನಮ್ಮ ನಾಯಿ ಹೊರಗೆ ಹೊರಟು ಹೋಯಿತೆಂದು ಕಾಣುತ್ತದೆ.

ಸ್ವಲ್ಪ ಹೊತ್ತಿನಲ್ಲೇ ಬೀದಿ ನಾಯಿಗಳ ಬೊಗಳಾಟ ಶುರುವಾಯಿತು. ಒಂದು ನಾಯಿ ಕುಂಯ್ಯೋ ಮತ್ತೋ ಎಂದು ಪ್ರಾಣ ಹೋದವರ ಹಾಗೆ ಕೂಗುತ್ತಿತ್ತು. ನಮ್ಮದೇ ಬೀದಿಯಲ್ಲಿ ಒಂದು ನಾಯಿ ಮರಿ ಹಾಕಿತ್ತು. ಆ ಮರಿಗಳಲ್ಲಿ ಒಂದನ್ನು ಯಾವುದಾದರೂ ನಾಯಿ ಹೊತ್ತುಕೊಂಡು ಹೋಯಿತೋ ಏನೋ ಎಂದು ಮನಸ್ಸಿನಲ್ಲಿಯೇ ಅಂದುಕೊಂಡೆ. ನಿತ್ಯ ರಾತ್ರಿ ನಾಯಿಗಳು ಬೊಗಳುವುದು ಸಾಮಾನ್ಯವಾದ್ದರಿಂದ ಆಲಸ್ಯದಿಂದ ಮಲಗಿಬಿಟ್ಟೆ. ಒಂದು ಕೋಲು ಹಿಡಿದುಕೊಂಡು ಕೆಳಗೆ ಬರಬೇಕಿತ್ತು. ನೋಡಬೇಕಿತ್ತು. ಬರಲಿಲ್ಲ. ಮರುದಿನ ನಮ್ಮ ನಾಯಿ ಕಾಣಲಿಲ್ಲ. ಫ್ಲಾಟಿನವರಿಗೆಲ್ಲ ನಮ್ಮ ನಾಯಿ ಎಲ್ಲಿ ಹೋಯಿತು ಎಂದು ತಿಳಿಯಲಿಲ್ಲ. ರಸ್ತೆ ರಸ್ತೆ ಹುಡುಕಿದರೂ ಸಿಕ್ಕಲಿಲ್ಲ. ಒಂದು ಕ್ಷಣವೂ ಎಲ್ಲಿಯೂ ಹೋಗದ ನಾಯಿ ಇದ್ದಕ್ಕಿದ್ದಂತೆ ಎಲ್ಲಿ ಹೋಯಿತು? ಯಾರೂ ಸಾಕಿದ ನಾಯಿಯಲ್ಲ ಅದು. ಎಲ್ಲರೂ, 'ಎಲ್ಲಿಯೋ ಹೋಗಿರಬೇಕು. ನಾಳೆ ಬಂದೀತು ಬಿಡು' ಎಂದು ಸುಮ್ಮನಾದರು. ಮೂರು ದಿನಗಳ ಹಿಂದೆ ಹತ್ತಿರದ ರಸ್ತೆಯ ಚರಂಡಿಯಲ್ಲಿ ರುಂಡ-ಮುಂಡ ಬೇರ್ಪಡೆಯಾದ ಒಂದು ನಾಯಿ ಬಿದ್ದ ಸುದ್ದಿ ಸಿಕ್ಕಿತು. ಹೋಗಿ ನೋಡಿದರೆ ಅಲ್ಲಿ ನಾಯಿ ಇರಲಿಲ್ಲ. ಆದರೆ ಅದು ನಮ್ಮದೇ ನಾಯಿ ಎಂದು ಗೊತ್ತಾಯಿತು. ಪಾಲಿಕೆಯವರು ಶವ ಸಾಗಿಸಿಬಿಟ್ಟಿದ್ದರು.

ಸಾಕಿದ ನಾಯಿ ಆಗಿದ್ದರೆ ಏನು ಕಥೆ ಆಗುತ್ತಿತ್ತೋ ಏನೋ? ನಾಯಿ ಸಾಕಿದವರ ಕಥೆ, ಅದು ಸತ್ತಾಗ ಅವರು ಸಂಕಟಪಟ್ಟ ಕಥೆ, ಅದನ್ನು ಮಣ್ಣು ಮಾಡಿದ ಕಥೆ, ಅದರ ಮೇಲೆ ಒಂದು ಸ್ಮಾರಕ ಕಟ್ಟಿದ ಕಥೆ ಕೇಳಿದ್ದೇನೆ. ನಾಯಿ ಸಾಕಿದವರು ಅದನ್ನು ಬಿಟ್ಟು ಪರ ಊರಿಗೆ ಹೋಗಲು ಆಗದೆ ಒದ್ದಾಡಿದ ಕಥೆಯನ್ನೂ ಕೇಳಿದ್ದೇನೆ. ಆದರೆ, ನಮ್ಮ ಫ್ಲಾಟಿನ ಸಾಕಿದ ನಾಯಿಯೂ ಅಲ್ಲದ, ಬೀದಿ ನಾಯಿಯೂ ಅಲ್ಲದ ನಮ್ಮ ನಾಯಿ ಹೀಗೆ ಬೀದಿ ಹೆಣವಾದ ಸುದ್ದಿ ಕೇಳಿ ನಾನೂ ಮಮ್ಮಲ ಮರುಗಿದೆ. ಸಾಯುವ ಹಾಗೆ ಕೂಗುತ್ತಿದ್ದ ಆ ನಾಯಿ ನಮ್ಮ ಫ್ಲಾಟಿನ ನಾಯಿಯೇ ಆಗಿತ್ತು. ಅದರ ಮೇಲೆ ಎಲ್ಲ ಬೀದಿ ನಾಯಿಗಳು ದಾಳಿ ಮಾಡಿದ್ದುವು. ಅದು ಜೀವ ಕಳೆದುಕೊಳ್ಳುವ ಮುನ್ನ, ಅದರ ರುಂಡ ಬೇರ್ಪಡುವ ಮುನ್ನ ನನ್ನನ್ನು, ನಮ್ಮ ಫ್ಲಾಟಿನವರನ್ನು ತನ್ನ ನೆರವಿಗೆ ಕರೆದಿರಬಹುದೇ? 'ಒಬ್ಬರಾದರೂ ಬರೋ' ಎಂದು ಕೂಗಿರಬಹುದೇ? ಅಂದು ರಾತ್ರಿಯ ಅದರ ಕೂಗನ್ನು ನೆನಪಿಸಿಕೊಂಡರೆ ಹಾಗೆಯೇ ಅನಿಸುತ್ತದೆ. ನಾವು ಯಾರಾದರೂ ಅದನ್ನು ಸಾಕಿದ್ದರೆ ಅದು ಹೀಗೆ ಬೀದಿ ಹೆಣವಾಗಲು ಬಿಡುತ್ತಿದ್ದೆವೆ? ನಮಗೆಲ್ಲ ಅಷ್ಟು ಪ್ರೀತಿ ತೋರಿದ ಮೂಕಪ್ರಾಣಿಯನ್ನು ನಾವು ಎಷ್ಟು ನಿಕೃಷ್ಟವಾಗಿ ಕಂಡುಬಿಟ್ಟೆವಲ್ಲ? ಮನುಷ್ಯನೇ



ಹಾಗೇನೋ? ಆತನಿಗಿಂತ ನಿಕೃಷ್ಟರು ಯಾರೂ ಇರಲಾರರೇನೋ? ಈಗ ಆ ನಾಯಿಯ ಪ್ರೀತಿಯನ್ನು ಎಲ್ಲಿ ಹುಡುಕಲಿ?

೩೦-೧೨-೧೨

**ಬಳ್ಳಾರಿ ಭೇಟಿ ನೆಪದಲ್ಲಿ ಒಂದಿಷ್ಟು ಕನವರಿಕೆ**

ನನಗೆ ಕುತೂಹಲವಿತ್ತು. ಬಳ್ಳಾರಿ ಈಗ ಹೇಗಿರಬಹುದು ಎಂದು. ನಾಲ್ಕು ವರ್ಷಗಳ ನಂತರ ಊರಿಗೆ ಹೊರಟಿದ್ದೆ. ನಾನು ಮತ್ತು ನನ್ನ ಸಂಪಾದಕರು ಜತೆಯಾಗಿ ೨೦೦೯ರ ಲೋಕಸಭೆ ಚುನಾವಣೆಯಲ್ಲಿ ಆ ಜಿಲ್ಲೆಯಲ್ಲಿ ಪ್ರವಾಸ ಮಾಡಿದ್ದೆವು. ಊರಿನಲ್ಲಿ ರಸ್ತೆಗಳು ಚೆನ್ನಾಗಿ ಇರಲಿಲ್ಲ. ಗಣಿಗಾರಿಕೆ ಜೋರಾಗಿ ನಡೆಯುತ್ತಿದ್ದ ಕಾಲವದು. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು ಒಂದು ವರ್ಷವಷ್ಟೇ ಆಗಿತ್ತು. ರೆಡ್ಡಿ ಸೋದರರು ಊರ ಹೊರವಲಯದಲ್ಲಿ ಕಟ್ಟಿಸಿದ್ದ ವೃದ್ಧಾಶ್ರಮದಲ್ಲಿ ಜನಾರ್ದನ ರೆಡ್ಡಿಯವರನ್ನು ಭೇಟಿ ಮಾಡಿದ್ದೆವು. ಅವರು ಚೀನಾ ಮಾರುಕಟ್ಟೆಯಿಂದಾಗಿ ಗಣಿ ದಂಧೆ ಹೇಗೆ ಲಾಭ ತಂದಿತು, ಕಾನ್ಸ್‌ಟೇಬಲ್ ಮಕ್ಕಳಾದ ತಾವು ಹೇಗೆ ದಿಢೀರ್ ಶ್ರೀಮಂತರಾದೆವು ಎಂದು ನಮಗೆ ಹೇಳಿದ್ದರು. ತಮ್ಮ ಪ್ರತಿಸ್ಪರ್ಧಿಗಳು ಅಕ್ರಮ ದಂಧೆಯಲ್ಲಿ ತೊಡಗಿದ್ದಾರೆ ಎಂದೂ ಅವರು ದೂರಿದ್ದರು. ರೆಡ್ಡಿಯವರನ್ನು ಭೇಟಿ ಮಾಡಿದಾಗ ಒಬ್ಬ ಜನಪ್ರತಿನಿಧಿಯನ್ನು ಭೇಟಿ ಮಾಡಿದ ಅನುಭವವೇನೂ ನನಗೆ ಆಗಿರಲಿಲ್ಲ. ಅವರು ಬಂದ ದುಬಾರಿ ರೇಂಜ್ ರೋವರ್ ಕಾರು, ಅವರ ಸುತ್ತಮುತ್ತ ಇದ್ದ ಖಾಸಗಿ ಭದ್ರತಾಪಡೆ. ಎಲ್ಲ ಒಂದು ರೀತಿಯಲ್ಲಿ ನಿಗೂಢ ಎನ್ನುವಂತೆ ಇತ್ತು. ಅದು ಯಾವ ಒಬ್ಬ ಪ್ರಧಾನಿ, ರಾಷ್ಟ್ರಪತಿಯ ಸಂಚಾರ ಭದ್ರತೆಗೂ ಕಡಿಮೆ ಎನ್ನುವಂತೆ ಇರಲಿಲ್ಲ. ನಮ್ಮ ಜತೆಗೆ

ಸ್ವಲ್ಪ ಹೊತ್ತು ಮಾತನಾಡಿ ಬೆಂಗಳೂರಿನಿಂದ ಬಂದಿದ್ದ ಪತ್ರಕರ್ತೆಯೊಬ್ಬರ ಜತೆ ಹೆಲಿಕಾಪ್ಟರ್‌ನಲ್ಲಿ ರೆಡ್ಡಿ ಬೆಂಗಳೂರಿಗೆ ಹಾರಿ ಹೋದರು.

ಅದಾಗಿ ಈಗ ನಾಲ್ಕು ವರ್ಷ. ಮತ್ತೆ ಬಳ್ಳಾರಿಗೆ ಶಿರುಗುಪ್ಪ ಮೂಲಕ ಪ್ರವೇಶ ಮಾಡಿದೆವು. ಬಳ್ಳಾರಿ ನಗರ ಪ್ರವೇಶದಲ್ಲಿಯೇ ಸುಮಾರು ಆರೇಳು ಎಕರೆ ಜಾಗದಲ್ಲಿ ಜನಾರ್ದನ ರೆಡ್ಡಿ ಮತ್ತು ಬಿ. ಶ್ರೀರಾಮುಲು ಮನೆ ಕಟ್ಟಿಸಿಕೊಂಡಿದ್ದಾರೆ. ಒಂದು ನಗರದ ಅಂಚಿನಲ್ಲಿಯೇ ಆರೇಳು ಎಕರೆ ಜಾಗ ಎಲ್ಲಿ ಖಾಲಿ ಇರುತ್ತದೆ? ಇವರೇ ಖಾಲಿ ಮಾಡಿಸಿದರೋ, ಅಲ್ಲಿ ವಾಸವಾಗಿದ್ದ ಜನರೇ ಖಾಲಿ ಮಾಡಿ ಹೋದರೋ? ಬಳ್ಳಾರಿಯಲ್ಲಿ ಕೇಳಿದರೆ ಏನೇನೋ ಕಥೆ ಹೇಳುತ್ತಾರೆ. ವಾಸ್ತವ ಏನು ಎಂದರೆ ಅಲ್ಲಿ ಎರಡು ಭಾರಿ ಭವ್ಯ ಬಂಗಲೆಗಳು ತಲೆ ಎತ್ತಿವೆ. ಒಳಗೆ ಏನೇನು ಸವಲತ್ತು ಇವೆ ಎಂಬ ಬಗೆಗೆ ಊರಿನಲ್ಲಿ ದಂತಕಥೆಗಳೂ ಇವೆ. ನೋಡಿ ಬಂದವರು ಕಡಿಮೆ. ಅವರು ಬರೀ ಮನೆ ಮಾತ್ರ ಕಟ್ಟಲಿಲ್ಲ. ಹೊರಗಿನ ಜಗತ್ತಿಗೆ ಕಾಣಬಾರದು ಎಂದೋ, ಭಯದ ಕಾರಣವಾಗಿಯೋ ಎರಡೂ ಮನೆಗಳಿಗೆ ಇಪ್ಪತ್ತರಿಂದ ಇಪ್ಪತ್ತೈದು ಅಡಿ ಎತ್ತರ ಆವರಣ ಗೋಡೆಯನ್ನೂ ಕಟ್ಟಿದ್ದರು. ಈಗ ಅದನ್ನು ಬಹುತೇಕ ಬೀಳಿಸಿದ್ದಾರೆ. ಅಷ್ಟು ದೊಡ್ಡ ಮನೆ ಕಟ್ಟಿ ಅಷ್ಟು ಎತ್ತರದ ಆವರಣ ಗೋಡೆ ಕಟ್ಟಿಸಿದ ಮೇಲೂ 'ದುರ್ದೆಸೆ'ಯ ಕಣ್ಣು ತಪ್ಪಿಸಲು ಆಗಲಿಲ್ಲ ಎಂದು ಇರಬಹುದು! ಈಗ ಶ್ರೀರಾಮುಲು ಅವರ ಮಲಗುವ ಕೋಣೆಗೆ ನೇರವಾಗಿ ಕಾರು ಹೋಗುವಂಥ ಸೌಕರ್ಯ ನಿರ್ಮಾಣವಾಗುತ್ತಿದೆ ಎಂದು ಸುದ್ದಿ, ಮತ್ತೆ ಇದು ಕೇವಲ ದಂತಕಥೆ ಇರಬಹುದು!

ನಾವು ಕಳೆದ ಸಾರಿ ಬಳ್ಳಾರಿಗೆ ಹೋದಾಗ ನಗರದ ರಸ್ತೆಗಳ ಕಾಮಗಾರಿ ಆರಂಭವಾಗಿತ್ತು. ಅದಕ್ಕೂ ಕೆಲವು ವರ್ಷ ಹಿಂದೆ ಆ ನಗರಕ್ಕೆ ಹೋಗಿ ಅಲ್ಲಿನ ರಸ್ತೆಗಳ ದುಃಸ್ಥಿತಿ ಕಂಡು ಗಾಬರಿಗೊಂಡಿದ್ದ ಸಂಪಾದಕರು 'ಈಗ ವಾಸಿ' ಎಂದಿದ್ದರು. ಈಗ ಇನ್ನೂ ವಾಸಿ, ಒಳ್ಳೆಯ ರಸ್ತೆಗಳು ಆಗಿವೆ. ರಸ್ತೆಗಳ ಮಧ್ಯದಲ್ಲಿ ವಿಭಜಕಗಳು ಇವೆ. ಅವುಗಳ ನಡುವೆ ಬೀದಿ ದೀಪಗಳೂ ಇವೆ. ಆದರೆ ಇದ್ದಕ್ಕಿದ್ದಂತೆ ಶ್ರೀಮಂತಿಕೆ ಬಂದು ಅರ್ಧ ರಾತ್ರಿಯಲ್ಲಿ ಕೊಡೆ ಹಿಡಿದು ಅಥವಾ ಬೆಳದಿಂಗಳಲ್ಲಿ ತಂಪು ಕನ್ನಡಕ ಹಾಕಿ ಮೆರೆದವರಿಗೆ ಈಗ ಮತ್ತೆ ಬಡತನ ಬಂದಂತೆ ಆಗಿದೆ. ಊರಿಗೆ ಮಂಕು ಬಡಿದಿದೆ. ಗಣಿಗಾರಿಕೆ ಜೋರಾಗಿದ್ದಾಗ ಬಳ್ಳಾರಿಯ ಆರ್ಥಿಕ ಚಿತ್ರವೇ ಬೇರೆ ಇತ್ತು. ಚಿನ್ನ ಬೆಳ್ಳಿ ಅಂಗಡಿಗಳು, ಬೆಲೆ ಬಾಳುವ ಕಾರಿನ ಷೋ ರೂಮ್‌ಗಳು, ಆಡಿಡಾಸ್, ರೀಬಾಕ್ ಅಂಗಡಿಗಳು, ಭಾರತದ ಬ್ಯಾಂಕುಗಳು ಮಾತ್ರ ಸಾಲವು ಎಂದು ವಿದೇಶಿ ಬ್ಯಾಂಕುಗಳು ಬಳ್ಳಾರಿಯಲ್ಲಿ 'ಅಂಗಡಿ' ತೆರೆದಿದ್ದುವು. ಮಣ್ಣಿನಲ್ಲಿ ಚಿನ್ನ ಕಂಡುಕೊಂಡವರು ಹಾದಿ ಬೀದಿಯಲ್ಲಿ ಸಿಕ್ಕ

ಸಿಕ್ಕಂತೆ ರೊಕ್ಕ ಚೆಲ್ಲುತ್ತಿದ್ದರು. ನ್ಯಾಯವಾಗಿ ಜೀವನ ಮಾಡುವವರಿಗೆ ಮನೆ ಬಾಡಿಗೆ ಕೊಡುವುದೂ ಕಷ್ಟವಾಗಿತ್ತು. ಗಣಿಗಾರಿಕೆಯಲ್ಲಿ ಬರೀ ರೆಡ್ಡಿಗಳು ಮಾತ್ರ ದುಡ್ಡು ಮಾಡಿಕೊಂಡಿರಲಿಲ್ಲ. ಅವರ ಜತೆಗೆ ಇತರರೂ ಗಣಿ ಅಗೆದಿದ್ದರು. ಲಾರಿಗಳಲ್ಲಿ ಸಾಗಿಸಿದ್ದರು. ಟನ್‌ಗಟ್ಟಲೆ ಅಗೆದ ಅದಿರು ಸಾಗಿಸಲು ಅನೇಕರು ಹತ್ತು ಗಾಲಿಯ ಲಾರಿ ಖರೀದಿಸಿದ್ದರು. ಊರಿನಲ್ಲಿ ದುಡ್ಡಿದ್ದವರ ಸಂಖ್ಯೆ ಹೆಚ್ಚಾಯಿತು. ದುಡ್ಡಿದ್ದವರು ಬಂದು



ಹೋಗುವುದೂ ಹೆಚ್ಚಾಯಿತು. ಅವರಿಗೆ ತಕ್ಕಂತೆ ದೊಡ್ಡ ದೊಡ್ಡ ಹೋಟೆಲ್‌ಗಳು ತಲೆ ಎತ್ತಿದುವು. ಊರಿನ ಜೀವನ ವಿಧಾನವೇ ಬದಲಾಗಿ ಹೋಗಿತ್ತು.

ಬಳ್ಳಾರಿಯ ಅದೃಷ್ಟವೇನೋ ಖುಲಾಯಿಸಿತ್ತು. ಆದರೆ, ಬಳ್ಳಾರಿಯ ಗಡಿಯಲ್ಲಿ ಅಗೆದ ಅದಿರು ಸಾಗುವ ದಾರಿಯ ಬದುಕು ನರಕವಾಗಿ ಹೋಗಿತ್ತು. ಆ ನರಕವನ್ನು ನಾನೂ ಮತ್ತು ನನ್ನ ಸಂಪಾದಕರು ಅನೇಕ ಸಾರಿ ಅನುಭವಿಸಿದ್ದೆವು. ಬಳ್ಳಾರಿಯಿಂದ ಹುಬ್ಬಳ್ಳಿವರೆಗೆ, ಹೊಸಪೇಟೆಯಿಂದ ಹುಬ್ಬಳ್ಳಿವರೆಗೆ, ಹುಬ್ಬಳ್ಳಿಯಿಂದ ಮಂಗಳೂರಿನವರೆಗೆ ಹೋಗುವ ಮಾರ್ಗದಲ್ಲಿ ರಸ್ತೆಯೇ ಇರಲಿಲ್ಲ. ಹತ್ತು ಗಾಲಿಗಳ ಅದಿರು ಸಾಗಣೆ ಲಾರಿಗಳ ಕೆಳಗೆ ಸಿಕ್ಕು ಎಲ್ಲ ರಸ್ತೆಗಳ ಚರ್ಮ ಕಿತ್ತು ಹೋಗಿತ್ತು. ಪಕ್ಕದ ನೂರಾರು ಕಿಲೋಮೀಟರ್ ದಾರಿಯ ಹಸಿರಿಗೆ ಕಂದು ದೂಳು ಬಡಿದಿತ್ತು. ಪರಿಸರದಲ್ಲಿ ಪ್ರಾಣವಾಯು ಕಡಿಮೆ ಆಗಿತ್ತು. ಅದಿರು ಲಾರಿ ಸಾಗುವ ಮಾರ್ಗದಲ್ಲಿ ಮನುಷ್ಯ ಭ್ರಷ್ಟನಾಗಿ ಹೋಗಿದ್ದ. ಅದಿರು ಅಕ್ರಮವಾಗಿ ಸಾಗುತ್ತಿತ್ತೋ, ಸಕ್ರಮವಾಗಿ ಸಾಗುತ್ತಿತ್ತೋ, ದಾರಿಯಲ್ಲಿನ ಸುಂಕದ ಕಟ್ಟೆ ಅಧಿಕಾರಿಗಳು ಕಣ್ಣು ಮುಚ್ಚಿಕೊಂಡು ಕುಳಿತುಬಿಟ್ಟಿದ್ದರು. ಈಗ ಅದಿರು ಸಾಗಣೆ ನಿಂತು ತಿಂಗಳುಗಳೇ ಆಗಿದೆ. ಮತ್ತೆ ಅದಿರು ಸಾಗುತ್ತಿದ್ದ ರಸ್ತೆಗಳ ಎರಡೂ ಬದಿ ಹಸಿರು ಚಿಗುರುತ್ತಿದೆ. ರಸ್ತೆಗಳು ಬದುಕಿದೆಯಾ ಬಡಜೀವವೇ ಎಂದು ನಿಟ್ಟುಸಿರು ಬಿಡುತ್ತಿವೆ.

ಹೀಗೆ ಹೊರಗೆ ಬದುಕು ಚೇತರಿಸಿಕೊಳ್ಳುತ್ತಿದ್ದರೆ ಬಳ್ಳಾರಿಯಲ್ಲಿ ಚಿನ್ನ ಬೆಳ್ಳಿ ಅಂಗಡಿಗಳ ಸಂಖ್ಯೆ ಕಡಿಮೆ ಆಗಿದೆ. ಆಡಿಡಾಸ್, ರೀಬಾಕ್‌ನಂಥ ದುಬಾರಿ ಅಂಗಡಿಗಳಲ್ಲಿ ಎಷ್ಟೋ ಅಷ್ಟು ವ್ಯಾಪಾರ, ವಿದೇಶಿ ಬ್ಯಾಂಕ್‌ಗಳಲ್ಲಿ ವಹಿವಾಟು ಇಲ್ಲ ಎಂದರೂ ನಡೆಯುತ್ತದೆ. ಕೇವಲ ೧೨ ಗಂಟೆಗೆ ಚೆಕ್‌ಔಟ್ ಅವಧಿ ನಿಗದಿ ಮಾಡಿದ್ದ ಹೋಟೆಲ್‌ಗಳು ಈಗ ಅದನ್ನು ೨೪ ಗಂಟೆಗೆ ಏರಿಸಿವೆ, ಗಿರಾಕಿಗಳು ಬಂದರೆ ಸಾಕು ಎನ್ನುವಂತೆ! ಮನೆ ಸುಲಭವಾಗಿ ಬಾಡಿಗೆಗೆ ಸಿಗುತ್ತವೆ. ಬಾಡಿಗೆ ದರವೂ ಕಡಿಮೆ ಆಗಿದೆ. ಗಣಿಗಳಲ್ಲಿ ಕೆಲಸ ಮಾಡಲು ಉತ್ತರ ಭಾರತದಿಂದ ಬಂದವರು ಮರಳಿ ತಮ್ಮ ಊರಿಗೆ ಹೋಗಿದ್ದಾರೆ. ನಗರದ ಮೂಲ ನಿವಾಸಿಗಳು ಮೊದಲು ಹೇಗೆ ಬದುಕುತ್ತಿದ್ದರೋ ಈಗಲೂ ಹಾಗೆಯೇ ಬದುಕುತ್ತಿದ್ದಾರೆ. ಗಣಿಗಾರಿಕೆ ಮಾಡುತ್ತಿದ್ದವರ ಪೈಕಿ ಜನಾರ್ದನ ರೆಡ್ಡಿಯವರು ಜೈಲು ಸೇರಿ ೧೬ ತಿಂಗಳು ಆಗುತ್ತ ಬಂತು. ಹಾಗೆಂದು ಅವರ ಸಂಬಂಧಿಗಳ ಜೀವನಶೈಲಿಯಲ್ಲಿ ಬದಲಾವಣೆಯೇನೂ ಆಗಿಲ್ಲ. ಈಗಲೂ ಅವರೆಲ್ಲ ಕಪ್ಪು ಬಣ್ಣದ ರೇಂಜ್ ರೋವರ್,

ಲ್ಯಾಂಡ್ ರೋವರ್‌ನಂಥ ದುಬಾರಿ ಕಾರುಗಳಲ್ಲಿಯೇ ಓಡಾಡುತ್ತಾರೆ. ಬೆಂಗಾವಲಿಗೆ ಅನೇಕ ಕಾರುಗಳೂ, ಜೀಪುಗಳೂ ಇರುತ್ತವೆ. ಜನರಿಗೆ ಇದು ಹಣವಂತರ, ಅಧಿಕಾರಸ್ಥರ ದರ್ಬಾರು ಎಂದು ಅನಿಸಿಲ್ಲ; ಸಿಟ್ಟು ತರಿಸಿಲ್ಲ. ಆಂಧ್ರದ ಗಡಿಗೆ ಹೊಂದಿಕೊಂಡಿರುವ ಬಳ್ಳಾರಿಯಲ್ಲಿ ಪಾಳೆಗಾರಿಕೆಯನ್ನು ಸಹಿಸುವ, ಆರಾಧಿಸುವ ಗುಣ ರಕ್ತಗತವಾದಂತೆ ಕಾಣುತ್ತದೆ. ಬರೀ ಬಳ್ಳಾರಿ ಜನರಿಗೇ ಏಕೆ? ಮಾಧ್ಯಮದ ನಮ್ಮಲ್ಲಿಯೂ ಅಧಿಕಾರಸ್ಥರನ್ನು ವೈಭವಿಸುವ ಆ ಗುಣ ಇದ್ದಂತೆ ಕಾಣುತ್ತದೆ. ಇಲ್ಲದಿದ್ದರೆ ನಾವು ಬಳ್ಳಾರಿಯ ಈ ಅದಿರು ವ್ಯಾಪಾರಿಗಳನ್ನು ಗಣಿಧಣಿಗಳು ಎಂದು ಏಕೆ ಕರೆಯಬೇಕಿತ್ತು? ಅವರು ಧಣಿಗಳು ಎಂದು ನಾವು ಒಪ್ಪಿಕೊಂಡೆವು ಎಂದೇ ಅರ್ಥ ಅಲ್ಲವೇ?

ಬಳ್ಳಾರಿಯಲ್ಲಿ ಮೊದಲಿನ ಬಿಜೆಪಿಯಲ್ಲಿ ಮತ್ತು ಈಗಿನ ಬಿಎಸ್‌ಆರ್ ಪಕ್ಷದಲ್ಲಿ ಮಾತ್ರ ಗಣಿ ವ್ಯಾಪಾರಿಗಳು ಇಲ್ಲ. ಕಾಂಗ್ರೆಸ್‌ನಲ್ಲಿ ಲಾಡ್‌ಗಳು ಅದೇ ದಂಧೆಯಲ್ಲಿ ಇದ್ದಾರೆ. ಬಳ್ಳಾರಿಯ ಕಾಂಗ್ರೆಸ್‌ನ ಹಿರಿಯ ನಾಯಕರಾಗಿದ್ದ ದಿ.ಎಂ.ವೈ. ಘೋರ್ಪಡೆ ಕೂಡ ಗಣಿಗಾರಿಕೆಯಲ್ಲಿಯೇ ಇದ್ದವರು. ಜೆ.ಡಿ.ಎಸ್.ನಲ್ಲಿರುವ ಸೂರ್ಯನಾರಾಯಣ ರೆಡ್ಡಿ ದೊಡ್ಡ ಗ್ರಾನೈಟ್ ದಂಧೆಯಲ್ಲಿ ತೊಡಗಿಕೊಂಡಿದ್ದಾರೆ. ಅವರೆಲ್ಲ ಚುನಾವಣೆ ಮಾಡುವ ರೀತಿ ಬೇರೆ ಇತ್ತು. ೨೦೦೮ರ ವಿಧಾನಸಭೆ ಚುನಾವಣೆ ನಂತರ ಕರ್ನಾಟಕದ ಚುನಾವಣೆಯಲ್ಲಿ ಹೊಸ ವಿಧಾನವೊಂದನ್ನು ತಂದವರು ರೆಡ್ಡಿ ಸೋದರರು. ತಮ್ಮ ಸಂಪಾದನೆಯ ಅಲ್ಪಸ್ವಲ್ಪ ಹಣವನ್ನು ಸಾಮೂಹಿಕ ಮದುವೆ ಮುಂತಾಗಿ ಒಂದಿಷ್ಟು ಜನರಿಗಾಗಿ ಖರ್ಚು ಮಾಡಿದವರು. ನೆರವು ಕೇಳಿ ಮನೆಗೆ ಬಂದವರಿಗೆ ಹಣ ಕೊಟ್ಟು ಕಳಿಸಿದವರು. ಉಳಿದ ಪಕ್ಷದ ನಾಯಕರು ಇದನ್ನೆಂದೂ ಮಾಡಿದಂತೆ ಕಾಣುವುದಿಲ್ಲ.

ರೆಡ್ಡಿಗಳು ರಾಜಕೀಯ ಪ್ರವೇಶ ಮಾಡುವವರೆಗೆ ಪ್ರತಿ ಹಳ್ಳಿಯ ಗೌಡನಂಥ ಒಬ್ಬ ಮುಖಂಡನಿಗೆ ಒಂದಿಷ್ಟು ಹಣ ಹೋಗುತ್ತಿತ್ತು. ಆತ ಹೇಳಿದವರಿಗೆ ಊರಿನವರು ಮತ ಹಾಕುತ್ತಿದ್ದರು. ಇದೂ ಒಂದು ರೀತಿಯ ಪಾಳೆಗಾರಿಕೆ ವ್ಯವಸ್ಥೆಯ ಮುಂದುವರಿಕೆಯೇ ಇದ್ದಂತೆ ಇತ್ತು. ರೆಡ್ಡಿ ಸೋದರರು ಮೊದಲ ಬಾರಿಗೆ ಊರಿನ ಎಲ್ಲ ಮತದಾರರಿಗೆ ಹಣ ತಲುಪುವಂತೆ ನೋಡಿಕೊಂಡರು. ಪ್ರತಿ ಮನೆಯಲ್ಲಿಯೂ ಆತ ಇರಲಿ ಇಲ್ಲದೇ ಇರಲಿ, ಅವರ ಮನೆಯಲ್ಲಿನ ಮತದಾರರ ಸಂಖ್ಯೆಯ ಲೆಕ್ಕ ಹಾಕಿ ಅಷ್ಟು ಹಸಿರು ಅಥವಾ ಕೆಂಪು ನೋಟುಗಳನ್ನು ಒಂದು ಚೀಟಿ ಸಮೇತ ಎಸೆದರು. ಆ ವರೆಗೆ ಸಾರ್ವಜನಿಕ ಜೀವನದಲ್ಲಿ ಯಾವ ಅನುಭವವೂ ಇಲ್ಲದ ರೆಡ್ಡಿ ಸೋದರರು ಮತ್ತು ಅವರ ಬೆಂಬಲಿಗರು, ಬಳ್ಳಾರಿ ಮತ್ತು ಸುತ್ತಮುತ್ತಲಿನ ಜಿಲ್ಲೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಗೆದ್ದು ಬರಲು ಈ ತಂತ್ರವೇ ಕಾರಣವಾಯಿತು. ಈಗಲೂ ಬಳ್ಳಾರಿಯಲ್ಲಿ ರೆಡ್ಡಿ ಸೋದರರು ಮತ್ತು ಬಿ.ಎಸ್. ಶ್ರೀರಾಮುಲು ಅವರ ಕೈಯಲ್ಲಿಯೇ ಎಲ್ಲ ಸ್ಥಳೀಯ ಸಂಸ್ಥೆಗಳು ಇರುವುದಕ್ಕೂ ಹಣದ ಮಾಯಾಜಾಲವೇ ಮುಖ್ಯ ಕಾರಣ ಆಗಿರುವಂತಿದೆ.

ಈಗ ಮತ್ತೆ ಕರ್ನಾಟಕ ವಿಧಾನಸಭೆಯ ಚುನಾವಣೆ ಹೊಸ್ತಿಲಲ್ಲಿ ಇದೆ. ಐದು ವರ್ಷಗಳ ಹಿಂದೆ ಯಾರೂ ಊಹಿಸಲು ಕೂಡ ಸಾಧ್ಯವಿಲ್ಲದ ಬೆಳವಣಿಗೆಗಳು ಮಿಂಚಿನ ವೇಗದಲ್ಲಿ ಎನ್ನುವಂತೆ ಘಟಿಸಿ ಹೋಗಿವೆ. ಜನಾರ್ದನ ರೆಡ್ಡಿಯವರು ಜೈಲಿನಿಂದಲೇ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವ ಸುದ್ದಿ ಬಳ್ಳಾರಿಯಲ್ಲಿ ಇದೆ. ಅದು ಅವರ ಧಾರ್ಷ್ಟ್ಯ

ಇರಬಹುದು. ಅಥವಾ ಇದೆಲ್ಲ ಪ್ರಜಾಪ್ರಭುತ್ವ ವ್ಯವಸ್ಥೆಯ ವಿಪರ್ಯಾಸ ಇರಬಹುದು. ನನಗೆ ನೆನಪು ಇರುವ ಹಾಗೆ ಇಂಥ ಸ್ಪರ್ಧೆ ಆದರೆ, ಕರ್ನಾಟಕದ ಇತಿಹಾಸದಲ್ಲಿ ಅದೇ ಮೊದಲನೆಯದಾಗಿರುತ್ತದೆ. ಬಳ್ಳಾರಿ ಪರಿಸರ ಅನೇಕ ಇತಿಹಾಸಗಳನ್ನು ಸೃಷ್ಟಿಸಿದೆ. ಈಗಲೂ ಅದಕ್ಕೆ ಇತಿಹಾಸ ಸೃಷ್ಟಿಸುವ ಅವಕಾಶ ಇದೆ. ಅದು ಎಂಥ ಇತಿಹಾಸ ಆಗಿರುತ್ತದೆ? ಅದು ಕಾಲಕ್ಕೆ ಬಿಟ್ಟ ಪ್ರಶ್ನೆ.

೦೬.೦೧.೨೦೧೩

**ಗೋಲಗುಮ್ಮಟದ**

**ಊರಿನ ಮಂದಿಯೇ ಕೂಗದಿದ್ದರೆ?...**

ಈ ಜನರಿಗೆ ಎಷ್ಟೊಂದು ಸಹನೆ ಎಂದುಕೊಂಡೆ. ಅದು ಸಹನೆಯೇ? ಅಥವಾ ಅವರಿಗೆ ಅದು ರೂಢಿ ಆಗಿ ಬಿಟ್ಟಿದೆಯೇ? ನಮ್ಮ ಊರಿಗೆ ಒಳ್ಳೆಯ ರಸ್ತೆ, ಚರಂಡಿ, ಶೌಚಾಲಯ, ಬೀದಿ ದೀಪ ಬೇಕು ಎಂದು ಕೇಳುವುದನ್ನೂ ಅವರು ಮರೆತು ಬಿಟ್ಟಿದ್ದಾರೆಯೇ? ಮೊನ್ನೆ ವಿಜಾಪುರಕ್ಕೆ ಹೊದಾಗ ಆ ಊರಿನ ದೂಳೆಲ್ಲ ಮನಸ್ಸನ್ನು ಮಂಕು ಮಾಡಿತು. ಯಾವ ಜಿಲ್ಲಾ ಕೇಂದ್ರವೂ ಇಷ್ಟು ಹಾಳಾಗಿದ್ದಂತೆ ಕಾಣುವುದಿಲ್ಲ. ಏನಾಗಿದೆ ವಿಜಾಪುರಕ್ಕೆ? ಒಂದು ಕಾಲದಲ್ಲಿ ಅದು ಆದಿಲ್‌ಶಾಹಿ ಅರಸರ ರಾಜಧಾನಿ ಆಗಿತ್ತು. ಹನ್ನೆರಡು ಲಕ್ಷ ಜನ ವಾಸಿಸುತ್ತಿದ್ದರು. ಎಲ್ಲರಿಗೂ ಪ್ರತಿದಿನ ಕುಡಿಯಲು ನೀರು ಸಿಗುತ್ತಿತ್ತು. ಅರಸರು ಇದ್ದರೆಂದ ಮೇಲೆ ಊರು ಚೆನ್ನಾಗಿಯೇ ಇತ್ತು. ಈಗಲೂ ೧೬ನೇ ಶತಮಾನದ ಆ ಅರಸರ ವೈಭವ ನೆನಪಿಸುವ ಸ್ಮಾರಕಗಳಿಗೆ ಅಲ್ಲಿ ಕೊರತೆಯೇನೂ ಇಲ್ಲ. ಆದರೆ, ಒಮ್ಮೆ ಅಲ್ಲಿಗೆ ಹೋದರೆ ಮತ್ತೆ ಹೋಗಬಾರದು ಎಂದು ಅನಿಸುತ್ತದೆ. ನಾನು ಇದ್ದ ವಸತಿಗೃಹದ ಮಾಲೀಕರಿಗೆ ಬರುವಾಗ ಅದನ್ನೇ ಹೇಳಿಬಂದೆ.

ಎಂಥ ಶ್ರೀಮಂತ ಊರು ಅದು! ಒಂದು ಊರಿನ ಹೆಮ್ಮೆ ಹೆಚ್ಚಿಸಲು ಒಂದು ಗೋಲಗುಮ್ಮಟ ಸಾಕು. ಅಲ್ಲಿ ಬರೀ ಒಂದು ಗೋಲಗುಮ್ಮಟ ಇಲ್ಲ. ಅಂಥ ೬೫ ಸ್ಮಾರಕಗಳು ಆ ಒಂದೇ

ಊರಿನಲ್ಲಿ ಇವೆ. ತಾಜಮಹಲಿಗೆ ಪ್ರೇರಣೆ ಕೊಟ್ಟ ಇಬ್ರಾಹಿಂ ರೋಜಾ ಕರಿಕಲ್ಲು ಕಟ್ಟಡವೂ ಅಲ್ಲಿಯೇ ಇದೆ. ಜನರೂ ಶ್ರೀಮಂತರು. ದುಡ್ಡಿನಲ್ಲಿ ಇರಲಿಕ್ಕಿಲ್ಲ. ಮನಸ್ಸಿನಲ್ಲಿ ದೊಡ್ಡವರು. ಚೀನಾ ಜತೆಗೆ ಯುದ್ಧ ನಡೆದಿದ್ದಾಗ ಇಂದಿರಾ ಗಾಂಧಿಯವರನ್ನು ಕರೆಸಿ ಬಂಗಾರದಲ್ಲಿ ತೂಗಿ, ಆಕೆ ತೂಗಿದಷ್ಟು ಬಂಗಾರವನ್ನು ಜತೆ ಮಾಡಿ ಕಳುಹಿಸಿ ಕೊಟ್ಟವರು. ದೇಶದಲ್ಲಿ ಅದು ಅಂಥ ಒಂದೇ ಉದಾಹರಣೆ. ಒಂದು ಮಳೆಯಾದರೆ ಸಾಕು. ಮುತ್ತಿನಂಥ ಜೋಳ ಬೆಳೆದವರು. ಬರೀ ತಮಗಲ್ಲ, ನಾಡಿಗೆ ಕೊಟ್ಟೇವು ಎನ್ನುವ ಧಿಮಾಕಿನವರು. ಈಗ ಅವರಿಗೆ ಏನಾಗಿದೆ? ಊರು ಯುದ್ಧಭೂಮಿಯಂತೆ ರಣಗುಟ್ಟುತ್ತಿದ್ದರೂ ಮೌನವಾಗಿ ಏಕೆ ಇದ್ದಾರೆ? ಬೇಕಾದಷ್ಟು ಕಾರ ತಿನ್ನುವ ಮಂದಿಗೆ ಸಿಟ್ಟೇಕೆ ಬರುವುದಿಲ್ಲ?

ಅವರ ಊರಿನಲ್ಲಿ ಹತ್ತಲ್ಲ, ಇಪ್ಪಲ್ಲ, ತೊಂಬತ್ತು ವರ್ಷಗಳ ನಂತರ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆ. ಸಮ್ಮೇಳನಕ್ಕೆ ಬಹಳ ದಿನಗಳೇನೂ ಉಳಿದಿಲ್ಲ. ಹೊರಗಿನ ಜಿಲ್ಲೆಗಳಿಂದ ಸಾವಿರಾರು ಮಂದಿ ಬರುತ್ತಾರೆ. ಬರೀ ಸಮ್ಮೇಳನಕ್ಕೆ ಎಂದು ಬರುವುದಿಲ್ಲ. ಬಂದವರು ಗೋಲಗುಮ್ಮಟ ನೋಡಬೇಕು ಎನ್ನುತ್ತಾರೆ. ಒಮ್ಮೆ ನೋಡಿದವರು ಮತ್ತೆ ನೋಡಬೇಕು ಎನ್ನುತ್ತಾರೆ. ಬರೀ ಗುಮ್ಮಟ ಏಕೆ ಇಡೀ ಊರು ಸುತ್ತೋಣ ಎನ್ನುವವರೂ ಇರಬಹುದು. ಅವರನ್ನು ಸ್ವಾಗತಿಸಲು ಊರಿನಲ್ಲಿ ಒಳ್ಳೆಯ ರಸ್ತೆಗಳು ಇಲ್ಲ. ರಸ್ತೆ ಪಕ್ಕದಲ್ಲಿ ಚರಂಡಿಗಳು ಇಲ್ಲ. ಸಾರ್ವಜನಿಕ ಶೌಚಾಲಯಗಳು ಇಲ್ಲ. ಜನರಿಗೆ ಬೀದಿಬದಿಯೇ ರೂಢಿ ಆಗಿ ಬಿಟ್ಟಿದೆ : ಎರಡೂ ಕೆಲಸಕ್ಕೆ! ಹಂದಿಗಳ ಸಂಖ್ಯೆ ಸಮೃದ್ಧಿ ಆಗಿರುವುದಕ್ಕೂ ಅದೇ ಕಾರಣ. ಬೀದಿ ದೀಪಗಳು ಇಲ್ಲ. ಇಡೀ ಊರಿಗೆ ದೂಳು ಮುಸುಕು ಹಾಕಿದೆ. ಒಂದು ಒಳ್ಳೆಯ ಹೋಟೆಲ್ ಇಲ್ಲ. ಮೊದಲೇ ಹಾಳು ಮಣ್ಣಿನ ಊರು. ಬರೀ ಊರಲ್ಲ ಆ ಜಿಲ್ಲೆಯೇ ಹಾಗೆ, ಅಲ್ಲಿ ಹಸಿರು ಕಾಣುವುದು ಕಡಿಮೆ. ಫಲವತ್ತಾದ ಭಾಗವನ್ನೆಲ್ಲ ಬಾಗಲಕೋಟೆ ಜಿಲ್ಲೆಗೆ ಬಿಟ್ಟು ಕೊಟ್ಟಿದೆ. ವಿಜಾಪುರ ಜಿಲ್ಲೆಯಲ್ಲಿ ರಾಜ್ಯದ ಅತಿ ದೊಡ್ಡ ಆಲಮಟ್ಟಿ ಅಣೆಕಟ್ಟೆ ಇದೆ. ಅದರ ಫಲವೆಲ್ಲ ಮುಂದಿನ ಜಿಲ್ಲೆಗಳಿಗೆ ಹೋಗುತ್ತದೆ. ವಿಜಾಪುರ ಜಿಲ್ಲೆಯ ಮಂದಿಯೇ ಹಾಗೆ, ಅವರು 'ಮಂದೆ ಆಗಿಬಿಟ್ಟಿದ್ದಾರೆ. ಒಂದು ಏತ ನೀರಾವರಿ ಯೋಜನೆಗೆ ನಲವತ್ತು ವರ್ಷ ಹಿಡಿದರೂ ಅವರು ಸುಮ್ಮನಿರುತ್ತಾರೆ.

ತಮ್ಮ ಮುಂದೆಯೇ ಊರಿನ ಹಲವರು ಶ್ರೀಮಂತರಾಗುವುದನ್ನು, ಆದುದನ್ನು ಅವರು ಕಣ್ಣಾರೆ ಕಂಡಿದ್ದಾರೆ. ಆ ಒಂದೇ ಊರಿನಲ್ಲಿ ಎರಡು ವಿಶ್ವವಿದ್ಯಾನಿಲಯಗಳು ಇವೆ. ರಾಜ್ಯದ ಹೆಣ್ಣುಮಕ್ಕಳ ಏಕೈಕ ವಿಶ್ವವಿದ್ಯಾನಿಲಯ ಅದರಲ್ಲಿ ಸೇರಿದೆ. ಮಹಿಳೆಯರು ಪ್ರಾರ್ಥನೆ ಮಾಡುವ ರಾಜ್ಯದ ಏಕೈಕ ಮಸೀದಿಯೂ ಅಲ್ಲಿಯೇ ಇದೆ! ಎರಡು ವೈದ್ಯಕೀಯ ಕಾಲೇಜುಗಳು ಇವೆ. ಎರಡು ಎಂಜಿನಿಯರಿಂಗ್ ಕಾಲೇಜುಗಳು ಇವೆ. ಒಂದು ದಂತವೈದ್ಯ ಕಾಲೇಜು ಇದೆ. ಅಲ್ಲಿ

ಕಲಿಯಲು ಎಲ್ಲೆಲ್ಲಿಯವರೋ ಬರುತ್ತಿದ್ದಾರೆ. ಎಲ್ಲೆಲ್ಲಿಯವರೋ ಬರುತ್ತಿದ್ದಾರೆ ಎಂದಾದರೂ ಊರನ್ನು ಸುಧಾರಿಸಬೇಕು ಎಂದು ಊರು ಆಳುವವರಿಗೆ ತಿಳಿದಿಲ್ಲ. ವಿಜಾಪುರಕ್ಕಿಂತ ಬೀದ ಚಿಕ್ಕ ಊರು. ಒಬ್ಬ ಅಧಿಕಾರಿ ಆ ಊರನ್ನು ಎಷ್ಟು ಚೆಂದ ಮಾಡಿದರು ಎಂದರೆ ನೀವು ಅಲ್ಲಿಗೆ ಹೋಗಿ ನೋಡಬೇಕು. ವಿಜಾಪುರಕ್ಕೆ ಅಂಥ ಅಧಿಕಾರಿ ಸಿಗಲಿಲ್ಲ. ದೊರಕಿಸಲು ಪ್ರಯತ್ನವೂ ನಡೆಯಲಿಲ್ಲ.



ಬೀದರ್‌ನ ಅಧಿಕಾರಿ ಕೈಯಲ್ಲಿ ಹಣವಿಲ್ಲದಿದ್ದರೂ ಅತಿಕ್ರಮಣಗಳನ್ನು ಕೆಡವಿ ಹಾಕಿದರು. ರಸ್ತೆಗಳನ್ನು ನಿರ್ಮಿಸಿದರು. ಚರಂಡಿ ಮಾಡಿದರು. ಉದ್ಯಾನ ನಿರ್ಮಿಸಿದರು. ಹೂ ಬೆಳೆಸಿದರು. ವಿಜಾಪುರಕ್ಕೆ ದುಡ್ಡು ಬಂದರೂ ಅತಿಕ್ರಮಣ ಕೆಡವಿ ಹೊಸದನ್ನು ಕಟ್ಟಬೇಕು ಎಂದು ಅವರಿಗೆ ಅನಿಸಲಿಲ್ಲ. ಬೀದರ್ ದೂರವಾಯಿತು. ಬಾಗಲಕೋಟೆಗೆ ಹೋಗಿ ನೋಡಿದರೂ ವಿಜಾಪುರದ ಮಂದಿಗೆ ಸಾಕಷ್ಟು ಮಾದರಿಗಳು ಸಿಗುತ್ತಿದ್ದವು. ಕೆಲವೇ ವರ್ಷಗಳ ಹಿಂದೆ ತನ್ನ ಭಾಗವಾಗಿಯೇ ಇದ್ದ ಬಾಗಲಕೋಟೆ ಜಿಲ್ಲೆ ಅಷ್ಟು ಮುಂದೆ ಹೋಗಲು ಸಾಧ್ಯವಾದರೆ ತಮಗೇಕೆ ಸಾಧ್ಯವಿಲ್ಲ ಎಂದು ವಿಜಾಪುರದ ಮಂದಿ ಯೋಚಿಸಬೇಕಿತ್ತು. ಪ್ರಾಗೈತಿಹಾಸದ ದೃಷ್ಟಿಯಿಂದ ವಿಜಾಪುರದ ಮುಂದೆ ಬೀದರ್ ಏನೂ ಅಲ್ಲ. ಆದರೆ, ವಿಜಾಪುರದ ನಾಯಕರಿಗೆ ತಮ್ಮ ಊರಿನಲ್ಲಿ ಇರುವುದರ ಕಡೆಗೆ ಹೊರಗಿನವರನ್ನು ಆಕರ್ಷಿಸಲು ಒಂದಿಷ್ಟು ಸವಲತ್ತುಗಳನ್ನು ಸೃಷ್ಟಿಸಿಕೊಳ್ಳಬೇಕು ಎಂದು ಗೊತ್ತಾಗಲಿಲ್ಲ.

ಎಲ್ಲರೂ ಹಾಗೆಯೇ. ನಮ್ಮ ಬಳಿ ಇರುವುದು ನಮಗೆ ಗೊತ್ತಿರುವುದಿಲ್ಲ; ಅದರ ಮಹತ್ವ ತಿಳಿದಿರುವುದಿಲ್ಲ. ಗೊತ್ತಿದ್ದವರು ಅದನ್ನು ತಮ್ಮ ಊರಿಗೆ ತೆಗೆದುಕೊಂಡು ಹೋಗಲು ಆಗುವುದಿಲ್ಲ. ಗೋಲಗುಮ್ಮಟ ವಿಶ್ವದ ಒಂದು ವಿಸ್ಮಯ. ಮೇಲಿನ ಗುಮ್ಮಟದಲ್ಲಿ ಇದ್ದವರನ್ನೆಲ್ಲ ಹೊರಗೆ ಹಾಕಿ ೨೫೦ ಅಡಿ ಈಚೆ ನಿಂತು ಪಿಸುಗುಟ್ಟಿದರೆ ಆಚೆಗೆ ಸ್ಪಷ್ಟವಾಗಿ ಕೇಳುತ್ತದೆ. ಆಚೆ ನಿಂತು ಕಾಗದ ಹರಿದರೆ ಈಚೆಯೇ ಹರಿದಂತೆ ಕೇಳುತ್ತದೆ. ದೇಶದಲ್ಲಿ ಅಂಥ ಇನ್ನೊಂದು ಗುಮ್ಮಟ ಇಲ್ಲ. ಅಂಥ ಒಂದು ಗುಮ್ಮಟ ನಮ್ಮ ಜಿಲ್ಲೆಯಲ್ಲಿ ಇದೆ ಎಂದು ವಿಜಾಪುರ ಜಿಲ್ಲೆಯ ಜನ ಹೊರಗಿನ ಜಗತ್ತಿಗೆ ಹೇಳುವ ರೀತಿ ಇದಲ್ಲ. ಅವರ ಊರಿಗೆ ಈ ಸರ್ಕಾರದ ಹಿಂದಿನ ಪ್ರವಾಸೋದ್ಯಮ ಸಚಿವರು ಬರಲೇ ಇಲ್ಲ. ಅವರನ್ನು ಕರೆಸಬೇಕು ಎಂದು ಜಿಲ್ಲೆಯ ನಾಯಕರಿಗೆ ತಿಳಿಯಲೂ ಇಲ್ಲ. ಈಗ ಸಾಹಿತ್ಯ ಸಮ್ಮೇಳನದ ನೆಪದಲ್ಲಿ ಬರುವ ಸಾವಿರಾರು ಜನರಿಗೆ ತೋರಿಸುವ ಸ್ಥಿತಿಯಲ್ಲಿ ಗುಮ್ಮಟ ಇರಬಹುದು. ಆದರೆ, ಊರು ಇಲ್ಲ. ಜನರು ಊರಿನ ರಸ್ತೆಗಳ ಮೂಲಕವೇ ಗುಮ್ಮಟ ನೋಡಲು ಬರಬೇಕಲ್ಲ? ತಮ್ಮ ಊರಿನ ಸಾಂಸ್ಕೃತಿಕ, ಪ್ರಾಗೈತಿಹಾಸಿಕ ಶ್ರೀಮಂತಿಕೆ ತೋರಿಸಲು ವಿಜಾಪುರದ ಮಂದಿಗೆ ಇದಕ್ಕಿಂತ ದೊಡ್ಡ ಅವಕಾಶ ಮತ್ತೆ ಬೇಗ ಬರಲಿಕ್ಕಿಲ್ಲ. ಅಷ್ಟು ಮಂದಿ ಮತ್ತೆ ಆ ಊರಿಗೆ ಯಾವಾಗ ಬರಬೇಕು? ಊರಿಗೆ ಬಂದವರು ಒಳ್ಳೆಯ ನೆನಪುಗಳನ್ನು ಹೊತ್ತುಕೊಂಡು ಹೋಗಬೇಕು. ಅಲ್ಲಿಗೆ ಹೋಗಿ ನೋಡಿಕೊಂಡು ಬನ್ನಿ ಎಂದು ತಮಗೆ ಸಿಕ್ಕವರಿಗೆ ಹೇಳಬೇಕು. ಸಾಹಿತ್ಯ ಸಮ್ಮೇಳನಕ್ಕೆ ಬಂದವರು ತಮ್ಮ ಊರಿಗೆ ಹೋಗಿ ಬೇರೆಯವರಿಗೂ ವಿಜಾಪುರಕ್ಕೆ ಹೋಗಿ ಎಂದು ಹೇಳುತ್ತಾರೆ ಎನ್ನುವ ಖಾತ್ರಿ ನನಗೇನೂ ಇಲ್ಲ.

ಊರಿನ ಅಭಿವೃದ್ಧಿಗೆ ಹಣ ಬಂದಿಲ್ಲವೆಂದಲ್ಲ. ಬಂದ ಹಣದಲ್ಲಿ ಯೋಜನೆ ರೂಪಿಸುವ ತಲೆ ಅಧಿಕಾರಿಗಳಿಗೆ ಇಲ್ಲ. ಅವರಿಗೆ ಹೇಳಿ ಮಾಡಿಸುವ ಆಸಕ್ತಿ ಜನಪ್ರತಿನಿಧಿಗಳಿಗೆ ಇಲ್ಲ. 'ನಗರೋತ್ಥಾನ' ಯೋಜನೆ ಅಡಿಯಲ್ಲಿ ಮೂರು ವರ್ಷಕ್ಕೆ ನೂರು ಕೋಟಿ ಕೊಡುತ್ತೇವೆ ಎಂದು ಸರ್ಕಾರ ಕಳೆದ ವರ್ಷದ ಏಪ್ರಿಲ್‌ನಲ್ಲಿಯೇ ಹೇಳಿದೆ. ವರ್ಷಕ್ಕೆ ೩೩ ಕೋಟಿ ರೂಪಾಯಿ ಖರ್ಚು ಮಾಡಬೇಕು. ಒಂದು ವರ್ಷದಲ್ಲಿ



೩೩ ಕೋಟಿ ರೂಪಾಯಿ ಖರ್ಚು ಮಾಡುವುದು ಎಂದರೆ ಸಾಮಾನ್ಯವೇ? ಎಷ್ಟೊಂದು ಕೆಲಸ ಮಾಡಬಹುದಲ್ಲ? ಆ ಹಣದಲ್ಲಿ ಏನು ಮಾಡುತ್ತೇವೆ ಎಂದು ಹೇಳುವುದಕ್ಕೆ ಸರ್ಕಾರ ಅದಕ್ಕೆ ವಿಜಾಪುರದ ಅಧಿಕಾರಿಗಳಿಗೆ ನಾಲ್ಕು ತಿಂಗಳು ಬೇಕಾಯಿತು. ಮಂಜೂರಾತಿ ಕೊಟ್ಟು ಐದು ತಿಂಗಳಾಯಿತು. ಇನ್ನೂ ಒಂದು ಪೈಸೆ ಖರ್ಚು ಮಾಡಿದ ಲಕ್ಷಣ ಊರಿನಲ್ಲಿ ಕಾಣುತ್ತಿಲ್ಲ. 'ನಮ್ಮ ಊರಿನ ಅಭಿವೃದ್ಧಿಗೆ ಬಂದ ಹಣದಲ್ಲಿ ಎಷ್ಟಾದರೂ ತಿನ್ನಿ ಸ್ವಲ್ಪವಾದರೂ ಕೆಲಸ ಮಾಡಿ' ಎಂದು ಊರಿನ ಜನರು ಒಬ್ಬ ಅಧಿಕಾರಿಯ ಕಾಲ ಹಿಡಿದು ಕೇಳಿದ್ದರೆ ಎಷ್ಟು ಚೆನ್ನಾಗಿತ್ತು? ಅಂಥ ಒಬ್ಬ ಅಭಿಮಾನಿ ಹೆಣ್ಣುಮಗಳು ಆ ಊರಿನಲ್ಲಿ ಇರಲಾರಳೇ?

ಈಗ ಫೆಬ್ರುವರಿಯಲ್ಲಿ ಸಾಹಿತ್ಯ ಸಮ್ಮೇಳನ ಬಂದಿದೆ. ಮಾರ್ಚ್‌ನಲ್ಲಿ ಬಜೆಟ್ ಅವಧಿ ಮುಗಿಯುತ್ತದೆ. ಏಪ್ರಿಲ್‌ನಲ್ಲಿ ಚುನಾವಣೆ ಬರುತ್ತದೆ. ಅಭಿವೃದ್ಧಿಗೆ ಬರುವ ಹಣವನ್ನು ಖರ್ಚು ಮಾಡಲು ಇದಕ್ಕಿಂತ ಪ್ರಶಸ್ತಿ ಅವಧಿ ಇನ್ನಾವುದು ಇರಲು ಸಾಧ್ಯ? ಸಾಹಿತ್ಯ ಸಮ್ಮೇಳನ ಬಂತು ಎಂದೋ, ಇದ್ದಬದ್ದ ಊರಿನ ಮಾನ ಹೋಗುತ್ತದೋ ಎಂದೋ ಹಂಚಿನ ಮೇಲೆ ಬೇಯುವ ರೊಟ್ಟಿಗೆ ನೀರು ಹಚ್ಚಿದ ಹಾಗೆ ರಸ್ತೆಗಳಿಗೆ ಡಾಂಬರು ಮಾಡುವ ಕೆಲಸ ಇನ್ನು ನಡೆಯಬಹುದು. ಆ ಊರಿನಲ್ಲಿ ಯಾವಾಗಲೂ ರೊಟ್ಟಿಗೆ ನೀರು ಹಾಗೆಯೇ ಡಾಂಬರು ಕೆಲಸ ಹಚ್ಚಿದ ಮಾಡುತ್ತಾರಂತೆ! ಅತ್ತ ಸಮ್ಮೇಳನ ಮುಗಿಯುತ್ತಿದ್ದಂತೆಯೇ ಇತ್ತ ಡಾಂಬರು ಕಿತ್ತಿ ಹೋಗುತ್ತದೆ. ಇಲ್ಲವಾದರೆ ಮಳೆಗಾಲದಲ್ಲಿ ಬರೀ ಡಾಂಬರು ಅಲ್ಲ ರಸ್ತೆಗಳೇ ಕಿತ್ತುಕೊಂಡು ಹೋಗುತ್ತವೆಯಂತೆ. ಎಂದಿನ ಹಾಗೆ ವಿಜಾಪುರದ ಮಂದಿ ದೂಳಿನ ರಸ್ತೆಯಲ್ಲಿ ಅಡ್ಡಾಡುತ್ತಾರೆ. ಅವರಿಗೆ ಅದೇ ಸುಖಕರವಾಗಿದ್ದರೆ ಯಾರೇನು ಮಾಡಲು ಸಾಧ್ಯ? ದೇವರು ಅವರಿಗೆ ಅಷ್ಟು ಸಹನೆ ಕೊಟ್ಟಿದ್ದಾನೆಯೇ? ಅಥವಾ ಅವರಿಗೆ ಅದು ರೂಢಿಯಾಗಿಬಿಟ್ಟಿದೆಯೇ?

೨೦.೦೧.೨೦೦೩

**ಬದುಕುವ ದಾರಿ ಕಲಿಸುವ**

**ಕಾವ್ಯದಿಂದ ದೂರ ಬಂದು...**

ಮನಸ್ಸು ತುಂಬ ಮೃದುವಾಗಿತ್ತು. ಕಣ್ಣಲ್ಲಿ ತನ್ನಿಂದ ತಾನೇ ನೀರು 'ಇದೇನು? ಯಾರಾದರೂ ೧೨ ನೋಡಿದರೆ ಏನೆಂದುಕೊಂಡಾರು? ಛೇ!' ಎಂದರೂ ಎದೆಯಲ್ಲಿ ಭಾವದ ತಿದಿ ಮತ್ತೆ ಮತ್ತೆ ಒತ್ತಿದಂತೆ ಆಗುತ್ತಿತ್ತು. ಭರ್ತಿ ಮೂವತ್ತೈದು ವರ್ಷಗಳು ಕಳೆದು ಹೋಗಿದ್ದುವು, ನನ್ನ ವಿದ್ಯಾಗುರು ಎಂ.ಎಂ. ಕಲಬುರ್ಗಿಯವರ ಪಾಠ ಕೇಳಿ. ಎಂ.ಎ. ಮುಗಿಸಿ ಬರುವಾಗಲೂ ಅವರ ಪಾಠ ಕೇಳುತ್ತ ಹೀಗೆಯೇ ಅತ್ತಿದ್ದೆ. ಈಗ ಅವರು ಶ್ರೀವಿಜಯ ಮತ್ತು ಪಂಪನ ಪದ್ಯಗಳನ್ನು ಓದುತ್ತಿದ್ದರು. ಅವೇನು ಕರುಣ ರಸ ಉಕ್ಕಿಸುವ ಪದ್ಯಗಳಲ್ಲ. ಅವರು ಶ್ರೀವಿಜಯ ಕವಿ ತನ್ನ ಕವಿರಾಜ ಮಾರ್ಗದಲ್ಲಿ ನಾಡು ಮತ್ತು ನಾಡವರ ಬಗ್ಗೆ ಬರೆದ ಪದ್ಯಗಳನ್ನು, ಪಂಪನ 'ಚಾಗದ ಭೋಗದಕ್ಕರದ...' ಪದ್ಯವನ್ನು ಓದುತ್ತಿದ್ದರು. ಹಳಗನ್ನಡ ಪದ್ಯ ಓದಿದರೆ ಮನಸ್ಸು ಏಕೆ ಮೃದು ಆಗಬೇಕು? ನಾನೇ ಭಾವುಕನಾಗಿರಬೇಕು ಎಂದುಕೊಂಡೆ. ಧಾರವಾಡ ಸಾಹಿತ್ಯ ಸಂಭ್ರಮದ ಈ ಪ್ರಾಚೀನ ಕಾವ್ಯ ವಾಚನ ಗೋಷ್ಠಿ ಮುಗಿಸಿಕೊಂಡು ಹೊರಗೆ ಬಂದರೆ, 'ಏನ್ರಿ ನಿಮ್ಮ ಗುರುಗಳು ಇವತ್ತು ನನ್ನನ್ನು ಅಳಿಸಿಬಿಟ್ಟರು' ಎಂದರು ಸಂಪಾದಕರು! ಸಭಾಂಗಣದ ಇನ್ನಾವುದೋ ಮೂಲೆಯಲ್ಲಿ ಕುಳಿತ ಲೇಖಕ ಗೆಳೆಯ ವಿವೇಕ ಶಾನಭಾಗರಿಗೂ ಅದೇ ಅನುಭವ ಆಗಿತ್ತು. ಹಾಗಿದ್ದರೆ ನಾನೊಬ್ಬನೇ ತೀರಾ ಹೆಣ್ಣು ಹೃದಯದವನಲ್ಲ ಎಂದು ಸಮಾಧಾನ ಮಾಡಿಕೊಂಡೆ!

ಅದೇ ಗೋಷ್ಠಿಯಲ್ಲಿ ಶಾಂತಿನಾಥ ದಿಬ್ಬದ ಅವರು ಹರಿಹರನ ಪದ್ಯಗಳನ್ನು, ಕೃಷ್ಣಮೂರ್ತಿ ಹನೂರರು ಕುಮಾರವ್ಯಾಸನ ಕಾವ್ಯವನ್ನು ವಾಚನ ಮಾಡಿದ್ದರು. ಬಹುಶಃ ಧಾರವಾಡ ಸಾಹಿತ್ಯ ಸಂಭ್ರಮದ ಅತ್ಯುತ್ತಮ ಗೋಷ್ಠಿ ಇದೇ ಆಗಿತ್ತು. ಅದರ ಪರಿಣಾಮ ಗೋಷ್ಠಿ ಮುಗಿದ ನಂತರ ಗೊತ್ತಾಯಿತು. ಕೆಲವರು ಕಲಬುರ್ಗಿಯವರಿಗೆ ಮುಗಿಬಿದ್ದರೆ, ಇನ್ನು ಕೆಲವರು ದಿಬ್ಬದ ಅವರಿಗೆ ಮತ್ತೆ ಹಲವರು ಹನೂರು ಅವರಿಗೆ ಸರದಿಯಂತೆ ಅಭಿನಂದನೆ ಹೇಳುತ್ತಿದ್ದರು. ಯಾರು ಚೆನ್ನಾಗಿ ಕಾವ್ಯವಾಚನ ಮಾಡಿದರು ಎಂದರೆ ಉತ್ತರ ಹೇಳುವುದು ಕಷ್ಟವಾಗುತ್ತಿತ್ತು. ಮೂವರೂ ಭಾಷೆಯನ್ನು ಹಿಂದೆ ಹಾಕಿ ಭಾವವನ್ನು ಮುಂದೆ ತಂದು ನಿಲ್ಲಿಸಿಬಿಟ್ಟಿದ್ದರು. ಸಭಿಕರ ಮುಷ್ಟಿ ಗಾತ್ರದ ಹೃದಯದಲ್ಲಿ ಹದವಾಗಿ ವೀಣೆ ಮೀಟಿದಂತೆ ಆಗಿತ್ತು.

ಹರಿಹರ, ಕುಮಾರವ್ಯಾಸ ಓದಲು ಅಂಥ ಕಠಿಣ ಕವಿಗಳೇನೂ ಅಲ್ಲ. ದಿಬ್ಬದ ಮತ್ತು ಹನೂರರು ಹೆಚ್ಚ ಕಡಿಮೆ ಕಂಠಪಾಠದ ಹಾಗೆ ಉಭಯ ಕವಿಗಳ ಪದ್ಯಗಳನ್ನು ಓದಿದರು. ಕಲಬುರ್ಗಿಯವರೂ ಪಂಪನ ಚಂಪೂ ಪದ್ಯಗಳನ್ನು, ಶ್ರೀವಿಜಯನ ಕಂದ ಪದ್ಯಗಳನ್ನು ಬಾಯಿಪಾಠ ಮಾಡಿದವರ ಹಾಗೆಯೇ ಓದಿದರು. ಅವರು ಓದಿದ್ದು ಕೊಂಚ ಕಠಿಣ ಪದ್ಯಗಳನ್ನಾದರೂ ಅವುಗಳ ಅರ್ಥ ಹೆಚ್ಚು ಬಿಡಿಸಿ ಹೇಳಲಿಲ್ಲ; ಓದುತ್ತಿದ್ದಂತೆಯೇ ತನ್ನಿಂದ ತಾನೇ ಅರ್ಥವೆಲ್ಲ ತೆರೆದುಕೊಳ್ಳುತ್ತ ಹೋಯಿತು. ಸಂಧಿ ಸಮಾಸಗಳನ್ನು ಬಿಡಿಸಿ, ಅಲ್ಲಲ್ಲಿ ಒಂದೆರಡು ಕಠಿಣ ಪದಗಳಿಗೆ ಅರ್ಥ ಹೇಳಿ ಹೆಚ್ಚಿನ ವಿಮರ್ಶೆ, ವಿವರಣೆ ಇಲ್ಲದೆ ಕಾವ್ಯವನ್ನು ಸಂವಹನ ಮಾಡುವುದೇ ಗೋಷ್ಠಿ ಏರ್ಪಡಿಸಿದವರ ಉದ್ದೇಶ ಆಗಿತ್ತು. ಹಳಗನ್ನಡ ಓದುವುದು ಕಷ್ಟ, ಸಂಧಿ ವಿಗ್ರಹ ಮಾಡುವುದು ಕಷ್ಟ ಸಮಾಸ ಒಡೆಯುವುದು ಕಷ್ಟ. ಎಲ್ಲಿ ನಿಲ್ಲಬೇಕು ಎಂದು ತಿಳಿದುಕೊಳ್ಳುವುದು ಕಷ್ಟ ಎಂದು ಎಲ್ಲರೂ ಹಳಗನ್ನಡವೇಕೆ ನಡುಗನ್ನಡವನ್ನೂ ಬಿಟ್ಟು ದೂರ ಓಡುತ್ತಿರುವಾಗ ಮತ್ತೆ ನಮ್ಮ ಕಾವ್ಯ ಪರಂಪರೆಯ ಜತೆಗೆ ಅನುಸಂಧಾನ ಸಾಧಿಸಿದಂತೆ ಆಗಿತ್ತು.

ನಮ್ಮ ಪ್ರಾಚೀನ ಕಾವ್ಯದ ಜತೆಗೆ ನಮ್ಮ ಸಂಪರ್ಕ ಯಾವಾಗ ಕಡಿದುಹೋಯಿತು? ನೆನಪು ಮಾಡಿಕೊಳ್ಳುವುದೇನೂ ಕಷ್ಟವಲ್ಲ. ನನಗಿಂತ ವಯಸ್ಸಿನಲ್ಲಿ ಹಿರಿಯರಾದ ಹನೂರರೇ ನೆನಪಿಸಿಕೊಂಡರು : ಅವರು ಎಂ.ಎ. ಓದುತ್ತಿದ್ದಾಗ ಹಳಗನ್ನಡ ಕಾವ್ಯದ ಮೇಲಿನ ಪ್ರೌಢಿಮೆ ಅವರಿಗೆ ಹಿರಿಯರಿಮೆಯನ್ನೇನೂ ತಂದಿರಲಿಲ್ಲ! ಆ 'ಕೀಳರಿಮೆ'ಯಿಂದ ಹೊರಗೆ ಬರಲು ಅವರು ಆಧುನಿಕ ಕನ್ನಡ ಸಾಹಿತ್ಯವನ್ನೂ ಚೆನ್ನಾಗಿ ಓದಿಕೊಂಡರು; ನವ್ಯದ ಉರವಣೆಯ ಕಾಲದಲ್ಲಿ ಬಚಾವಾದರು. ನಮಗೂ ಅದೇ ಸಮಸ್ಯೆಯಾಯಿತು. ನಲವತ್ತು ವರ್ಷಗಳ ಹಿಂದೆ ನಮ್ಮ ಸಮಕಾಲೀನರು ಪದವಿ ತರಗತಿಗೆ ಓದುತ್ತಿದ್ದಾಗಲೇ ಇಡಿಯಾಗಿ ಒಬ್ಬ ಹಳಗನ್ನಡ ಕವಿಯನ್ನು ಓದುವ ರೂಢಿ ಬಿಟ್ಟು

ಹೋಯಿತು. ಆಗಲೇ ಹಳಗನ್ನಡ, ನಡುಗನ್ನಡ ಕವಿಗಳ ಒಂದೆರಡು ಖಂಡಗಳನ್ನು 'ಸಂಪಾದಿಸಿ' ಪಠ್ಯಪುಸ್ತಕ ಬರೆದು ಹಣ ಸಂಪಾದಿಸುವ ಅಧ್ಯಾಪಕರು ಹುಟ್ಟಿಕೊಂಡಿದ್ದರು. ನನಗಿಂತ ಹಿರಿಯರಾದ ಹನೂರರಿಗೇ ಹಳಗನ್ನಡದ ಓದು ಕೀಳರಿಮೆ ಹುಟ್ಟಿಸಿದ್ದರೆ ನನ್ನ ವಾರಿಗೆಯವರದು ಇನ್ನೂ ಕಷ್ಟ, ಗೋಪಾಲಕಷ್ಣ ಅಡಿಗ, ಅನಂತಮೂರ್ತಿ, ಲಂಕೇಶ, ಶಾಂತಿನಾಥ ದೇಸಾಯಿ, ಕಾರ್ನಾಡ, ಕಂಬಾರ ಮುಂತಾದವರನ್ನು ಓದಿದ್ದರೆ ಸಾಕಿತ್ತು. ನಡು ನಡುವೆ ಕಮು, ಕಾವ್ಯ, ಸಾರ್ತ್ರ ಎಂದು ಕೆಲವು ಪಾಶ್ಚಾತ್ಯ ಲೇಖಕರ ಹೆಸರು ಉರುಳಿಸಲು ಸಾಧ್ಯವಿದ್ದಿದ್ದರೆ ಬೇಕಾದಷ್ಟು ಆಗುತ್ತಿತ್ತು. ನನ್ನ ಸಹಪಾಠಿಗಳಿಗೆಲ್ಲ ಇವೇ ಹೆಸರು ಮತ್ತೆ ಮತ್ತೆ ಹೇಳಿ ನಾನೂ ಹೆದರಿಸುತ್ತಿದ್ದೆ!

ನವ್ಯದ ಉರವಣೆಯ ಜತೆಗೆ ನಮಗೆಲ್ಲ ಒಂದು ವಿಸ್ಮೃತಿಯೂ ಬಂತು ಎಂದು ಅನಿಸುತ್ತದೆ. ಆಧುನಿಕ ಕಾಲದಲ್ಲಿ ಇದ್ದ ಸಮಸ್ಯೆಗಳು ಹಿಂದೆಯೂ ಇದ್ದುವು. ಅದಕ್ಕೆ ಅಲ್ಲಿ ಉತ್ತರಗಳೂ ಇದ್ದುವು. ಕೃಷ್ಣ, ಸಂಧಿಗೆ ಬಂದ ಸಂದರ್ಭದಲ್ಲಿ ಧುರ್ಯೋಧನನ ಆಸ್ಥಾನದಲ್ಲಿ ಇದ್ದ ಮಂತ್ರಿಗಳಿಗೂ ಈಗಿನ ಮಂತ್ರಿಗಳಿಗೂ ಅಂಥ ವ್ಯತ್ಯಾಸವೇನೂ ಇಲ್ಲ. ಆಗ 'ನೂಲೆಳೆಯಿಂದ ಕತ್ತು ಕುಯ್ಯುವವರು' ಇದ್ದರೆ ಈಗ ಕೂದಲೆಳೆಯಿಂದ ಅದೇ ಕೆಲಸ ಮಾಡುವವರು ಇದ್ದಾರೆ! ಸಮಸ್ಯೆ ಏನಾಯಿತು ಎಂದರೆ ಕಲಬುರ್ಗಿಯವರಿಗೆ ಪ್ರಾಥಮಿಕ ಹಂತದಲ್ಲಿಯೇ ಹಳಗನ್ನಡ ಕವಿಗಳ ಪದ್ಯಗಳನ್ನು ಸಂಧಿ ಬಿಡಿಸಿ ಕಲಿಸುವ ಗುರುಗಳು ಇದ್ದರು. ಕಲಬುರ್ಗಿಯವರ ಶಿಷ್ಯರಾದ ದಿಬ್ಬದ ಅವರಿಗೂ ಅಂಥ ಗುರುಗಳು ಇದ್ದರು. ನಮ್ಮ ಕಾಲದಲ್ಲಿ ಅಂದರೆ ನಾಲ್ಕು ದಶಕಗಳ ಹಿಂದೆಯೇ ಅವರು ಮಾಯವಾಗಿದ್ದರು. ಕಾಲೇಜು ಮಟ್ಟದಲ್ಲಿ ಗೈಡುಗಳು ಬಂದು ಬಿಟ್ಟಿದ್ದವು. ಮುಂದೆ ಹಳಗನ್ನಡ ಕಾವ್ಯಗಳ ಜತೆಗೆ ಅದರ 'ಗದ್ಯಾನುವಾದ' ಪ್ರಕಟಿಸುವ ಪರಂಪರೆಯೂ ಶುರುವಾಯಿತು. ಅಲ್ಲಿಗೆ ಹಳಗನ್ನಡ ಕಾವ್ಯದ ಓದು ನಿಂತೇಹೋಯಿತು. ನಮ್ಮ ಕಾವ್ಯ ಪರಂಪರೆಯ ಜತೆಗಿನ ನಂಟು ಕಡಿದುಹೋಯಿತು. ಹಳಗನ್ನಡ, ನಡುಗನ್ನಡ ಮಾತ್ರವಲ್ಲ ಹೊಸಗನ್ನಡದ ಕವಿಗಳನ್ನೂ ಓದಿದವರು ನಮ್ಮ ಕಾಲದಲ್ಲಿಯೇ ಕಡಿಮೆ ಆಗಿದ್ದರು. ಕುವೆಂಪು, ಬೇಂದ್ರೆ ಅವರ ಕಾವ್ಯಕ್ಕಿಂತ ಅವರ ಸಮಕಾಲೀನ ಗದ್ಯ ಲೇಖಕರನ್ನು ಓದುವುದು ಸುಲಭ ಎಂದುಕೊಂಡರು. ನನ್ನ ಸಮಕಾಲೀನರು ಬರೀ ನವರು ಮಾತ್ರವಲ್ಲ ನವೋದಯದ ಬಹುತೇಕ ಗದ್ಯ ಲೇಖಕರ ಎಲ್ಲ ಕೃತಿಗಳನ್ನಾದರೂ ಓದಿದ್ದರು. ಈಗಿನ ಪೀಳಿಗೆಯವರು ಅದನ್ನೂ ಬಿಟ್ಟುಬಿಟ್ಟರು. ಈಗಿನ ಕನ್ನಡ ಎಂ.ಎ. ಪದವೀಧರರು ನಮಗಿಂತ ಹೆಚ್ಚು ಅಂಕ ಗಳಿಸುವಲ್ಲಿ 'ಗಟ್ಟಿಗರು! ಆದರೆ, ಅವರು ಮಾಸ್ತಿಯವರ ಎಲ್ಲ ಕಥೆಗಳನ್ನು ಓದಿದ್ದಾರೆಯೇ? ಶಿವರಾಮ ಕಾರಂತರ ಎಲ್ಲ ಕಾದಂಬರಿಗಳನ್ನು ಓದಿದ್ದಾರೆಯೇ? ಬೇಡ ಬಿಡಿ, ಅನಂತಮೂರ್ತಿ, ಕಂಬಾರ, ಲಂಕೇಶರ ಎಲ್ಲ ಕೃತಿಗಳನ್ನಾದರೂ ಓದಿದ್ದಾರೆಯೇ? ಅವರಿಗೆ ಪೂರ್ಣಚಂದ್ರ ತೇಜಸ್ವಿ ಮಾತ್ರ ಗೊತ್ತಿರುವಂತೆ ಕಾಣುತ್ತದೆ. ಹಾಗೆಂದು ಅವರ ಎಲ್ಲ ಕೃತಿಗಳನ್ನಾದರೂ ಇವರು ಓದಿರಬೇಕಲ್ಲ? ಒಂದೋ ಎರಡೋ ಓದಿದ್ದರೆ ಹೆಚ್ಚು. ಅದೇ 'ಮಿಂಚುಳ್ಳಿ, ಅದೇ 'ಪರಿಸರದ ಕಥೆಗಳು' ಅಷ್ಟೇ! ಹಳಗನ್ನಡ, ನಡುಗನ್ನಡ, ಹೊಸಗನ್ನಡ ಯಾವುದನ್ನೂ ಸರಿಯಾಗಿ ಓದದವರು ಪದವಿ ಗಳಿಸುವುದಾದರೂ ಹೇಗೆ? ಗಳಿಸಿದ್ದಾರಲ್ಲ!

ಕಾವ್ಯ ಸುಮ್ಮನೆ ಒಲಿಯುವುದಿಲ್ಲ. ಗಟ್ಟಿಯಾಗಿ ಓದುವವರು ಬೇಕು. ಹಾಡುವವರು ಇದ್ದರೆ ಇನ್ನೂ ಚೆನ್ನ. ಕವಿಯ ಅಂತರಂಗವನ್ನು ಹೊಕ್ಕು ಭಾಷೆಯನ್ನು ಹಿಂದೆ ಇಕ್ಕಿ ಆತನ ಭಾವವನ್ನು ಸಂವಹನ ಮಾಡುವ ಅಧ್ಯಾಪಕರು ಇಂದು ಎಷ್ಟು ಮಂದಿ ಇದ್ದಾರೆ? 'ಹಳಗನ್ನಡ ಮತ್ತು ವ್ಯಾಕರಣ ಕಲಿಸಲು ಆಗುವುದಿಲ್ಲ. ಯಾವುದಾದರೂ ಹೊಸಗನ್ನಡದ ಪಠ್ಯ ಇದ್ದರೆ ಹೇಳಿ' ಎಂದು ವೇಳಾಪಟ್ಟಿ ನಿಗದಿ ಮಾಡುವಾಗ ಹೇಳುವ ಅಧ್ಯಾಪಕರೇ ಈಗ ಎಲ್ಲ ಕಡೆಯೂ! ಕೇಶಿರಾಜನ ಶಬ್ದಮಣಿ ದರ್ಪಣ ಕಲಿಸುವ ಅಧ್ಯಾಪಕರನ್ನು ಈಗ ಎಲ್ಲಿ

ಹುಡುಕಬೇಕು? ಕಲಬುರ್ಗಿಯವರಿಗೆ ಕಲಿಸಿದ ಬಿ.ಟಿ. ಸಾಸನೂರರಿಗೆ, ಹನೂರರಿಗೆ ಕಲಿಸಿದ ಕಲಿಸಿದ ಜಿ. ವೆಂಕಟಸುಬ್ಬಯ್ಯ ಅವರಿಗೆ ಇದ್ದ ಸಂಬಳ ಎಷ್ಟು? ನಮಗೆ ಕಲಬುರ್ಗಿಯವರಿಗೂ ಹೆಚ್ಚು ಸಂಬಳ ಇರಲಿಲ್ಲ. ಈಗ ವಿಶ್ವವಿದ್ಯಾಲಯ ಬಿಡಿ ಕಾಲೇಜು ಅಧ್ಯಾಪಕರಿಗೇನು ಸಂಬಳ ಕಡಿಮೆ ಇದೆಯೇ? ಆದರೆ, ಅವರ ಒಳಗಿನ ಶಿಕ್ಷಕ ಎಲ್ಲಿ ಹೋದ? ಪ್ರಾಥಮಿಕ ಮತ್ತು ಪ್ರೌಢ ಹಂತದಲ್ಲಿಯೇ ಶಿಕ್ಷಣದ ದಾರಿ ತಪ್ಪುತ್ತಿದೆಯೇ? ಓದುವ ಆಸಕ್ತಿ ಹುಟ್ಟಬೇಕಾದುದು ಅಲ್ಲಿಯೇ. ಅದು ಬೆಳೆಯಬೇಕಾದುದು ಕಾಲೇಜು ಮತ್ತು ವಿಶ್ವವಿದ್ಯಾಲಯ ಮಟ್ಟದಲ್ಲಿ. ನಮ್ಮ ಬೇರುಗಳೇ ಒಣಗುತ್ತಿವೆಯೇ? ಇದರಲ್ಲಿ ಪಾಲಕರ ತಪ್ಪೇನೂ ಇಲ್ಲವೇ? ಈಗ ಕನ್ನಡ ಯಾರಿಗೆ ಬೇಕಾಗಿದೆ? ನಮ್ಮ ಮಕ್ಕಳು ಇಂಗ್ಲಿಷ್ ಮಾಧ್ಯಮದಲ್ಲಿ ಓದಿ ಎಂಜಿನಿಯರ್ ಆಗಿ, ವೈದ್ಯರು ಆಗಿ ಡಾಲರ್‌ಗಳನ್ನು ತಂದುಕೊಟ್ಟರೆ ಸಾಕು ಎಂದೇ ಅಲ್ಲವೇ ನಾವೆಲ್ಲ ಬಯಸುತ್ತಿರುವುದು. ಪ್ರಾಥಮಿಕ ಹಂತದಲ್ಲಿಯೇ ಇಂಗ್ಲಿಷ್ ಮಾಧ್ಯಮದಲ್ಲಿ ಓದುವ ಮಕ್ಕಳಿಗೆ ಪಂಪ, ರನ್ನ, ಕುಮಾರವ್ಯಾಸ ಏಕೆ ಬೇಕು? ಬುದ್ಧಿವಂತರೆಲ್ಲ ಎಂಜಿನಿಯರಿಂಗ್, ವೈದ್ಯಕೀಯ ಕಾಲೇಜು ಸೇರಿದ ಮೇಲೆ ಕನ್ನಡ ಎಂ.ಎ. ಮಾಡಲು ಯಾರು ಬರುತ್ತಾರೆ? ಮೂಲ ವಿಜ್ಞಾನದ ತರಗತಿಗಳು ವಿದ್ಯಾರ್ಥಿಗಳು ಇಲ್ಲದೆ ಭಣಗುಡುತ್ತಿರುವುದಕ್ಕೂ ಇದೇ ಕಾರಣ ಇರಬೇಕು.

ಹಾಗಾದರೆ ಮತ್ತೆ ನಮ್ಮ ಕಾವ್ಯ ಪರಂಪರೆಯ ಜತೆಗೆ ನಂಟು ಸಾಧಿಸುವುದು ಹೇಗೆ?

ಧಾರವಾಡ ಸಾಹಿತ್ಯ ಸಂಭ್ರಮದ ಪ್ರಾಚೀನ ಕನ್ನಡ ಕಾವ್ಯ ವಾಚನ ಗೋಷ್ಠಿ ಈ ದಿಸೆಯಲ್ಲಿ ಒಂದು ದೊಡ್ಡ ಪ್ರಯತ್ನ ಎಂದು ಅನಿಸಿತು. ಗೋಷ್ಠಿ ಮುಗಿದ ಮೇಲೆ ನಾನು ಗಿರಡ್ಡಿ ಗೋವಿಂದರಾಜರ ಬಳಿ ಹೋಗಿ ಕೈ ಕುಲುಕಿ ಅಭಿನಂದನೆ ಹೇಳಿದೆ, ಕೃತಜ್ಞತೆ ಸಲ್ಲಿಸಿದೆ. ಅದೇನು ದೊಡ್ಡ ಸಂಗತಿಯಲ್ಲ. ಈ ಗೋಷ್ಠಿ ನಡೆದಾಗ ನನ್ನ ಪಕ್ಕದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಿಂದ ಈಚೆಗಷ್ಟೇ ಪದವಿ ಪೂರೈಸಿದ ಒಬ್ಬ ವಿದ್ಯಾರ್ಥಿನಿ ಕುಳಿತಿದ್ದರು 'ನೋಡಿ ಸರ್ ನಮ್ಮ ವಿಭಾಗದಿಂದ ಒಬ್ಬ ಅಧ್ಯಾಪಕರು ಬಿಟ್ಟರೆ ಬೇರೆ ಯಾರೂ ಈ ಗೋಷ್ಠಿಗೆ ಬರುವುದು ಹೋಗಲಿ, ಈ ಸಭಾಂಗಣದ ಕಡೆಗೆ ಮೂರೂ ದಿನ ತಲೆ ಹಾಕಿಲ್ಲ. ಸಭಾಂಗಣ ದೂರವೇನೂ ಇಲ್ಲ. ನಮ್ಮ ವಿಭಾಗದ ಮುಂದೆಯೇ ಇದೆ' ಎಂದರು! ಅವರಿಗೆಲ್ಲ ಸಾಹಿತ್ಯ ಸಂಭ್ರಮದ ಜತೆಗೆ ತಾತ್ವಿಕ ಭಿನ್ನಾಭಿಪ್ರಾಯವಿತ್ತೇ? ಎಲ್ಲರಿಗೂ ಇರಲಿಕ್ಕಿಲ್ಲ. ಕಲಿಸುವವರಿಗೇ ಸಾಹಿತ್ಯದಲ್ಲಿ ಆಸಕ್ತಿ ಇರದೇ ಇದ್ದರೆ ಕಲಿಯುವವರಿಗೆ ಎಲ್ಲಿಂದ ಬರುತ್ತದೆ? ಹಾಗಾದರೆ ನಮ್ಮ ಕಾವ್ಯ ಪರಂಪರೆಯ ಜತೆಗೆ ಅನುಸಂಧಾನ ಹೇಗೆ? ಬಹಳ ಕಷ್ಟ ನಾವು ಬಹು ದೂರ ಬಂದು ಬಿಟ್ಟಿದ್ದೇವೆ.

ಹಳ್ಳಿಗಳಲ್ಲಿ ರೈತರೂ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಪಟ್ಟಣದಲ್ಲಿ ಎಂಜಿನಿಯರುಗಳೂ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ನಮ್ಮ ಹಳಗನ್ನಡ ಕವಿಗಳು ಜನ ಬದುಕಬೇಕು ಎಂದು ಕಾವ್ಯ ಬರೆದಿದ್ದರು. ಎಂಥ ವಿಪರ್ಯಾಸ!

೦೩.೦೭.೨೦೧೩

ಬದುಕುವ ದಾರಿ ಕಲಿಸುವ ಕಾವ್ಯದಿಂದ ದೂರ ಬಂದು... / ೧೪೧

**ಕೆಲವು ಪ್ರತಿಕ್ರಿಯೆಗಳು**

**ಪದ್ಮಾ ಉಡಾಳನೊಬ್ಬ...**

ಸರ್ ಕಾಲಂ ತುಂಬಾ ತುಂಬಾ ಚೆನ್ನಾಗಿದೆ

– ಸಂಧ್ಯಾ ಹೆಗಡೆ

Beuatiful title, wonderful matter, nice presentation.

- ಪ್ರೊ, ತುಮಕೂರು ಚಂದ್ರಕಾಂತ

The subject is wonderfully inspiring, touching narration. good reading.

-ರಾಜು ವಿಜಾಪುರ

Good review of Vinod Mehta's (auto)biography. I admire his healthy disdain and style too.

–ಪ್ರೊ. ಮಾಲಾ ಶ್ರೀಧರ್

I would have made a differnitation between a journalist's understanding of Vinod Mehta and a common man's. You started with common man's understanding and you took him to the level of journalist's understanding

. ಎನ್.ಎ.ಎಂ. ಇಸ್ಮಾಯಿಲ್

I got "Lucknow Boy" book (because of you). Thanks for insipiration.

- ಮಲ್ಲಿಕಾರ್ಜುನ ಗುಮ್ಮಗೋಳ

……………………………………………………………………………………………………

ರಾಜಧಾನಿಗೆ ನೂರು ವರ್ಷ...

Yesterday's column was immensly readable. Full of insights and it was a real good whip to our MPs. And you recorded the minutes without a pen and vahi.

-ನಾಗೇಶ ಹೆಗಡೆ

………………………………………………………………………………………………………………………

**ಸಲಗದಂತೆ ಬಾಳಿ ಸರಿದು ಹೋದರು...**

ವ್ಯಕ್ತಿ ಚಿತ್ರಣ ಹೇಗಿರಬೇಕು ಎಂಬುದಕ್ಕೆ ಮಾದರಿಯಂತಿದೆ ಇಂದಿನ ಬರಹ. ಮುತ್ತು ಪೋಣಿಸಿದಂತೆ ಇದೆ.

-ಎನ್. ಉದಯಕುಮಾರ್

ಬೆಂಗಳೂರಿನ ಗಟ್ಟಿ ವ್ಯಕ್ತಿ ಬಿ.ಪಿ. ರಾಧಾಕೃಷ್ಣ ಅವರ ಬಗೆಗಿನ ನಿಮ್ಮ ಲೇಖನ ಬೋಧಪ್ರದವಾಗಿದೆ.

-ಡಾ.ಜಿ. ಕೃಷ್ಣಪ್ಪ

ನಿಮ್ಮ ಬರವಣಿಗೆಗೆ ಮಾಂತ್ರಿಕ ಶಕ್ತಿ ಇದೆ. ಬಚ್ಚಿಟ್ಟಿದ ಕನಸುಗಳನ್ನು ಹೊರಗೆ ತೆಗೆದು ನೆನಪಿನ ನಾಳೆಗೆ ತೋರಣ ಕಟ್ಟಿದಂತೆ ಇದೆ.

-೯ಲಲ೦ಳ ಲ೨೧೭೨

ನಾಲ್ಕನೇ ಆಯಾಮ ನೈಸ್ ಪೀಸ್

–ಜಿ.ಡಿ. ಯತೀಶಕುಮಾರ್

That was one wonderful piece by you and gave him due recognition too. I was very happy reading it. I read his book 'nanna tande' recently.

-- S.R. Vijayashankar

………………………………………………………………………………………………………………………

**ಮಾಧ್ಯಮಗಳಿಗೆ ಲಕ್ಷಣ ರೇಖೆ ಹಾಕುವವರು ಯಾರು?**

24 hour news channels have crossed all limits. They organise mob beating. You have rightly raised the issue.

-- S. Prakash

ಈ ದಿನದ ನಿಮ್ಮ ಲೇಖನ ಮಾರ್ಮಿಕವಾಗಿದೆ.

-ರೂಪ ಹಾಸನ

ನಿಮ್ಮ ಇವೊತ್ತಿನ ಲೇಖನ ಸೊಗಸಾಗಿದೆ. ವಿಶ್ಲೇಷಣಾತ್ಮಕ ಲೇಖನ.

-ಬರಗೂರು ರಾಮಚಂದ್ರಪ್ಪ

......................................................................................................................................................

**ಇಂಥ ಬರಿಗಾಲ ಭಗೀರಥ**

Today's article was excellant. I just spoke to Nandikeshwarmath and congratulated him all the best in his efforts. Such stories are a refreshing change and thanks for introducing such simple but sincere people.

- ಸತ್ಯೇಶ ಬೆಳ್ಳೂರ

ಜೈ ನಂದಿಕೇಶ್ವರಮಠ!

-ಎನ್.ಆರ್. ವಿಶುಕುಮಾರ್

......................................................................................................................................

**ನಮ್ಮ ವೃತ್ತಿಗೆ ಸೇರಿದ ಹುಡುಗ ಮಾಡಿದ...**

wonderful... congrats.

-ಯಗಟಿ ಮೋಹನ್

ಇಂದು ನೀವು ಬರೆದಿರುವ "ಘನಂದಾರಿ...". ನೂರಕ್ಕೆ ನೂರು ಸತ್ಯ ನಿನ್ನೆ (ಮಂಗಳೂರಿನಲ್ಲಿ ನಡೆದ) ಘಟನೆ ಚಿತ್ರಿಸಿದವರಿಗೂ ಇದು ಅನ್ವಯಿಸುತ್ತದೆ ಅಲ್ಲವೇ? ನಿಜಕ್ಕೂ ನಿಮ್ಮಂಥವರು ಮಾತ್ರ ಇಂಥದ್ದು ಬರೆಯಲು ಸಾಧ್ಯ ಅನ್ನಿಸಿತು. ನಿಮ್ಮದು ಪ್ರತಿವಾರ ಕಾದು ಓದುವ ಅಂಕಣ.

-ತುಂಗರೇಣುಕ

The same thing has happened in Mangalore now. Your column could be about any news channel and any reporter. This is really sad.

- ಶ್ರೀದೇವಿ ರಾವ್

Sir, Today's article has a perfect title, beautiful narration and overflow of humane spirit. The article is worth preserving.

- ಪ್ರೊ. ತುಮಕೂರು ಚಂದ್ರಕಾಂತ

Nice article on media

-ನಟರಾಜು ಕೋಲ್ಕತ

Except your column, no other stuff reads good in that page.

-ಎನ್. ವಿಶಾಖ

Your article today was excellant. As a coincident it matched yesterday's dirty incident at Mangalore so much so that the article deserves reprint at main page again. Your column is always interesting and it is my favourite.

- ಪ್ರೇಮನಾಥ ಎಂ.ಡಿ. ಕೆ.ಎಂ.ಎಫ್

ಹೋಂ ಸ್ಟೇ ಪ್ರಕರಣ ಆಗುತ್ತೆ ಎಂದು ಮೊದಲೇ ತಿಳಿದಿತ್ತೇ? ಘನಂದಾರಿ ಕೆಲಸ ಸಖತ್ ಟೈಮಲಿ ಆಗಿದೆ. ಸೀರಿಯಸ್ ಪ್ರಶ್ನೆಗಳನ್ನು ಮಾಧ್ಯಮದ ಮುಂದೆ ಇಟ್ಟಿದೆ.

-ಎನ್. ಉದಯಕುಮಾರ್

**ಕಾಡಿದ ಒಲಿಂಪಿಕ್**

ಬಡವರು ಗುರಿಮುಟ್ಟಲು ಬಹುದೂರ ಓಡಬೇಕಾಗುತ್ತದೆ ಎಂಬ ನಿಮ್ಮ ಮಾತು ಚಿಂತೆಗೆ ಹಚ್ಚುತ್ತದೆ.

–ಡಾ.ಜಿ. ಕೃಷ್ಣಪ್ಪ

"ಒಲಿಂಪಿಕ್ ಚಿತ್ರಗಳು..." ಒಳನೋಟವಿರುವ ಲೇಖನ. ಕಾರಣ ಹುಡುಕುವುದು ವ್ಯರ್ಥ ಇರಬಹುದು ಆದರೆ, ಕಷ್ಟವಲ್ಲ ಅಲ್ಲವೇ? ಜಾತಿ ಪದ್ಧತಿ ಕಾರಣ ಹೌದಲ್ಲವೇ?

-ಮೂಡ್ನಾಕೂಡು ಚಿನ್ನಸ್ವಾಮಿ

ಈ ದಿನದ ಅಂಕಣ ಚೆನ್ನಾಗಿತ್ತು.

-ಡಾ. ಪದ್ಮನಿ ಜೈನ್

................................................................................................................................................

೧೪೪ / ನಾಲ್ಕನೇ ಆಯಾಮ ೫ನೇ ಸಂಪುಟ

**ಬೇರುಗಳು ಒಣಗುತ್ತಿವೆಯೇ?**

ಬೇರುಗಳು ಒಣಗುತ್ತಿವೆಯೇ.. ಅರ್ಥಪೂರ್ಣ ಅಂಕಣ. ಮುಂದಿನ ಪೀಳಿಗೆಗೆ ನಾವು ಬೇರುಗಳು. ಅಂದರೆ ನಾವು ಒಣಗುತ್ತಿದ್ದೇವೆ ಎಂದು ಅರ್ಥವೇ? ಆತ್ಮಾವಲೋಕನದ ಕಾಲ.

-ಎನ್.ಆರ್. ವಿಶುಕುಮಾರ್

ಇಂದಿನ ನಾಲ್ಕನೇ ಆಯಾಮ ಕನ್ನಡ ಭಾಷೆ ಮತ್ತು ಬದುಕಿನ ಆತ್ಮಶೋಧ ಲೇಖನವಾಗಿದೆ.

-ಡಾ.ಜಿ. ಕೃಷ್ಣಪ್ಪ

Today's article is very apt. I too strongly feel the same way. It surely makes us feel that we will lose the war though we might win a few battles here and there.

-ಸತ್ಯೇಶ ಬೆಳ್ಳೂರ

Less said better about our conduct. Some times I feel ashamed to say that I am a journalist.

ನೀವು ಮತ್ತೆ ಮತ್ತೆ ಮನಮುಟ್ಟುವಂತೆ

- ಗೇಬ್ರಿಯಲ್ ವಾಜ್

ಬರೀತಾನೇ ಇದ್ದೀರಾ ಸರ್. ಪತ್ರಿಕೋದ್ಯಮ ವಿದ್ಯಾರ್ಥಿಗಳೇ ಹೀಗಾದರೆ ಮಿಕ್ಕ ಯುವಜನರ ಪಾಡೇನು? ದೇಶಕ್ಕೆ ಭವಿಷ್ಯವೇ ಇಲ್ಲವೇ?

-ರೂಪ ಹಾಸನ

ಪತ್ರಕರ್ತ ಅಭ್ಯರ್ಥಿಗಳ ಕುರಿತ ನಿಮ್ಮ ಕಾಲಕಾಲೀನ ಲೇಖನ ಓದಿಯಾದರೂ ಅವರು ಅಧ್ಯಯನಶೀಲರಾಗಲಿ. ಈ ಬಗ್ಗೆ ಮತ್ತೆ ಮತ್ತೆ ಬರೆಯುವುದು ಅನಿವಾರ್ಯವಾಗಿದೆ.

-ಸರ್ಜಾಶಂಕರ ಹರಳಿಮಠ

ಕೇವಲ ಪತ್ರಿಕೋದ್ಯಮದಲ್ಲಿ ಅಲ್ಲ, ಬೇರುಗಳು ಎಲ್ಲ ಕ್ಷೇತ್ರದಲ್ಲಿಯೂ ಒಣಗುತ್ತಿವೆ. ಆದರೆ, ಎಲ್ಲರೂ ಮೇಲಿನ ಎಲೆಗಳಿಗೆ, ಕೊಂಬೆಗಳಿಗೆ ನೀರು ಹಾಕುವ ತವಕದಲ್ಲಿ ಇರುವಾಗ ಬೇರುಗಳ ಬಗ್ಗೆ ಯೋಚನೆ ಮಾಡಲಿಕ್ಕೆ ನಮ್ಮಲ್ಲಿ ದಂಡಾವತಿಗಳು ಇಲ್ಲವಲ್ಲ!

-ಸುರೇಶಕುಮಾ

ನಿಮ್ಮ ಅಂಕಣ ತೀರಾ ಆಪ್ತವಾಗಿ ಓದಲು ಆರಂಭಿಸಿ ಆತಂಕದಿಂದ ಅಂತ್ಯಗೊಳಿಸಿದೆ.

- ಪ್ರೊ.ಬಿ.ಕೆ. ಹೊಸಂಗಡಿ

..........................................................................................................................................

**ಕರಜಗಿ ಕಥೆ ಎಂದರೆ ಒಂದು ಹಣತ...**

ನಿಮ್ಮ ಇಂದಿನ ಎರಡೂ ಲೇಖನಗಳು (ಅಮೆರಿಕದ ಕನ್ನಡಿಗರ ಜತೆ ಹತ್ತು ದಿನಗಳು...) ಆಪ್ತವಾಗಿದ್ದುವು.

- ವಿಶ್ವೇಶ್ವರ ಭಟ್

ನಾನು ಅತ್ಯಂತ ಗೌರವದಿಂದ ಕಾಣುವ ಡಾ. ಕರಜಗಿ ಅವರ ಬಗ್ಗೆ ನಿಮ್ಮ ಲೇಖನ ಓದಿ

ಸಂತೋಷವಾಯಿತು.

-ಡಾ. ಚಂದ್ರಶೇಖರ ದಾಮ್ಲ

..........................................................................................................................................

**ಕಾಂತಾವರ**

ನನ್ನ ದುರದೃಷ್ಟಕ್ಕೆ ಇಂದು ಪ್ರಜಾವಾಣಿ ಬಂದಿಲ್ಲ. ಆದರೆ, ನೂರಾರು ಮಂದಿ ಅಭಿನಂದಿಸಿದ್ದಾರೆ. ನಿಮ್ಮ ಪ್ರೀತಿಗೆ ಮಾತು ಮೌನವಾಗಿದೆ, ಕಣ್ಣು ಮಂಜಾಗಿದೆ. ಈ ಲೇಖನ ರಾಷ್ಟ್ರಪ್ರಶಸ್ತಿಗಿಂತ ದೊಡ್ಡದು. ನಿಮಗೆ ಶರಣಾಗಿದ್ದೇನೆ.

-ಡಾ.ನಾ. ಮೊಗಸಾಲೆ

ನಾ. ಮೊಗಸಾಲೆ ಅವರ ಕುರಿತ ನಿಮ್ಮ ಲೇಖನ ನಿಜಕ್ಕೂ ಸ್ಫೂರ್ತಿ ತುಂಬುವಂಥದು.

-ಡಾ. ಅನಂತರಾಮನ್

...........................................................................................................................................

**ಕೃಪಣತೆಯಲ್ಲಿ.**

My salute to you for writing an article which is an eye opener to both pro kannada organisations and Government. With your permission I will post this article on social media.

- ಗುರುಪ್ರಸಾದ್

ಲೇಖನ ನೈಜ ಕನ್ನಡ ಮನಸ್ಸುಗಳನ್ನು ತಟ್ಟುವಲ್ಲಿ ಯಶಸ್ವಿಯಾಗಿದೆ.

-ರಘು ಮೈಸೂರು

You are picking up issues that impact kannada and culture deeply. That is very important now a days. I have no faith in politically correct stance.

-ವಿವೇಕ ಶಾನಭಾಗ

...........................................................................................................................

**ಕಲ್ಲು ಮನಸ್ಸು ಕರಗುವ ಸಮಯ**

Thanks for the endearing column

-ಜೆ.ಆರ್. ರಾಮಮೂರ್ತಿ

ಕಲ್ಲು ಮನಸ್ಸು ಕರಗಿಸುವ ಸಮಯ ನಿಜಕ್ಕೂ ಓದುಗರ ಮನಸು ಕರಗಿಸುವ ಸೊಗಸಾದ ಲೇಖನ,

-೯ಲಲ೦ಳ ೬೫೬೬೧

ಸಜ್ಜಿಗೆ ತಿಂದಾಗ, ಸಹಜವಾಗಿ ಉಪ್ಪಾಗಿತ್ತು

-ಅನುರಾಧಾ ಸಿ.ಎಸ್.

'ಕಲ್ಲು ಮನಸ್ಸು ಕರಗುವ ಸಮಯ' ಭಿನ್ನವಾಗಿತ್ತು ಮತ್ತು ಅದ್ಭುತವಾಗಿತ್ತು. ಯಾಕೋ ಗೊತ್ತಿಲ್ಲ, ಓದಿ ಮುಗಿಸಿದಾಗ ನನ್ನ ಕಣ್ಣು ಮಂಜಾಗಿತ್ತು... ಇದು ಕಲೆಯ ಶಕ್ತಿಯೇ ಇರಬಹುದೇನೋ. ನಿಮ್ಮ ಬರವಣಿಗೆಯ ಶಕ್ತಿ ನಿಜಕ್ಕೂ ಸಾಟಿಯಿಲ್ಲದ್ದು.. ಸಾರ್, ಹ್ಯಾಟ್ಸ್ ಆಫ್. ಯಾವುದೇ ಅನುಪಮ ಲೇಖನ ಓದಿದಾಕ್ಷಣ ಅದನ್ನು ಬೇರೆಯವರೂ ಓದಬೇಕು, ಅವರೂ ಆಸ್ವಾದಿಸುವಂತಾಗಬೇಕು ಎಂಬ ಬಯಕೆ ನನ್ನನ್ನು ತೀವ್ರವಾಗಿ ಕಾಡುವುದುಂಟು. ಹತ್ತಿರದಲ್ಲಿ ಯಾರು ಸಿಗುವರೋ ಅವರಿಗೆ ಅದನ್ನು ಗಟ್ಟಿಯಾಗಿ ಓದಿ ಹೇಳುವುದು ನನ್ನ ಅಭ್ಯಾಸ.

ಹಾಗೆ ಸುಲಭದಲ್ಲಿ ಸಿಗುವುದು ನನ್ನಾಕೆ. ಆಕೆಗೆ ಓದುವ ತುಡಿತವೇನೋ ಅಪಾರ. ಆದರೆ ಓದಲು ಸಮಯ ಸಿಗುವುದು ಬಹಳ ಕಡಿಮೆ. ಸದರಿ ಲೇಖನವನ್ನು ಆಕೆಗೆ ಗಟ್ಟಿಯಾಗಿ ನಾನು ಓದಿ ಹೇಳಿದೆ. ಇಬ್ಬರೂ ಅದನ್ನು ಆಸ್ವಾದಿಸಿದೆವು. ಕಲ್ಲು ಹೃದಯಗಳನ್ನೂ ಕರಗಿಸುವ ಕಲೆಯ ಶಕ್ತಿಗೆ ಬೆರಗಾದೆವು, ತಲೆಬಾಗಿದೆವು.

- ಶ್ರೀನಿವಾಸ ಕಾರ್ಕಳ

…………………………………………………………………………………………………..

**ಮನೆ ಗೆಲ್ಲದವರು...**

The topic itself is interesting and content approach is fantastic. The information generates curiosity and keeps the momentum till end.

-ಡಾ. ಸಂತೋಷ

'ಮುಖ್ಯಮಂತ್ರಿ' ಚಂದ್ರು ಕ್ಲೀನ್ ಬೋಲ್ಡ್ ಟು ಯುವ ಗೂಗ್ಲಿ!

-ಅಶೋಕ ಚಂದರಗಿ

Good and focussed column today. I am glad that you are taking a firm stand and with definite driving point of view. The drive is real contribution of this column and a senior journalist like you only can have experience and ability to drive home that opinion.

-ಎಸ್.ಆರ್. ವಿಜಯಶಂಕರ

I too felt the same when I saw the photo of kannada leaders with Prime Minister. Very good column today.

-ನಾಗೇಶ ಹೆಗಡೆ

Good write up by you on Chandru today.

-ಆಶಾ ಕೃಷ್ಣಸ್ವಾಮಿ

……………………………………………………………………………………………………………

**ಆ ಪ್ರೀತಿ ಇನ್ನೆಲ್ಲಿ ಹುಡುಕಲಿ**

ನಾಯಿಯ ಕುರಿತ ಲೇಖನ ಕಣ್ಣೀರು ತರಿಸುತ್ತದೆ.

-ವೆಂಕಟೇಶ ಪ್ರಸಾದ್

ನಾಯೀ ಬಗ್ಗೆ ಲೇಖನಾ ಭಾಳ ಚೊಲೊ ಬರಿದಿದ್ರಿ, ಕಣ್ಣಾಗ ನೀರ ಬಂದೂ.

-ಡಾ. ಸಿದ್ದಲಿಂಗ ಪಟ್ಟಣಶೆಟ್ಟಿ

ತಮ್ಮ ಇಂದಿನ ಪುಟ್ಟ ಲೇಖನ ದೊಡ್ಡ ಗಾತ್ರದಲ್ಲಿ ಮನಸ್ಸನ್ನು ಮಿಡಿಯಿತು.

–- ಸತ್ಯೇಶ ಬೆಳ್ಳೂರ

ಲೇಖನ ಮನಮುಟ್ಟುವಂತಿದೆ. ನಿಮ್ಮ ನಾಯಿಯ ಸಾವಿಗೆ ನನ್ನದೂ ಕಂಬನಿ

-ರೂಪ ಹಾಸನ

Your column on dog is too touching. It lingers in mind for ever. It has all literary qualities. Reminds of a great english poem on man dog relationship.

–ಜಗದೀಶ ಅಂಗಡಿ

My mom enjoyed reading your column

-ಆಶಾ ಕೃಷ್ಣಸ್ವಾಮಿ

ಇವೊತ್ತಿನ ನಿಮ್ಮ ಲೇಖನ ಹೃದಯಸ್ಪರ್ಶಿಯಾಗಿತ್ತು.

-ವಿಭೂತಿಪುರ ಸ್ವಾಮೀಜಿ

Very moving dog story. Read it to my wife.

-ನಾಗೇಶ ಹೆಗಡೆ

ಜೀವ ಉಳಿಸಲಾಗದ ಜೀವ ಪ್ರೀತಿಯ ಲೇಖನ ಓದಿದೆ. ಇದನ್ನು ಓದುವ ಎಲ್ಲರಿಗೂ ಜೀವ ಉಳಿಸುವ ಪ್ರೇರಣೆ ಆಗಲಿ.

-ಸುಬ್ಬು ಹೊಲೆಯಾರ್

...............................................................................................................................................

**ಗೋಲಗುಮ್ಮಟದ ಊರಿನ ಜನರು...**

ನಿಮ್ಮ ಇಂದಿನ ಲೇಖನ ಎಕ್ಸಲಂಟ್. ಇದರ ಜರೂರು ಇತ್ತು.

-ರಹಮತ್ ತರೀಕೆರೆ

ಆ ಊರಿನಲ್ಲಿ ಯಾರಾದರೂ ಮಾನವಂತರು ಇದ್ದರೆ ಅವರು ನಿಮಗೆ ಫೋನ್ ಮಾಡಬೇಕು. ಅಷ್ಟು ಚೆನ್ನಾಗಿ ಬರೆದಿದ್ದೀರಿ.

-ಬಿ.ಎಂ. ಹನೀಫ್

...............................................................................................................................................

**ಬದುಕುವ ದಾರಿ.**

ಪ್ರಿಯ ದಂಡಾವತಿ, ಪ್ರಜಾವಾಣಿಯ ಇಂದಿನ ನಿಮ್ಮ ಅಂಕಣ ಬಹಳ ಚೆನ್ನಾಗಿದೆ.

-ಯು.ಆರ್. ಅನಂತಮೂರ್ತಿ

ಒಳಗಿನ ಶಿಕ್ಷಕ ಎಲ್ಲಿ ಹೋದ..?

-ಡಾ. ಅನಂತರಾಮನ್

ಇನ್ನು ಹತ್ತು ವರ್ಷಗಳಲ್ಲಿ ಏನಾಗಬಹುದು?

-ಜಿ. ಕುಮಾರ ನಾಯಕ್



ಬದುಕುವ ದಾರಿ ಕಲಿಸುವ
ಕಾವ್ಯದಿಂದ ದೂರ ಬಂದು
ಲೇಖಿನ ಕುರಿತು

'ಪ್ರಿಯ ದಂಡಾವತಿ, ಪ್ರಜಾವಾಣಿಯ ಇಂದಿನ
ನಿಮ್ಮ ಅಂಕಣ ಬಹಳ ಚೆನ್ನಾಗಿದೆ.'

– ಯು.ಆರ್. ಅನಂತಮೂರ್ತಿ

ಪದ್ಮರಾಜ ದಂಡಾವತಿಯವರ ಅಂಕಣ ಬರಹಗಳ ಈ ಸಂಕಲನದಲ್ಲಿ ನಮ್ಮ ಸಾಂಸ್ಕೃತಿಕ ಲೋಕದ ಹಲವು ಸಂಗತಿಗಳ ಜಿಜ್ಞಾಸೆಯಿದೆ. ಜನಜೀವನವಿಲ್ಲದೆ ಸಂಸ್ಕೃತಿಯಿಲ್ಲವಷ್ಟೆ. ಸಮಾಜದ ದಿಕ್ಕುದೆಸೆ, ಶ್ರಮವಿಭಜನೆ, ಸಂಘ-ಸಂಸ್ಥೆ, ಸಾಮಾಜಿಕ ಮೌಲ್ಯ, ನಡಾವಳಿ, ಹಬ್ಬ ಆಚರಣೆ, ನೋವು ನಲಿವು, ಇವೆಲ್ಲವೂ ಸಂಸ್ಕೃತಿಯ ಭಾಗಗಳೇ. ಜೊತೆಗೆ ಮನುಷ್ಯ ಬದುಕುತ್ತಿರುವ ಈ ಭೂಮಿ, ನಿಸರ್ಗ, ಪರಿಸರ ಮೊದಲಾದುವು ಅವನ ಸಂಸ್ಕೃತಿಗೆ ಪೂರಕವಾದ ವಿಭಿನ್ನ ಆಯಾಮಗಳು. ಲೇಖಕರು ಇಲ್ಲಿನ ಬರಹಗಳನ್ನು 'ಸಾಂಸ್ಕೃತಿಕ ಸ್ವರೂಪದ ಅಂಕಣಗಳು' ಎಂದು ಕರೆದಿರುವುದು ಅರ್ಥಪೂರ್ಣ. ಯಾಕೆಂದರೆ ಇಲ್ಲಿ ಪ್ರೀತಿಯಂಥ ಅನುಭವದ ಸೀಮಾತೀತ ಸ್ವರೂಪವಿದೆ, ನಮ್ಮ ದೇಶದ ಸಂಸ್ಕೃತಿಯ ವೈಶಿಷ್ಟ್ಯವಿದೆ, ಕುವೆಂಪು ಪ್ರತಿಷ್ಠಾನದ ಚಿತ್ರಣವಿದೆ, ಕಣ್ಮರೆಯಾಗುತ್ತಿರುವ ಕೆರೆಗಳ ಬಗೆಗೆ ಹಳಹಳಿಕೆಯಿದೆ, ವಿನೋದ್ ಮೆಹ್ತಾ, ಕುಲದೀಪ್ ನಯ್ಯರ್‌ರಂಥ ಅಪ್ಪಟ ಪತ್ರಕರ್ತರ ಆತ್ಮಚರಿತ್ರೆಗಳ ಬಗ್ಗೆ ಅಪರೂಪದ ಒಳನೋಟವಿದೆ, ಆಂಧ್ರ ಪ್ರದೇಶಕ್ಕೆ ಸೇರಿದ ಕನ್ನಡ ತಾಲೂಕುಗಳ ಶೋಚನೀಯ ಸ್ಥಿತಿಯಿದೆ, ಬೆಂಗಳೂರಿನ ಕಸ ವಿಲೇವಾರಿಯ ಸಮಸ್ಯೆಯ ಘೋರ ಚಿತ್ರಣವಿದೆ. ಇವುಗಳ ಮಧ್ಯೆ ಗುರುರಾಜ ಕರ್ಜಗಿಯವರು ಬೆಳಗಿಸುತ್ತಿರುವ ದೀಪವೂ ಇದೆ. ಒಟ್ಟಿನಲ್ಲಿ ಸುತ್ತಮುತ್ತಲಿನ ವಿದ್ಯಮಾನಗಳನ್ನು ಚಿಕಿತ್ಸಕ ದೃಷ್ಟಿಯಿಂದ ಪರಿಭಾವಿಸುವ, ಅವುಗಳನ್ನು ಉದಾರವಾಗಿ ಹೇಗೋ ಹಾಗೆ ವಿಶ್ಲೇಷಣಾತ್ಮಕವಾಗಿ ಕೂಡ ಪಡಿಮೂಡಿಸುವ ಇಲ್ಲಿನ ಬರಹಗಳು ಕನ್ನಡ ಗದ್ಯ ಪಡೆದುಕೊಳ್ಳುತ್ತಿರುವ ಔನ್ನತ್ಯವನ್ನು ಕನ್ನಡಿಸುವಂತಿವೆ.

ಎಸ್. ದಿವಾಕರ್

ಪ್ರಬಂಧಗಳು / Essays

ISBN 93-83053-25-2

ಬೆಲೆ: ₹ 95

ವಸಂತ ಪ್ರಕಾಶನ
ನಂ. 360, 10ನೇ 'ಬಿ' ಮುಖ್ಯ ರಸ್ತೆ, 3ನೇ ಬ್ಲಾಕ್
ಜಯನಗರ, ಬೆಂಗಳೂರು – 560 011
ದೂರವಾಣಿ: 22443996
email: vasantha_prakashana@rediffmail.com